ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## (ಪರಿಷ್ಕೃತ – 2022)

## ಭಾಗ–2

@KTBS
NOT TO BE REPUBLISHED

# 9

## ಒಂಬತ್ತನೆಯ ತರಗತಿ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.

# ಪರಿವಿಡಿ

G7C8J3


| ಅಧ್ಯಾಯದ ಸಂಖ್ಯೆ | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 17. | ಅಹೋಮ್ ರಾಜಮನೆತನ, ಮೊಘಲರು ಮತ್ತು ಮರಾಠರು | 1 |
| 18. | ಭಕ್ತಿ ಪಂಥ | 19 |
| 19. | ಆಧುನಿಕ ಯುರೋಪ್ | 24 |
| 20. | ಕ್ರಾಂತಿ ಹಾಗೂ ರಾಷ್ಟ್ರ ಪ್ರಭುತ್ವಗಳ ಉದಯ | 35 |
| | **ರಾಜ್ಯಶಾಸ್ತ್ರ** | |
| 21. | ಚುನಾವಣಾ ವ್ಯವಸ್ಥೆ | 45 |
| 22. | ದೇಶದ ರಕ್ಷಣೆ | 53 |
| 23. | ರಾಷ್ಟ್ರೀಯ ಭಾವೈಕ್ಯ | 64 |
| | **ಸಮಾಜಶಾಸ್ತ್ರ** | |
| 24. | ಸಾಮಾಜೀಕರಣ ಹಾಗೂ ಕುಟುಂಬದ ಸಂಬಂಧಗಳು | 68 |
| 25. | ಸಮುದಾಯ | 73 |
| | **ಭೂಗೋಳಶಾಸ್ತ್ರ** | |
| 26. | ಕರ್ನಾಟಕದ ಖನಿಜ ಸಂಪನ್ಮೂಲಗಳು | 78 |
| 27. | ಕರ್ನಾಟಕದಲ್ಲಿ ಸಾರಿಗೆ ವ್ಯವಸ್ಥೆ | 82 |
| 28. | ಕರ್ನಾಟಕದ ಕೈಗಾರಿಕೆಗಳು | 88 |
| 29. | ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳು | 94 |
| | **ಅರ್ಥಶಾಸ್ತ್ರ** | |
| 30. | ಹಣ ಮತ್ತು ಸಾಲ | 98 |
| 31. | ಶ್ರಮ ಮತ್ತು ಉದ್ಯೋಗ | 108 |
| | **ವ್ಯವಹಾರ ಅಧ್ಯಯನ** | |
| 32. | ಮಾರುಕಟ್ಟೆ ನಿರ್ವಹಣೆ | 116 |


@KTBS NOT TO BE REPUBLISHED

ಇತಿಹಾಸ

## ಅಧ್ಯಾಯ – 17


# ಅಹೋಮ್ ರಾಜಮನೆತನ, ಮೊಘಲರು ಮತ್ತು ಮರಾಠರು

K1A9R2

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಅಹೋಮ್ ರಾಜಮನೆತನ ಹಾಗೂ ಅವರ ಸಾಧನೆಗಳು
- ಮೊಘಲರು
- ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ಮೊಘಲರ ಕೊಡುಗೆಗಳು.
- ಮರಾಠ ರಾಜ್ಯದ ಉಗಮ ಹಾಗೂ ಶಿವಾಜಿಯ ಆಡಳಿತ.

## ಅಹೋಮ್ ರಾಜಮನೆತನ


ಅಹೋಮ್ ರಾಜಮನೆತನದ ಲಾಂಛನ

ಮೊಘಲರೆಂದರೆ ಸೋಲಿಲ್ಲದ ಸರದಾರರು, ಪರಾಕ್ರಮಿಗಳು ಎಂಬ ಭಾವನೆ ಇದೆ. ಮತಾಂಧ ಮತ್ತು ಕ್ರೂರಿ ಅರಸನಾಗಿದ್ದ ಔರಂಗಜೇಬನನ್ನು ಪರಾಕ್ರಮಿ ಎಂದು ಹೇಳುತ್ತ ಬರಲಾಗಿದೆ. ಆತನ ಕಾಲದಲ್ಲಿ ಭಾರತದ ವಿಶಾಲ ಪ್ರದೇಶಗಳು ಮೊಘಲ್ ಆಳ್ವಿಕೆಗೆ ಒಳಪಟ್ಟಿದ್ದವು ಎಂದು ಬಣ್ಣಿಸಲಾಗುತ್ತದೆ. ಆದರೆ ಮೊಘಲರನ್ನೂ ಮಣ್ಣುಮುಕ್ಕಿಸಿದ ಪರಾಕ್ರಮಿಗಳು ಭಾರತದಲ್ಲಿದ್ದರು. ತಮ್ಮ ಕ್ರೌರ್ಯ ಮತ್ತು ಮೋಸದಿಂದ ಪರ ರಾಜ್ಯಗಳನ್ನು ವಶಪಡಿಸಿಕೊಳ್ಳುತ್ತಿದ್ದ ಮೊಘಲರನ್ನೇ ಹೈರಾಣ ಮಾಡಿದ ಅನೇಕ ಪರಾಕ್ರಮಿಗಳ ಇತಿಹಾಸವನ್ನು ಇತಿಹಾಸ ಬಚ್ಚಿಟ್ಟಿದೆ. ಅಂಥದೊಂದು ರಾಜವಂಶ ಅಹೋಮ್.


ಸುಕಪಾ


ಅಹೋಮ್ ರಾಜವಂಶಸ್ಥರು 13ನೆಯ ಶತಮಾನದ ಪ್ರಾರಂಭದಲ್ಲಿ ಮೂಲತಃ ಈಗಿನ ಮಯನ್ಮಾರ್ ಮತ್ತು ಥಾಯ್ಲಾಂಡ್ ದೇಶಗಳಿಂದ ಭಾರತದ ಈಗಿನ ಅಸ್ಸಾಮ್ ಭಾಗದಲ್ಲಿ ಬಂದು ನೆಲೆಸಿದರು. ಅಹೋಮ್ ಎಂಬ ಹೆಸರಿನಿಂದಲೇ ಇಂದು ಈ ಭಾಗಕ್ಕೆ ಅಸ್ಸಾಮ್ ಎಂಬ ಹೆಸರು ಬಂದಿದೆ. ಅಹೋಮ್ ವಂಶೀಯರು ಹೊರಗಿನಿಂದ ಬಂದರೂ ಬಹಳ ಬೇಗನೆ ಭಾರತದ ಸಂಸ್ಕೃತಿಯನ್ನು ತಮ್ಮದಾಗಿಸಿಕೊಂಡರು. 1228ರಲ್ಲಿ ಇವರ ಸಾಮ್ರಾಜ್ಯವು ಸ್ಥಾಪನೆಯಾಯಿತು. ಸುಕಪಾ ಈ ವಂಶದ ಸ್ಥಾಪಕ. ಚೆರಾಯ್‌ಡಾಯ್ ಈ ಸಾಮ್ರಾಜ್ಯದ ಮೊದಲ ರಾಜಧಾನಿ. 1300ರ ಸುಮಾರಿಗೆ ದೆಹಲಿಯ ಸುಲ್ತಾನರಾದ ಖಿಲ್ಜಿಗಳು ಇವರ ಮೇಲೆ ಆಕ್ರಮಣ ಮಾಡಿದರು. ಆದರೆ ಅಹೋಮ್ ರಾಜ್ಯದ ಸೈನಿಕರು ಖಿಲ್ಜಿ ಸೇನೆಯನ್ನು ಸೋಲಿಸಿ ಓಡಿಸಿದರು. 1350ರಲ್ಲಿ ಇಲ್ಯಾಸ್‌ಶಾಹಿ ಹಾಗೂ ತುಘಲಕ್ ಸೇನೆಗಳು ಕೂಡ ಅಹೋಮರಿಂದ ಪರಾಭವಗೊಂಡವು. 15ನೆಯ ಶತಮಾನದ ಅಂತ್ಯದ ಹೊತ್ತಿಗೆ ಲೋದಿ ಸೇನೆ ಅಹೋಮ್ ರಾಜ್ಯದ ಮೇಲೆ ಮುತ್ತಿಗೆ ಹಾಕಿತು. ಆದರೆ ಅವರೂ ಸೋತು ಹಿಂದಿರುಗಬೇಕಾಯಿತು. ನಂತರ ಬಂಗಾಳದ ಸುಲ್ತಾನರು ಅಹೋಮ್ ಮೇಲೆ ನಿರಂತರವಾದ ದಾಳಿಗಳನ್ನು ನಡೆಸಿದರು. ಅವರನ್ನು ಕೂಡ ಪ್ರತಿ ಯುದ್ಧದಲ್ಲಿ ಅಹೋಮ್ ರಾಜ್ಯವು ಸೋಲಿಸಿ ಹಿಮ್ಮೆಟ್ಟಿಸಿತು. 1658ರಲ್ಲಿ ಪಟ್ಟಕ್ಕೆ ಬಂದ ಮೊಘಲ್ ದೊರೆ ಔರಂಗಜೇಬನು ಅಹೋಮ್ ರಾಜ್ಯವನ್ನು ಹೇಗಾದರೂ ವಶಪಡಿಸಿಕೊಳ್ಳಲೇಬೇಕೆಂದು ಹಂಚಿಕೆ ಹಾಕಿದನು. ಅದಕ್ಕಾಗಿ ತನ್ನ ಅತ್ಯಂತ ನಂಬಿಕಸ್ಥ ಸೇನಾನಿಗಳಾದ ಮೀರ್ ಜುಮ್ಲ ಮತ್ತು ದಿಲೇರ್ ಖಾನ್‌ರನ್ನು ಭಾರತದ ಈಶಾನ್ಯ ಭಾಗಕ್ಕೆ ಕಳಿಸಿದನು. ಅವರಿಗೆ ಬಂಗಾಳ ಮತ್ತು ಅಹೋಮ್ ರಾಜ್ಯಗಳನ್ನು ಗೆದ್ದುಕೊಂಡು ಬರುವ ಜವಾಬ್ದಾರಿ ಹೊರಿಸಿದನು.

©KTBS NOT TO BE REPUBLISHED

**ಜಯಧ್ವಜ ಸಿಂಘ**

ಮೊಘಲ್ ಸೇನೆಯು ಹಿಂದೆಂದೂ ಕಂಡು ಕೇಳರಿಯದ ರೀತಿಯಲ್ಲಿ ಸಿದ್ಧವಾಯಿತು. ಆನೆ, ಕಾಲಾಳು, ಅಶ್ವ ದಳಗಳು ಸಿದ್ಧವಾದವು. ಒಟ್ಟಾರೆಯಾಗಿ ಸುಮಾರು 70,000 ಸೈನಿಕರಿದ್ದ ಈ ಸೇನೆಯು ಮೊದಲು ಬಂಗಾಳದ ಮೇಲೆ ಮುತ್ತಿಗೆ ಹಾಕಿ, ಅದನ್ನು ವಶಪಡಿಸಿಕೊಂಡು ನಂತರ ಬ್ರಹ್ಮಪುತ್ರ ನದಿಯ ಉದ್ದಕ್ಕೆ ಸಾಗಿ ಅಹೋಮ್ ರಾಜ್ಯವನ್ನು ತಲುಪಿತು. ಮೀರ್ ಜುಮ್ಲನ ಸೇನೆಯು ಗುವಾಹಟಿ, ಸಿಮಾಲ್‌ಗುರಿ ಮತ್ತು ಆಗ ಅಹೋಮ್ ರಾಜಧಾನಿಯಾಗಿದ್ದ ಗರ್ಗಾಂ ಅನ್ನು ವಶಪಡಿಸಿಕೊಂಡಿತು. ಈ ಯುದ್ಧವು ಅಪಾರ ಸಾವುನೋವುಗಳಿಗೆ ಕಾರಣವಾಯಿತು. ಈ ಭೀಕರ ಯುದ್ಧದಿಂದಾಗಿ ಅಹೋಮ್ ಸಾಮ್ರಾಜ್ಯವು ತನ್ನ ಬಹುದೊಡ್ಡ ಭೂಭಾಗವನ್ನು ಕಳೆದುಕೊಳ್ಳಬೇಕಾಯಿತು. ಜಯಧ್ವಜನು ಅತ್ಯಂತ ಅಪಮಾನಕರವಾದ ಒಪ್ಪಂದಕ್ಕೆ ಬರಬೇಕಾಯಿತು. ಆ ಒಪ್ಪಂದದ ಪ್ರಕಾರ ಆತನು ಖಜಾನೆಯಿಂದ ದೊಡ್ಡ ಪ್ರಮಾಣದ ಸಂಪತ್ತನ್ನು ಯುದ್ಧಪರಿಹಾರವಾಗಿ ಮೊಘಲರಿಗೆ ಒಪ್ಪಿಸಬೇಕಾಯಿತು. ಅಲ್ಲದೆ ಚಿನ್ನ ಬೆಳ್ಳಿಯಂಥ ಬೆಲೆಬಾಳುವ ಸಂಪತ್ತನ್ನು ಕೊಡಬೇಕಾಯಿತು. ಅಹೋಮ್ ರಾಜ್ಯವು ಆಗ ಆನೆಗಳಿಗೆ ಪ್ರಸಿದ್ಧವಾಗಿತ್ತು. ತನ್ನ ಗಜಸೇನೆಯಲ್ಲಿದ್ದ ಬೆಲೆಬಾಳುವ ನೂರಾರು ಆನೆಗಳನ್ನು ಕೂಡ ಆತನು ಮೊಘಲರಿಗೆ ಒಪ್ಪಿಸಬೇಕಾಯಿತು. ಎಲ್ಲಕ್ಕಿಂತ ಅಪಮಾನದ ಸಂಗತಿ ಎಂದರೆ ಜಯಧ್ವಜನು ತನ್ನ ಆರು ವರ್ಷದ ಮಗಳನ್ನು ಕೂಡ ಶತ್ರುಗಳ ಕೈಗೆ ಒಪ್ಪಿಸಬೇಕಾಯಿತು.

© KTBS NOT TO BE REPUBLISHED



ಇದೆಲ್ಲ ಒಪ್ಪಂದದಿಂದಾಗಿ ರಾಜ್ಯವು ಅವನ ಕೈಯಲ್ಲಿ ಉಳಿದರೂ ಅವನ ಮಾನಸಿಕ ನೆಮ್ಮದಿ ಹೊರಟೇಹೋಯಿತು. ಯುದ್ಧದ ನಂತರ ಜಯಧ್ವಜನು ಬಹಳ ಬೇಗನೆ ಹಾಸಿಗೆ ಹಿಡಿದನು. ಸೋಲು ಮತ್ತು ಅಪಮಾನಗಳ ಕೊರಗಿನಿಂದಲೇ ಬಹಳ ಬೇಗ ತೀರಿಕೊಂಡನು.

**ಚಕ್ರಧ್ವಜ ಸಿಂಘ**

ಜಯಧ್ವಜನ ಮರಣಾನಂತರ ಚಕ್ರಧ್ವಜ ಸಿಂಘನು ಅಹೋಮ್ ಸಾಮ್ರಾಜ್ಯದ ಅರಸನಾದನು. ಈತನ ಕಾಲದಲ್ಲಿ ಸಾಮ್ರಾಜ್ಯದ ಪರಿಸ್ಥಿತಿ ಹೇಳಿಕೊಳ್ಳುವಂಥದ್ದಾಗಿರಲಿಲ್ಲ. ಎಲ್ಲೆಡೆಯಿಂದ ಶತ್ರುಗಳ ಮುತ್ತಿಗೆ, ಬರಿದಾದ ಖಜಾನೆ, ಮಣ್ಣುಗೂಡಿದ ವಿಶ್ವಾಸ ಇವೆಲ್ಲದರಿಂದ ರಾಜ್ಯವು ಕಳಾಹೀನವಾಗಿತ್ತು. ಸೈನಿಕರ ಆತ್ಮಸ್ಥೈರ್ಯ ಕುಂದಿತ್ತು. ಚಕ್ರಧ್ವಜನಿಗೆ ತನ್ನ ರಾಜ್ಯವನ್ನು ಮತ್ತೆ ಎತ್ತಿನಿಲ್ಲಿಸುವ ಹೆಬ್ಬಯಕೆ ಇತ್ತು. ಅದಕ್ಕಾಗಿ ಆತ ಒಬ್ಬ ಸಮರ್ಥ ಸೇನಾಪತಿಯ ಹುಡುಕಾಟದಲ್ಲಿದ್ದನು. ಆಗ ಅವನ ಕಣ್ಣಿಗೆ ಬಿದ್ದವನೇ ಲಚಿತ್.

ಲಚಿತ್ ಹುಟ್ಟಿದ್ದು 1620ರಲ್ಲಿ. ಅವನ ತಂದೆ ರಾಜಾಸ್ಥಾನದಲ್ಲಿ ಹಿರಿಯ ಉದ್ಯೋಗದಲ್ಲಿದ್ದವನು. ಲಚಿತ್‌ನಿಗೆ ಬಾಲ್ಯದಿಂದಲೇ ಉತ್ತಮ ಸಂಸ್ಕಾರ ಸಿಕ್ಕಿತ್ತು, ಮಾತ್ರವಲ್ಲದೆ ಯುದ್ಧವಿದ್ಯೆಯೂ ದೊರಕಿತ್ತು. ಆತನಿಗೆ ಆಡಳಿತ ಮತ್ತು ಕ್ಷತ್ರಿಯ ಕೆಲಸಗಳಲ್ಲಿ ಎಲ್ಲಿಲ್ಲದ ಆಸಕ್ತಿ. ಹೀಗಾಗಿ ಬಹಳ ಬೇಗ ಮೇಲುಮೇಲಿನ ಹುದ್ದೆಗಳಿಗೆ ಬಡ್ತಿಯಾಗುತ್ತ ಹೋದನು. ಮೊದಲು ರಾಜನ ಸಚಿವನಾಗಿ, ಮುಖ್ಯ ಸಚಿವನಾಗಿ ಆರಿಸಿಬಂದ ಲಚಿತ್ ಅಶ್ವದಳದ ಮುಖ್ಯಸ್ಥನಾದನು. ನಂತರ ಪ್ರಜೆಗಳು ಹಾಗೂ ಎಲ್ಲ ಸೈನಿಕರ ಅಪೇಕ್ಷೆಯಂತೆ ರಾಜನು ಲಚಿತ್‌ನನ್ನು ಅಹೋಮ್ ರಾಜ್ಯದ ಮುಖ್ಯ ಸೇನಾಪತಿಯನ್ನಾಗಿ ಆರಿಸಿದನು. ಈ ಹುದ್ದೆಗೆ ಬೊರ್ಫುಕನ್ ಎಂದು ಹೆಸರು. ಅಂದಿನಿಂದ ಲಚಿತ್, ಲಚಿತ್ ಬೊರ್ಫುಕನ್ ಆದನು.


ಲಚಿತ್‌ನ ಮೊದಲ ಲಕ್ಷ್ಯವಿದ್ದುದು ಅಹೋಮ್ ಸೈನಿಕರಲ್ಲಿ ಭರವಸೆ ಮೂಡಿಸುವತ್ತ. ನಾಲ್ಕು ವರ್ಷ ರಾಜ್ಯದ ಸೈನಿಕರಿಗೆ ಕಠಿಣ ಸೇನಾ ತರಬೇತಿಯನ್ನು ಆಯೋಜಿಸಲಾಯಿತು. ಅಶ್ವದಳವನ್ನು ಬಲಗೊಳಿಸಲಾಯಿತು. ಆನೆಗಳ ದಳವನ್ನು ಹೊಸದಾಗಿ ಕಟ್ಟಲಾಯಿತು. ನೌಕಾದಳವನ್ನು ಸುಸಜ್ಜಿತಗೊಳಿಸಲಾಯಿತು. ಅನೇಕ ದೊಡ್ಡ ಯುದ್ಧನೌಕೆಗಳನ್ನು ನಿರ್ಮಿಸಲಾಯಿತು. ರಾಜ್ಯದ ಎಲ್ಲ ಕೋಟೆಗಳನ್ನು ಬಲಪಡಿಸಲಾಯಿತು. ರಾಜ್ಯದ ಗಟ್ಟಿಮುಟ್ಟಾದ ಯುವಕರನ್ನು ದೊಡ್ಡ ಸಂಖ್ಯೆಯಲ್ಲಿ ಸೇನೆಗೆ ಸೇರಿಸಿಕೊಳ್ಳಲಾಯಿತು. ಶಸ್ತ್ರಾಸ್ತ್ರಗಳನ್ನು ಆಧುನಿಕಗೊಳಿಸಿಕೊಳ್ಳಲಾಯಿತು. ಮದ್ದುಗುಂಡುಗಳ ಅಪಾರ ಶೇಖರಣೆಯನ್ನು ಮಾಡಲಾಯಿತು. ಆದರೆ ಲಚಿತ್‌ನು ಈ ಯಾವ ಸಿದ್ಧತೆಯ ಸೂಚನೆಯೂ ಮೊಘಲರಿಗೆ ಸಿಗದಂತೆ ಎಚ್ಚರಿಕೆ ವಹಿಸಿದನು. ಮೊಘಲರಿಗೆ ಆಗಾಗ ಕಾಣಿಕೆಗಳನ್ನು ಕಳಿಸುತ್ತ ಅವರನ್ನು ಸ್ನೇಹಿತರೆಂಬಂತೆಯೇ ನೋಡಿಕೊಳ್ಳಲಾಯಿತು.

**ಗುವಾಹಟಿಯ ವಶ**

ಮೊಘಲರೊಂದಿಗೆ ನಡೆದ ಯುದ್ಧದಲ್ಲಿ ಹಿಂದೆ ಗುವಾಹಟಿಯು ಅಹೋಮ್ ವಂಶದ ಕೈತಪ್ಪಿ ಮೊಘಲರ ಪಾಲಾಗಿತ್ತು. ಅದರ ಮುಖ್ಯಸ್ಥನಾಗಿ ರಷೀದ್ ಖಾನ್ ಎಂಬಾತನು ಆರಿಸಿ ಬಂದಿದ್ದನು. 1667ರಲ್ಲಿ ಅವನ ಸ್ಥಾನಕ್ಕೆ ಫಿರೋಜ್ ಖಾನ್ ಎಂಬುವನು ಬಂದುಕೂತನು. ಈತ ವಿಲಾಸಿ, ಲಂಪಟ, ಕ್ರೂರಿ. ತನ್ನ ವಿಲಾಸಕ್ಕಾಗಿ ಅಸ್ಸಾಮೀ ಯುವತಿಯರನ್ನು ಕಳುಹಿಸಿಕೊಡಬೇಕೆಂದು ಈತ ಚಕ್ರಧ್ವಜನಿಗೆ ಆಜ್ಞೆ ಮಾಡಿದನು. ಈ ಘಟನೆಯು ಅಹೋಮೀ ಜನರ ಆತ್ಮಾಭಿಮಾನವನ್ನು ಕೆರಳಿಸಿತು. ಮೊಘಲರನ್ನು

NOT TO BE REPUBLISHED @KTBS

ಹೇಗಾದರೂ ಮಾಡಿ ಅಹೋಮಿ ನೆಲದಿಂದ ಓಡಿಸಲೇಬೇಕೆಂದು ಅವರು ಸಂಕಲ್ಪ ತೊಟ್ಟರು. ಇದಕ್ಕಾಗಿ ಮೊದಲು ಇಟಕುಲಿ ಕೋಟೆಯನ್ನು ವಶಪಡಿಸಿಕೊಳ್ಳಬೇಕಿತ್ತು. ಅಹೋಮಿ ಸೈನಿಕರು ಉಪಾಯದಿಂದ ಈ ಕೋಟೆಯನ್ನೇರಿ ಶಸ್ತ್ರಾಸ್ತ್ರಗಳಿಗೆ ನೀರು ಸುರಿದು ಅವು ಬಳಕೆಗೆ ಬಾರದಂತೆ ಮಾಡಿದರು. ಮರುದಿನವೇ ಲಚಿತ್ ತನ್ನ ನೇತೃತ್ವದಲ್ಲಿ ದೊಡ್ಡದೊಂದು ಸೇನೆಯನ್ನು ಆ ಕೋಟೆಗೆ ಮುತ್ತಿಗೆ ಹಾಕಿಸಿ ಅಲ್ಲಿದ್ದ ಮೊಘಲ್ ಅಧಿಕಾರಿಗಳನ್ನೂ ಸೈನಿಕರನ್ನೂ ಓಡಿಸಿದನು. ಗುವಾಹಟಿಯು ಅಹೋಮ್ ರಾಜ್ಯಕ್ಕೆ ಮರಳಿಬಂತು.



ವೀರ ಯೋಧ ಲಚಿತ್

**ಅಲಬೊಯ್ ಕಾಳಗ**

ಗುವಾಹಟಿಯು ಕೈತಪ್ಪಿದ ವಿಷಯವನ್ನು ತಿಳಿಯುತ್ತಲೇ ಔರಂಗಜೇಬನು ಕೆಂಡಾಮಂಡಲನಾದನು. ಮತ್ತೊಮ್ಮೆ ಮೊಘಲ್ ಸೇನೆಯು ಯುದ್ಧಸನ್ನದ್ಧವಾಯಿತು. ಈ ಸಲ 70,000 ಸೈನಿಕರನ್ನು ಅಹೋಮ್ ರಾಜ್ಯದ ಮೇಲೆ ದಾಳಿನಡೆಸಲೆಂದು ಕಳಿಸಲಾಯಿತು. ಎರಡೂ ಸೇನೆಗಳು ಅಲಬೊಯ್ ಎಂಬ ಮೈದಾನದಲ್ಲಿ ಎದುರೆದುರಾದವು. ಮತ್ತೊಮ್ಮೆ ಭೀಕರವಾದ ಕಾಳಗವೇ ನಡೆಯಿತು. ಅಹೋಮ್ ಸೇನೆಗಿಂತಲೂ ಮೊಘಲರ ಸೇನೆ ಹೆಚ್ಚು ಬಲಿಷ್ಠವಾಗಿತ್ತು. ಅಶ್ವಗಳು ದೊಡ್ಡ ಸಂಖ್ಯೆಯಲ್ಲಿದ್ದವು. ಅಷ್ಟಾದರೂ ಅಹೋಮ್ ಸೇನೆ ಜೀವದ ಹಂಗು ತೊರೆದು ಹೋರಾಡಿತು. ಕಡಿಮೆ ಸಂಖ್ಯೆಯಲ್ಲಿದ್ದ ಅಹೋಮ್ ಸೈನಿಕರು ದೊಡ್ಡ ಸಂಖ್ಯೆಯ ಮೊಘಲ್ ಸೇನೆಯನ್ನು ಕೊನೆಗೂ ಸೋಲಿಸಿದರು. ಆದರೆ ಈ ವಿಜಯವನ್ನು ಸಂಭ್ರಮಿಸುವ ಸ್ಥಿತಿಯಲ್ಲಿ ಅವರಿರಲಿಲ್ಲ. ಯಾಕೆಂದರೆ ಅವರ ಕಡೆಯಲ್ಲೂ ಸಾವಿರಾರು ಸೈನಿಕರು ಸತ್ತುಬಿದ್ದಿದ್ದರು. ಲಚಿತ್ ಕೂಡ ಹತ್ತಾರು ಕತ್ತಿಯೇಟುಗಳೊಂದಿಗೆ ಬದುಕುಳಿದಿದ್ದ. ಈ ಕಾಳಗದಲ್ಲಿ ಅಹೋಮ್ ರಾಜ್ಯ ಗೆದ್ದರೂ ಅದರ ಮರುವರ್ಷವೇ ಚಕ್ರಧ್ವಜನು ಮರಣ ಹೊಂದಿದನು.

**ಸರಾಯ್‌ಘಾಟ್ ಸಂಗ್ರಾಮ**

1670ರಲ್ಲಿ ಚಕ್ರಧ್ವಜ ಸಿಂಘನು ತೀರಿಕೊಂಡ ಬಳಿಕ ಉದಯಾದಿತ್ಯ ಸಿಂಘನು ಅಧಿಕಾರ ವಹಿಸಿಕೊಂಡನು. ಸೋತು ಮರಳಿದ ಮೊಘಲರು ತಮ್ಮ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಲೇ ಇದ್ದರು. 1671ರಲ್ಲಿ ಅವರಿಗೆ ಅನುಕೂಲವಾದ ಅವಕಾಶವೊಂದು ಒದಗಿಬಂದಿತು. ಅಹೋಮ್ ರಾಜ್ಯದ ಒಂದಷ್ಟು ಭಾಗಗಳಲ್ಲಿ ಸೇನಾಬಲ ಕಡಿಮೆ ಸಂಖ್ಯೆಯಲ್ಲಿದೆ; ಅಲ್ಲಿ ಸುಲಭವಾಗಿ ಒಳನುಗ್ಗಬಹುದೆಂಬ ಬೇಹು ಸುದ್ದಿ ಮೊಘಲರನ್ನು ತಲುಪಿತು. ತಡಮಾಡದೆ ಸೇನೆ ಸಜ್ಜುಗೊಳಿಸಿ ಯುದ್ಧಸನ್ನದ್ಧರಾದರು. ಈ ಸಲ ಯಾವುದೇ ಕಾರಣಕ್ಕೂ ಸೋಲಬಾರದೆಂದು ನೌಕಾದಳಕ್ಕೆ ವಿಶೇಷ ಗಮನ ಕೊಟ್ಟರು. ಬೃಹತ್ತಾದ 40 ಹಡಗುಗಳನ್ನು ನಿರ್ಮಿಸಿಕೊಂಡರು. 1671ರಲ್ಲಿ ಸರಾಯ್‌ಘಾಟ್ ಎಂಬಲ್ಲಿ ಮೊಘಲ್ ಮತ್ತು ಅಹೋಮ್ ಸೇನೆಗಳು ಬ್ರಹ್ಮಪುತ್ರ ನದಿಯಲ್ಲಿ ಎದುರೆದುರಾದವು. ಮೊಘಲರ ಯುದ್ಧನೌಕೆಗಳಿಗೆ ಹೋಲಿಸಿದರೆ ಅಹೋಮರ ನೌಕೆಗಳು ಬಹುಪಾಲು ಸಣ್ಣವು. ಇದು ಮೊಘಲರ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿತು. ಯುದ್ಧದ ಪ್ರಾರಂಭದಲ್ಲಿ ಅಹೋಮ್ ಸೇನೆ ಹೆದರಿ ಹಿಮ್ಮೆಟ್ಟಿದಂತೆ ಕಂಡಿತು. ಈ ಸಮಯದಲ್ಲಿ ಅಹೋಮ್ ಸೇನೆಯ ದೌರ್ಬಲ್ಯದ ಸುದ್ದಿ ಲಚಿತ್‌ಗೆ ತಲುಪಿತು. ಆತ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರೂ ಈ ಕೆಟ್ಟಸುದ್ದಿಯನ್ನು ಕೇಳಿ ಚಂಗನೆ ನೆಗೆದು ಎದ್ದನು. ವೈದ್ಯರ ಸಲಹೆಯ ವಿರುದ್ಧವಾಗಿ ಆತ ಯುದ್ಧಕ್ಕೆ ಹೊರಟುನಿಂತನು. ಇಡೀ ರಾಜ್ಯದಲ್ಲಿ ನಾನೊಬ್ಬನೇ

© KTBS NOT TO BE REPUBLISHED

ಹೋರಾಡಬೇಕಾಗಿ ಬಂದರೂ ನಾನು ಹಿಮ್ಮೆಟ್ಟುವವನಲ್ಲ ಎಂದು ಗರ್ಜಿಸಿ ಕತ್ತಿ ಹಿಡಿದು ತನ್ನ ಸೈನಿಕರಲ್ಲಿ ಹುಮ್ಮಸ್ಸು ತುಂಬಿದನು. ಅಹೋಮ್ ಸೈನ್ಯವು ಹೊಸ ಯುದ್ಧೋತ್ಸಾಹದಿಂದ ರಣಘೋಷ ಮಾಡುತ್ತ ಮುನ್ನುಗ್ಗಲು ಪ್ರಾರಂಭಿಸಿತು. ಅಹೋಮರ ಸಣ್ಣ ಸಣ್ಣ ನಾವೆಗಳು ದೊಡ್ಡ ನೌಕೆಗಳಿಗಿಂತ ಹಲವು ಪಟ್ಟು ವೇಗದಲ್ಲಿ ಸಂಚರಿಸುತ್ತ ಮೊಘಲರ ನೌಕೆಗಳಿಗೆ ನದಿಯಲ್ಲೇ ಕೋಟೆ ಕಟ್ಟಿಬಿಟ್ಟವು. ಅಲ್ಲದೆ ನದಿಯ ಅಲ್ಲಲ್ಲಿ ನಿಲ್ಲಿಸಿದ್ದ ಜಲಕೋಟೆಗಳಿಂದ (ನೀರಲ್ಲಿ ನಿರ್ಮಿಸಿದ ಎತ್ತರದ ಗೋಡೆಗಳು) ಫಿರಂಗಿಗಳ ಮೂಲಕ ಮದ್ದುಗುಂಡುಗಳನ್ನು ಹಾರಿಸತೊಡಗಿದರು. ಬ್ರಹ್ಮಪುತ್ರ ನದಿಯೇ ರಣಾಂಗಣವಾಯಿತು. ನದಿಯ ಮೇಲಿಂದಲೇ ನಡೆದ ಭಾರತದ ವಿಶೇಷ ಯುದ್ಧವೆಂದು ಸರಾಯ್‌ಘಾಟ್ ಸಂಗ್ರಾಮ ಇತಿಹಾಸದಲ್ಲಿ ದಾಖಲಾಯಿತು. ಅಹೋಮ್ ಸೈನಿಕರ ಕೆಚ್ಚೆದೆಯ ಹೋರಾಟದಿಂದಾಗಿ ಮೊಘಲರ ನೌಕಾಸೇನೆಯ ಮುಖ್ಯಸ್ಥನಾಗಿದ್ದ ಮುನ್ನಾವರ್ ಖಾನ್ ಗುಂಡಿಗೆ ಬಲಿಯಾಗಿ ಉರುಳಿದನು. ಅವರ ಸೇನೆಯ ಮೂರು ಮುಖ್ಯ ಅಧಿಕಾರಿಗಳಲ್ಲದೆ ಸುಮಾರು 4,000 ಮಂದಿ ಸತ್ತು ನದಿಗುರುಳಿದರು. ಅಹೋಮ್ ಸೇನೆ ಕೊನೆಗೂ ಯುದ್ಧವನ್ನು ಗೆದ್ದಿತು.

**ಕೊನೆಯ ಅಹೋಮ್ – ಮೊಘಲ್ ಯುದ್ಧ**

ಈ ಯುದ್ಧವು ಮುಗಿದ ವರ್ಷದಲ್ಲೇ ಲಚಿತ್ ತೀವ್ರ ಅನಾರೋಗ್ಯದಿಂದ ತೀರಿಕೊಂಡನು. ಮೊಘಲ್ ಸಾಮ್ರಾಜ್ಯಕ್ಕೆ ಈ ಯುದ್ಧದಲ್ಲಿ ಅಹೋಮ್ ಜನರು ಕೊಟ್ಟ ಹೊಡೆತ ಹೇಗಿತ್ತೆಂದರೆ ಮುಂದೆ ಹನ್ನೊಂದು ವರ್ಷಗಳ ಕಾಲ ಅವರು ಇತ್ತ ತಲೆಯನ್ನೇ ಹಾಕಲಿಲ್ಲ. ಆದರೆ ಕೋಪವು ಒಳಗಿಂದ ಕುದಿಯುತ್ತಲೇ ಇತ್ತು. ಅದು 1682ರಲ್ಲಿ ಮತ್ತೆ ಸ್ಫೋಟಿಸಿತು. ಈ ಸಲ ಅಹೋಮ್ ರಾಜ್ಯದ ರಾಜನಾಗಿದ್ದವನು ಗದಾಧರ ಸಿಂಘ. ಈತನ ಸಮಯದಲ್ಲಿ ಮೊಘಲರ ಸೇನೆ ಮನ್ಸೂರ್ ಖಾನ್ ಎಂಬವನ ನೇತೃತ್ವದಲ್ಲಿ ಮುತ್ತಿಗೆ ಹಾಕಿತು. ಆದರೆ ಈ ಸಲ ಅವರನ್ನು ಅತ್ಯಂತ ಯಶಸ್ವಿಯಾಗಿ ಸೋಲಿಸಿ ಓಡಿಸಿದ ಗದಾಧರ ಸಿಂಘ, ಮೊಘಲರ ವಶದಲ್ಲಿದ್ದ ಎಲ್ಲ ಅಹೋಮ್ ಪ್ರಾಂತ್ಯಗಳನ್ನೂ ತನ್ನ ಕೈಗೆ ತೆಗೆದುಕೊಂಡು ಕಾವರೂಪವನ್ನೂ ಗೆದ್ದುಕೊಂಡನು. ಮಾತ್ರವಲ್ಲ ಮೊಘಲರನ್ನು ಬ್ರಹ್ಮಪುತ್ರದ ಎಲ್ಲ ಭೂಭಾಗಗಳಿಂದ ಓಡಿಸಿ ಮಾನಸ ನದಿಯವರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ಈ ನಿರ್ಣಾಯಕ ಕದನವನ್ನು ಇಟಕುಲಿ ಕಾಳಗವೆಂದು ಕರೆಯಲಾಗಿದೆ. ಇದು ಅಹೋಮ್ ಮತ್ತು ಮೊಘಲರ ನಡುವೆ ನಡೆದ ಕೊನೆಯ ಯುದ್ಧವಾಗಿದೆ.

ಅಹೋಮ್ ರಾಜರು ಒಟ್ಟು ಆರು ಸ್ಥಳಗಳನ್ನು ತಮ್ಮ ರಾಜಧಾನಿಯಾಗಿ ಕಾಲಕಾಲಕ್ಕೆ ಅಭಿವೃದ್ಧಿಪಡಿಸುತ್ತ ಬಂದರು. ಉತ್ತರ ಭಾರತದ ಸಣ್ಣಪುಟ್ಟ ರಾಜವಂಶಗಳನ್ನೆಲ್ಲ ಒಗ್ಗೂಡಿಸಿ ಮಗಧದಲ್ಲಿ ಮೌರ್ಯರು ಬೃಹತ್ತಾದ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದಂತೆಯೇ ಈಶಾನ್ಯ ಭಾರತದಲ್ಲಿದ್ದ ನೂರಾರು ಬುಡಕಟ್ಟು ಆಡಳಿತಗಳನ್ನೆಲ್ಲ ಒಟ್ಟಾಗಿಸಿ ಒಂದು ಬೃಹತ್ ಶಕ್ತಿಶಾಲಿ ಸಾಮ್ರಾಜ್ಯವನ್ನು ಕಟ್ಟಿದ್ದು ಅಹೋಮ್ ರಾಜರುಗಳ ಸಾಧನೆಯಾಗಿದೆ. ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯ, ದಖನ್‌ನಲ್ಲಿ ಮರಾಠಾ ಸಾಮ್ರಾಜ್ಯ, ವಾಯುವ್ಯ ಭಾಗದಲ್ಲಿ ರಜಪೂತರ ಸಾಮ್ರಾಜ್ಯ, ಕಾಶ್ಮೀರದಲ್ಲಿ ಕಾರ್ಕೋಟ ಸಾಮ್ರಾಜ್ಯ ಇದ್ದಂತೆಯೇ ಭಾರತದ ಇಡೀ ಈಶಾನ್ಯ ಭಾಗವನ್ನು ಒಂದುಗೂಡಿಸಿ ಆಳಿದ ಮಹಾನ್ ಸಾಮ್ರಾಜ್ಯವೇ ಅಹೋಮ್. ಈ ಸಾಮ್ರಾಜ್ಯವು ಯಾವೊಂದು ಮುಸ್ಲಿಮ್ ದೊರೆಗಳಿಗೂ ತಲೆಬಾಗಲಿಲ್ಲ. ಇಡೀ ದೇಶವನ್ನು ಆಳಿಹೋದ ಮೊಘಲರಿಗೆ ಅಹೋಮ್ ರಾಜರು ದಶಕಗಳುದ್ದಕ್ಕೂ ಪ್ರಬಲ ಪ್ರತಿರೋಧ ಒಡ್ಡುತ್ತಲೇ ಬಂದರು. ಮೊಘಲರನ್ನು ಅಹೋಮ್ ಸೇನೆಯು 17 ಚಿಕ್ಕ–ದೊಡ್ಡ ಯುದ್ಧಗಳಲ್ಲಿ ನಿರಂತರವಾಗಿ ಸೋಲಿಸಿತು. 1228ರಲ್ಲಿ ಸ್ಥಾಪನೆಯಾದ ಈ ಸಾಮ್ರಾಜ್ಯವು 598 ವರ್ಷಗಳ ದೀರ್ಘ ಆಡಳಿತವನ್ನು ನಡೆಸಿ 1826ರಲ್ಲಿ ಕೊನೆಗೊಂಡಿತು.

© KTBS NOT TO BE REPUBLISHED

ಒಮ್ಮೆ ಬ್ರಹ್ಮಪುತ್ರಾ ನದಿ ದಂಡೆಯಲ್ಲಿ ಮೊಘಲರ ವಿರುದ್ಧ ನಡೆದ ಕಾಳಗವೊಂದರಲ್ಲಿ ಲಚಿತ್, ಒಂದು ರಾತ್ರಿಯಲ್ಲಿ ಮೊಘಲರನ್ನು ಹಿಮ್ಮೆಟ್ಟಿಸುತ್ತೇನೆಂದು ಪಣ ತೊಟ್ಟಿದ್ದ. ಆದರೆ ಆತನ ಸೋದರಮಾವ ಯುದ್ಧದಲ್ಲಿ ಸೇನಾನಿಯಾಗಿ ಭಾಗಿಯಾಗಿದ್ದರೂ ಯುದ್ಧ ಮಾಡಲು ಉದಾಸೀನನಾಗಿದ್ದ. ಇರುಳಿನ ಅತ್ಯಂತ ನಿರ್ಣಾಯಕ ಸಮಯದಲ್ಲಿ ಆತ ತನ್ನ ಸೈನಿಕರನ್ನೆಲ್ಲ ಅವರವರ ಗುಡಾರಗಳಿಗೆ ಕಳಿಸಿ ತಾನು ನಿದ್ರೆಗೆ ಜಾರಿದ. ಮಾವನ ಸಹಾಯವನ್ನು ನಿರೀಕ್ಷಿಸಿದ್ದ ಲಚಿತ್‌ಗೆ ಈ ಉದ್ಧಟತನದಿಂದ ಕ್ರೋಧ ಮೂಡಿತು. ಕೆರಳಿದ ಲಚಿತ್, ಒರೆಯಿಂದ ಖಡ್ಗವನ್ನು ಸೆಳೆದುತೆಗೆದು ಸೋದರ ಮಾವನ ತಲೆಯನ್ನೇ ಕತ್ತರಿಸಿದ. "ನನಗೆ ನನ್ನ ಮಾವನಿಗಿಂತ ನನ್ನ ಸಾಮ್ರಾಜ್ಯದ ಹಿತವೇ ಮುಖ್ಯ" ಎಂದು ಗುಡುಗಿದ. ಲಚಿತ್‌ನ ಈ ಸ್ವಾಮಿನಿಷ್ಠೆಯನ್ನು ಕಂಡು ದಿಙ್ಮೂಢರಾದ ಸೇನಾನಿಗಳು ಆತನ ಬೆಂಬಲಕ್ಕೆ ನಿಂತರು. ಒಂದೇ ರಾತ್ರಿಯಲ್ಲಿ ಕೋಟೆಯನ್ನು ಕಟ್ಟಿಮುಗಿಸಿದರು ಎಂದು ಐತಿಹ್ಯ. ಅದರ ಮರುದಿನ ನಡೆದ ಕಾಳಗದಲ್ಲಿ ಲಚಿತ್ ಪೌರುಷದಿಂದ ಹೋರಾಡಿ ಅಹೋಮ್ ಸಾಮ್ರಾಜ್ಯಕ್ಕೆ ಗೆಲುವು ತಂದುಕೊಟ್ಟ.

## ಭಾರತದಲ್ಲಿ ಮೊಘಲರ ಆಡಳಿತ (1526–1707)

### ಬಾಬರ್

ಭಾರತದಲ್ಲಿ ಮೊಘಲ್ ಸಾಮ್ರಾಜ್ಯ ಸ್ಥಾಪಿಸಿದ ಬಾಬರ್ ಮೂಲತಃ ತುರ್ಕಿಸ್ತಾನದವನು. ಈತನ ತಂದೆ ಉಮರ್‌ಶೇಖ್ ಮಿರ್ಜಾ ಅಫ್ಘಾನಿಸ್ತಾನದ ಚಿಕ್ಕ ರಾಜ್ಯವಾದ ಫರ್ಘಾನದ ದೊರೆಯಾಗಿದ್ದನು. ತಂದೆಯ ಮರಣದಿಂದಾಗಿ ಬಾಬರ್ ತನ್ನ ಹನ್ನೊಂದನೆಯ ವಯಸ್ಸಿನಲ್ಲಿ ಫರ್ಘಾನದ ಸಿಂಹಾಸನವನ್ನೇರಿದನು. ಈತನು ರಾಜ್ಯವನ್ನು ಕಳೆದುಕೊಂಡು ಅಲೆಮಾರಿ ಜೀವನ ನಡೆಸುವ ಸಂದರ್ಭದಲ್ಲಿ ಭಾರತದ ಮೇಲೆ ದಾಳಿ ಮಾಡಲು ದೊರೆತ ಪ್ರೇರಣೆಯಿಂದಾಗಿ ಐದು ಸಲ ದಾಳಿ ಮಾಡಿದನು. ದೆಹಲಿ ಸುಲ್ತಾನನಾಗಿದ್ದ ಇಬ್ರಾಹಿಂ ಲೋದಿಯನ್ನು 1526 ರಲ್ಲಿ ನಡೆದ ಪಾಣಿಪತ್ ಯುದ್ಧದಲ್ಲಿ ಸೋಲಿಸಿ ಭಾರತದಲ್ಲಿ ಮೊಘಲ್ ಅಧಿಕಾರ ಸ್ಥಾಪಿಸಿದನು. ಇದನ್ನು ಮೊದಲನೆಯ ಪಾಣಿಪತ್ ಯುದ್ಧವೆಂದು ಕರೆಯುತ್ತಾರೆ. ದೆಹಲಿ ಈತನ ರಾಜಧಾನಿಯಾಗಿತ್ತು. ಇವನು ತನ್ನ ನಾಲ್ಕು ವರ್ಷಗಳ ಅವಧಿಯಲ್ಲಿ ಮೇವಾಡದ ರಾಣಾ ಸಂಗ್ರಾಮಸಿಂಗ್, ರಜಪೂತ ದೊರೆ ಚಾಂದೇರಿಯ ಮೇದಿನರಾಯ ಹಾಗೂ ಇಬ್ರಾಹಿಂ ಲೋದಿಯ ಸಹೋದರನಾದ ಮಹಮದ್ ಲೋದಿಯರನ್ನು ಸೋಲಿಸಿದನು. ಬಾಬರನು ಪಾಣಿಪತ್, ಗೋಗ್ರ ಮತ್ತು ಕಣ್ವ ಎಂಬ ಮೂರು ಯದ್ಧಗಳನ್ನು ಗೆಲ್ಲುವ ಮೂಲಕ ಉತ್ತರ ಭಾರತದ ವಿಶಾಲವಾದ ಪ್ರದೇಶದಲ್ಲಿ ಮೊಘಲ ಸಾಮ್ರಾಜ್ಯ ಸ್ಥಾಪನೆ ಮಾಡಿದನು.

***ನಿಮಗಿದು ಗೊತ್ತೇ?***

***ಬಾಬರನಾಮಾ (ತುಝುಕ್–ಇ–ಬಾಬರಿ)***

*ಬಾಬರ್ ತನ್ನ ಆತ್ಮ ಚರಿತ್ರೆಯನ್ನು ತುರ್ಕಿ ಬಾಷೆಯಲ್ಲಿ ಬರೆದನು. ಈ ಗ್ರಂಥದಲ್ಲಿ ರಾಜಕೀಯ ಸಂಘಟನೆಯಲ್ಲದೆ ವಿವಿಧ ನಾಡುಗಳ ಪ್ರಾಕೃತಿಕ ಸ್ವರೂಪ, ಸೌಂದರ್ಯ, ಅಲ್ಲಿನ ಪ್ರಾಣಿ ಸಂಕುಲ, ಸಸ್ಯವರ್ಗ, ಪಕ್ಷಿ, ತೋಟಗಳ ಬಗ್ಗೆ ವರ್ಣಿಸಲಾಗಿದೆ. ಬಾಬರ್ ಕವಿ ಹಾಗೂ ಉತ್ತಮ ಚಿತ್ರಕಾರನಾಗಿದ್ದನು. ಅಬ್ದುಲ್‌ರಹೀಮ್‌ಖಾನ್ ಇದನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿದನು.*

### ಹುಮಾಯೂನ್

ಮೊಘಲ್ ಸಾಮ್ರಾಜ್ಯದ ಎರಡನೆಯ ಸುಲ್ತಾನ ಹುಮಾಯೂನನು ಬಾಬರ್‌ನ ಹಿರಿಯ ಪುತ್ರ. ಇವನು ಅಧಿಕಾರಕ್ಕೆ ಬಂದಾಗ ಕಠಿಣ ಸವಾಲುಗಳನ್ನು ಎದುರಿಸಬೇಕಾಯಿತು. ಅವುಗಳೆಂದರೆ ಅಸ್ಥಿರ ಹಾಗೂ ಅಸಂಘಟಿತ ಸಾಮ್ರಾಜ್ಯ, ಅಫ್ಘಾನರ ತೊಂದರೆ, ಗುಜರಾತದ ಬಹದ್ದೂರಷಾನ ವೈರತ್ವ,

NOT TO BE REPUBLISHED ©KTBS

ಸಹೋದರರ ಅಸಹಕಾರ ಮುಖ್ಯವಾದವು. ಕಾಲಿಂಜರ ಕೋಟೆ, ದೌರಾ, ಜಾನಪುರ, ಚುನಾರಕೋಟೆ, ಮಾಂಡಸರ್‌ಗಳನ್ನು ವಶಪಡಿಸಿಕೊಂಡನು. ಶೇರ್‌ಷಾನಿಂದ ಸೋಲಲ್ಪಟ್ಟ ಹುಮಾಯೂನನು ಸಿಂದ್ ಪ್ರಾಂತ್ಯದಲ್ಲಿ ಆಶ್ರಯ ಪಡೆದು ಶೇರ್‌ಷಾನ ಮರಣದ ನಂತರ ಪುನ: ಆಡಳಿತಕ್ಕೆ ಬಂದನು.

**ಶೇರ್‌ಷಾ**

ಸೂರ್ ಮನೆತನದ ಸ್ಥಾಪಕ ಶೇರ್‌ಷಾನ ಮೂಲ ಹೆಸರು ಫರೀದ್. ಇವನ ಬಾಲ್ಯದಿನಗಳು ಸುಖಕರವಾಗಿರಲಿಲ್ಲ. ತಂದೆ-ತಾಯಿಯ ಪ್ರೀತಿ ಮತ್ತು ವಾತ್ಸಲ್ಯದಿಂದ ವಂಚಿತನಾಗಿ, ತನ್ನ ಭವಿಷ್ಯಕ್ಕಾಗಿ ಅಲೆಮಾರಿ ಜೀವನ ನಡೆಸಿದನು. ದಕ್ಷಿಣ ಬಿಹಾರದ ದೊರೆಯಾಗಿದ್ದ ಬಹಾರಖಾನ್ ಲೋಹಣಿಯ ಸೇವೆಯಲ್ಲಿದ್ದಾಗ ಒಬ್ಬನೇ ಹುಲಿಯನ್ನು ಕೊಂದಿದ್ದರಿಂದ ಫರೀದನಿಗೆ ಶೇರ್‌ಖಾನನೆಂಬ ಬಿರುದು ಬಂದಿತು. ಬಾಬರ್ ಭಾರತದಲ್ಲಿ ಆಡಳಿತ ವಹಿಸಿಕೊಂಡ ನಂತರ ಆತನ ಸೇವೆಗೆ ಸೇರಿ ಮಹತ್ವದ ಪಾತ್ರವಹಿಸಿದನು.

ಹುಮಾಯೂನನನ್ನು ಸೋಲಿಸಿದ ಶೇರ್‌ಷಾನು ಪಂಜಾಬ್, ಸಿಂದ್ ಮುಲ್ತಾನ್, ಗ್ವಾಲಿಯರ್, ಮಾಳ್ವ, ರೈಸಿನ್‌ದುರ್ಗಾ, ಮಾರ್ವಾಡ ಮತ್ತು ಕಾಲಿಂಜರ್‌ಗಳನ್ನು ವಶಪಡಿಸಿಕೊಂಡನು.

**ಶೇರ್‌ಷಾನ ಆಡಳಿತ ವ್ಯವಸ್ಥೆ**

ಈತನ ಸಾಮ್ರಾಜ್ಯವು ಅಸ್ಸಾಂ, ಗುಜರಾತ್ ಮತ್ತು ಕಾಶ್ಮೀರಗಳನ್ನು ಹೊರತುಪಡಿಸಿ ಇಡೀ ಉತ್ತರ ಭಾರತವನ್ನು ಒಳಗೊಂಡಿತ್ತು. ಈತನ ಸೈನ್ಯದಲ್ಲಿ 25,000 ಕಾಲಾಳುಗಳು, 1,50,000 ಕುದುರೆಗಳು ಮತ್ತು 500 ಆನೆಗಳಿದ್ದವು. ಅಶ್ವದಳ ಅತ್ಯಂತ ಪ್ರಬಲವಾಗಿತ್ತು. ಸೈನ್ಯವನ್ನು ಅನೇಕ ಫೌಜಗಳನ್ನಾಗಿ ವಿಂಗಡಿಸಿ ಅವುಗಳ ಮೇಲ್ವಿಚಾರಣೆಗೆ ಫೌಜದಾರರನ್ನು ನೇಮಕ ಮಾಡಿದ್ದನು. ಸೈನ್ಯ ಸಂಘಟನೆ, ಯುದ್ಧ ಸಾಮಗ್ರಿಗಳು ಮತ್ತು ಸೈನಿಕರ ಶಿಸ್ತಿನ ವಿಷಯದಲ್ಲಿ ಶೇರಷಾ ಸ್ವತಃ ಆಸಕ್ತಿ ವಹಿಸಿದ್ದನು. ಸೈನ್ಯದ ಪ್ರಯಾಣದ ಸಮಯದಲ್ಲಿ ರೈತರ ಬೆಳೆಗಳಿಗೆ ನಷ್ಟ ಸಂಭವಿಸಿದಲ್ಲಿ ಸರ್ಕಾರ ನಷ್ಟ ಭರಿಸುತ್ತಿತ್ತು. ದೆಹಲಿ, ರೋಹತಾಸ್, ಕನೋಜ್ ಮತ್ತು ಪಾಟ್ನಾಗಳಲ್ಲಿ ಹೊಸ ಕೋಟೆಗಳನ್ನು ಕಟ್ಟಿಸಿದನು.

> ***ನಿಮಗಿದು ಗೊತ್ತೆ ?***
>
> *ಆಡಳಿತ ವ್ಯವಸ್ಥೆ ನೋಡಿಕೊಳ್ಳಲು ದಿವಾನ್-ಇ-ಇನ್ಸಾ, ದಿವಾನ್-ಇ-ಆರಿಜ್, ದಿವಾನ್-ಇ-ರಸಲತ್, ದಿವಾನ್-ಇ-ವಜರತ್ ಎಂಬ ನಾಲ್ಕು ಪ್ರಮುಖ ಮತ್ತು ದಿವಾನ್-ಇ-ಖಾಜಾ, ಬರೀದ್-ಇ-ಮಮಲಿಕ್ ಎಂಬ ಉಪ ಇಲಾಖೆಗಳಿದ್ದವು.*

ಸಾಮ್ರಾಜ್ಯದ ಭೂಮಿಯನ್ನು ಅದರ ಫಲವತ್ತತೆಗೆ ಅನುಗುಣವಾಗಿ ಉತ್ತಮ, ಮಧ್ಯಮ ಮತ್ತು ಕನಿಷ್ಠ ಎಂದು ಮೂರು ಭಾಗಗಳನ್ನಾಗಿ ವಿಂಗಡಿಸಿದ್ದನು. ರೈತರು ತಮ್ಮ ಬೆಳೆಯ ಉತ್ಪಾದನೆಯ $\frac{1}{3}$ ಭಾಗವನ್ನು ಭೂಕಂದಾಯವೆಂದು ಸರ್ಕಾರಕ್ಕೆ ನೀಡುತ್ತಿದ್ದರು.

ಶೇರ್‌ಷಾ ನಿಷ್ಪಕ್ಷಪಾತ ನ್ಯಾಯದಾನಕ್ಕೆ ಹೆಸರುವಾಸಿಯಾಗಿದ್ದನು. ಆದ್ದರಿಂದ ಆತನಿಗೆ ನ್ಯಾಯನಿಷ್ಠ ಸುಲ್ತಾನನೆಂಬ ಬಿರುದಿತ್ತು. ಸುಲ್ತಾನನೇ ಸಾಮ್ರಾಜ್ಯದಲ್ಲಿ ವರಿಷ್ಠ ನ್ಯಾಯಾಧೀಶನಾಗಿದ್ದನು. ಎಲ್ಲ ಅಂತಿಮ ಮನವಿಗಳನ್ನು ಆತನೇ ತೀರ್ಮಾನಿಸುತ್ತಿದ್ದನು. ಪ್ರತಿ ಬುಧವಾರ ಸಾಯಂಕಾಲ ನ್ಯಾಯದಾನ ಕಾರಣಕ್ಕಾಗಿ ದರ್ಬಾರು ನಡೆಸುತ್ತಿದ್ದನು.

> **ತಿಳಿದಿರಲಿ :**
>
> **ನಾಲ್ಕು ಪ್ರಮುಖ ರಾಜಮಾರ್ಗಗಳೆಂದರೆ :**
>
> 1) ಸೋನಾರಗಾಂವದಿಂದ ಆರಂಭಿಸಿ ಆಗ್ರಾ, ದಿಲ್ಲಿ ಮತ್ತು ಲಾಹೋರಗಳ ಮೂಲಕ ಸಿಂಧೂ ನದಿ ತೀರದವರೆಗೆ. ಈ ಮಾರ್ಗವನ್ನು ಸಡಕ್-ಇ-ಅಜಂ ಎಂದು ಕರೆದರು.
> 2) ಆಗ್ರಾದಿಂದ ಬರ್ಹಾನಪುರ,
> 3) ಆಗ್ರಾದಿಂದ ಚಿತ್ತೋಡದವರೆಗೆ,
> 4) ಲಾಹೋರದಿಂದ ಮುಲ್ತಾನದ ವರೆಗೆ,
>
> ರಾಜಮಾರ್ಗದ ಎರಡು ಬದಿಗೆ ನೆರಳು ನೀಡುವ ಮರಗಳನ್ನು ಹಾಗೂ ಪ್ರವಾಸಿಗರಿಗೆ ನೆರವಾಗಲು 1700 ವಿಶ್ರಾಂತಿ ಗೃಹಗಳನ್ನು (ಸರಾಯಿ) ನಿರ್ಮಿಸಿದ್ದರು.

©KTBS NOT TO BE REPUBLISHED


ಶೇರ್‌ಷಾ 'ದಾಮ್' ಎಂಬ ಹೊಸ ಬೆಳ್ಳಿಯ ನಾಣ್ಯವನ್ನು ಜಾರಿಗೆ ತಂದನು. ಈತನ ಬೆಳ್ಳಿಯ ರೂಪಾಯಿ ನಾಣ್ಯದ ತೂಕ 180 ಗುಲಗುಂಜಿ. ಇದನ್ನು ಎಲ್ಲ ಮೊಘಲ ದೊರೆಗಳು ಮುಂದುವರೆಸಿಕೊಂಡು ಬಂದರು.

**ಅಕ್ಬರ್**



ಅಕ್ಬರ್

ಮೊಘಲ ಅರಸರಲ್ಲಿಯೇ ಪ್ರಸಿದ್ಧ ದೊರೆಯಾದ ಅಕ್ಬರ್, ಸಿಂಧ್‌ನ ಅಮರಕೋಟೆಯಲ್ಲಿ ಜನಿಸಿದನು. ಹುಮಾಯೂನ್ ಈತನ ತಂದೆ. ಅಕ್ಬರ್ ಅಧಿಕಾರ ವಹಿಸಿಕೊಂಡಾಗ ಹದಿನಾಲ್ಕು ವರ್ಷ ವಯಸ್ಸಾಗಿತ್ತು. ಹುಮಾಯೂನ್‌ನ ಮರಣದ ನಂತರ ಬಂಗಾಳದ ದೊರೆ ಮಹಮ್ಮದಷಾ ಅಬ್ದಾಲಿಯ ದಂಡನಾಯಕನಾದ ಹೇಮು ದೆಹಲಿ ಮತ್ತು ಆಗ್ರಾಗಳನ್ನು ವಶಪಡಿಸಿಕೊಂಡನು. ಹೀಗಾಗಿ 1556 ರಲ್ಲಿ ಹೇಮು ಮತ್ತು ಮೊಘಲರ ನಡುವೆ ಪಾಣಿಪತ್‌ನಲ್ಲಿ ಘೋರ ಯುದ್ಧ ಸಂಭವಿಸಿತು. ಇದಕ್ಕೆ ಎರಡನೆಯ ಪಾಣಿಪತ್ ಯುದ್ಧವೆಂದು ಹೆಸರು. ಈ ಯುದ್ಧದಲ್ಲಿ ಅಕ್ಬರ್ ವಿಜಯಶಾಲಿಯಾದನು. ಆ ಸಂದರ್ಭದಲ್ಲಿ ಅಕ್ಬರನ ನೆರವಿಗೆ ಆತನ ರಾಜಪ್ರತಿನಿಧಿ ಹಾಗೂ ಪ್ರಧಾನ ಮಂತ್ರಿಯಾಗಿದ್ದ ಬೈರಾಮಖಾನ್‌ನು ಬಂದನು. ತನ್ನ ಬೃಹತ್ ಸೈನ್ಯದ ಬಲದಿಂದ ಮಾಳ್ವ, ಜೈಪುರ್, ಗೊಂಡವಾನ್, ಚಿತ್ತೋಡ್, ರಣಥಂಬೋರ್, ಕಾಲಿಂಜರ್, ಗುಜರಾತ್, ಬಂಗಾಳ ರಾಜ್ಯಗಳ ಮೇಲೆ ವಿಜಯ ಸಾಧಿಸಿದನು. ಹಳದಿಘಾಟ್ ಕಾಳಗ ಮಧ್ಯಕಾಲಿನ ಭಾರತದ ಇತಿಹಾಸದಲ್ಲಿಯೇ ಅತ್ಯಂತ ಮಹತ್ವದ್ದು. ಚಿತ್ತೋಡದ ರಾಜ ರಾಣಾ ಉದಯಸಿಂಗ್‌ನ ಮರಣದ ನಂತರ ಆತನ ಮಗ ರಾಣಾಪ್ರತಾಪ ರಾಜನಾದನು. ಅಕ್ಬರ್ ತನ್ನ ದಂಡನಾಯಕರಾದ ಮಾನಸಿಂಗ್ ಮತ್ತು ಅಸಫ್‌ಖಾನರ ನೇತೃತ್ವದಲ್ಲಿ ಬಲಾಢ್ಯ ಸೈನ್ಯವನ್ನು ರಾಣಾಪ್ರತಾಪನ ವಿರುದ್ಧ ಕಳುಹಿಸಿದನು. ಉಭಯ ಸೈನ್ಯಗಳ ನಡುವೆ ಹಳದಿಘಾಟ್ ಹೋರಾಟದಲ್ಲಿ ಮೊಘಲ ಸೈನ್ಯ ವಿಜಯ ಸಾಧಿಸಿತು. ಕಾಲಾಂತರದಲ್ಲಿ ಇನ್ನುಳಿದ ರಾಜ್ಯಗಳಾದ ಕಾಶ್ಮೀರ್, ಸಿಂಧ್, ಒರಿಸ್ಸಾ, ಬಲೂಚಿಸ್ತಾನ,




@KTBS NOT TO BE REPUBLISHED

ಕಂದಹಾರ್, ಅಹಮ್ಮದ ನಗರಗಳು ಅಕ್ಬರ್‌ನ ವಶವಾದವು. ಹೀಗೆ ಪ್ರಥಮ ಬಾರಿಗೆ ಮೊಘಲರ ರಾಜ್ಯ ವಿಸ್ತಾರವಾಯಿತು.

**ದಿನ್-ಇ-ಇಲಾಹಿ :** ಬಾಲ್ಯದಲ್ಲಿ ಅಕ್ಬರನು ಉದಾರ ನೀತಿಯ ಸಾಂಪ್ರದಾಯಿಕ ತತ್ವಗಳ ಪ್ರಭಾವಕ್ಕೊಳಗಾಗಿದ್ದನು. ಹೀಗಾಗಿ ಸಕಲ ಮತಗಳಲ್ಲಿನ ಉತ್ತಮಾಂಶಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡನು. 1582 ರಲ್ಲಿ ದಿನ್-ಇ-ಇಲಾಹಿ ಎಂಬ ಹೊಸ ಪಂಥವನ್ನು ಸ್ಥಾಪಿಸಿದನು. ಇದು ಸರ್ವರೊಡನೆ ಶಾಂತಿ (ಸಲ್-ಇ-ಕುಲ್) ಎಂಬ ತತ್ವವನ್ನಾಧರಿಸಿತ್ತು. ಈ ಹೊಸ ಪಂಥವು ಎಲ್ಲಾ ಮತಗಳ ಉತ್ತಮಾಂಶಗಳನ್ನೊಳಗೊಂಡಿತ್ತು. ಅಬುಲ್ ಫಜಲ್ ಈ ಪಂಥದ ವರಿಷ್ಠ ಪುರೋಹಿತನಾಗಿದ್ದನು. ಇದು ವಿಚಾರಶೀಲತೆ, ಅನುಭಾವ ಮತ್ತು ನಿಸರ್ಗ ಶಕ್ತಿಗಳ ಆರಾಧನೆಗಳ ಸಮ್ಮಿಶ್ರಣವಾಗಿತ್ತು.

**ಅಕ್ಬರನ ಹಿಂದೂ ಧೋರಣೆ :** ಅಕ್ಬರ್ ಹಿಂದೂಗಳ ವಿಷಯವಾಗಿ ಸಹನೆಯ ಧೋರಣೆಯನ್ನು ಅನುಸರಿಸಿದನು. ತನ್ನ ರಜಪೂತ ಪತ್ನಿಯರಿಗೆ ಅರಮನೆಯಲ್ಲಿಯೇ ದೇವತಾರಾಧನೆಯನ್ನು ಆಚರಿಸಲು ಅನುಮತಿ ನೀಡಿದನು. ಹಿಂದೂಗಳ ಮೇಲಿನ ಜೆಸಿಯಾ ತೆರಿಗೆ ರದ್ದುಪಡಿಸಿದನು. ಹಿಂದೂ ದೇವಾಲಯ ನಿರ್ಮಾಣ ಮತ್ತು ದುರಸ್ಥಿಗಾಗಿ ನೆರವು ನೀಡಿದನು. ಹಿಂದೂ ಧರ್ಮ ಗ್ರಂಥಗಳನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿದನು. ಅರ್ಹ ಹಿಂದೂಗಳಿಗೆ ಉನ್ನತ ಹುದ್ದೆಗಳನ್ನು ನೀಡಿ ಗೌರವಿಸಿದನು. ರಾಜಾ ತೋದರಮಲ್ಲ ಪ್ರಸಿದ್ಧ ಅರ್ಥಮಂತ್ರಿಯಾಗಿದ್ದನು. ಭಗವಾನದಾಸ, ಮಾನಸಿಂಗ್, ತೋದರಮಲ್ಲ, ರಾಯಸಿಂಗ್ ರಾಜ್ಯಪಾಲರಾಗಿದ್ದರು. ಹನ್ನೆರಡು ಪ್ರಾಂತೀಯ ಅರ್ಥಸಚಿವರಲ್ಲಿ ಎಂಟು ಜನ ಹಿಂದೂಗಳಿದ್ದರು. ತನ್ನ ಆಸ್ಥಾನದಲ್ಲಿ ರಾಖೀ, ದೀಪಾವಳಿ, ಶಿವರಾತ್ರಿ ಮುಂತಾದ ಹಬ್ಬಗಳನ್ನು ಆಚರಿಸಲು ಆದೇಶ ನೀಡಿದನು.

@KTBS NOT TO BE REPUBLISHED

**ಅಕ್ಬರನ ಆಡಳಿತ ಪದ್ಧತಿ :** ಆಡಳಿತ ಅನುಕೂಲಕ್ಕಾಗಿ ಅಕ್ಬರ್ ತನ್ನ ರಾಜ್ಯವನ್ನು ಕೇಂದ್ರ ಸರ್ಕಾರ, ಪ್ರಾಂತೀಯ ಸರ್ಕಾರ, ಪರಗಣಗಳೆಂದು ವಿಂಗಡಿಸಿದ್ದನು. ಮನ್ಸಬ್ದಾರಿ ಪದ್ಧತಿ ಅಕ್ಬರನ ಆಡಳಿತ ಪದ್ಧತಿಯ ವೈಶಿಷ್ಟ್ಯ. ಅಕ್ಬರ್ ವಿಶಾಲ ಸಾಮ್ರಾಜ್ಯದ ಚಕ್ರವರ್ತಿ, ಸೈನ್ಯದ ದಂಡನಾಯಕ, ಕಾರ್ಯಾಂಗದ ಮುಖ್ಯಸ್ಥ ಮತ್ತು ನ್ಯಾಯಾಂಗದ ವರಿಷ್ಠನಾಗಿದ್ದನು. ಅಕ್ಬರನ ಸರ್ಕಾರದಲ್ಲಿ ಆಡಳಿತದಲ್ಲಿ ನೆರವು ನೀಡಲು ವಕೀಲ್, ದಿವಾನ್, ಮೀರ್‌ಭಕ್ಷಿ ಹಾಗೂ ಮುಖ್ಯ ಸದರ್ ಎಂಬ ನಾಲ್ಕು ಜನ ಮಂತ್ರಿಗಳಿದ್ದರು. ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಿದ್ದನು. ಅವುಗಳಿಗೆ ಸುಭಾಗಳೆಂದು ಕರೆಯುತ್ತಿದ್ದರು. ಆ ರೀತಿಯ ಒಟ್ಟು ಹದಿನೈದು ಸುಭಾಗಳಿದ್ದವು. ಪ್ರತಿಯೊಂದು ಸುಭಾದಲ್ಲಿ ಸಿಪಾಹಸಾಲಾರ (ರಾಜ್ಯಪಾಲ), ದಿವಾನ್, ಭಕ್ಷಿ, ಸದರ್, ಖಾಜಿ, ಕೊತ್ವಾಲ್ ಮತ್ತು ವಕೀಯಾ ನವೀಸ್ ಇದ್ದರು. ಪ್ರತಿಯೊಂದು ಜಿಲ್ಲೆಯಲ್ಲಿ ಫೌಜದಾರ್, ಅಮಲ್ ಗುಜಾರ್, ಬತಿಕ್ಚಿ ಇದ್ದರು. ಪರಗಣದ ಆಡಳಿತವನ್ನು ಶಿಕದಾರ್, ಅಮಿಲ್, ಪೋತದಾರ್, ಕಾನುಂಗೊ ನೋಡಿಕೊಳ್ಳುತ್ತಿದ್ದರು. ಅಕ್ಬರ ತನ್ನ ಸೈನ್ಯದಲ್ಲಿ ಅನೇಕ ದರ್ಜೆಗಳನ್ನು ಮಾಡಿದ್ದನು. ಅವುಗಳಿಗೆ ಮನ್ಸಬ್ ಎಂದೂ ಅವುಗಳ ಮುಖ್ಯಸ್ಥರಿಗೆ ಮನ್ಸಬ್ದಾರರೆಂದು ಹೆಸರು. ಮೊಘಲ ಸೈನ್ಯದಲ್ಲಿ ಅಶ್ವದಳ, ಕಾಲ್ದಳ, ಫಿರಂಗಿದಳ ಮತ್ತು ಗಜದಳಗಳಿದ್ದವು. ಕುದುರೆಗಳಿಗೆ ಮುದ್ರೆ ಹಾಕಲು ದಾಗ್ ಮಹಲೀಯೆಂಬ ಪ್ರತ್ಯೇಕ ಇಲಾಖೆಯಿತ್ತು.

**ಕಂದಾಯ ವ್ಯವಸ್ಥೆ :** ಇದು ಅಕ್ಬರನ ಆಡಳಿತದ ಪ್ರಮುಖ ಸಾಧನೆಗಳಲ್ಲಿ ಒಂದಾಗಿತ್ತು. ಜುಬ್ತಿ ಪದ್ಧತಿ (ರೈತವಾರಿ ಪದ್ಧತಿ) ಜಾರಿಗೆ ತಂದನು. ಭೂಮಾಪನಕ್ಕಾಗಿ ಕಬ್ಬಿಣದ ಕೊಂಡಿಗಳುಳ್ಳ ಬಿದಿರಿನ ಅಳತೆಗೋಲುಗಳನ್ನು ಉಪಯೋಗಿಸುತ್ತಿದ್ದರು. ಭೂಮಿಯ ಉಳಿಮೆಯನ್ನಾಧರಿಸಿ ಅವುಗಳನ್ನು ಪೋಲಜ್, ಪರೌತಿ, ಚಚರ್ ಮತ್ತು ಬಂಜರೆಂದು ವಿಂಗಡಿಸಿದ್ದರು. ಬಂಜರು ಭೂಮಿಯನ್ನು

ಹೊರತುಪಡಿಸಿ ಉಳಿದ ಪ್ರಕಾರ ಭೂಮಿಯನ್ನು ಅವುಗಳ ಫಲವತ್ತೆಯನ್ನಾಧರಿಸಿ ಉತ್ತಮ, ಮಧ್ಯಮ ಮತ್ತು ಕನಿಷ್ಠವೆಂದು ವಿಂಗಡಿಸಿದ್ದರು. ಪ್ರತಿಯೊಬ್ಬ ರೈತರಿಗೆ ಪಟ್ಟಾ ನೀಡಲಾಗುತ್ತಿತ್ತು.

ಅಕ್ಬರನ ಕಾಲದಲ್ಲಿ ಪೊಲೀಸ್ (ಕೊತ್ವಾಲರು) ವ್ಯವಸ್ಥೆ ಸುಸಂಘಟಿತ ಮತ್ತು ಸಮರ್ಥವಾಗಿತ್ತು. ಜಿಲ್ಲೆಯಲ್ಲಿ ಫೌಜದಾರರು, ಪರಗಣದಲ್ಲಿ ಕಂದಾಯ ಅಧಿಕಾರಿಗಳು ನೆರವಾಗುತ್ತಿದ್ದರು. ಜಿಲ್ಲೆಯ ರಾಜಮಾರ್ಗಗಳಲ್ಲಿ ಬಿಗಿ ಭದ್ರತೆ ಕಾಪಾಡುವುದು ಇವರ ಕರ್ತವ್ಯವಾಗಿತ್ತು. ಪರಗಣದಲ್ಲಿ ಪೊಲೀಸ್ ಠಾಣಾಗಳಿದ್ದವು. ಈ ರೀತಿಯಾಗಿ ಪ್ರಥಮ ಬಾರಿಗೆ ಮಧ್ಯಕಾಲೀನ ಇತಿಹಾಸದಲ್ಲಿ ಅಕ್ಬರ್ ಅತ್ಯಂತ ಸಮರ್ಥ ಆಡಳಿತ ಪದ್ಧತಿ ಜಾರಿಗೆ ತಂದಿದ್ದನು. ಅಕ್ಬರ್ ಕಲೆ ಮತ್ತು ವಾಸ್ತುಶಿಲ್ಪಕ್ಕೂ ಸಹ ಉತ್ತೇಜನ ನೀಡಿದನು. ಫತೇಪುರ್ ಸಿಕ್ರಿಯಲ್ಲಿರುವ ಪ್ರಮುಖ ಸ್ಮಾರಕಗಳೆಂದರೆ ದೌಲತ್ ಖಾನಾ, ಖ್ವಾಜಾಬಾಘ, ದಫ್ತರ ಖಾನಾ, ಇಬಾದತ್ ಖಾನಾ, ಮಕ್ತಬ ಖಾನಾ, ಜೋದಾಬಾಯಿ ಅರಮನೆ, ಪಂಚಮಹಲ್, ಬೀರಬಲ್ ಮನೆ, ಕಬುತರ ಖಾನಾ ಮುಂತಾದವುಗಳು.

**ನಿಮಗಿದು ತಿಳಿದಿರಲಿ :**
**ಅಕ್ಬರನ ಆಸ್ಥಾನದಲ್ಲಿನ ನವರತ್ನಗಳು:**
ತೋದರಮಲ್ಲ, ಅಬುಲ ಫಜಲ್, ಫೈಜಿ, ಬೀರಬಲ್, ತಾನಸೇನ, ಅಬ್ದುರ ರಹೀಂ ಖಾನ, ಹಮೀಮ ಹುಮಾಮ್, ಮುಲ್ಲಾ ದೊ ಪಯ್ಯಾಜ ಮತ್ತು ಮಾನಸಿಂಗ್.



**ಫತೇಪುರ್ ಸಿಕ್ರಿಯಲ್ಲಿರುವ ಪಂಚಮಹಲ್**

ಅಕ್ಬರ್‌ನ ನಂತರ ಹಿರಿಯ ಮಗನಾದ ಜಹಂಗೀರನು ಮೊಘಲ್ ಸಾಮ್ರಾಜ್ಯದಲ್ಲಿ ಉತ್ತಮ ಆಡಳಿತ ನೀಡಿದನು. ಈತನ ನಂತರ ಮಗನಾದ ಷಾ–ಜಹಾನನು ಅಧಿಕಾರಕ್ಕೆ ಬಂದನು.

**ಷಾ–ಜಹಾನ್**

ಮೊಘಲ್ ಸಾಮ್ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಷಾ–ಜಹಾನನು ಅಮೂಲ್ಯ ರತ್ನಖಚಿತವಾದ ಮಯೂರ ಸಿಂಹಾಸನವನ್ನು ನಿರ್ಮಿಸಿದನು. ಇವನ ಪುತ್ರನಾದ ಔರಂಗಜೇಬನನ್ನು ಡೆಕ್ಕನ್ನಿನ ರಾಜಪ್ರತಿನಿಧಿಯಾಗಿ ನೇಮಿಸಿದನು. ಇವನು 1636 ರಲ್ಲಿ ಪೋರ್ಚುಗೀಸರನ್ನು ಸೋಲಿಸಿ ಅಹಮ್ಮದ್‌ನಗರ ವಶಪಡಿಸಿಕೊಂಡನು. ಡೆಕ್ಕನ್ ಭಾಗದಲ್ಲಿ ಭೂಮಾಪನ ಮತ್ತು ಮೌಲ್ಯಮಾಪನ ಪದ್ಧತಿಯನ್ನು ಜಾರಿಗೊಳಿಸಿದನು. ನಂತರ ನಡೆದ ಬೆಳವಣಿಗೆಯಲ್ಲಿ ಔರಂಗಜೇಬ್ ಸುಲ್ತಾನನಾದನು. ಷಾ–ಜಹಾನನ ಕಾಲದಲ್ಲಿ ಭಾರತ ಮತ್ತು ಪಶ್ಚಿಮ ಏಷ್ಯಾ, ಯೂರೋಪ್ ದೇಶಗಳ ನಡುವೆ ವ್ಯಾಪಾರ ಅಭಿವೃದ್ಧಿಗೊಂಡಿತು. ಷಾ–ಜಹಾನನು ತನ್ನ ಪ್ರೀತಿಯ ಮಡದಿ ಮಮತಾಜಳಿಗಾಗಿ ಆಗ್ರಾದಲ್ಲಿ

NOT TO BE REPUBLISHED

ತಾಜ್‌ಮಹಲ್ ನಿರ್ಮಿಸಿದನು. ದೆಹಲಿ ಕೆಂಪು ಕೋಟೆ ಹಾಗೂ ಅದರಲ್ಲಿರುವ ಕಟ್ಟಡಗಳು ಷಾ–ಜಹಾನನ ಅದ್ಭುತ ಕೊಡುಗೆಗಳಾಗಿವೆ. ಹೀಗಾಗಿ ಇವನ ಅವಧಿಯನ್ನು ಮೊಘಲರ ಕಲೆ ಮತ್ತು ವಾಸ್ತುಶಿಲ್ಪದ ಸುವರ್ಣಯುಗವೆಂದು ಕರೆಯುತ್ತಾರೆ.



**ತಾಜ್‌ಮಹಲ್**

**ತಾಜ್‌ಮಹಲ್ :** ತಾಜ್‌ಮಹಲನ್ನು ಮೊಘಲ್ ದೊರೆ ಷಾ–ಜಹಾನನು ತನ್ನ ಪತ್ನಿ ಮುಮತಾಜ್ ಮಹಲ್‌ಳ ನೆನಪಿಗಾಗಿ ಈಗಿನ ಉತ್ತರ ಪ್ರದೇಶದ ರಾಜ್ಯದಲ್ಲಿನ ಆಗ್ರಾ ಬಳಿಯ ಯಮುನಾ ನದಿಯ ದಂಡೆಯಲ್ಲಿ ನಿರ್ಮಿಸಲಾಗಿದೆ. ಸುಮಾರು 1632ರಲ್ಲಿ ಇದರ ನಿರ್ಮಾಣಕಾರ್ಯ ಪ್ರಾರಂಭವಾಗಿ ಸುಮಾರು 1653ರ ವೇಳೆಗೆ ಪೂರ್ಣಗೊಂಡಿರುವುದಾಗಿ ತಿಳಿದಿದೆ. ಇದನ್ನು ಬಿಳಿ ಮಾರ್ಬಲ್ ಕಲ್ಲುಗಳಿಂದ ನಿರ್ಮಿಸಲಾಗಿದೆ. ಇದು ಪ್ರಪಂಚದಲ್ಲಿರುವ ಪ್ರಮುಖ ಸ್ಮಾರಕಗಳಲ್ಲಿ ಒಂದಾಗಿದ್ದು ಯುನೆಸ್ಕೋ ಸ್ಮಾರಕ ಪಟ್ಟಿಗೆ ಸೇರಿರುತ್ತದೆ.

**ಔರಂಗಜೇಬ್**

ಈತನು ಬಾಲ್ಯದಲ್ಲಿ ಉತ್ತಮ ಸೈನಿಕ ಶಿಕ್ಷಣ ಪಡೆದು ಸಮರ್ಥ ಸೈನಿಕನಾದನು. ತಂದೆ ಷಾ–ಜಹಾನನನ್ನು ಬಂಧಿಸಿ ಅಧಿಕಾರ ಸ್ವೀಕರಿಸಿದ ಸ್ಮರಣಾರ್ಥ ಅಲಂಗೀರಯೆಂಬ ಬಿರುದು ಪಡೆದು ಸಿಂಹಾಸನವನ್ನೇರಿದನು. ಔರಂಗಜೇಬ್ ಕುರಾನಿನ ತತ್ವಗಳ ನಿಯಮಗಳನ್ನು ಜಾರಿಗೆ ತಂದನು. ಸಾರ್ವಜನಿಕರು ಕುರಾನಿನ ನಿಯಮಗಳನ್ನು ಪಾಲಿಸುವುದನ್ನು ಮೇಲ್ವಿಚಾರಣೆ ಮಾಡಲು ಮುಹ್ತಾಸಿಬ್‌ರನ್ನು ಪ್ರಮುಖ ಪಟ್ಟಣಗಳಲ್ಲಿ ನೇಮಕ ಮಾಡಿದನು. ಸಾಮ್ರಾಜ್ಯದಲ್ಲಿ ಸತಿ ಆಚರಣೆ, ಸಂಗೀತ ಕಛೇರಿಗಳನ್ನು, ಜೂಜಾಟ, ಮದ್ಯಪಾನ ಮತ್ತು ಗಾಂಜಾ ಬೆಳೆಯುವುದನ್ನು ನಿಷೇಧಿಸಿದನು.

ಔರಂಗಜೇಬನ ದುರಾಡಳಿತದ ವಿರುದ್ಧ ಉತ್ತರ ಭಾರತದಲ್ಲಿ ಜಾಟರು, ಸತ್ನಾಮಿಗಳು, ಬುಂದೇಲರು ಹಾಗೂ ಸಿಖ್‌ರು ಹೋರಾಟ ಪ್ರಾರಂಭಿಸಿದರು. ಸಿಖ್‌ರ ಒಂಬತ್ತನೆಯ ಗುರು ತೇಜ ಬಹದ್ದೂರರನ್ನು ಬಂಧಿಸಿ ಚಿತ್ರಹಿಂಸೆ ನೀಡಿ ಕೊಲ್ಲಲಾಯಿತು. ಭಾರತದ ಪ್ರಬಲ ಶಕ್ತಿಗಳಾಗಿದ್ದ ರಜಪೂತರೊಂದಿಗೆ ವೈರತ್ವ ಸಾಧಿಸಿ ತನ್ನ ಮೊಘಲ ಆಡಳಿತದ ಅವನತಿಗೆ ಕಾರಣನಾದನು. ಮರಾಠ ರಾಜ್ಯದ ಅಸ್ತಿತ್ವ ಸಹಿಸದ ಇವನು ಶಿವಾಜಿಯೊಂದಿಗೆ ನಿರಂತರ ಹೋರಾಟ ನಡೆಸಿದನು. ಶಿವಾಜಿಯ ನಂತರ ಸಂಭಾಜಿಯನ್ನು ಬಂಧಿಸಿ ಚಿತ್ರಹಿಂಸೆ ನೀಡಿ ಕೊಲ್ಲಲಾಯಿತು. ದಕ್ಷಿಣ ಭಾರತದಲ್ಲಿನ ರಾಜ್ಯಗಳಾದ ವಿಜಯಪುರ (ಬಿಜಾಪುರ)ದ ಆದಿಲಶಾಹಿ, ಗೋಲ್ಕಂಡದ ನಿಜಾಮಶಾಹಿಗಳೊಂದಿಗೆ ಹೋರಾಡಿ ಅವುಗಳನ್ನು ತನ್ನ ರಾಜ್ಯದಲ್ಲಿ ವಿಲೀನಗೊಳಿಸಿಕೊಂಡನು.

**ಮೊಘಲರ ಕೊಡುಗೆಗಳು**

**ಆಡಳಿತ :** ಮೊಘಲ ಆಡಳಿತ ವಂಶಪಾರಂಪರ್ಯವಾಗಿದ್ದು ನಿರಂಕುಶ ರಾಜಪ್ರಭುತ್ವ ಜಾರಿಯಲ್ಲಿತ್ತು. ತಮ್ಮನ್ನು ಸಾಮ್ರಾಟರೆಂದು ಪರಿಗಣಿಸಿ ಬಾದಶಹ ಎಂಬ ಬಿರುದು ಪಡೆದಿದ್ದರು. ಆಡಳಿತದಲ್ಲಿ ಸಲಹೆ ಸೂಚನೆ ನೀಡಲು ಮಂತ್ರಿಗಳು ಹಾಗೂ ಅಧಿಕಾರಿಗಳಿದ್ದರು. ಪರ್ಶಿಯನ್ ಭಾಷೆ ಆಡಳಿತ ಭಾಷೆಯಾಗಿತ್ತು. ದಕ್ಷ ಆಡಳಿತ  ನಡೆಸಲು ಸಾಮ್ರಾಜ್ಯವನ್ನು ಪ್ರಾಂತ್ಯ, ಜಿಲ್ಲೆ ಮತ್ತು ನಗರಗಳೆಂದು ವಿಂಗಡಿಸಲಾಗಿತ್ತು. ಅವುಗಳ ಮೇಲ್ವಿಚಾರಣೆಗೆ ಆಡಳಿತಾಧಿಕಾರಿಗಳಿದ್ದರು. ಸುಲ್ತಾನನು ನ್ಯಾಯಾಂಗದ

©KTBS NOT TO BE REPUBLISHED

ವರಿಷ್ಠನಾಗಿದ್ದನು. ಸೇನಾಪತಿಗಳನ್ನು, ಮಂತ್ರಿಗಳನ್ನು ನೇಮಿಸುವ ಹಾಗೂ ತೆಗೆದುಹಾಕುವ ಅಧಿಕಾರವನ್ನು ಮೊಘಲ್ ದೊರೆಗಳು ಹೊಂದಿದ್ದರು. ಮನ್ಸಬ್‌ದಾರರ ನೇಮಕ, ಜಾಗೀರ ನೀಡುವುದು, ಕಾನೂನುಗಳನ್ನು ರೂಪಿಸುವುದು ದೊರೆಯ ಕರ್ತವ್ಯಗಳಾಗಿದ್ದವು. ವಕೀಲ್, ದಿವಾನ್, ಮೀರ್‌ಬಕ್ಷಿ ಮತ್ತು ಮುಖ್ಯ ಸದರ್ ಕೇಂದ್ರ ಸರ್ಕಾರದಲ್ಲಿನ ಪ್ರಮುಖ ಮಂತ್ರಿಗಳಾಗಿದ್ದರು. ಪ್ರಾಂತ್ಯಗಳ ಆಡಳಿತವನ್ನು ರಾಜ್ಯಪಾಲ, ದಿವಾನ್, ಬಕ್ಷಿ, ವಕೀಯಾ ನವೀಸ್, ಕೋತ್ವಾಲ್, ಪೌಜದಾರ, ಅಮಲ್ ಗುಜಾರ್ ಮತ್ತು ಬತಿಕ್ಚಿಯೆಂಬ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು.

**ಕಂದಾಯ ವ್ಯವಸ್ಥೆ :** ಕೃಷಿ ಮೊಘಲ ಸಾಮ್ರಾಜ್ಯದ ಬಹುಸಂಖ್ಯಾತ ಪ್ರಜೆಗಳ ಉದ್ಯೋಗವಾಗಿತ್ತು. ಭೂಮಿಯ ಫಲವತ್ತತೆಯನ್ನಾಧರಿಸಿ ಭೂಕಂದಾಯ ಸಂಗ್ರಹಿಸಲಾಗುತ್ತಿತ್ತು. ಕೃಷಿ ಭೂಮಿಯನ್ನು ಸಂಪೂರ್ಣವಾಗಿ ಮಾಪನ ಮಾಡಿ ಕಂದಾಯ ನಿಗದಿಪಡಿಸಲಾಗುತ್ತಿತ್ತು.

**ಸಮಾಜ ಮತ್ತು ಅರ್ಥ ವ್ಯವಸ್ಥೆ :** ಅಂದಿನ ಸಮಾಜದಲ್ಲಿ ದೊರೆ, ಮಂತ್ರಿಗಳು, ಅಧಿಕಾರಿಗಳು, ನೌಕರರಿಗೆ ಗೌರವದ ಸ್ಥಾನವಿತ್ತು. ಇವರ ಪೋಷಾಕಗಳು ಅತ್ಯಂತ ಬೆಲೆಯುಳ್ಳವಗಳಾಗಿದ್ದವು. ಔರಂಗಜೇಬನನ್ನು ಹೊರತುಪಡಿಸಿ ಉಳಿದವರೆಲ್ಲರು ಸಂಗೀತ ಕಛೇರಿ, ಮನರಂಜನೆ, ಮಧ್ಯಪಾನ, ಜೂಜಾಟದಲ್ಲಿ ಸಮಯ ಕಳೆಯುತ್ತಿದ್ದರು. ಅರಮನೆಯಲ್ಲಿ ರಾಣಿಯರ ಯೋಗಕ್ಷೇಮ ನೋಡಿಕೊಳ್ಳಲು ಅನೇಕ ಸೇವಕರಿದ್ದರು. ಜನರು ಮುತ್ತು, ರತ್ನ ಮತ್ತು ಲೋಹಗಳಿಂದ ಕೂಡಿದ ಆಭರಣಗಳನ್ನು ಧರಿಸುತ್ತಿದ್ದರು.

ರಾಜ ತೋದರಮಲ್ಲನು ಭೂಮಾಪನ ಮತ್ತು ಭೂವರ್ಗೀಕರಣ ಮಾಡಿ ಉತ್ತಮ ಪದ್ಧತಿ ಅಳವಡಿಸಿದ್ದನು. ಉತ್ತರ ಭಾರತ ಅನೇಕ ನದಿಗಳನ್ನು ಹೊಂದಿದ್ದರಿಂದ ಕೃಷಿಗೆ ಯೋಗ್ಯವಾದ ಭೂಮಿ ನೈಸರ್ಗಿಕವಾಗಿ ದೊರಕುತ್ತಿತ್ತು. ನೀರಾವರಿಯು ಕೃಷಿ ಅಭಿವೃದ್ಧಿಗೆ ನೆರವಾಗಿತ್ತು.

ಲಾಹೋರ್, ಆಗ್ರಾ, ಫತೇಪುರ್ ಸಿಕ್ರಿ ಮತ್ತು ಅಹಮದಬಾದ್‌ಗಳಲ್ಲಿ ಸರ್ಕಾರದ ಕಾರ್ಖಾನೆಗಳಿದ್ದವು. ಅಂದಿನ ಪ್ರಸಿದ್ಧ ಹತ್ತಿ ಬಟ್ಟೆಗಳ ಕೈಗಾರಿಕೆಗಳ ಕೇಂದ್ರಗಳೆಂದರೆ ಬನಾರಸ, ಪಾಟ್ನಾ, ಡಾಕಾ, ಬಾಬಾಸ್ಪುರ, ಸೋನಾರ್. ಲಾಹೋರ್, ಫತ್ತೇಪುರ ಸಿಕ್ರಿ, ಆಗ್ರಾಗಳಲ್ಲಿ ಪ್ರಮುಖ ಕೈಗಾರಿಕೆಗಳಿದ್ದವು. ಅಕ್ಬರನ ಕಾಲದಲ್ಲಿ ಶಾಲು ಮತ್ತು ಜಮಖಾನಗಳ ನೇಕಾರಿಕೆ ಅಭಿವೃದ್ಧಿ ಹೊಂದಿತು. ಕಾಶ್ಮೀರ ಶಾಲುಗಳು ಪ್ರಸಿದ್ಧಿಯಾಗಿದ್ದವು. ಮೊಘಲರ ಕಾಲದಲ್ಲಿ ಭಾರತವು ಏಷ್ಯಾ ಮತ್ತು ಯೂರೋಪದ ಅನೇಕ ದೇಶಗಳೊಡನೆ ವಾಣಿಜ್ಯ ಸಂಬಂಧ ಹೊಂದಿತ್ತು. ಕಚ್ಚಾ ರೇಷ್ಮೆ, ಲೋಹಗಳು, ಕುದುರೆಗಳು, ಸುಗಂಧ ದ್ರವ್ಯಗಳು, ಬಂಗಾರ ಮತ್ತು ಬೆಳ್ಳಿ ಆಮದು ವಸ್ತುಗಳಾಗಿದ್ದರೆ, ಹತ್ತಿಬಟ್ಟೆ, ಮೆಣಸು, ಅಫೀಮು, ಪೆಟ್ಲುಪ್ಪು ಮತ್ತು ಉಣ್ಣೆ ಬಟ್ಟೆಗಳು ಪ್ರಮುಖ ರಫ್ತುಗಳಾಗಿದ್ದವು.

**ಸಾಹಿತ್ಯ :** ಮೊಘಲರ ಕಾಲದಲ್ಲಿ ಪರ್ಶಿಯನ್, ಅರೇಬಿಕ್, ತುರ್ಕಿ, ಹಿಂದಿ, ಸಂಸ್ಕೃತ ಭಾಷೆಗಳ ಕೃತಿಗಳು ರಚನೆಯಾದವು. ಬಾಬರ್ ಮತ್ತು ಜಹಂಗೀರ್ ವಿದ್ವಾಂಸರಾಗಿದ್ದು ತಮ್ಮ ಆತ್ಮಕಥನಗಳಾದ ಬಾಬರನಾಮಾ ಮತ್ತು ತುಜಿಕ್–ಇ–ಜಹಂಗೀರಗಳನ್ನು ರಚಿಸಿದರು. ಅಕ್ಬರನ ಆಸ್ಥಾನದಲ್ಲಿ ಅಬುಲ್ ಫಜಲ್ ಎಂಬವನು ಐನಿ–ಇ–ಅಕ್ಬರಿ ಮತ್ತು ಅಕ್ಬರ ನಾಮಾಗಳನ್ನು ಪರ್ಶಿಯನ್ ಭಾಷೆಯಲ್ಲಿ ರಚಿಸಿದನು. ಬದೌನಿ ರಾಮಾಯಣವನ್ನು, ಫೈಜಿ ಲೀಲಾವತಿಯೆಂಬ ಗಣಿತದ ಗ್ರಂಥವನ್ನು, ರಾಜಾ ತೋದರಮಲ್ಲನು ಭಾಗವತ ಪುರಾಣವನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿದರು. ತುಳಸಿದಾಸರ – ರಾಮಚರಿತ ಮಾನಸ, ಸೂರದಾಸರ–ಸುರಸಾಗರ, ಮೇರು ಕೃತಿಗಳಾಗಿದ್ದವು.

**ಕಲೆ ಮತ್ತು ವಾಸ್ತುಶಿಲ್ಪ :** ಮೊಘಲರ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅಮೋಘ ಕೊಡುಗೆ ನೀಡಿದವರೆಂದರೆ ಅಕ್ಬರ್ ಮತ್ತು ಷಾ–ಜಹಾನ್. ಇವರು ನಿರ್ಮಿಸಿದ ಭವ್ಯವಾದ ಸ್ಮಾರಕಗಳು ಪತೇಪುರ

NOT TO BE REPUBLISHED ©KTBS

ಸಿಕ್ರಿ, ಆಗ್ರಾ ಮತ್ತು ದೆಹಲಿಗಳಲ್ಲಿವೆ. ಇವು ಮೊಘಲರ ರಾಜಧಾನಿಗಳಾಗಿದ್ದವು. ಷಾ–ಜಹಾನನು ಆಗ್ರಾದಲ್ಲಿ ಅಕ್ಬರಿ ಮಹಲ್, ತಾಜ್‌ಮಹಲ್, ಜಹಂಗೀರ ಮಹಲ್ ಮತ್ತು ಕೋಟೆಯನ್ನು ನಿರ್ಮಿಸಿದನು. ಲಾಹೋರ್ ಹಾಗೂ ಅಲಹಾಬಾದ್‌ಗಳಲ್ಲಿ ಆಗ್ರಾದ ಮಾದರಿ ಕೋಟೆಗಳನ್ನು ನಿರ್ಮಿಸಿದರು.



ಕೆಂಪು ಕೋಟೆ

ಕೆಂಪು ಕೋಟೆಯುನ್ನು ನಿರ್ಮಿಸಿ ಅದರಲ್ಲಿ ದಿವಾನ್–ಇ–ಖಾಸ್, ರಂಗ ಮಹಲ್, ಮುಮತಾಜ್ ಮಹಲ್, ಮೋತಿ ಮಸೀದಿ, ನಕ್ಕರ್ ಖಾನಾ, ಖಾಸ ಮಹಲ್ ಮುಂತಾದ ಕಟ್ಟಡಗಳನ್ನು ನಿರ್ಮಿಸಲಾಯಿತು. ಇವುಗಳಲ್ಲದೆ ದೇಶದ ಅತ್ಯಂತ ದೊಡ್ಡದಾದ ಜಾಮಿಯಾ ಮಸೀದಿಯೂ ಸಹ ಷಾ–ಜಹಾನ ಕಾಲದಲ್ಲಿ ದೆಹಲಿಯಲ್ಲಿ ನಿರ್ಮಾಣಗೊಂಡಿತು.

**ಚಿತ್ರಕಲೆ :** ಹುಮಾಯೂನನ ಕಾಲದಲ್ಲಿ ಮೊಘಲರ ಚಿತ್ರಕಲೆ ಪ್ರಾರಂಭಗೊಂಡಿತು. ಪರ್ಶಿಯಾದ ಮೀರ್ ಸೈಯದ ಅಲಿ ಮತ್ತು ಅಬ್ದುಸ್ ಸಮದ್‌ರ ನೆರವಿನಿಂದ ಚಿತ್ರಕಲಾ ಹಸ್ತಪ್ರತಿ ರಚಿಸಿದರು. ಅಕ್ಬರನ ಆಸ್ಥಾನದ ಹದಿನೇಳು ಚಿತ್ರಕಾರರಲ್ಲಿ ಹದಿಮೂರು ಕಲಾಕಾರರು ಹಿಂದೂಗಳಾಗಿದ್ದರು. ಅವರಲ್ಲಿ ಪ್ರಸಿದ್ಧರಾದವರೆಂದರೆ ದಸ್ವಂತ್, ಬಸವಾನ, ಲಾಲ ಹಾಗೂ ಮುಕುಂದ. ಜಹಂಗೀರನ ಆಸ್ಥಾನದಲ್ಲಿ ಉಸ್ತಾದ ಮನ್ಸೂರ್ ಮತ್ತು ಅಬ್ದುಲ ಹಸನ್ ಎಂಬ ಚಿತ್ರಗಾರರಿದ್ದರು. ಇವರು ಹೆಚ್ಚಾಗಿ ಮೊಘಲ ದೊರೆಗಳ, ರಾಣಿಯರ ಬೃಹತ್ ಗಾತ್ರದ ಚಿತ್ರಗಳನ್ನು ಬಿಡಿಸಿದರು.

## ಮರಾಠರು

ಹದಿನೇಳನೆಯ ಶತಮಾನದಲ್ಲಿ ದಖನ್ ಭಾಗದಲ್ಲಿ ಮರಾಠ ರಾಜ್ಯ ಉದಯವಾಗಿದ್ದು ಒಂದು ಪ್ರಮುಖ ಬೆಳವಣಿಗೆ. ಇದು ಇಂದಿನ ಉತ್ತರ ಭಾಗದಲ್ಲಿ ವಿಸ್ತರಿಸಿತ್ತು. ಹದಿನೇಳನೆಯ ಶತಮಾನದಲ್ಲಿ ಮಹಾರಾಷ್ಟ್ರವು ಅಹಮ್ಮದ್‌ನಗರದ ನಿಜಾಮಷಾಹಿ ಮತ್ತು ವಿಜಯಪುರ(ಬಿಜಾಪುರ)ದ ಆದಿಲಷಾಹಿಗಳ ಅಧೀನದಲ್ಲಿತ್ತು. ಈ ಸುಲ್ತಾನರು ಸ್ಥಳೀಯ ಮರಾಠರನ್ನು ಸೈನ್ಯದಲ್ಲಿ ನೇಮಕ ಮಾಡಿಕೊಂಡರು. ದೇಶಪಾಂಡೆ ಮತ್ತು ದೇಶಮುಖರು ಭೂಕಂದಾಯ ಸಂಗ್ರಹಕಾರರಾಗಿದ್ದರು. ಅವರಲ್ಲಿ ಶಹಾಜಿ ಭೋಸ್ಲೆ ವಿಜಯಪುರ(ಬಿಜಾಪುರ)ದ ಸುಲ್ತಾನರಲ್ಲಿ ಆಡಳಿತಗಾರನಾಗಿದ್ದು ಸುಲ್ತಾನರಿಂದ ಕೆಲವು ಜಾಗೀರುಗಳನ್ನು ಪಡೆದುಕೊಂಡಿದ್ದನು.

### ಶಿವಾಜಿ




ಶಿವಾಜಿ

ಮರಾಠ ರಾಜ್ಯದ ಸ್ಥಾಪನೆ ಭಾರತದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿತು. ರಾಷ್ಟ್ರಪ್ರೇಮ, ದೇಶದ ಏಕತೆ ಮೂಡಿಸಲು ಮತ್ತು ಪರಕೀಯರಿಂದ ದೇಶವನ್ನು ರಕ್ಷಿಸಲು ಮರಾಠರು ಮೊಘಲರೊಂದಿಗೆ ಹೋರಾಡಿದರು. ಮರಾಠರಲ್ಲಿ ಶಿವಾಜಿ ಶ್ರೇಷ್ಠ ದೊರೆ. ರಾಜ್ಯ ವಿಸ್ತರಣೆ ಜೊತೆಗೆ ಉತ್ತಮ ಆಡಳಿತ ನೀಡುವುದರಲ್ಲಿಯೂ ಶಿವಾಜಿ ಯಶಸ್ವಿಯಾದನು. ಮಹಾರಾಷ್ಟ್ರದ ಸುಪ್ರಸಿದ್ಧ ಸಂತರ ಬೋಧನೆಗಳು ಹಿಂದೂ ಧರ್ಮ ರಕ್ಷಣೆ ಮತ್ತು ಮರಾಠ ರಾಜ್ಯ ಸ್ಥಾಪನೆಗೆ ಹೆಚ್ಚು ಪ್ರಭಾವ ಬೀರಿದವು.

@KTBS
NOT TO BE REPUBLISHED

> **ಗೆರಿಲ್ಲಾ ಯುದ್ಧ :**
> ಬೆಟ್ಟ-ಗುಡ್ಡ, ಕಾಡು-ಮೇಡುಗಳಲ್ಲಿ ಅಡಗಿ ಕುಳಿತು ಒಮ್ಮೆಲೇ ಶತ್ರುಗಳ ಮೇಲೆ ದಾಳಿ ಮಾಡುವ ಯುದ್ಧ ಕಲೆ.

ಶಿವಾಜಿ ಪುಣೆ ಜಿಲ್ಲೆಯ ಶಿವನೇರಿ ಎಂಬಲ್ಲಿ ಜನಿಸಿದನು. ಈತನ ತಂದೆ ಶಹಾಜಿ ಭೋಸ್ಲೆ ವಿಜಯಪುರ(ಬಿಜಾಪುರ) ಸುಲ್ತಾನರ ಸೇವೆಯಲ್ಲಿದ್ದನು. ಈತನ ತಾಯಿ ಜೀಜಾಬಾಯಿ ಧರ್ಮ, ಶ್ರದ್ಧೆಯುಳ್ಳ ಸಾತ್ವಿಕ ಮಹಿಳೆಯಾಗಿದ್ದು ಪುತ್ರನಲ್ಲಿ ಧರ್ಮಶ್ರದ್ಧೆ, ಧರ್ಮಸ್ಥೈರ್ಯ, ಜೀವನ ನಿಷ್ಠೆ ಹಾಗೂ ಉನ್ನತಾದರ್ಶಗಳನ್ನು ಬೆಳೆಸಿದಳು. ದಾದಾಜಿಕೊಂಡದೇವ ಶಿವಾಜಿಯ ಗುರುವಾಗಿದ್ದು, ಶಸ್ತ್ರಾಸ್ತ್ರ ಮತ್ತು ಶಾಸ್ತ್ರಗಳಲ್ಲಿ ತರಬೇತಿಗೊಳಿಸಿದನು. ಶಿವಾಜಿ ಅಂಗಸಾಧನೆ, ಖಡ್ಗ ಪ್ರಯೋಗ, ಕುದುರೆ ಸವಾರಿ ಮುಂತಾದ ಕ್ಷಾತ್ರ ಕಲೆಯಲ್ಲಿ ಪರಿಣತಿ ಪಡೆದನು. ಶಿವಾಜಿ ಬಾಲ್ಯದಲ್ಲಿಯೆ, ಸ್ವತಂತ್ರ ರಾಜ್ಯ ನಿರ್ಮಿಸುವ ಕನಸನ್ನು ಹೊಂದಿದ್ದನು. ಹೀಗಾಗಿ ಪುಣೆಯನ್ನು ಕೇಂದ್ರವನ್ನಾಗಿಟ್ಟುಕೊಂಡು ರಾಜ್ಯ ವಿಸ್ತರಿಸುವ ಕಾರ್ಯದಲ್ಲಿ ತೊಡಗಿದನು. ಈ ದಿಶೆಯಲ್ಲಿ ಶಿವಾಜಿಯು ತನ್ನ ಸ್ಥಳೀಯ ನಿವಾಸಿಗಳಾದ ಮಾವಳಿ ಯುವಕರ ಸೈನ್ಯ ಸಂಘಟಿಸಿ ಅವರಿಗೆ ಗೆರಿಲ್ಲಾ ಯುದ್ಧ ತಂತ್ರಗಳಲ್ಲಿ ಸೈನಿಕ ತರಬೇತಿ ನೀಡಿದನು. ಶಿವಾಜಿಯು ವಿಜಯಪುರ(ಬಿಜಾಪುರ)ದ ಸುಲ್ತಾನನಿಂದ ತೋರಣ ಗಡ ಕೋಟೆ, ಪುರಂದರ ಗಡ ಕೋಟೆ, ಚಕನ್ ಕೋಟೆ, ಸಿಂಹಗಡ, ಜವಳಿ ಕೋಟೆ ವಶಪಡಿಸಿಕೊಂಡನು. ತೋರಣಕೋಟೆಯ ಹತ್ತಿರದ ಹೊಸದುರ್ಗಕ್ಕೆ ರಾಯಗಡವೆಂದು ಕರೆದನು. ಪ್ರತಾಪಗಡ ಎಂಬ ಹೊಸ ಕೋಟೆಯನ್ನು ನಿರ್ಮಿಸಿದನು. ಹೀಗೆ




NOT TO BE REPUBLISHED ©KTBS

ಶಿವಾಜಿಯು ವಿಜಯಪುರ(ಬಿಜಾಪುರ) ಸುಲ್ತಾನರ ವಿರುದ್ಧ ಹೋರಾಟ ನಡೆಸಿದ್ದರಿಂದ ಆತನ ತಂದೆ ಷಾಹಜಿಯನ್ನು ಸುಲ್ತಾನನು ಬಂಧಿಸಿದನು. ಮತ್ತೆ ಹೋರಾಟ ನಡೆಸುವುದಿಲ್ಲ ಎಂಬ ಆಶ್ವಾಸನೆಯ ಮೇಲೆ ಷಾಹಜಿಯನ್ನು ಬಿಡುಗಡೆಗೊಳಿಸಲಾಯಿತು.

**ಮೊಘಲರು ಹಾಗೂ ಶಿವಾಜಿ ಸಂಬಂಧ**

ಶಿವಾಜಿ ಅನೇಕ ವರ್ಷಗಳ ಕಾಲ ಮೊಘಲ ದೊರೆ ಔರಂಗಜೇಬನೊಂದಿಗೆ ಹೋರಾಟ ನಡೆಸಿದನು. ದಕ್ಷಿಣ ಭಾರತದಲ್ಲಿ ಷಿಯಾ ರಾಜ್ಯಗಳನ್ನು ಸೋಲಿಸುವುದರ ಜೊತಗೆ ಮರಾಠ ರಾಜ್ಯವನ್ನು ಸಹ ಸಂಪೂರ್ಣವಾಗಿ ಸೋಲಿಸಬೇಕೆಂದು ಔರಂಗಜೇಬ ನಿಶ್ಚಯಿಸಿದ್ದನು. ಇದಕ್ಕಾಗಿ ಶಾಯಿಸ್ತಾಖಾನ, ಜೈಸಿಂಗ್‌ರನ್ನು ನೇಮಕ ಮಾಡಿದ್ದನು. ಜೈಸಿಂಗ್ ಶಿವಾಜಿಯನ್ನು ಸೋಲಿಸಿ ಪುರಂದರದಲ್ಲಿ ಒಪ್ಪಂದ ಮಾಡಿಕೊಂಡನು. ಅದರನ್ವಯ ಶಿವಾಜಿ ತನ್ನ 23 ದುರ್ಗಗಳನ್ನು ಹಾಗೂ ವಾರ್ಷಿಕ 16 ಲಕ್ಷ ವರಮಾನ ಬರುವ ಪ್ರದೇಶವನ್ನು ನೀಡಿದನು. ಮೊಘಲ್‌ರೊಂದಿಗೆ ನಿಷ್ಠೆಯಿಂದಿರುವುದಾಗಿ ಹೇಳಿ ತನ್ನ ಪುತ್ರ ಸಂಭಾಜಿಯ ನೇತೃತ್ವದಲ್ಲಿ 5000 ಅಶ್ವದಳದೊಂದಿಗೆ ದೆಹಲಿಗೆ ಕಳುಹಿಸಿದನು. ಬಿಜಾಪುರದ ಆದಿಲ್ ಷಾ ಹಾಗೂ ಗೋಲ್ಕಂಡದ ಕುತುಬ್ ಶಾಹಿ ಸುಲ್ತಾನರೊಂದಿಗೆ ಶಿವಾಜಿ ಕೈಜೋಡಿಸಬಾರದೆಂಬ ಉದ್ದೇಶದಿಂದ ಆತನಿಗೆ ಆಗ್ರಾಕ್ಕೆ ಬರಲು ಜೈಸಿಂಗ್ ತಿಳಿಸಿದನು. ಔರಂಗಜೇಬ ತನ್ನ ದರ್ಬಾರಿನಲ್ಲಿ ಶಿವಾಜಿಗೆ ಸೂಕ್ತ ಗೌರವ ನೀಡದೆ ಅಪಮಾನಗೊಳಿಸಿದನು. ಇದನ್ನು ಪ್ರತಿಭಟಿಸಿದ್ದಕ್ಕಾಗಿ ಶಿವಾಜಿ ಹಾಗೂ ಅವನ ಪುತ್ರ ಸಂಭಾಜಿಯನ್ನು ಆಗ್ರಾದ ಸೆರೆಮನೆಯಲ್ಲಿ ಬಂಧನದಲ್ಲಿಡಲಾಯಿತು. ಆದರೆ ಕೆಲವು ದಿನಗಳಲ್ಲಿ ಶಿವಾಜಿ ತನ್ನ ಪುತ್ರನೊಂದಿಗೆ ಮಿಠಾಯಿ ಬುಟ್ಟಿಯಲ್ಲಿ ಕುಳಿತುಕೊಂಡು ಸೆರೆಮನೆಯಿಂದ ಪಾರಾಗಿ ರಾಯಗಢ ತಲುಪಿದನು. ಮುಂದೆ ತನ್ನ ಸೈನ್ಯವನ್ನು ಬಲಗೊಳಿಸಿ ತಾನು ಕಳೆದುಕೊಂಡಿದ್ದ ಅನೇಕ ಕೋಟೆಗಳನ್ನು ಪುನಃ ವಶಪಡಿಸಿಕೊಂಡನು. ಶಿವಾಜಿಯು ಮೊಘಲರ ಪ್ರದೇಶಗಳಿಂದ ಚೌತ (ಭೂಕಂದಾಯದ ನಾಲ್ಕನೇ ಒಂದು ಭಾಗ) ಮತ್ತು ತನ್ನ ರಾಜ್ಯದಲ್ಲಿ ಸರದೇಶಮುಖಿ (ಭೂಕಂದಾಯದ ಹತ್ತನೇ ಒಂದು ಭಾಗ) ಸಂಗ್ರಹಿಸುತ್ತಿದ್ದನು. 1674ರಲ್ಲಿ ರಾಯಘಢದಲ್ಲಿ ಶಿವಾಜಿಯ ಪಟ್ಟಾಭಿಷೇಕ ನಡೆಯಿತು. ಅಲ್ಲಿ ಶಿವಾಜಿಗೆ 'ಛತ್ರಪತಿ'ಯೆಂಬ ಬಿರುದು ನೀಡಿ ಗೌರವಿಸಲಾಯಿತು.

**ಶಿವಾಜಿಯ ಆಡಳಿತ :** ಶಿವಾಜಿ ತನ್ನ ವಿಶಾಲ ರಾಜ್ಯದಲ್ಲಿ ಉತ್ತಮ ಆಡಳಿತ ಸಂಘಟಿಸಿದ್ದನು. ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳಾಗಿ ವಿಂಗಡಿಸಿದ್ದನು. ಅವುಗಳನ್ನು ಸ್ವರಾಜ್ಯ ಮತ್ತು ಮೊಘಲರ ರಾಜ್ಯಗಳೆಂದು ಕರೆಯುತ್ತಿದ್ದರು. ಮರಾಠಿ ಆಡಳಿತ ಭಾಷೆಯಾಗಿತ್ತು. ಕೇಂದ್ರ ಸರ್ಕಾರದ ಮುಖ್ಯಸ್ಥನಾಗಿದ್ದ ದೊರೆಗೆ ಆಡಳಿತದಲ್ಲಿ ನೆರವು ನೀಡಲು ಅಷ್ಟ ಪ್ರಧಾನರೆಂಬ ಮಂತ್ರಿಗಳಿದ್ದರು. ಜೊತೆಗೆ ಸಹಾಯಕ್ಕಾಗಿ ಇತರೆ ಅಧಿಕಾರಿಗಳಿದ್ದರು. ಪ್ರಾಂತ್ಯ, ಜಿಲ್ಲೆ, ಗ್ರಾಮ ಆಡಳಿತದ ಘಟಕಗಳಾಗಿದ್ದವು.

**ಕಂದಾಯ ವ್ಯವಸ್ಥೆ :** ಶಿವಾಜಿಯ ಕಂದಾಯ ಪದ್ಧತಿ ರೈತರಿಗೆ ಅನುಕೂಲಕರವಾಗಿದ್ದ ರೈತವಾರಿ ಪದ್ಧತಿಯಾಗಿತ್ತು. ಅವನು ಜಾಗೀರುದಾರಿ ಕಂದಾಯ ಪದ್ಧತಿಯನ್ನು ರದ್ದುಪಡಿಸಿದನು. ಕಂದಾಯವನ್ನು ಹಣದ ಅಥವಾ ವಸ್ತು ರೂಪದಲ್ಲಿ ನೀಡಲು ಆದೇಶಿಸಿತ್ತು. ಚೌತ್ ಹಾಗೂ ಸರದೇಶಮುಖಿಯೆಂಬ ಭೂಕಂದಾಯಗಳಿದ್ದವು.

**ನ್ಯಾಯಾಂಗ ಪದ್ಧತಿ :** ಶಿವಾಜಿ ಆಡಳಿತದಲ್ಲಿ ಪರಂಪರಾನುಗತ ನ್ಯಾಯಾಂಗ ವ್ಯವಸ್ಥೆ ಜಾರಿಯಲ್ಲಿತ್ತು. ಗ್ರಾಮಗಳಲ್ಲಿ ಪಂಚಾಯತಿಗಳು ನ್ಯಾಯದಾನ ನೀಡುತ್ತಿದ್ದವು. ಬ್ರಾಹ್ಮಣ ನ್ಯಾಯಾಧೀಶರು ಸ್ಮೃತಿಗಳ ಆಧಾರದ ಮೇಲೆ ನಿರ್ಣಯ ನೀಡುತ್ತಿದ್ದರು.

**ಸೈನ್ಯ :** ಮರಾಠ ಸೈನ್ಯದಲ್ಲಿ ಕಾಲ್ದಳ, ಗಜದಳ, ಅಶ್ವದಳ ಮತ್ತು ಫಿರಂಗಿ ದಳಗಳಿದ್ದವು. ರಾಯಗಡ,

@KTBS NOT TO BE REPUBLISHED

ರಾಜಗಡ, ತೋರಣ ಗಡ, ಪ್ರತಾಪಗಡ ಮತ್ತು ಸಿಂಹಗಡಗಳಲ್ಲಿ ಪ್ರಮುಖ ಕೋಟೆಗಳಿದ್ದವು. ಹವಾಲ್ದಾರ ಕೋಟೆಯ ಮೇಲ್ವಿಚಾರಕನಾಗಿದ್ದನು. ಸೈನ್ಯದಲ್ಲಿ ಅನೇಕ ಚಿಕ್ಕ ಘಟಕಗಳಿದ್ದವು. ಗೆರಿಲ್ಲಾ ಯುದ್ಧತಂತ್ರಗಾರಿಕೆಯಲ್ಲಿ ಶಿವಾಜಿ ಸೈನಿಕರು ವಿಶೇಷ ತರಬೇತಿ ಪಡೆದಿದ್ದರು.

**ಶಿವಾಜಿಯ ಉತ್ತಾರಾಧಿಕಾರಿಗಳು :** ಶಿವಾಜಿಯ ಮರಣದ ನಂತರ ಸಂಭಾಜಿ ತನ್ನ ಶಕ್ತಿಯಿಂದ ಮರಾಠ ರಾಜ್ಯದದ ಉತ್ತರಾಧಿಕಾರಿಯಾದನು. ರಾಜ್ಯ ಸಂರಕ್ಷಿಸುವುದರ ಬದಲಾಗಿ ಔರಂಗಜೇಬನ ದಾಳಿಗೆ ತುತ್ತಾಗಿ ಕೊಲ್ಲಲ್ಪಟ್ಟನು. ಆತನ ಪತ್ನಿ ಹಾಗೂ ಚಿಕ್ಕ ಮಗ ಶಾಹುನನ್ನು ಸೆರೆಹಿಡಿಯಲಾಯಿತು. ಹೀಗಾಗಿ ರಾಜಾರಾಮ ಶಾಹು (ಸಂಭಾಜಿಯ ಪುತ್ರ) ರಾಜಪ್ರತಿನಿಧಿಯಾಗಿ ಆಡಳಿತದ ಸೂತ್ರ ವಹಿಸಿಕೊಂಡನು. ರಾಜಾರಾಮ ಪುನಃ ಮೊಘಲರೊಂದಿಗೆ ಹೋರಾಟ ಮಾಡಿ ಗುಜರಾತ, ಮಾಳ್ವಾ, ಖಾನದೇಶ, ಬೆರಾರಗಳನ್ನು ಮತ್ತು ಕೆಲವು ಕೋಟೆಗಳನ್ನು ವಶಪಡಿಸಿಕೊಂಡನು. ರಾಜಾರಾಮ 1700 ರಲ್ಲಿ ಮರಣ ಹೊಂದಿದ್ದರಿಂದ ಆತನ ಪತ್ನಿ ತಾರಾಬಾಯಿ ಮೋಹಿತೆ ತನ್ನ ಹತ್ತು ವರ್ಷದ ಮಗ ಎರಡನೆಯ ಶಿವಾಜಿಯನ್ನು ಪಟ್ಟಕ್ಕೇರಿಸಿ ಅಧಿಕಾರ ಪ್ರಾರಂಭಿಸಿದಳು. ಇವಳು 1700 ರಿಂದ 1708 ರ ವರೆಗೆ ರಾಜಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದಳು. ಇವಳು ಸಹ ಔರಂಗಜೇಬನೊಂದಿಗೆ ಯುದ್ಧ ಪ್ರಾರಂಭಿಸಿದಳು. ಪ್ರಾರಂಭದಲ್ಲಿ ಮೊಘಲರು ವಿಜಯಶಾಲಿಗಳಾದರೆ ನಂತರ ಮರಾಠರು ತಾವು ಕಳೆದುಕೊಂಡಿದ್ದ ಕೋಟೆಗಳನ್ನು ಪುನಃ ವಶಪಡಿಸಿಕೊಂಡರು. ಔರಂಗಜೇಬನ ಉತ್ತರಾಧಿಕಾರಿಯಾದ ಒಂದನೆಯ ಬಹದ್ದೂರ ಷಾ ಸಂಭಾಜಿಯ ಪುತ್ರ ಶಾಹುನನ್ನು ಬಂಧನದಿಂದ ಬಿಡುಗಡೆಗೊಳಿಸಿ ದಕ್ಷಿಣದಲ್ಲಿದ್ದ ಮೊಘಲರ ಸುಭಾಗಳಿಂದ ಚೌತ್ ಮತ್ತು ಸರದೇಶಮುಖಿಗಳನ್ನು ಸಂಗ್ರಹಿಸಲು ಅನುಮತಿ ನೀಡಿದನು. ಇದು ತಾರಾಬಾಯಿ ಮತ್ತು ಶಾಹುನ ನಡುವೆ ಆಂತರಿಕ ಕಲಹಕ್ಕೆ ಕಾರಣವಾಗಿ ತಾರಾಬಾಯಿ ಪರಾಭವಗೊಂಡಳು. ಆದರೆ ಶಾಹು ಸಾಮರ್ಥ್ಯ ಹೊಂದಿರಲಿಲ್ಲ. ಇದರಿಂದಾಗಿ ತನ್ನ ಆಡಳಿತವನ್ನು ಪೇಶ್ವೆಗೆ (ಪ್ರಧಾನ ಮಂತ್ರಿ) ಬಿಟ್ಟುಕೊಟ್ಟನು. ಹೀಗೆ ಮರಾಠ ರಾಜ್ಯದಲ್ಲಿ ಪೇಶ್ವೆಯರ ಆಡಳಿತ ಪ್ರಾರಂಭವಾಯಿತು.

NOT TO BE REPUBLISHED @KTBS

## ಪೇಶ್ವೆಗಳು

**ಬಾಲಾಜಿ ವಿಶ್ವನಾಥ :** ಶಾಹುನ ಸೇನಾಪತಿಯಾಗಿ ಪ್ರಸಿದ್ಧ ಮರಾಠ ನಾಯಕನಾಗಿದ್ದ, ನಿಷ್ಠಾವಂತ ಹಾಗೂ ಸಮರ್ಥ ಕಾರ್ಯ ನಿರ್ವಹಿಸಿದ್ದಕ್ಕಾಗಿ ಬಾಲಾಜಿ ವಿಶ್ವನಾಥನನ್ನು ಪೇಶ್ವೆಯೆಂದು ನೇಮಕ ಮಾಡಲಾಯಿತು. ಈತನು ಶಾಹು ಮತ್ತು ಆತನ ತಾಯಿಯನ್ನು ಮೊಘಲರ ಬಂಧನದಿಂದ ಬಿಡುಗಡೆಗೊಳಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದನು. ಮೊಘಲ ಸುಲ್ತಾನ ಸಯ್ಯದ ಸಹೋದರ ಸ್ನೇಹವನ್ನು ಸಂಪಾದಿಸಿ ಶಿವಾಜಿಯ ಅಧೀನದಲ್ಲಿದ್ದು ಮೊಘಲರು ವಶಪಡಿಸಿಕೊಂಡ ಪ್ರದೇಶಗಳಲ್ಲಿನ ಭೂಕಂದಾಯ ಸಂಗ್ರಹಿಸುವ ಅಧಿಕಾರ ಪಡೆದನು. ಮರಾಠ ಒಕ್ಕೂಟದ ಧುರೀಣರಾದ ಭೋನ್ಸಲೆ, ಗಾಯಕವಾಡ, ಹೋಳ್ಕರ್, ಸಿಂಧಿಯಾ ಮತ್ತು ಪೇಶ್ವೆಯರನ್ನು ಒಂದುಗೂಡಿಸಿ ಮರಾಠರ ಕೀರ್ತಿಯನ್ನು ಪುನಃ ಸ್ಥಾಪಿಸಿದನು.

**ಒಂದನೆಯ ಬಾಜೀರಾವ್ :** ಬಾಲಾಜಿ ವಿಶ್ವನಾಥನ ಮರಣದ ನಂತರ ಆತನ ಹಿರಿಯ ಪುತ್ರನಾದ ಒಂದನೆಯ ಬಾಜೀರಾವ್ ಪೇಶ್ವೆಯಾಗಿ ನೇಮಕಗೊಂಡನು. ಕೇವಲ ಹತ್ತೊಂಬತ್ತು ವರ್ಷದವನಾಗಿದ್ದರೂ ಇವನು ಅಪ್ರತಿಮ ವೀರನಾಗಿದ್ದನು. ಮರಾಠ ರಾಜ್ಯವನ್ನು ಉತ್ತರ ಭಾರತದಲ್ಲಿ ವಿಸ್ತರಿಸಬೇಕೆಂಬ ಉದ್ದೇಶದಿಂದ ಗುಜರಾತ, ಮಾಳ್ವಾಗಳನ್ನು ವಶಪಡಿಸಿಕೊಂಡು ಚೌತ್ ಮತ್ತು ಸರದೇಶಮುಖಿಗಳನ್ನು

ಸಂಗ್ರಹಿಸುವ ಅಧಿಕಾರ ಪಡೆದನು. ಕರ್ನಾಟಕದ ಚಿತ್ರದುರ್ಗ, ಶ್ರೀರಂಗಪಟ್ಟಣದ ಮೇಲೆ ದಾಳಿಮಾಡಿದನು. ಬಾಜಿರಾವ್ ಮೊಘಲ ದೊರೆ ವಿರುದ್ಧ ಯುದ್ಧ ಸಾರಿದಾಗ ನಿಜಾಮ-ಉಲ್ ಮುಲ್ಕ ಮೊಘಲರಿಗೆ ನೆರವು ನೀಡುವ ಉದ್ದೇಶದಿಂದ ತನ್ನ ಸೈನ್ಯದೊಂದಿಗೆ ದೆಹಲಿಗೆ ತೆರಳುವ ಸಂದರ್ಭದಲ್ಲಿ ಭೂಪಾಲ ಬಳಿ ನಡೆದ ಯುದ್ಧದಲ್ಲಿ ಮರಾಠರಿಂದ ಪರಾಭವಗೊಂಡನು. ಇದರಿಂದ ನರ್ಮದ ಚಂಬಲ್ ನದಿಗಳ ನಡುವಿನ ವಿಶಾಲ ಪ್ರದೇಶ ಹಾಗೂ ಐವತ್ತು ಲಕ್ಷ ರೂಪಾಯಿಗಳು ಯುದ್ಧ ಪರಿಹಾರವಾಗಿ ಬಾಜಿರಾವ್‌ನಿಗೆ ದೊರಕಿತು. ಅಲ್ಲದೆ ಪೋರ್ಚಗೀಸರಿಂದ ಸಾಲಸೆಟ್, ಬೇಸಿನ್ ಮತ್ತು ಸಿದ್ಧಿಗಳಿಂದ ಜಂಜಿರಾ ವಶಪಡಿಸಿಕೊಂಡನು. ಪುಣೆ ಇವನ ಆಡಳಿತದ ಕೇಂದ್ರವಾಯಿತು. ಇದೇ ವೇಳೆಗೆ ಮರಾಠರ ಒಕ್ಕೂಟದಲ್ಲಿದ್ದ ಗ್ವಾಲಿಯರ್‌ನ ಸಿಂಧಿಯಾ, ಇಂಧೋರಿನ ಹೋಳ್ಕರ್, ನಾಗಪುರದ ಭೋಸ್ಲೆ, ಬರೋಡಾದ ಗಾಯಕ್‌ವಾಡ್ ಇವರು ಪರಸ್ಪರ ಸ್ವತಂತ್ರಗೊಳ್ಳಲು ತೀರ್ಮಾನಿಸಿದರು. ಒಂದನೆಯ ಬಾಜಿರಾವ್ ದಕ್ಷತೆಯಿಂದ ಆಡಳಿತ ನಡೆಸಿದನಲ್ಲದೆ ಮರಾಠ ರಾಜ್ಯದ ಕೀರ್ತಿಯನ್ನು ಪುನಃ ಸ್ಥಾಪಿಸುವಲ್ಲಿ ಯಶಸ್ವಿಯಾದನು. ಇದರಿಂದ ಇವನಿಗೆ ಎರಡನೆಯ ಶಿವಾಜಿಯೆಂದು ಹೆಸರು ಬಂದಿತು.

**ಬಾಲಾಜಿ ಬಾಜಿರಾವ್ :** ಇವನು ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಅಧಿಕಾರಕ್ಕೆ ಬಂದಿದ್ದರಿಂದ ಆಡಳಿತದ ಮಾರ್ಗದರ್ಶನಕ್ಕಾಗಿ ಹತ್ತಿರ ಸಂಬಂಧಿ ಸದಾಶಿವ ಬಾವುನನ್ನು ನೇಮಕ ಮಾಡಿಕೊಂಡಿದ್ದನು. ಈತನು ಮರಾಠರ ಘನತೆಯನ್ನು ಹೆಚ್ಚಿಸಲು ಸ್ಫೂರ್ತಿ ನೀಡಿದನು. ರಾಜ್ಯದ ಆರ್ಥಿಕ ಸ್ಥಿತಿ ಸುಧಾರಿಸಲು ಕ್ರಮ ಕೈಗೊಂಡನು. ಬುಂದೇಲಖಂಡದ ತನ್ನ ಸಾರ್ವಭೌಮತ್ವ ಸ್ಥಾಪಿಸಲು ಕ್ರಿ.ಶ. 1742 ರಲ್ಲಿ ಹೋಳ್ಕರ್ ಮತ್ತು ಸಿಂಧ್ಯರ ಸೈನ್ಯದೊಂದಿಗೆ ಪ್ರಯಾಣ ಬೆಳಸಿದನು. ಅಫ್ಘಾನಿಸ್ತಾನದಿಂದ ಅಹ್ಮದಷಾ ಅಬ್ದಾಲಿ ಮೊಘಲ ಪ್ರದೇಶದ ಮೇಲೆ ಆಕ್ರಮಣ ಮಾಡಿ ಲಾಹೋರ್, ಮುಲ್ತಾನ, ಕಾಶ್ಮೀರಗಳನ್ನು ವಶಪಡಿಸಿಕೊಂಡನು. ಆಗ ಮೊಘಲದೊರೆ ಸಪ್ದರಜಂಗ್ ಆಂತರಿಕ ಮತ್ತು ಬಾಹ್ಯದಾಳಿಗೆ ಸಂಬಂಧಿಸಿದಂತೆ ಮರಾಠರೊಂದಿಗೆ ಒಪ್ಪಂದ ಮಾಡಿಕೊಂಡನು. ನಿರೀಕ್ಷಿಸಿದಂತೆ ಅಹ್ಮದಷಾ ಅಬ್ದಾಲಿ ಭಾರತದ ಮೇಲೆ ಆಕ್ರಮಣ ಮಾಡಿದನು. ಬಾಲಾಜಿ ಬಾಜಿರಾವ್ ತನ್ನ ಸೈನ್ಯದೊಂದಿಗೆ ಪಾಣಿಪತ್‌ನಲ್ಲಿ ವೈರಿಗಳೊಂದಿಗೆ ಹೋರಾಡಿ ಪರಾಭವಗೊಂಡನು.

**ಒಂದನೆಯ ಮಾಧವ ರಾವ್ :** ಬಾಲಾಜಿ ಬಾಜಿರಾವ್‌ನ ಎರಡನೆಯ ಪುತ್ರನಾದ ಇವನು ತಂದೆಯ ಮರಣದ ನಂತರ ಪೇಶ್ವೆಯಾದನು. ಅಪ್ರಾಪ್ತ ಯುವಕನಾಗಿದ್ದರಿಂದ ತನ್ನ ಚಿಕ್ಕಪ್ಪನನ್ನು ರಾಜಪ್ರತಿನಿಧಿಯಾಗಿ ನೇಮಕ ಮಾಡಿಕೊಂಡನು. ಮೂರನೆಯ ಪಾಣಿಪತ್ ಅಪಜಯದ ನಂತರ ಆಶ್ಚರ್ಯಕರ ರೀತಿಯಲ್ಲಿ ಚೇತರಿಸಿಕೊಂಡು ದಕ್ಷಿಣ ಮತ್ತು ಉತ್ತರ ಭಾರತದಲ್ಲಿ ಪ್ರಬಲ ಶಕ್ತಿ ಸ್ಥಾಪಿಸಿದನು. ಪಾಣಿಪತ್ ಸೋಲಿನ ಲಾಭ ಪಡೆದುಕೊಳ್ಳಲು ನಿಜಾಮ ಪ್ರಯತ್ನಿಸಲು ತೀರ್ಮಾನಿಸಿದಾಗ ಅವನನ್ನು ಅಹಮ್ಮದ್‌ನಗರ ಬಳಿ ನಡೆದ ಯುದ್ಧದಲ್ಲಿ ಸೋಲಿಸಿದನು. ಮೈಸೂರಿನ ಹೈದರಾಲಿಯನ್ನು ಸಹ ಸೋಲಿಸಿದನು. ಎರಡನೆಯ ಸಲ ಮೈಸೂರಿನ ಮೇಲೆ ಯುದ್ಧ ಮಾಡಿ ಶ್ರೀರಂಗಪಟ್ಟಣದ ಮೇಲೆ ವಿಜಯ ಸಾಧಿಸಿ ಶಿವಾಜಿ ವಶಪಡಿಸಿಕೊಂಡಿದ್ದ ಪ್ರದೇಶಗಳನ್ನು ಹೈದರ್ ಅಲಿಯಿಂದ ಪಡೆದುಕೊಂಡಿದ್ದಲ್ಲದೆ ಅಪಾರ ಯುದ್ಧ ಪರಿಹಾರ ಹಣವನ್ನು ಪಡೆದನು. ಉತ್ತರಭಾರತದಲ್ಲಿ ರಜಪೂತ, ಜಾಟ ಮತ್ತು ರೋಹಿಲರನ್ನು ಸೋಲಿಸಿದನು. ರಾಜಭ್ರಷ್ಟನಾಗಿ ಅಲೆಯುತ್ತಿದ್ದ ಮೊಘಲ ಚಕ್ರವರ್ತಿ ಎರಡನೆಯ ಷಾ ಆಲಂನನ್ನು ದೆಹಲಿ ಸಿಂಹಾಸನದ ಮೇಲೆ ಕುಳ್ಳಿರಿಸಲು ನೆರವು ನೀಡಿದನು. ಹೀಗೆ ಅಲ್ಪಾವಧಿಯಲ್ಲಿ ಮರಾಠರ ಕೀರ್ತಿಯನ್ನು ಪುನಃ ಸ್ಥಾಪಿಸಿದನು. ಮೂರನೆಯ ಆಂಗ್ಲೋ-ಮರಾಠ ಯುದ್ಧದಲ್ಲಿ ಬ್ರಿಟಿಷರು ಮರಾಠರನ್ನು ನಿರ್ಣಾಯಕವಾಗಿ ಸೋಲಿಸಿದ ನಂತರ ಮರಾಠ ಆಡಳಿತ ಅಂತ್ಯಗೊಂಡಿತು.

© KTBS NOT TO BE REPUBLISHED

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಅಹೋಮ್ ಸಾಮ್ರಾಜ್ಯದ ಸ್ಥಾಪಕ ________ .
2. ಮೊಘಲ್ ಸಾಮ್ರಾಜ್ಯ ಸ್ಥಾಪಿಸಿದವನು ________ .
3. ಮೊಘಲರಲ್ಲಿ ಪ್ರಸಿದ್ಧ ಸುಲ್ತಾನ ________ .
4. ಆಗ್ರಾದಲ್ಲಿ ತಾಜ್‌ಮಹಲ್ ಕಟ್ಟಿಸಿದವನು ________ .
5. ದಿನ್–ಇ–ಇಲಾಹಿ ಹೊಸ ಪಂಥ ಸ್ಥಾಪಿಸಿದ ಮೊಘಲ್ ಸುಲ್ತಾನ ________ .
6. ಶಿವಾಜಿಯ ತಾಯಿ ________

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಅಹೋಮ್ ರಾಜಮನೆತನದ ಪ್ರಮುಖ ಸಾಧನೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.
2. ಬಾಬರನ ಸೈನಿಕ ಸಾಧನೆ ವಿವರಿಸಿರಿ.
3. ಶೇರಷಾಹನ ಆಡಳಿತ ಪದ್ಧತಿಯೊಂದಿಗೆ ಇಂದಿನ ಆಡಳಿತ ವ್ಯವಸ್ಥೆಯನ್ನು ಹೋಲಿಸಿರಿ ಮತ್ತು ನಿಮ್ಮ ಅಭಿಪ್ರಾಯವನ್ನು ಬರೆಯಿರಿ.
4. ಅಕ್ಬರನು ಗೆದ್ದ ಪ್ರದೇಶಗಳಾವುವು ?
5. ಷಾ–ಜಹಾನನು ಕಲೆ ಮತ್ತು ವಾಸ್ತು ಶಿಲ್ಪಕ್ಕೆ ನೀಡಿದ ಕೊಡುಗೆ ವಿವರಿಸಿರಿ.
6. ಶಿವಾಜಿಯ ಆಡಳಿತ ವ್ಯವಸ್ಥೆ ವಿವರಿಸಿರಿ.
7. ಒಂದನೇ ಬಾಜಿರಾಯನ ಸಾಧನೆಗಳನ್ನು ವಿವರಿಸಿರಿ.

**III. ಚಟುವಟಿಕೆಗಳು.**

1. ಭಾರತದ ನಕ್ಷೆಯಲ್ಲಿ ಅಕ್ಬರ್ ಗೆದ್ದ ರಾಜ್ಯಗಳನ್ನು ಗುರುತಿಸಿರಿ.
2. ಶಿವಾಜಿಯಲ್ಲಿ ರಾಷ್ಟ್ರಭಕ್ತಿಯು ಬೆಳೆಯುವಲ್ಲಿ ತಾಯಿ ಜೀಜಾಬಾಯಿ ಹೇಗೆ ಸಹಾಯಕಳಾದಳು ಎಂಬ ಬಗ್ಗೆ ಪ್ರಬಂಧ ಬರೆಯಿರಿ.
3. ಭಾರತದ ನಕ್ಷೆಯಲ್ಲಿ ಅಹೋಮ್ ರಾಜಮನೆತನದ ಪ್ರದೇಶಗಳನ್ನು ಗುರುತಿಸಿ.

**IV. ಯೋಜನೆ.**

ತಮ್ಮ ಸ್ಥಳೀಯ ಆಡಳಿತ ಘಟಕ ವ್ಯವಸ್ಥೆ ಕುರಿತು ವರದಿ ಬರೆಯಿರಿ.

*****

© KTBS NOT TO BE REPUBLISHED

# ಅಧ್ಯಾಯ – 18

# ಭಕ್ತಿ ಪಂಥ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ರಮಾನಂದ, ಚೈತನ್ಯ, ಗುರುನಾನಕ್‌ರ ಬಗ್ಗೆ
- ಕರ್ನಾಟಕದಲ್ಲಿ ಭಕ್ತಿ ಪಂಥ
- ಭಕ್ತಿ ಪಂಥದ ಪರಿಣಾಮಗಳು
- ಭಕ್ತಿ ಪಂಥದ ಪ್ರಮುಖ ಲಕ್ಷಣಗಳು

ಭಕ್ತಿ ಚಳವಳಿಯ ಬೆಳವಣಿಗೆಯು ದೆಹಲಿ ಸುಲ್ತಾನರ ಕಾಲದ ಒಂದು ಪ್ರಮುಖ ಲಕ್ಷಣವಾಗಿದೆ. ಈ ಯುಗದ ಧರ್ಮ ಸುಧಾರಕರು ಮತ್ತು ದಾರ್ಶನಿಕರು ಉದಾರವಾದ ಭಕ್ತಿ ಪಂಥವನ್ನು ಪ್ರತಿಪಾದಿಸಿದರು. ಭಕ್ತಿ ಎಂದರೆ ದೇವರಲ್ಲಿ ಶುದ್ಧ ನಂಬಿಕೆಯನ್ನಿಡುವುದು. ದೇವರಲ್ಲಿ ಭಕ್ತಿ ಮತ್ತು ಶರಣಾಗತಿಯನ್ನು ಒತ್ತಿ ಹೇಳಿದರು. ಜನರಲ್ಲಿ ಭ್ರಾತೃತ್ವದ ಭಾವನೆ ಬೆಳೆಸಲು ಪ್ರಯತ್ನಿಸಿದರು ಮತ್ತು ಸರ್ವಧರ್ಮ ಸಮಾನತೆಯ ತತ್ವವನ್ನು ಪ್ರತಿಪಾದಿಸಿದರು. ರಾಮ, ಕೃಷ್ಣ ಹಾಗೂ ಅಲ್ಲಾ ಎಂಬುದಾಗಿ ಹಲವು ನಾಮಗಳಿಂದ ಗುರುತಿಸಲ್ಪಟ್ಟ ಭಗವಂತನನ್ನು ಆರಾಧಿಸಿದರು. ಅವರು ಮುಕ್ತಿಯನ್ನು ಪಡೆದುಕೊಳ್ಳಲು ಭಕ್ತಿಮಾರ್ಗ ಸೂಚಿಸಿದರು. ಪರಿಶುದ್ಧ ಮನಸ್ಸು ಮತ್ತು ದೇವರಿಗೆ ಪೂರ್ಣ ಶರಣಾಗತಿಯೇ ಭಕ್ತಿ ಪಂಥದ ಮೂಲ ತತ್ವವಾಗಿತ್ತು. ಭಕ್ತಿ ಪಂಥದೊಂದಿಗೆ ಇಸ್ಲಾಂ ಮತದಲ್ಲಿ ಸೂಫಿ ಸಂಪ್ರದಾಯ ಬೆಳೆಯಿತು.


**ರಮಾನಂದ**

### ರಮಾನಂದ

ರಮಾನಂದರು ಪ್ರಯಾಗದ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದರು. ರಾಮಾನುಜರ ತತ್ವದ ಅನುಯಾಯಿಗಳಾಗಿದ್ದರು. ಅವರು ಭಕ್ತಿ, ಪ್ರೀತಿಗಳ ಆಧಾರದ ಮೇಲೆ ವೈಷ್ಣವ ಧರ್ಮದ ಶಾಲೆಯೊಂದನ್ನು ಪ್ರಾರಂಭಿಸಿದರು. ಉತ್ತರ ಭಾರತದ ಕೆಲವಡೆ ಸಂಚರಿಸಿ ರಾಮ–ಸೀತೆಯರ ಪೂಜೆಯನ್ನು ಜನಪ್ರಿಯಗೊಳಿಸಿದರು. ವಾರಣಾಸಿಯು ಅವರ ಕಾರ್ಯಸ್ಥಾನದ ಕೇಂದ್ರವಾಗಿತ್ತು. ಅವರು ಜಾತಿ ಪದ್ಧತಿಯನ್ನು ಖಂಡಿಸಿ ಎಲ್ಲಾ ಜಾತಿಯವರನ್ನೂ ತಮ್ಮ ಪಂಥಕ್ಕೆ ಸೇರಿಸಿಕೊಂಡರು. ಅವರಲ್ಲಿ ಪ್ರಸಿದ್ಧನಾದವನು ಕಬೀರ್.

**ನಿಮಗಿದು ತಿಳಿದಿರಲಿ :**

**ರಮಾನಂದರು ಜನರಿಗೆ ವಿಶೇಷವಾದ ಸಂದೇಶವನ್ನು ಈ ರೀತಿ ನೀಡಿದರು :**

ಜಾತಿ–ಧರ್ಮದ ಗೊಂದಲದಿಂದ ಹೊರಬನ್ನಿ, ಜಾತಿ–ಧರ್ಮವನ್ನು ಪ್ರಶ್ನಿಸಬೇಡಿ.

ಹರಿಯನ್ನು ಸ್ಮರಿಸಿ, ಹರಿಯಲ್ಲಿ ಒಂದಾಗಿ.

**ಯಾರು ಯಾವ ಜಾತಿಯವನೆಂದು ಪ್ರಶ್ನಿಸುವುದಲ್ಲ. ಯಾರು ದೇವರನ್ನು ನೆನೆಯುವರೋ, ಅವರನ್ನು ದೇವರು ಆಶೀರ್ವದಿಸುವನು.**

©KTBS NOT TO BE REPUBLISHED

**ಕಬೀರ್ :** ಉತ್ತರ ಭಾರತದ ಈ ಕಾಲದ ಮತ್ತೊಬ್ಬ ಪ್ರಸಿದ್ಧ ಸಂತ ಕಬೀರ್. ರಮಾನಂದರ ಶಿಷ್ಯರಾಗಿದ್ದ ಇವರು ಹೆಚ್ಚು ಕಾಲವನ್ನು ವಾರಣಾಸಿಯಲ್ಲಿ ಕಳೆದರು. ತಮ್ಮದೇ ಹೊಸ ತತ್ವವನ್ನು ಬೋಧಿಸಲು ಪ್ರಾರಂಭಿಸಿದರು. ಜಾತಿ ವ್ಯವಸ್ಥೆ ಮತ್ತು ಬಹುಮೂರ್ತಿಗಳ ಪೂಜೆಯನ್ನು ಖಂಡಿಸಿದ ಅವರು ದೇವರು ಒಬ್ಬನೇ, ಹಿಂದೂ ಮತ್ತು ಮುಸಲ್ಮಾನರಿಗೆ ಆ ಒಬ್ಬ ದೇವರೇ ಹೊರತು ಬೇರೆ ಬೇರೆ ಇಲ್ಲವೆಂದು ಸಾರಿದರು. ಈ ಎರಡು ಮತೀಯರಲ್ಲಿಯೂ ಸೌಹಾರ್ದ ಮತ್ತು ಸಹಿಷ್ಣುತೆಯನ್ನು ಬೆಳೆಸಲು ಯತ್ನಿಸಿದರು.



**ಕಬೀರ್**


ಕಬೀರರು ದೋಹಗಳೆಂಬ ಪದ್ಯಗಳನ್ನು ರಚಿಸಿದರು. ಅವುಗಳನ್ನು ಹಿಂದೂ-ಮುಸಲ್ಮಾನರುಗಳು ಉತ್ತರ ಭಾರತದಲ್ಲಿ ಈಗಲೂ ಪಠಿಸುತ್ತಾರೆ. ಕಬೀರರ ಅನುಯಾಯಿಗಳನ್ನು **"ಕಬೀರ್-ಪಂಥಿ"**ಗಳೆಂದು ಕರೆಯುತ್ತಾರೆ. ಅಂದರೆ ಕಬೀರ್ ಮಾರ್ಗದಲ್ಲಿನ ಪ್ರವಾಸಿಗರು ಎಂದರ್ಥ. ಕಬೀರ್ ಭಾರತದ ಪ್ರಮುಖ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಕರಾಗಿದ್ದರು.



**ಚೈತನ್ಯ**

**ಚೈತನ್ಯ :** ಭಕ್ತಿ ಚಳವಳಿಯ ಪ್ರಸಿದ್ಧ ಸಂತರಲ್ಲಿ ಚೈತನ್ಯ ಒಬ್ಬರು. ಶ್ರದ್ಧೆಯಿಂದ ಜಾತಿ ಮೊದಲಾದ ಭೇದಗಳು ಹೋಗುತ್ತವೆ ಎಂದೂ, ಭಕ್ತಿಯಿಂದ ಮನುಷ್ಯನು ಪರಿಶುದ್ಧನಾಗುವನೆಂದು ಉಪದೇಶ ನೀಡಿದರು. ಕೃಷ್ಣನ ಆರಾಧನೆಯನ್ನು ಜನಾದರಣೀಯವಾಗುವಂತೆ ಮಾಡಿದರು. ಕೃಷ್ಣನನ್ನು ಕುರಿತು ಅನೇಕ ಭಕ್ತಿ ಗೀತೆಗಳನ್ನು ರಚಿಸಿದರು. ಇವರು ಜನರಲ್ಲಿ ಜಾತಿ ಪದ್ಧತಿಯನ್ನು ವಿರೋಧಿಸಿ, ಭ್ರಾತೃತ್ವ ಭಾವವನ್ನು ಹೆಚ್ಚಿಸಲು ಪ್ರಯತ್ನಿಸಿದರು. ಅವರ ಆಧ್ಯಾತ್ಮಿಕ ಚಿಂತನೆಯ ಬೋಧನೆಗಳನ್ನು **"ಚೈತನ್ಯ ಚರಿತಾಮೃತ"** ಎಂಬುದರಲ್ಲಿ ಸಂಗ್ರಹಿಸಲಾಗಿದೆ.

**ಗುರುನಾನಕ್ :** ಈ ಕಾಲದ ಮತ್ತೊಬ್ಬ ಭಕ್ತಿ ಪಂಥದ ಪ್ರತಿಪಾದಕ ಗುರುನಾನಕ್ ಚಿಕ್ಕ ವಯಸ್ಸಿನಿಂದಲೇ ಧಾರ್ಮಿಕ ಪ್ರವೃತ್ತಿಯುಳ್ಳವರಾಗಿದ್ದರು. ದೇವರು ಒಬ್ಬನೇ ಎಂದು ಬೋಧಿಸಿದರಲ್ಲದೇ ಮೂರ್ತಿ ಪೂಜೆಯನ್ನು ಖಂಡಿಸಿದರು. ಸತ್ಕಾರ್ಯ ಮತ್ತು ಪರಿಶುದ್ಧ ಹಾಗೂ ನೀತಿಯುಕ್ತವಾದ ಜೀವನಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟರು. ಅವರಿಗೆ ಹಿಂದೂ ಹಾಗೂ ಮುಸಲ್ಮಾನ ಶಿಷ್ಯರುಗಳಿದ್ದರು. ಇವರ ಶಿಷ್ಯರನ್ನು **"ಸಿಖ್ಖರು"** ಎಂದು ಕರೆಯಲಾಗಿದೆ. ಇವರ ಬೋಧನೆಗಳನ್ನು **"ಗುರು ಗ್ರಂಥ ಸಾಹಿಬ್"**ನಲ್ಲಿ ಸಂಗ್ರಹಿಸಲಾಗಿದ್ದು ಇದು ಸಿಖ್ಖರ ಗ್ರಂಥವಾಗಿದೆ.



**ಗುರುನಾನಕ್**

**ನಿಮಗಿದು ತಿಳಿದಿರಲಿ :**


"ಗುರು ಗ್ರಂಥ ಸಾಹಿಬ್" ಅನ್ನು ಸಿಖ್‌ರ ಪವಿತ್ರಗ್ರಂಥ ಎಂದೂ ಕರೆಯುತ್ತಾರೆ. ಇದನ್ನು ಗುರುದ್ವಾರದಲ್ಲಿಟ್ಟು ಪೂಜಿಸುತ್ತಾರೆ.

© KTBS NOT TO BE REPUBLISHED

**ಶ್ರೀಮಂತ ಶಂಕರದೇವ ಹಾಗೂ ಮಾಧವದೇವ:**

ಅಸ್ಸಾಮಿನ ಸಾಂಸ್ಕೃತಿಕ ಹಾಗೂ ಧಾರ್ಮಿಕ ಇತಿಹಾಸದಲ್ಲಿ ಶ್ರೀಮಂತ ಶಂಕರ ದೇವನ ಪಾತ್ರ ಪ್ರಮುಖವಾದುದು. ಹಿಂದಿನ ಸಂಸ್ಕೃತಿ, ಹಾಗೂ ಸಂಗೀತ ಪರಂಪರೆಯಲ್ಲಿ ಹೊಸತನವನ್ನು ತಂದ ಪ್ರಖ್ಯಾತಿಯನ್ನು ಹೊಂದಿದ್ದಾನೆ. ಶಂಕರದೇವನ ಭಾಗವತವು ಸಂಸ್ಕೃತ, ಆಸ್ಸಾಂ ಭಾಷೆ ಹಾಗೂ ಬ್ರಜಾವಲಿ ಭಾಷೆಗಳಲ್ಲಿದೆ. ಅಸ್ಸಾಂನಲ್ಲಿ ಶಂಕರದೇವನು ಪ್ರಾರಂಭಿಸಿದ ಭಕ್ತಿ ಚಳವಳಿಯು ಭಾರತದ ಇತರೆ ಭಾಗಗಳಲ್ಲಿ ತನ್ನ ಪ್ರಭಾವ ಬೀರಿತು.


ಶಂಕರದೇವ


ಮಾಧವದೇವ

ಆತನು ಪ್ರಾರಂಭ ಮಾಡಿದ ಭಕ್ತಿಚಳವಳಿಯನ್ನು ಏಕಾಸರಣ ಧರ್ಮ– ವೈಷ್ಣವ ಚಳವಳಿ ಎಂದು ಕರೆಯುತ್ತಾರೆ. ಕೃಷ್ಣನಲ್ಲಿ ನಾವು ನಿರ್ಮಲವಾದ ಭಕ್ತಿ ತೋರಬೇಕು. ಉತ್ತಮವಾದ ಕೀರ್ತನೆ ಹಾಡುವುದು ಹಾಗೂ ಕೇಳುವುದರಿಂದ ನಾವು ಭಕ್ತಿ ಹೊಂದಬಹುದು. ದೇವರ ಸೇವಕ ಎಂಬ ಸದ್ಭಾವನೆಯಿಂದ ದಾಸ್ಯ ಪ್ರವೃತ್ತಿಯನ್ನು ಹೊಂದಬೇಕು. ಇತರೆ ವೈಷ್ಣವರಂತೆ, ಕೃಷ್ಣನ ಒಡಗೂಡಿ ರಾಧೆಯನ್ನು ಈ ಪಂಥವು ಪೂಜಿಸುವುದಿಲ್ಲ.

ಶ್ರೀಮಂತ ಶಂಕರ ದೇವರು ತಮ್ಮ ಪಂಥದಲ್ಲಿ ಸರನಿಯ ಎಂಬ ಪದ್ಧತಿಯನ್ನು ಪ್ರಾರಂಭಿಸಿದರು. ಆಕಾಲದಲ್ಲಿದ್ದ ಜಾತಿಪದ್ಧತಿ ವಿರುದ್ಧವಾಗಿ ದೊಡ್ಡ ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದರು. ಎಲ್ಲ ಧರ್ಮಗಳ, ಜಾತಿಗೆ ಸೇರಿದವರನ್ನು ತಮ್ಮ ಪಂಥದಲ್ಲಿ ಸೇರಿಸಿಕೊಂಡರು. ಈ ಪಂಥದಲ್ಲಿ ಸೇರಿದವರಿಗೆ ಕಟ್ಟುನಿಟ್ಟಾದ ಧಾರ್ಮಿಕ ಚೌಕಟ್ಟನ್ನು– ಏಕದೇವತಾ ಪೂಜೆ, ಭಕ್ತಿತೋರುವುದು, ಇವುಗಳನ್ನು ಪಾಲಿಸಲು ಹೇಳುತ್ತಾರೆ. ಅವರ ಶಿಷ್ಯರಾದ ಮಾಧವದೇವರು, ಶಾಕ್ತ ಗುಂಪಿಗೆ ಸೇರಿದವರಾಗಿದ್ದರೂ, ಇವರ ಪ್ರಭಾವದಿಂದ ಏಕಾಸರಣವನ್ನು ಒಪ್ಪಿ ಸೇರುತ್ತಾರೆ. ಬಹುಮುಖ ಪ್ರತಿಭೆ ಹೊಂದಿದ ಮಾಧವದೇವರು ಭಕ್ತಿಚಳವಳಿಯಲ್ಲಿ ಅತ್ಯಂತ ಪ್ರಖ್ಯಾತಿಯನ್ನು ಗಳಿಸಿದರು.

**ಮೀರಾಬಾಯಿ :** ಭಕ್ತಿ ಪಂಥಕ್ಕೆ ಹೆಸರಾದ ಮೀರಾಬಾಯಿ ಮೇವಾಡದ ರಾಜಕುಮಾರಿ. ಭೋಗ ಜೀವನಕ್ಕೆ ವಿದಾಯ ಹೇಳಿ ಕೃಷ್ಣನ ಪರಮ ಭಕ್ತಳಾದಳು. ಕೃಷ್ಣನನ್ನು ಕುರಿತು ಭಕ್ತಿ ಪೂರಿತವಾದ ಕೀರ್ತನೆಗಳನ್ನು ಬರೆದಳು. ಈ ಕೀರ್ತನೆಗಳು **"ಭಜನೆಗಳು"** ಎಂದು ಜನಪ್ರಿಯವಾದವು. ಇಡೀ ಭಾರತದಲ್ಲಿ ಈಗಲೂ ಈ ಭಜನೆಗಳನ್ನು ಹಾಡಲಾಗುತ್ತಿದೆ.


ಮೀರಾಬಾಯಿ

ಭಾರತದ ಹಲವಾರು ಭಾಗಗಳಲ್ಲಿ ಹಿಂದೂ ಮತ್ತು ಇಸ್ಲಾಂ ಧರ್ಮದ ನಡುವಣ ಅಂತರವನ್ನು ಕಡಿಮೆ ಮಾಡಲು ಅನೇಕ ಸುಧಾರಕರು ಪ್ರಯತ್ನಿಸಿದರು.

NOT TO BE REPUBLISHED ©KTBS

ಮಹಾರಾಷ್ಟ್ರದ ಭೀಮಾ ನದಿಯ ದಡದಲ್ಲಿ ಪಂಡರಾಪುರದ ವಿಠೋಬನ ದೇವಾಲಯವು ಭಕ್ತಿ ಪಂಥದ ಕೇಂದ್ರವಾಗಿತ್ತು. ಜ್ಞಾನೇಶ್ವರ ಮತ್ತು ನಾಮದೇವ, ಏಕನಾಥ, ತುಕಾರಾಮ್ ಮತ್ತು ರಾಮದಾಸರು ಹೊಸ ಪಂಥದ ಸಂತರಲ್ಲಿ ಪ್ರಖ್ಯಾತರಾಗಿದ್ದರು. ಪುರಂದರದಾಸರು ಮತ್ತು ಕನಕದಾಸರು ಕರ್ನಾಟಕದ ಭಕ್ತಿ ಚಳವಳಿಯ ಪ್ರಮುಖರಾಗಿದ್ದರು. ಪುರಂದರದಾಸರು **"ಕೀರ್ತನೆ"**ಗಳನ್ನು ರಚಿಸಿದರೆ, ಕನಕದಾಸರು **"ಮೋಹನ ತರಂಗಿಣಿ"** ಎಂಬ ಕಾವ್ಯವನ್ನು ಮತ್ತು ಕೀರ್ತನೆಗಳನ್ನು ಕನ್ನಡದಲ್ಲಿ ರಚನೆ ಮಾಡಿದರು.

**ಕೆಲವು ಸೂಫಿ ಸಂತರುಗಳು :**
ಮೊಇನ್-ಉದ್-ದೀನ್ ಚಿಷ್ತಿ, ಬಾಬಾ ಫರೀದ್, ನಿಜಾಮ್ ಉದ್-ದೀನ್ ಔಲಿಯ,ಮಲಿಕ್ ಮಹಮದ್ ಹಾಗೂ ಖ್ವಾಜಾಬಂದೇ ನವಾಜ್ ಮುಂತಾದವರು.

**ಸೂಫಿ ಸಂತರು :** ಸೂಫಿ ಸಂತರು ಪರ್ಷಿಯಾದಿಂದ ಬಂದು ಭಾರತದ ವಿವಿಧ ಭಾಗಗಳಲ್ಲಿ ನೆಲೆಸಿದರು. ಅವರನ್ನು **ಪೀರ (ಗುರು)** ಎಂದು ಕರೆಯುತ್ತಾರೆ. **"ಸೂಫ್"** ಎಂಬ ಸಾದಾ ಉಣ್ಣೆಯ ಬಟ್ಟೆ ತೊಡುತ್ತಿದ್ದುದರಿಂದ ಮುಸ್ಲಿಂ ಸಂತರುಗಳನ್ನು **"ಸೂಫೀ"** ಎಂದು ಕರೆದರು. ಪ್ರೇಮ ಮತ್ತು ಭಕ್ತಿಯಿಂದ ಪರಮಾತ್ಮನನ್ನು ಅಥವಾ ಅಲ್ಲಾನನ್ನು ಸೇರಲು ಸಾಧ್ಯವೆಂದು ಬೋಧಿಸಿದರು. ಎಲ್ಲಾ ವರ್ಗದ ಜನರನ್ನು ಗೌರವಿಸಿ ಬಾಳುವುದರ ಮಹತ್ವವನ್ನು ಒತ್ತಿ ಹೇಳಿದರು. ಭಕ್ತಿಯಿಂದ ಕೂಡಿದ ನರ್ತನ ಮತ್ತು ಸಂಗೀತವು ನಮ್ಮನ್ನು ದೇವರ ಕಡೆ ಕೊಂಡೊಯ್ಯುತ್ತವೆ ಎಂದು ಸೂಫಿಗಳು ನಂಬಿದ್ದರು. ಅವರು ಉರ್ದು ಮತ್ತು ಹಿಂದಿ ಭಾಷೆಯಲ್ಲಿ ಭಕ್ತಿಯ ಮಹತ್ವವನ್ನು ಸಾರಲು ಅನೇಕ ಕೃತಿಗಳನ್ನು ರಚಿಸಿದರು. ಕುತುಬನ್ ಎಂಬಾತನು **"ಮೃಗಾವತಿ"** ಹಾಗೂ ಮಲ್ಲಿಕ್ ಮಹಮದ್ ಜಯ್ಸಿಯ **"ಪದ್ಮಾವತ್"** ಎಂಬ ಕಾವ್ಯಗಳು ಸೂಫಿ ತತ್ವವನ್ನು ಎತ್ತಿ ಹಿಡಿದಿವೆ.

@KTBS NOT TO BE REPUBLISHED

### ಭಕ್ತಿ ಚಳವಳಿಯ ಪರಿಣಾಮಗಳು

ಹಿಂದೂ ಆಚರಣೆಗಳ ಸುಧಾರಣೆ ಮತ್ತು ಹಿಂದೂ ಮತ್ತು ಮುಸಲ್ಮಾನರಲ್ಲಿ ಮಧುರ ಬಾಂಧವ್ಯವನ್ನು ಉಂಟು ಮಾಡುವುದು ಭಕ್ತಿ ಪಂಥದ ಎರಡು ಮುಖ್ಯ ಉದ್ದೇಶಗಳಾಗಿದ್ದವು. ಹಿಂದೂ ಸಮಾಜದಲ್ಲಿನ ಅನೇಕ ನ್ಯೂನತೆಗಳನ್ನು ಸುಧಾರಕರು ನಿವಾರಿಸಿದರು. ಭಾರತದ ಪ್ರಾದೇಶಿಕ ಭಾಷೆಗಳು ವಿಕಾಸಗೊಂಡವು. ಅವರು ದೇಶಿ ಭಾಷೆಗಳಲ್ಲಿ ಬರೆದು ಅವುಗಳ ಬೆಳವಣಿಗೆಗೆ ಸಹಾಯ ಮಾಡಿದರು. ಇದು ಭಾರತೀಯ ಸಂಸ್ಕೃತಿಯ ವಿಕಾಸಕ್ಕೆ ಕಾರಣವಾಯಿತು.

**ನಿಮಗಿದು ತಿಳಿದಿರಲಿ :**
ಭಕ್ತಿ ಪಂಥದಲ್ಲಿ ಸಂತರು ತಾವಾಡುವ ಭಾಷೆಯಲ್ಲಿಯೇ ಕೀರ್ತನೆಗಳನ್ನು ಹಾಗೂ ಭಜನೆಗಳನ್ನು ರಚಿಸಿದರು. ಇದರಿಂದಾಗಿ ಭಾರತೀಯ ಭಾಷೆಗಳಲ್ಲಿ ದೇಸೀ ಸಾಹಿತ್ಯ ಅಭಿವೃದ್ಧಿಗೊಂಡಿತು. ಹಿಂದಿಯಲ್ಲಿ ಸೂರದಾಸರು "ಸೂರ್ ಸಾಗರ್"ನ್ನು, ತುಳಸೀದಾಸರು "ರಾಮಚರಿತ ಮಾನಸ"ವನ್ನು ರಚಿಸಿದರೆ, ಮರಾಠಿಯಲ್ಲಿ ಅಭಂಗಗಳೆಂಬ ಕೀರ್ತನೆಗಳ ಜೊತೆಗೆ ಜ್ಞಾನದೇವರ "ಜ್ಞಾನೇಶ್ವರಿ" ಕಾವ್ಯವು ರಚನೆಯಾದವು.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.**

1. ಭಕ್ತಿ ಎಂದರೆ ದೇವರಲ್ಲಿ ಶುದ್ಧ ________ .
2. ರಮಾನಂದರ ಶಿಷ್ಯರಲ್ಲಿ ಪ್ರಸಿದ್ಧರಾದವರು _______ .
3. ಕಬೀರರ ಅನುಯಾಯಿಗಳನ್ನು ________ ಎಂದು ಕರೆಯುತ್ತಾರೆ.
4. ಚೈತನ್ಯ ಆಧ್ಯಾತ್ಮಿಕ ಚಿಂತನೆಯ ಸಂಗ್ರಹ _______ .

**II. ಕೆಳಕಂಡ ಪ್ರಶ್ನೆಗಳಿಗೆ ಮಿತ್ರರೊಂದಿಗೆ ಚರ್ಚಿಸಿ ಉತ್ತರಿಸಿರಿ.**

1. ರಾಮ – ಸೀತೆಯರ ಪೂಜೆಯನ್ನು ಜನಪ್ರಿಯಗೊಳಿಸಿದವರಾರು? ಅವರ ಸೇವೆಗಳಾವುವು?
2. ಸಿಖ್ಖರು ಯಾರು ? ಅವರ ಗ್ರಂಥ ಯಾವುದು?
3. ಅಸ್ಸಾಮಿನ ಸಾಂಸ್ಕೃತಿಕ ಹಾಗೂ ಧಾರ್ಮಿಕ ಇತಿಹಾಸದಲ್ಲಿ ಶ್ರೀಮಂತ ಶಂಕರ ದೇವರ ಪಾತ್ರ ಪ್ರಮುಖವಾದುದು. ಹೇಗೆ ತಿಳಿಸಿ?
4. ಭಕ್ತಿ ಚಳವಳಿಯಿಂದಾದ ಪರಿಣಾಮಗಳಾವುವು?

**III. ಚಟುವಟಿಕೆಗಳು :**

1. ಭಕ್ತಿ ಸುಧಾರಕರ ಜೀವನ ಚರಿತ್ರೆಯನ್ನು ತಿಳಿದುಕೊಳ್ಳಿ.
2. ನಿಮ್ಮ ಶಿಕ್ಷಕರಿಂದ ಸುಧಾರಕರುಗಳ ಪೂರ್ಣ ಮಾಹಿತಿ ಪಡೆದುಕೊಳ್ಳಿ.

**IV. ಯೋಜನೆಗಳು :**

1. ಭಕ್ತಿ ಪಂಥದ ಸುಧಾರಕರುಗಳಲ್ಲಿ ಒಬ್ಬರ ಬಗ್ಗೆ ಒಂದು ವಿಸ್ತಾರವಾದ ಯೋಜನೆ ತಯಾರಿಸಿ.
2. ಗುಂಪುಗಳನ್ನು ವಿಂಗಡಿಸಿ ಪ್ರತಿಯೊಬ್ಬ ಸುಧಾರಕರ ಬಗ್ಗೆ ಯೋಜನೆ ತಯಾರಿಸಿ.
3. ಕನಕದಾಸರ, ಪುರಂದರ ದಾಸರ ಕೀರ್ತನೆಗಳಲ್ಲಿ ಅಡಕವಾಗಿರುವ ಮೌಲ್ಯಗಳ ಬಗ್ಗೆ ಶಿಕ್ಷಕರ ನೆರವಿನೊಂದಿಗೆ ಚರ್ಚಿಸಿ.
4. ಕನಕದಾಸರ ಮತ್ತು ಪುರಂದರದಾಸರ ಕೀರ್ತನೆಗಳನ್ನು ಅಭ್ಯಾಸ ಮಾಡಿ.

*****

©KTBS NOT TO BE REPUBLISHED

# ಅಧ್ಯಾಯ – 19

# ಆಧುನಿಕ ಯುರೋಪ್

P7N3L6

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಪುನರುಜ್ಜೀವನಕ್ಕೆ ಕಾರಣಗಳು ಮತ್ತು ಪರಿಣಾಮಗಳು
- ಭೌಗೋಳಿಕ ಅನ್ವೇಷಣೆ ಮತ್ತು ಪರಿಣಾಮಗಳು
- ರಿಲಿಜನ್ ಸುಧಾರಣೆಗೆ ಕಾರಣ ಮತ್ತು ಪರಿಣಾಮಗಳು
- ಕೈಗಾರಿಕಾ ಕ್ರಾಂತಿ ಮತ್ತು ಪರಿಣಾಮಗಳು

ರೋಮನ್ ಸಾಮ್ರಾಜ್ಯದ ಪತನದ ನಂತರ ಯುರೋಪಿನಲ್ಲಿ ಕಂಡುಬಂದ ಪದ್ಧತಿಯೇ ಊಳಿಗಮಾನ್ಯ ಪದ್ಧತಿ. ಈ ವ್ಯವಸ್ಥೆಯು ರಾಜಕೀಯ ಹಾಗೂ ಆರ್ಥಿಕ ತಳಹದಿಯಲ್ಲಿ ರೂಪಿತವಾದ ಭೂಮಿಯ ಒಡೆತನ ವ್ಯವಸ್ಥೆಯಾಗಿತ್ತು. ಇದು ನಿರ್ದಿಷ್ಟ ಸೇವೆಗಳನ್ನು ಹೊಂದುವುದರ ಸಲುವಾಗಿ ಹುಟ್ಟಿಕೊಂಡ ವ್ಯವಸ್ಥೆಯಾಗಿತ್ತು. ಬಲಿಷ್ಠ ಹಾಗೂ ಅಶಕ್ತರ ನಡುವೆ ಇದ್ದಂತಹ ಒಪ್ಪಂದ ಎನ್ನಬಹುದು. ಯಾರು ಭೂಒಡೆತನವನ್ನು ಹೊಂದಿ ಬಲಿಷ್ಠನಾಗಿದ್ದನೋ ಅವನೇ ಧಣಿ, ಭೂಮಿಯನ್ನು ಹಿಡುವಳಿಯಾಗಿ ಪಡೆದಂತಹ ಅಶಕ್ತ ವ್ಯಕ್ತಿಯನ್ನು ಹಿಡುವಳಿದಾರ ಎಂದು ಕರೆಯುತ್ತಿದ್ದರು. ಮಧ್ಯಯುಗದಲ್ಲಿ ಯುರೋಪಿನ ಎಲ್ಲ ವರ್ಗಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಈ ವ್ಯವಸ್ಥೆಯ ಸ್ವರೂಪ, ಪ್ರಕಾರಗಳು ಪಾದಾರ್ಪಣವಾಯಿತು. ಈ ವ್ಯವಸ್ಥೆಯ ಪರಿಣಾಮದಿಂದ ಉನ್ನತ ಪ್ರಭು ವರ್ಗಗಳು ಹುಟ್ಟಿದವು. ಪ್ರಭು ವರ್ಗ–ಹಿಡುವಳಿದಾರರು–ನೋಬಲರ ನಡುವೆವಾದ ವಿವಾದಗಳು ಆರಂಭವಾದವು. ಈ ಬಿಕ್ಕಟ್ಟಿನಿಂದ ಊಳಿಗಮಾನ್ಯ ಒಪ್ಪಂದಗಳು ಮುರಿದು ಬಿದ್ದವು. 15ನೇ ಶತಮಾನದ ವೇಳೆಗೆ ಅನೇಕ ಘಟನಾವಳಿಗಳು ಈ ವ್ಯವಸ್ಥೆಯ ಪತನಕ್ಕೆ ಕಾರಣವಾದವು. ಇಂಗ್ಲೆಂಡ್, ಫ್ರಾನ್ಸ್, ಮತ್ತು ಸ್ಪೇನ್ ದೇಶಗಳಲ್ಲಿ ಹುಟ್ಟಿಕೊಂಡ ಪ್ರಬಲವಾದ ಅರಸು ಮನೆತನಗಳಿಂದ ಊಳಿಗಮಾನ್ಯ ವ್ಯವಸ್ಥೆಯ ಸೌಧ ಕುಸಿಯಲು ಪ್ರಾರಂಭಿಸಿತು. ಪ್ರಾಂತಿಯ ಭಾಷೆಯ ಬೆಳವಣಿಗೆ, ರಾಷ್ಟ್ರೀಯ ಮನೋಭಾವ, ಪ್ರಭುಗಳ ನಿರಂಕುಶ ಪ್ರಭುತ್ವ ಆಕಾಂಕ್ಷೆ, ಇದರ ವಿನಾಶಕ್ಕೆ ಕಾರಣವಾಯಿತು. 16 ನೇ ಶತಮಾನದ ವೇಳೆಗೆ ಯೂರೋಪ್ ಹೊಸಯುಗಕ್ಕೆ ಪ್ರವೇಶಿಸಿತು. ಯುರೋಪಿನ ಆಧುನಿಕ ಯುಗವು ಪ್ರಮುಖ ಘಟನೆಯಾಗಿ ಪರಿಣಮಿಸಿತು. ಟರ್ಕೀಯರಿಂದ ಕಾನ್ಸ್ಟಾಂಟಿನೋಪಲ್ ವಶ, ಹಾಗೂ ಹೆಚ್ಚಿದ ವ್ಯಾಪಾರ ಚಟುವಟಿಕೆಗಳು, ಪುನರುಜ್ಜೀವನ, ಭೌಗೋಳಿಕ ಅನ್ವೇಷಣೆ, ಧಾರ್ಮಿಕ ಸುಧಾರಣಾ ಚಳವಳಿ ಹಾಗೂ ಕೈಗಾರಿಕಾ ಕ್ರಾಂತಿಗಳ ಬೆಳವಣಿಗೆಗೆ ಕಾರಣವಾದವು.

ಪ್ರಪಂಚದ ಇತಿಹಾಸದಲ್ಲಿ 15 ಮತ್ತು 16ನೇ ಶತಮಾನದ ಕಾಲದಲ್ಲಿ ಯುರೋಪ್ ಹೊಸ ಯುಗಕ್ಕೆ ಪ್ರವೇಶಿಸಿತು. ಮಧ್ಯಯುಗದ ಅಂತ್ಯ ಹಾಗೂ ಆಧುನಿಕ ಯುಗದ ಆರಂಭವು ಯುರೋಪಿನ ಇತಿಹಾಸದ ಎರಡು ಪ್ರಮುಖ ಘಟನೆಗಳಾಗಿ ಪರಿಣಮಿಸಿದೆ. ಟರ್ಕೀಯರಿಂದ ಕಾನ್ಸ್ಟಾಂಟಿನೋಪಲ್‌ನ ವಶ ಹಾಗೂ ಹೆಚ್ಚಿದ ವ್ಯಾಪಾರ ಚಟುವಟಿಕೆಗಳು ಮುಂದಿನ ದಿನಗಳಲ್ಲಿ ಪುನರುಜ್ಜೀವನ, ಭೌಗೋಳಿಕ ಅನ್ವೇಷಣೆ, ಧಾರ್ಮಿಕ ಸುಧಾರಣಾ ಚಳವಳಿ ಹಾಗೂ ಕೈಗಾರಿಕಾ ಕ್ರಾಂತಿಗಳ ಬೆಳವಣಿಗೆಗೆ ಕಾರಣವಾದವು.

**ಪುನರುಜ್ಜೀವನ (THE RENAISSANCE)**

ಪುನರುಜ್ಜೀವನ ಪದದ ಅರ್ಥ ಪುನರ್‌ಜಾಗೃತಿ. ಇದು ಯುರೋಪ್‌ನ ಮಧ್ಯಯುಗದ ಅಂತ್ಯದಲ್ಲಿ ಉಂಟಾದ ಎಲ್ಲಾ ಬೌದ್ಧಿಕ ಬದಲಾವಣೆಗಳನ್ನು ಒಟ್ಟಾಗಿ ಸೂಚಿಸುವ ಪದ ಎನ್ನಬಹುದು. 14 ಮತ್ತು 15ನೇ ಶತಮಾನವು ಪಶ್ಚಿಮ ಯುರೋಪಿನ ಕಲೆ, ವಾಸ್ತುಶಿಲ್ಪ, ಧರ್ಮ, ತತ್ವಶಾಸ್ತ್ರ, ವಿಜ್ಞಾನ ಮತ್ತು ರಾಜಕೀಯ ವಿಷಯಗಳ ಬೆಳವಣಿಗೆಯನ್ನು ಸೂಚಿಸುತ್ತವೆ. ಜ್ಞಾನ ಪುನರುಜ್ಜೀವನ ಚಳವಳಿಯು

ಮೊದಲು ಪ್ರಾರಂಭವಾದದ್ದು ಇಟಲಿಯಲ್ಲಿ. ಆನಂತರ ಅದು ಯುರೋಪಿನ ಇತರೆ ಭಾಗಗಳಿಗೆ ಹರಡಿತು. ಆದ್ದರಿಂದ ಇಟಲಿಯನ್ನು **"ಪುನರುಜ್ಜೀವನ"**ದ ತವರು ಎಂಬುದಾಗಿ ಕರೆಯುತ್ತಾರೆ.

**ಪುನರುಜ್ಜೀವನಕ್ಕೆ ಕಾರಣಗಳು**

1453ರಲ್ಲಿ ಕಾನ್‌ಸ್ಟಾಂಟಿನೋಪಲ್‌ನ ಪತನ, ಊಳಿಗಮಾನ್ಯ ಪದ್ಧತಿಯ ಅವನತಿ, ಜರ್ಮನಿಯ ಗುಟನ್‌ಬರ್ಗ್‌ನ ಮುದ್ರಣ ಯಂತ್ರದ ಸಂಶೋಧನೆ, ಭೌಗೋಳಿಕ ಅನ್ವೇಷಣೆಗಳು ಮುಖ್ಯವಾಗಿವೆ. ಯುರೋಪಿನ ರಾಜಕುಮಾರರು, ಶ್ರೀಮಂತರು, ವ್ಯಾಪಾರಿಗಳು ಹಾಗೂ ಪಾದ್ರಿಗಳು, ವಿದ್ವಾಂಸರನ್ನು, ಕಲಾವಿದರನ್ನು, ವಿಜ್ಞಾನಿಗಳನ್ನು ಹಾಗೂ ತತ್ವಜ್ಞಾನಿಗಳನ್ನು ಪೋಷಿಸಿದುದು ಹಾಗೂ ಇನ್ನು ಹಲವಾರು ಅಂಶಗಳು ಪುನರುಜ್ಜೀವನದ ಬೆಳವಣಿಗೆಗೆ ಕಾರಣವಾದವು.

**ಪುನರುಜ್ಜೀವನದ ಲಕ್ಷಣಗಳು**

1) ಪುನರುಜ್ಜೀವನ ಕಾಲದ ಜನರ ದೃಷ್ಟಿಕೋನ ಮಧ್ಯಯುಗಕ್ಕಿಂತಲೂ ಭಿನ್ನವಾಗಿತ್ತು. ಜಗತ್ತು ಮತ್ತು ಮಾನವನನ್ನು ಕುರಿತು ಜನರ ಅಭಿಪ್ರಾಯ ಬದಲಾಯಿತು. ಇದನ್ನು "ಮನುಷ್ಯವಾದ" ಎಂದು ಕರೆಯಲಾಯಿತು. ಮನುಷ್ಯವಾದಿಗಳು ಉತ್ಕೃಷ್ಟ ಸಾಹಿತ್ಯದ ಬಗ್ಗೆ ಆಸಕ್ತಿ ತಳೆದರು. ಮಾನವ ಜೀವನಕ್ಕೆ ಸಂಬಂಧಿಸಿದ ಕ್ರಮಗಳಿಗೆ ಒತ್ತು ನೀಡುವ ಪ್ರಯತ್ನ ನಡೆದವು.

2) ಪುನರುಜ್ಜೀವನ ಕಾಲದ ಬರಹಗಾರರು ಇಂಗ್ಲೀಷ್, ಇಟಾಲಿಯನ್ ಮತ್ತು ಜರ್ಮನ್ ಭಾಷೆಯಲ್ಲಿ ಬರೆದ ಸಾಹಿತ್ಯ ಶ್ರೀಮಂತವಾಯಿತು.

3) ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಬದಲಾವಣೆಯಾಯಿತು. ಕೃಷಿಕ ಜೀವನವು ವಾಣಿಜ್ಯ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಬದಲಾಯಿತು. ಸಾಮಾಜಿಕ ಸಂಬಂಧಗಳಲ್ಲೂ ಮೂಲಭೂತವಾಗಿ ಬದಲಾವಣೆಯಾದವು.

4) ಪುನರುಜ್ಜೀವನದ ಮುಖ್ಯ ಲಕ್ಷಣವೆಂದರೆ ಜನರು ಶ್ರೇಷ್ಠ ಸಂಸ್ಕೃತಿಯ ಬಗ್ಗೆ ತಳೆದ ಆಸಕ್ತಿ, ಯಾವುದು ಶ್ರೇಷ್ಠವೆನಿಸುವುದೋ ಅದನ್ನು ಅನುಕರಿಸುವ ಪ್ರವೃತ್ತಿ. ಇದನ್ನು "ಶ್ರೇಷ್ಠಾನುಕರಣೆ" ಎಂದು ಕರೆಯುತ್ತಾರೆ.

5) ಗ್ರೀಕ್ ಮತ್ತು ರೋಮ್‌ನ ವಿದ್ವಾಂಸರು ಇಟಲಿಗೆ ವಲಸೆ ಬಂದು ನೆಲೆಸಿದರು.

© KTBS NOT TO BE REPUBLISHED

**ಪುನರುಜ್ಜೀವನದ ಸಾಹಿತ್ಯ**

ಇಟಲಿ ಅನೇಕ ಸಾಹಿತ್ಯ ದಿಗ್ಗಜರ ತವರೂರಾಗಿತ್ತು. ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ ಮತ್ತು ಸ್ಪೈನ್ ದೇಶಗಳೂ ಕೂಡ ಸಾಕಷ್ಟು ಸಾಹಿತ್ಯ ಸುಧೆಯನ್ನು ಹರಿಸಿದವು. ಈ ಕಾಲದ ಸಾಹಿತ್ಯದ ತಿರುಳು ಧರ್ಮವಾಗಿರದೆ ಪ್ರಾಪಂಚಿಕ ವಿಷಯವಾಗಿತ್ತು. ಮಾನವನ ದೇಹ, ಅಂಗಸೌಷ್ಟವ ಮುಂತಾದ ವಿಷಯಗಳ ಬಗ್ಗೆ ಬರೆದರು. ಲ್ಯಾಟಿನ್ ಬದಲು ಯುರೋಪಿನ ಪ್ರಾದೇಶಿಕ ಭಾಷೆಗಳು ಬಳಕೆಗೆ ಬಂದವು.

**ಪೆಟ್ರಾರ್ಕ್ : (1304 - 1374)**

ಪೆಟ್ರಾರ್ಕ್‌ನನ್ನು "ಪುನರುಜ್ಜೀವನದ ಜನಕ" ಎಂದು ಕರೆಯಲಾಗಿದೆ. ಇವನು ಸುಮಾರು 200 ಲ್ಯಾಟಿನ್ ಮತ್ತು ಗ್ರೀಕ್ ಹಸ್ತಪ್ರತಿಗಳನ್ನು ಸಂಗ್ರಹಿಸಿದನು. "ಆಫ್ರಿಕಾ" ಇವನ ಪ್ರಸಿದ್ಧ ಕಾವ್ಯ. ಇದು ಲ್ಯಾಟಿನ್ ಭಾಷೆಯಲ್ಲಿದೆ. ಅನೇಕ ಗೀತೆಗಳು ಹಾಗೂ ಸಾನೆಟ್‌ಗಳ ರಚನೆಗೆ ಪ್ರಖ್ಯಾತನಾಗಿದ್ದನು. ಮಾನವನು ಇಹಲೋಕದಲ್ಲಿ ಕಾಣುವ ಸುಖ–ದುಃಖಗಳ ಅಗಾಧ ಚಿಂತನೆಯನ್ನು ಪೆಟ್ರಾರ್ಕ್‌ನ ಕವಿತೆಗಳಲ್ಲಿ ಕಾಣಬಹುದು.

ಬೊಕಾಷಿಯೋ ಇಟಾಲಿಯನ್ ಭಾಷೆಯಲ್ಲಿ ರಚಿಸಿದ ನೂರು ಕಥೆಗಳ ಸಂಗ್ರಹ "ಡೆಕಾಮೆರಾನ್", ಡಾಂಟೆ ರಚಿಸಿದ ಪ್ರಸಿದ್ಧ ಕೃತಿ "ಡಿವೈನ್ ಕಾಮಿಡಿ", ಇಂಗ್ಲೆಂಡಿನ ಛಾಸರ್ ಬರೆದ "ಕ್ಯಾಂಟರ್‌ಬರಿ ಟೇಲ್ಸ್", ಸ್ಪೈನಿನ ಸರ್ವಾಂಟಿಸ್ ಬರೆದ "ದಾನ್ ಕಿಹೊತ್ತೆ", ಇಂಗ್ಲೆಂಡ್‌ನ ಥಾಮಸ್ ಮೋರ್ ರಚಿಸಿದ "ಯುಟೋಪಿಯಾ" ಇವು ಪ್ರಸಿದ್ಧ ಕೃತಿಗಳು ಹಾಗೂ ಇಂಗ್ಲೆಂಡಿನ ಶೇಕ್ಸ್‌ಪಿಯರ್ ಒಬ್ಬ ಶ್ರೇಷ್ಠ ಕವಿ ಮತ್ತು ನಾಟಕಕಾರ. ಅವನು ಅನೇಕ ಪ್ರಸಿದ್ಧ ದುಃಖಾಂತ–ಸುಖಾಂತ ನಾಟಕಗಳನ್ನು ಬರೆದಿದ್ದಾನೆ. ಲಂಡನ್‌ನಲ್ಲಿ ಸ್ಥಾಪನೆಯಾದ ಸೈಂಟ್ ಪಾಲ್ ಶಾಲೆಯು ಈ ನೂತನ ಜ್ಞಾನದ ಕಲಿಕೆಗಾಗಿಯೇ ಮೀಸಲಾಗಿದ್ದಿತು.



ಪೆಟ್ರಾರ್ಕ್

**ಪುನರುಜ್ಜೀವನದಲ್ಲಿ ಕಲೆ (ವಾಸ್ತುಶಿಲ್ಪ ಮತ್ತು ಶಿಲ್ಪಕಲೆ)**

ಈ ಕಾಲದಲ್ಲಿ ಕಲೆಯು ಅತ್ಯಂತ ಸರಳವಾಗಿಯೂ, ಸ್ವಾಭಾವಿಕವಾಗಿಯೂ ಇದ್ದಿತು. ಪೌರಾಣಿಕ ವ್ಯಕ್ತಿಗಳು, ದೇವಪುತ್ರ ಯೇಸುಕ್ರಿಸ್ತ ಮತ್ತು ಅವನ ಶಿಷ್ಯರನ್ನು ಮಾನವ ಸಹಜ ಭಾವನೆಗಳೊಂದಿಗೆ ಶಿಲ್ಪ ಚಿತ್ರಗಳಲ್ಲಿ ಕಲಾವಿದರು ಮೂಡಿಸಿದರು.

16ನೇ ಶತಮಾನದಲ್ಲಿ ಇಟಲಿಯಲ್ಲಿ ಅನೇಕ ಕಲಾಕಾರರಿದ್ದರು. ಮೈಖಲ್ ಆಂಜೆಲೋ, ರಾಫೇಲ್, ಲಿಯೋನಾರ್ಡ್–ಡ–ವಿಂಚಿ ಮತ್ತು ಟಿಟಿಯಾನ್ ಪ್ರಮುಖ ಕಲಾಕಾರರಾಗಿದ್ದವರು. ಮೈಖಲ್ ಆಂಜೆಲೋವಿನ "ಆ್ಯಡಂ" ಮತ್ತು "ಕೊನೆಯ ತೀರ್ಮಾನ", ಲಿಯೋನಾರ್ಡ್–ಡ–ವಿಂಚಿಯ "ಲಾಸ್ಟ್ ಸಪ್ಪರ್" ಮತ್ತು "ಮೊನಾಲಿಸಾ", ರಾಫೇಲ್‌ನ "ಸಿಸ್ಟೈನ್ ಮಡೋನ್ನ" ಮತ್ತು ಟಿಟಿಯನ್‌ನ "ಅಸಂಪ್ಷನ್ ಆಫ್ ದಿ ವರ್ಜಿನ್" ಮುಖ್ಯವಾದ ವರ್ಣಚಿತ್ರಗಳಾಗಿದ್ದವು.



ಪುನರುಜ್ಜೀವನ ಕಾಲದ ಚಿತ್ರ

**ಪುನರುಜ್ಜೀವನದ ಕಾಲದಲ್ಲಿ ವಿಜ್ಞಾನ :(ಆಧುನಿಕ ವಿಜ್ಞಾನದ ಜನನ)**

ಪುನರುಜ್ಜೀವನದ ಕಾಲದಿಂದಲೇ ಆಧುನಿಕ ವಿಜ್ಞಾನವು ಜನ್ಮ ತಾಳಿತು. ವಿಜ್ಞಾನವು ರಿಲಿಜನ್ ನಂಬಿಕೆಗಳನ್ನು ಬದಿಗೊತ್ತಿ ಹೊಸ ಶೋಧಗಳನ್ನು ಪ್ರಕಟಿಸಿತು. ಮಾನವನ ಬಗ್ಗೆ ತಿಳಿಯುವ ವಿಷಯವು ಈ ಕಾಲದಲ್ಲಿ ಹೊಸ ಆವಿಷ್ಕಾರಗಳಿಗೆ ನಾಂದಿಯಾಯಿತು. ಮಧ್ಯಕಾಲದಲ್ಲಿ ಜನರು ಯಾವುದೇ ರೀತಿ ಪ್ರಶ್ನಿಸದೆ ಎಲ್ಲವನ್ನೂ ಒಪ್ಪಿಕೊಳ್ಳುತ್ತಿದ್ದರು. ಅವಶ್ಯಕತೆ ಮತ್ತು ಪ್ರಶ್ನಿಸುವ ಮನೋಭಾವ ಬೆಳೆದಂತೆ ವೈಜ್ಞಾನಿಕ ಸಂಶೋಧನೆಗಳು ಹೆಚ್ಚಿದವು. ಫ್ರಾನ್ಸಿಸ್ ಬೇಕನ್ ಪ್ರಾಚೀನ ವೈಜ್ಞಾನಿಕ ತೀರ್ಮಾನಗಳು ಪರಿಣತ ಜ್ಞಾನವನ್ನು ಪ್ರತಿನಿಧಿಸುವುದಿಲ್ಲವೆಂದು ಘೋಷಿಸಿದನು. ದೆಕಾರ್ತೆಯು ಸಂದೇಹ ಮಾರ್ಗಕ್ಕೆ ಕೊಡುಗೆ ನೀಡಿ ಯಾವುದನ್ನೇ ಆದರೂ ಒಪ್ಪಿಕೊಳ್ಳುವ ಮೊದಲು ಪ್ರಶ್ನಿಸುವ ವಿಷಯವನ್ನು ಮಂಡಿಸಿದನು. ಪೋಲೆಂಡಿನ ಕೊಪರ್ನಿಕಸ್‌ನು ಗ್ರೀಸ್‌ನ ಟಾಲೆಮಿಯ ಭೂಕೇಂದ್ರದ ವಾದವು ಸುಳ್ಳೆಂದು ತೋರಿಸಿ ಗ್ರಹಗಳ ಸೌರ ಕೇಂದ್ರೀಯ ಸಿದ್ಧಾಂತವನ್ನು ಪ್ರತಿಪಾದಿಸಿದನು.


© KTBS NOT TO BE REPUBLISHED

**ಕೆಪ್ಲರ್**


ಕೆಪ್ಲರ್

ಕೆಪ್ಲರ್‌ನು ಒಬ್ಬ ಜರ್ಮನಿಯ ವಿಜ್ಞಾನಿ. ಗ್ರಹಗಳು ಸೂರ್ಯನನ್ನು ದೀರ್ಘವೃತ್ತಾಕಾರದಲ್ಲಿ ಸುತ್ತುತ್ತವೆ ಎಂದು ತಿಳಿಸಿದನು.


**ಗೆಲಿಲಿಯೋ**


ಗೆಲಿಲಿಯೋ

ಗೆಲಿಲಿಯೋ ದೂರದರ್ಶಕ ಯಂತ್ರವನ್ನು ಕಂಡುಹಿಡಿದನು. ಕೊಪರ್ನಿಕಸ್‌ನ ಪರಿಕಲ್ಪನೆಯನ್ನು ಬೆಂಬಲಿಸಿದನು. ಚರ್ಚ್‌ನ ಒತ್ತಡಕ್ಕೆ ಮಣಿದು ತನ್ನ ಹೇಳಿಕೆಯನ್ನು ಹಿಂತೆಗೆದುಕೊಂಡನು.

**ನ್ಯೂಟನ್**

ನ್ಯೂಟನ್ನನು ಗುರುತ್ವಾಕರ್ಷಣೆಯ ನಿಯಮಗಳನ್ನು ಕಂಡುಹಿಡಿದನು ಹಾಗೂ ಎಲ್ಲಾ ಆಕಾಶಕಾಯಗಳ ಚಲನೆಗಳು ಗುರುತ್ವಾಕರ್ಷಣೆಯ ನಿಯಂತ್ರಣಕ್ಕೆ ಒಳಪಟ್ಟಿವೆ ಎಂದು ತಿಳಿಸಿದನು.


ನ್ಯೂಟನ್

ರಸಾಯನಶಾಸ್ತ್ರ, ವೈದ್ಯಶಾಸ್ತ್ರ ಮತ್ತು ಶರೀರ ಶಾಸ್ತ್ರಗಳ ಅಭ್ಯಾಸದಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸಲಾಯಿತು. ಆಂಡ್ರ್ಯೂ ವಸಾಲಿಯಸ್ ಶರೀರದ ಶಸ್ತ್ರಚಿಕಿತ್ಸೆಯನ್ನು ಮಾಡಿ ಮಾಂಸ ಖಂಡಗಳು, ಮಿದುಳು, ಜೀರ್ಣಾಂಗ ಮತ್ತು ಜನನೇಂದ್ರಿಯಗಳಿಗೆ ಪರಿಣಾಮಕಾರಿ ಚಿಕಿತ್ಸೆಯನ್ನು ಮಾಡಬಹುದೆಂಬುದರ ಬಗ್ಗೆ ಶರೀರ ಶಾಸ್ತ್ರದ ಮೇಲೆ ವೈಜ್ಞಾನಿಕ ಗ್ರಂಥವನ್ನು ಬರೆದನು.

**ಪುನರುಜ್ಜೀವನದ ಪರಿಣಾಮಗಳು**

ಪುನರುಜ್ಜೀವನ ಕಾಲದಲ್ಲಿ ಜೀವನವನ್ನು ಕುರಿತ ಲೌಕಿಕ ಮಾರ್ಗ ಬೆಳೆಯಿತು. ವಿಶ್ವದ ಬಗ್ಗೆ ವೈಜ್ಞಾನಿಕ ದೃಷ್ಟಿ ಬೆಳೆಯಿತು. ನಕ್ಷತ್ರಗಳ ಚಲನವಲನಗಳ ಜ್ಞಾನ ಬೆಳೆದು, ಸಾಗರ ಮಾರ್ಗಗಳ ಶೋಧನೆ, ಭೂ–ಅನ್ವೇಷಣೆ ಸಾಧ್ಯವಾಯಿತು. ವೈಜ್ಞಾನಿಕ ಶೋಧನೆಗಳು ಹಾಗೂ ತಂತ್ರಜ್ಞಾನದಿಂದ ಕೈಗಾರಿಕಾ ಕ್ರಾಂತಿಯು ಸಾಧ್ಯವಾಯಿತು. ಅಂಧಶ್ರದ್ಧೆಯನ್ನು ಖಂಡಿಸಲಾಯಿತು. ಹೊಸ ಚಿಂತನೆಗಳಿಗೆ ಪ್ರೋತ್ಸಾಹ ದೊರೆಯಿತು. ಹೊಸದೃಷ್ಟಿ ಮೂಡಿದ್ದರಿಂದ ಕ್ಯಾಥೋಲಿಕ್ ಚರ್ಚ್‌ನಲ್ಲಾದ ಬದಲಾವಣೆ ಅಥವಾ ಧಾರ್ಮಿಕ ಸುಧಾರಣೆ ಚಳವಳಿಗೆ ನಾಂದಿಯಾಯಿತು.

**ಭೌಗೋಳಿಕ ಅನ್ವೇಷಣೆಗಳು**

16ನೇ ಶತಮಾನವನ್ನು "ಭೌಗೋಳಿಕ ಅನ್ವೇಷಣೆಗಳ ಯುಗ" ಎಂದು ಕರೆಯಲಾಗಿದೆ. ಮಧ್ಯಕಾಲದ ಅಂತ್ಯದವರೆಗೂ ಯುರೋಪಿಯನ್ನರಿಗೆ ಭೌಗೋಳಿಕ ಜ್ಞಾನವು ಅಷ್ಟಾಗಿ ತಿಳಿದಿರಲಿಲ್ಲ. ಆನಂತರದ ಬೆಳವಣಿಗೆಗಳಲ್ಲಿ ಯುರೋಪಿಯನ್ನರು ಪ್ರಪಂಚದ ಅನೇಕ ಭಾಗಗಳಿಗೆ ಸಮುದ್ರ ಮಾರ್ಗ ಕಂಡುಹಿಡಿದರು. ಹೊಸ ಖಂಡಗಳಾದ ಉತ್ತರ ಅಮೆರಿಕ, ದಕ್ಷಿಣ ಅಮೆರಿಕ ಹಾಗೂ ಆಸ್ಟ್ರೇಲಿಯಗಳು ಬೆಳಕಿಗೆ ಬಂದವು.

> **ನಿಮಗಿದು ತಿಳಿದಿರಲಿ :**
> ಅಮೆರಿಗೋ ವೆಸ್ಪುಸಿ ಎಂಬುವನು ಅಮೆಜಾನ್ ನದಿ ಮುಖ ಶೋಧಿಸಿ ಇದೊಂದು ಹೊಸ ಖಂಡವೆಂದು ತೋರಿಸಿದನು. ಅದರಿಂದ ಇದಕ್ಕೆ ಅಮೆರಿಕ ಎಂಬ ಹೆಸರು ಬಂದಿತು.

@KTBS NOT TO BE REPUBLISHED

| | |
|---|---|
| <br>**ದಿಕ್ಸೂಚಿ**<br>ನಾವಿಕರುಗಳು ತಲುಪಬೇಕಾದ ಪ್ರದೇಶದ ದಿಕ್ಕನ್ನು ತಿಳಿಯಲು ಉಪಯೋಗಿಸುವ ಸಾಧನ. | <br>**ಅಸ್ಟ್ರೋಲೋಬ್**<br>ಸೂರ್ಯ, ಗ್ರಹಗಳು ಮತ್ತು ನಕ್ಷತ್ರಗಳಿಗೆ ಭೂಮಟ್ಟದಿಂದ ಇರುವ ದೂರ ಹಾಗೂ ಕಾಲವನ್ನು ತಿಳಿಸುವ ಸಾಧನ. |

**ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳು**

1) 1453ರಲ್ಲಿ ಟರ್ಕರು ಕಾನ್ಸ್‌ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡಾಗ, ಪೂರ್ವ ಮತ್ತು ಪಶ್ಚಿಮ ವ್ಯಾಪಾರದ ಬಾಗಿಲು ತೆರೆದಂತಾಯಿತು. ಇದರಿಂದಾಗಿ, ಭಾರತದಿಂದ ಆಮದು ಮಾಡಿಕೊಳ್ಳುತ್ತಿದ್ದ ಸಾಂಬಾರ ಪದಾರ್ಥಗಳಿಂದ ಹೆಚ್ಚಿನ ಲಾಭವು ಟರ್ಕರ ಪಾಲಾಯಿತು. ಇದರಿಂದಾಗಿ ಯುರೋಪಿಯನ್ನರು ಭಾರತಕ್ಕೆ ಹೊಸ ಸಮುದ್ರ ಮಾರ್ಗವನ್ನು ಕಂಡುಹಿಡಿಯಲೇಬೇಕಾದ ಪರಿಸ್ಥಿತಿ ಒದಗಿತು.

2) ಸ್ಪೇನ್ ಮತ್ತು ಪೋರ್ಚ್‌ಗಲ್ ದೇಶಗಳು ಸಾಗರ ವ್ಯಾಪಾರಿಗಳಾದ ಅರಬ್ಬರ ವಿರುದ್ಧ ಸ್ಪರ್ಧಿಸಲು ಇಚ್ಛೆ ಹೊಂದಿದ್ದವು.

3) ಹೊಸದೇಶಗಳನ್ನು ಕಂಡುಹಿಡಿದರೆ ಕ್ರಿಶ್ಚಿಯಾನಿಟಿಯನ್ನು ಹರಡಬಹುದೆಂಬ ಆಶಯವೂ ಇತ್ತು.

4) ಪೂರ್ವ ದೇಶಗಳ ಕಡೆ ಸಮುದ್ರ ಪ್ರಯಾಣದ ಸಾಹಸಕ್ಕೆ ಕೈಹಾಕಿದ್ದು ಯುರೋಪಿಯನ್ನರಲ್ಲಿ ಕುತೂಹಲ ಕೆರಳಿಸಿತು.


5) ನಾವಿಕರ ದಿಕ್ಸೂಚಿ ಮತ್ತು ಅಸ್ಟ್ರೋಲೋಬ್ ಉಪಕರಣಗಳು ನಾವಿಕರಿಗೆ ಸಮುದ್ರದಲ್ಲಿ ಸಂಚರಿಸಲು ಸಹಾಯಕವಾದುವು. ನಕ್ಷೆಗಳು ಮತ್ತು ಭೂಪಟಗಳು ನಾವಿಕರಿಗೆ ಸಿಗುವಂತಾಯಿತು.

6) ಯುರೋಪಿಯನ್ನರು ಲಾಭ ಗಳಿಸಲು ಚೀನಾ ಫಲವತ್ತಾದುದೆಂದು ನಂಬಿದ್ದರು.

**ಭೂಶೋಧನೆಗಳು**

ಮಧ್ಯಯುಗದ ನಂತರ ಭೂ ಅನ್ವೇಷಣೆ ಕಾರ್ಯದಲ್ಲಿ ತೊಡಗಿದ ಮುಖ್ಯ ರಾಷ್ಟ್ರಗಳು ಪೋರ್ಚ್‌ಗಲ್ ಮತ್ತು ಸ್ಪೇನ್. ನಾವಿಕ ಹೆನ್ರಿಯು ಕಳುಹಿಸಿದ್ದ ನಾವಿಕರು ದೀರ್ಘಕಾಲ ಓಡಾಡಿ, ಆಫ್ರಿಕಾ ಖಂಡದ ಪಶ್ಚಿಮ ಕರಾವಳಿಯನ್ನು ಸಾಕಷ್ಟು ದಕ್ಷಿಣದವರೆಗೆ ಶೋಧಿಸಿದ್ದರು. ಭಾರ್ಥಲೋಮ್ಯೂ ಡಯಾಸ್ ಎಂಬ ನಾವಿಕನು ಆಫ್ರಿಕಾದ ದಕ್ಷಿಣ ಭಾಗವನ್ನು ತಲುಪಿ ಅದನ್ನು ಗುಡ್‌ಹೋಪ್ ಭೂಶಿರ ಎಂದು ಕರೆದನು. 1498ರಲ್ಲಿ ವಾಸ್ಕೋ-ಡ-ಗಾಮನು ಆಫ್ರಿಕಾದ ಗುಡ್‌ಹೋಪ್ ಭೂಶಿರವನ್ನು ಸುತ್ತುಹಾಕಿ ಹಿಂದೂ ಮಹಾಸಾಗರವನ್ನು ದಾಟಿ ಭಾರತದ ಕಲ್ಲಿಕೋಟೆಯನ್ನು ತಲುಪಿದನು. ಸಾಗರಮಾರ್ಗದಿಂದ ಭಾರತವನ್ನು ತಲುಪುವ ಯುರೋಪಿಯನ್ನರ ಕನಸು ನನಸಾಯಿತು.

© KTBS NOT TO BE REPUBLISHED




**ಪ್ರಪಂಚ ನಕ್ಷೆ (ಹೊಸ ಸಮುದ್ರ ಮಾರ್ಗ)**

ಜಿನೋವಾ ನಗರದ ನಾವಿಕ ಕ್ರಿಸ್ಟೋಫರ್ ಕೊಲಂಬಸ್ ಸ್ಪೇನ್‌ನ ದೊರೆಯ ನೆರವಿನಿಂದ 1492 ರಲ್ಲಿ ಅಟ್ಲಾಂಟಿಕ್ ಸಾಗರವನ್ನು ದಾಟಿ ವೆಸ್ಟ್ ಇಂಡಿಸ್‌ನ (ಕೆರಿಬಿಯನ್ಸ್) ಬಹಾಮ ದ್ವೀಪವನ್ನು ತಲುಪಿದನು.

ಪೋರ್ಚ್‌ಗೀಸರ ಕಬ್ರಾಲ್ 1500 ರಲ್ಲಿ ಬ್ರೆಝಿಲ್ ತಲುಪಿದರೆ, ಬಲ್ಬೋವ, ಪನಾಮ ಜಲಸಂಧಿ ಬಳಿ ಬೆಟ್ಟವೊಂದನ್ನು ಏರಿ ಪಶ್ಚಿಮಕ್ಕೆ ವಿಶಾಲ ಸಾಗರವನ್ನು ಕಂಡನು. ಇದೇ ಪೆಸಿಫಿಕ್ ಸಾಗರ. ಇನ್ನೊಬ್ಬ ಪೋರ್ಚ್‌ಗೀಸ್ ನಾವಿಕ ಫರ್ಡಿನಾಂಡ್ ಮೆಗೆಲನ್ ಸುಮಾರು ಐದು ತಿಂಗಳ ಕಾಲ ಪ್ರಯಾಣಿಸಿ, 1520 ರಲ್ಲಿ ದಕ್ಷಿಣ ಅಮೇರಿಕಾವನ್ನು ತಲುಪಿದನು. ಅಲ್ಲಿಂದ ಹಿಂದೂ ಮಹಾಸಾಗರದ ಮೂಲಕ ಫಿಲಿಫೈನ್ಸ್‌ನ್ನು ತಲುಪಿದನು. ಒಂದು ಹಡಗು ಇಂದಿನ ಇಂಡೋನೇಷ್ಯ ದ್ವೀಪಗಳ ಮಧ್ಯದಲ್ಲಿ ಸಾಗಿ, ಭೂಮಿಯ ಪ್ರಥಮ ಪ್ರದಕ್ಷಿಣೆ ಹಾಕಿ ಕೇಪ್ ಆಫ್ ಗುಡ್‌ಹೋಪ್ ಮಾರ್ಗವಾಗಿ ಸ್ಪೇನ್‌ಗೆ ತಲುಪಿತು.

**ಭೂಶೋಧನೆಯ ಪರಿಣಾಮಗಳು**

1) ನವಶೋಧಿತ ಪ್ರದೇಶಗಳಲ್ಲಿ ವಸಾಹತು ಮತ್ತು ಸಾಮ್ರಾಜ್ಯ ಕಟ್ಟಲು ಐರೋಪ್ಯ ದೇಶಗಳ ನಡುವೆ ಸ್ಪರ್ಧೆ ಪ್ರಾರಂಭವಾಯಿತು. ಅಮೇರಿಕಾ, ಆಫ್ರಿಕಾ ಮತ್ತು ಏಷ್ಯಾದ ದೇಶಗಳಲ್ಲಿ ವಾಣಿಜ್ಯಕ್ಕಾಗಿ ಸ್ಪರ್ಧೆ ಹೆಚ್ಚಿತು. ಗೆದ್ದ ದೇಶಗಳ ಮೇಲೆ ವಾಣಿಜ್ಯದ ಏಕಸ್ವಾಮ್ಯ ಸಾಧಿಸಲು ಅನುವು ಮಾಡಿಕೊಟ್ಟಿತು.
2) ವಸಾಹತುಗಳ ಕಚ್ಚಾ ವಸ್ತುಗಳಿಂದಾಗಿ ಯುರೋಪಿನ ಕಂಪನಿಗಳು ಐಶ್ವರ್ಯಭರಿತವಾದವು.
3) ಐರೋಪ್ಯ ದೇಶಗಳಲ್ಲಿ ಬಂಡವಾಳಶಾಹಿ ಬೆಳೆದು ಕೈಗಾರಿಕಾ ಕ್ರಾಂತಿ ಆರಂಭವಾಯಿತು.

©KTBS NOT TO BE REPUBLISHED

4) ಕ್ರಿಶ್ಚಿಯನ್ ಮಿಷನರಿಗಳು ಜಗತ್ತಿನ ಎಲ್ಲೆಡೆ ಹೋಗಿ ಕ್ರೈಸ್ತ ರಿಲಿಜನ್‌ನ ಪ್ರಚಾರ ಕೈಗೊಂಡರು.

5) ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿ ಬೆಳವಣಿಗೆಯು ದೇಶೀಯರು ಮತ್ತು ವಿದೇಶಿಯರ ನಡುವೆ ವೈಮನಸ್ಸಿಗೆ ಕಾರಣವಾಯಿತು.

**ರಿಲಿಜನ್ ಸುಧಾರಣೆ**

16 ನೇ ಶತಮಾನದಲ್ಲಿ ಯುರೋಪ್‌ನಲ್ಲಿ ಉಂಟಾದ ಅತ್ಯಂತ ದೊಡ್ಡ ರಿಲಿಜನ್ ಚಳವಳಿಯೆಂದರೆ ರೋಮನ್ ಕ್ಯಾಥೋಲಿಕ್ ಚರ್ಚ್‌ನ ಏಕಸ್ವಾಮ್ಯವನ್ನು ಪ್ರಶ್ನಿಸಿ ನಡೆದ ಬಂಡಾಯವೇ ರಿಲಿಜನ್ ಸುಧಾರಣೆ. ಮಧ್ಯಯುಗದ ಸಂಸ್ಥೆಗಳಲ್ಲಿ ಚರ್ಚ್ ಬಹಳ ಪ್ರಧಾನವಾದುದಾಗಿತ್ತು.

ರಿಲಿಜನ್ ಸುಧಾರಣೆಯು ಹೊಸ ಯುಗದ ಉದಯವನ್ನು ಘೋಷಿಸಿತು. ಮಾರ್ಟಿನ್ ಲೂಥರನು ಆರಂಭಿಸಿದ ಈ ಚಳವಳಿಯು ರಿಲಿಜನ್ ಸುಧಾರಣೆ ಎಂಬ ಹೆಸರನ್ನು ಪಡೆಯಿತು. ಈ ಚಳವಳಿಯು ಕ್ರೈಸ್ತ ಮತದಲ್ಲಿ ಪ್ರೊಟೆಸ್ಟೆಂಟ್ ರಿಲಿಜನ್ ಎಂಬ ಹೆಸರನ್ನು ಪಡೆಯಿತು. ಈ ಚಳವಳಿಗೆ ಅನೇಕ ಅಂಶಗಳು ಕಾರಣವಾದವು.

1) ಅನೇಕ ಕ್ರೈಸ್ತ ಸನ್ಯಾಸಿಗಳು ಮತ್ತು ಪೋಪರು ತ್ಯಾಗ ಜೀವನವನ್ನು ನಡೆಸುವ ಬದಲಿಗೆ ಲೌಕಿಕ ಸುಖದಲ್ಲಿ ಮುಳುಗಿದರು. ಅನೇಕರು ನೀತಿಬಾಹಿರ ಕೃತ್ಯಗಳನ್ನು ನಡೆಸಿದರು. ಪೋಪರು ಧಾರ್ಮಿಕತೆಯನ್ನು ಸುಧಾರಿಸುವುದನ್ನು ಬಿಟ್ಟು ರಾಜಕೀಯದಲ್ಲಿ ಆಸಕ್ತಿ ವಹಿಸಿದರು. ಇಟಲಿಯ ಬೊಕಾಶಿಯೋ, ಹಾಲೆಂಡ್‌ನ ಇರಾಸ್‌ಮಸ್ ಮತ್ತು ಇಂಗ್ಲೆಂಡ್‌ನ ಜಾನ್ ವೈಕ್ಲಿಫ್ ಇಂಥಹ ಕೃತ್ಯಗಳನ್ನು ಖಂಡಿಸಿದರು.

2) ಪ್ರೀಸ್ಟ್ ವರ್ಗದವರಲ್ಲಿ ಎಲ್ಲರೂ ವಿದ್ವಾಂಸರಾಗಿರಲಿಲ್ಲ. ಅವರಿಗೆ ಚರ್ಚ್‌ನ ನಂಬಿಕೆ, ವಿಧಾನಗಳನ್ನು ಟೀಕಿಸುವವರ ವಿರುದ್ಧ ವಾದ ಮಾಡಿ ಗೆಲ್ಲುವ ಸಾಮರ್ಥ್ಯವಿರಲಿಲ್ಲ.

3) ಮಧ್ಯಯುಗದಲ್ಲಿ ಪೋಪರ ಮತ್ತು ಚಕ್ರವರ್ತಿಯ ನಡುವೆ ನಡೆದ ಕಲಹಗಳು ಚಕ್ರವರ್ತಿಯ ಸ್ವಾಭಿಮಾನ ಮತ್ತು ಗೌರವವನ್ನು ಕೆಣಕಿದವು.

4) ರಾಷ್ಟ್ರೀಯ ಪ್ರಭುತ್ವಗಳು ಬೆಳೆದು ಬಲವಾದುವು. ತಮ್ಮ ರಾಜ್ಯದ ಆಂತರಿಕ ವ್ಯವಹಾರದಲ್ಲಿ ರೋಮನ್ ಕ್ಯಾಥೋಲಿಕ್ ಚರ್ಚ್ ಅಥವಾ ಪೋಪ್‌ರ ಹಸ್ತಕ್ಷೇಪವನ್ನು ಇಷ್ಟಪಡಲಿಲ್ಲ.

5) ಪುನರುಜ್ಜೀವನದಿಂದ ಮೂಡಿದ ವೈಜ್ಞಾನಿಕ ದೃಷ್ಟಿ ಮತ್ತು ಕುತೂಹಲಗಳು ಯುರೋಪಿನ ಜನರಲ್ಲಿ ಇದನ್ನು ಧಾರ್ಮಿಕ ಸಮಸ್ಯೆಗಳಿಗೂ ಅನ್ವಯಿಸಬಹುದೆಂಬ ತೀರ್ಮಾನಕ್ಕೆ ಬರುವಂತೆ ಮಾಡಿದವು.

6) ಮೂಲ ಹಿಬ್ರೂ ಭಾಷೆಯಿಂದ ಬೈಬಲ್‌ನ್ನು ಇತರೆ ಭಾಷೆಗಳಿಗೆ ಭಾಷಾಂತರಿಸಿದ್ದುದನ್ನು ಚರ್ಚ್ ವಿರೋಧಿಸಿತು.

**ಮಾರ್ಟಿನ್ ಲೂಥರ್ : (1483 - 1546)**

ಮಾರ್ಟಿನ್ ಲೂಥರನು ಆರಂಭಿಸಿದ ಚಳವಳಿಯು **"ರಿಲಿಜನ್ ಸುಧಾರಣೆ"** ಎಂಬ ಹೆಸರನ್ನು ಪಡೆಯಿತು. ಮಾರ್ಟಿನ್ ಲೂಥರನು ಕ್ಯಾಥೋಲಿಕ್ ಚರ್ಚ್‌ನವರ ಬೋಧನೆಗಳನ್ನು ತಿರಸ್ಕರಿಸಿದನು. 1517 ರಲ್ಲಿ ಅವನು ಪಾಪಕ್ಷಮೆಯ ಪತ್ರಗಳನ್ನು ಮಾರುವುದರ ವಿರುದ್ಧ ಚರ್ಚಿನೊಡನೆ ವಿರೋಧವನ್ನು ಪ್ರಕಟಪಡಿಸಿದನು. ಜನತೆಯು ಮಾಡಿದ ಪಾಪಗಳಿಗೆ ಶಿಕ್ಷೆಯನ್ನು ಕಡಿಮೆ ಮಾಡುವ ಅಧಿಕಾರವು ಪೋಪರಿಗೆ ದೇವರಿಂದ ಕೊಡಲ್ಪಟ್ಟಿದೆ. ಯೇಸುಕ್ರಿಸ್ತ ಮತ್ತು ಪಾದ್ರಿಗಳು ಮಾಡಿದ ಒಳ್ಳೆಯ ಕಾರ್ಯಗಳಿಂದ ಇಂತಹ ಅಧಿಕಾರವನ್ನು ಅವರಿಗೆ ಕೊಡಲಾಗಿದೆ ಎಂಬುವುದು ಕ್ಯಾಥೋಲಿಕ್

© KTBS NOT TO BE REPUBLISHED

ಚರ್ಚ್‌ನವರ ಅಭಿಪ್ರಾಯವಾಗಿತ್ತು. ಈ ಬಗೆಯ ಪಾಪಕ್ಷಮೆಯನ್ನು ಪಡೆಯಲು ವ್ಯಕ್ತಿಯು ತಾನಾಗಿಯೇ ಒಳ್ಳೆಯ ಕಾರ್ಯವನ್ನು ಮಾಡಬೇಕಾಗಿತ್ತು. ಆದರೆ ಅನೇಕ ಸಂದರ್ಭಗಳಲ್ಲಿ ಹೀಗೆ ಮಾಡದೆ ಚರ್ಚಿಗೆ ಹಣ ಕೊಡುವ ದಾರಿಯನ್ನು ಹಿಡಿದು ಈ ಕ್ಷಮಾಪಣೆಯನ್ನು ಪಡೆಯುತ್ತಿದ್ದರು. ಪಾಪಕ್ಷಮೆಯ ಪತ್ರಗಳನ್ನು ಚರ್ಚ್‌ನವರಿಂದ ಅದರ ಮಾರಾಟವನ್ನು ಪ್ರಬಲವಾಗಿ ವಿರೋಧಿಸಿದನು. ಮಾರ್ಟಿನ್ ಲೂಥರನ ಅನುಯಾಯಿಗಳಿಗೆ **"ಪ್ರೊಟೆಸ್ಟೆಂಟ್"**ರೆಂದು ಹೆಸರಾಯಿತು. ಜರ್ಮನಿಯ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟು ಜನರು ಪ್ರೊಟೆಸ್ಟೆಂಟ್‌ರಾದರು.



ಮಾರ್ಟಿನ್ ಲೂಥರ್

ರಿಲಿಜನ್ ಸುಧಾರಣೆಯು ಯುರೋಪಿನಲ್ಲಿ ಬೇರೆ ಮಾರ್ಗವನ್ನು ಹಿಡಿಯಿತು ಹಾಗೂ ರಿಲಿಜಿಯಸ್ ವಾತಾವರಣವು ಕಲುಷಿತವಾಯಿತು. ಯುರೋಪಿನ ಅಧಿಕ ಸಂಖ್ಯೆಯ ಜನರು ತಮ್ಮ ಭಿನ್ನ ನಂಬಿಕೆಗಳಿಗಾಗಿ ಪ್ರಾಣ ತೆತ್ತರು. ಇಲ್ಲವೇ ಸೆರೆಮನೆಗೆ ಹಾಕಲಾಯಿತು ಅಥವಾ ಆಸ್ತಿಯ ಹಕ್ಕನ್ನು ಕಸಿದುಕೊಳ್ಳಲಾಯಿತು. ರೋಮನ್ ಕ್ಯಾಥೋಲಿಕ್‌ರು ತಮ್ಮ ಪ್ರಭಾವ ಹೆಚ್ಚಾಗಿದ್ದ ಕಡೆಗಳಲ್ಲಿ ಪ್ರೊಟೆಸ್ಟೆಂಟ್‌ರಿಗೆ ಕಿರುಕುಳ ಕೊಡುತ್ತಿದ್ದರು. ಪ್ರತಿಯಾಗಿ ಸುಧಾರಣೆಗೆ ಸರ್ಕಾರದ ಸಹಾಯ ದೊರೆತ ಕಡೆಗಳಲ್ಲಿ ಪ್ರಾಟೆಸ್ಟೆಂಟರು ಕ್ಯಾಥೋಲಿಕ್‌ರಿಗೆ ಕಿರುಕುಳ ಕೊಡುತ್ತಿದ್ದರು. ಮೂವತ್ತು ವರ್ಷಗಳ ಯುದ್ಧವೂ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟೆಂಟ್‌ರ ದ್ವೇಷ ಮತ್ತು ಹೋರಾಟಗಳ ಫಲವೇ ಆಗಿದೆ.

NOT TO BE REPUBLISHED
@KTBS

**ರಿಲಿಜನ್ ಸುಧಾರಣೆಯ ಪರಿಣಾಮಗಳು :**

1) ರಿಲಿಜನ್ ಸುಧಾರಣೆಯ ಪರಿಣಾಮವಾಗಿ ಕ್ರೈಸ್ತ ಪ್ರಪಂಚದ ಅಖಂಡತೆಗೆ ಪೆಟ್ಟು ಬಿದ್ದಿತು. ಕ್ರಿಶ್ಚಿಯಾನಿಟಿಯು ಮುಖ್ಯವಾಗಿ ಮೂರು ಶಾಖೆಗಳಾಗಿ ಒಡೆಯಿತು. ಅವು ಕ್ಯಾಥೋಲಿಕ್ ಚರ್ಚ್, ಆರ್ಥೋಡಾಕ್ಸ್ ಚರ್ಚ್ ಮತ್ತು ಪ್ರೊಟೆಸ್ಟೆಂಟ್ ಚರ್ಚ್.

2) ಯುರೋಪಿನ ಅನೇಕ ದೇಶಗಳ ರಾಜರುಗಳು ಪೋಪ್‌ನ ಹಿಡಿತದಿಂದ ಸ್ವತಂತ್ರರಾದರು.

3) ರಿಲಿಜನ್ ಸುಧಾರಣೆಯು ರಾಷ್ಟ್ರೀಯ ಪ್ರಭುತ್ವಗಳ ಉದಯಕ್ಕೆ ಕಾರಣವಾಯಿತು.

4) ಮುಟ್ಟುಗೋಲು ಹಾಕಿಕೊಂಡ ಚರ್ಚಿನ ಸಂಪತ್ತನ್ನು ಆರ್ಥಿಕ ಅಭಿವೃದ್ಧಿಗಾಗಿ ವಿನಿಯೋಗಿಸಲಾಯಿತು.

5) ರಾಷ್ಟ್ರೀಯ ಭಾವನೆಗಳು ಇನ್ನಷ್ಟು ಬಲವಾದವು ಹಾಗೂ ಯುರೋಪಿನ ರಾಜರುಗಳು ಧಾರ್ಮಿಕ ಸಹಿಷ್ಣುತೆಯನ್ನು ಅಳವಡಿಸಿಕೊಂಡರು.

6) ಈ ಚಳವಳಿಯಿಂದಾಗಿ ಸಾಹಿತ್ಯ ಕ್ಷೇತ್ರ ಬೆಳೆಯಿತು. ಪ್ರಾದೇಶಿಕ ಭಾಷೆಗಳು ಐರೋಪ್ಯರ ಮನಸ್ಸಿನ ಮೇಲೆ ಪ್ರಭಾವ ಬೀರಿದವು.

7) ಕ್ಯಾಥೋಲಿಕ್ ಚರ್ಚ್‌ನಲ್ಲೇ ಸುಧಾರಣೆಯಾಗಿ, ಅದೇ ಮುಂದೆ **"ಪ್ರತಿಸುಧಾರಣೆ"** ಚಳವಳಿಯಾಯಿತು.

**ಪ್ರತಿಸುಧಾರಣಾ ಚಳವಳಿ**

ಪ್ರೊಟೆಸ್ಟೆಂಟ್ ಪಂಥ ಶೀಘ್ರವಾಗಿ ಪ್ರಭಾವ ಪಡೆದು ಎಲ್ಲಾ ಕಡೆ ಹರಡಲಾರಂಭಿಸಿತು. ಇದರಿಂದ ಎಚ್ಚೆತ್ತ ಕ್ಯಾಥೋಲಿಕರು ತಮ್ಮ ಪಾರಮ್ಯವನ್ನು ಕಾಪಾಡಿಕೊಳ್ಳಲು ಸುಧಾರಣೆಯ ಅಗತ್ಯವನ್ನು ತಮ್ಮಲ್ಲಿಯೇ ಕಂಡುಕೊಂಡರು. ಪ್ರೊಟೆಸ್ಟೆಂಟ್‌ರ ವಾದವು ಜನರ ಗಮನವನ್ನು ಪರಿಣಾಮಕಾರಿಯಾಗಿ ಸೆಳೆಯಿತು. ಈ

ಘಟನೆಯು ರೋಮನ್ ಚರ್ಚ್‌ನ ಅಸ್ತಿತ್ವಕ್ಕೂ, ಉಳಿಯುವಿಕೆಗೂ ದೊಡ್ಡ ಆಘಾತವನ್ನುಂಟುಮಾಡಿತು. ಚರ್ಚ್‌ಗಳ ಹಿತರಕ್ಷಣೆಗಾಗಿ ಏನನ್ನಾದರೂ ಅವಶ್ಯಕವಾಗಿ ಮಾಡಲೇಬೇಕಾಯಿತು. ಅಂತಹ ಅವಶ್ಯಕತೆಯೇ ಪ್ರತಿಸುಧಾರಣೆ ಎಂಬ ಚಳವಳಿಗೆ ಜನ್ಮ ನೀಡಿತು. ಪ್ರೊಟೆಸ್ಟೆಂಟ್‌ರ ಅಭಿವೃದ್ಧಿಯನ್ನು ತಡೆದು ರೋಮ್‌ನ ಚರ್ಚ್‌ಗಳಿಗಾಗಿದ್ದ ಹಾನಿಯನ್ನು ಸಾಕಷ್ಟು ಸರಿಪಡಿಸಬೇಕೆಂಬುದೇ ಈ ಚಳವಳಿಯ ಉದ್ದೇಶವಾಗಿತ್ತು. ಆದುದರಿಂದ ಚರ್ಚ್‌ಗಳಲ್ಲಿ ಆಂತರಿಕವಾದ ಸುಧಾರಣೆಗಳನ್ನು ಮಾಡಿ ಎಲ್ಲಾ ತೊಂದರೆಗಳಿಗೂ ಪರಿಹಾರವನ್ನು ಹುಡುಕುವ ಪ್ರಯತ್ನ ನಡೆಯಿತು. ಅಧಿಕಾರದ ದುರುಪಯೋಗವನ್ನು ತಡೆಗಟ್ಟಲಾಯಿತು. ಚರ್ಚ್‌ಗಳ ಆಡಳಿತ ಕ್ರಮವನ್ನು ಸರಿಪಡಿಸಲಾಯಿತು.


ಈ ಪ್ರತಿ ಸುಧಾರಣಾ ಚಳವಳಿಯ ನಾಯಕ ಒಬ್ಬ ಸ್ಪ್ಯಾನಿಷ್ ಶ್ರೀಮಂತ, ಇಗ್ನೇಷಿಯಸ್ ಲೋಯಾಲ. ಇವನು 1540 ರಲ್ಲಿ ಜೀಸಸ್ ಸೊಸೈಟಿಯನ್ನು ಹುಟ್ಟುಹಾಕಿದನು. ಇವರ ಪ್ರಮುಖ ಗುರಿ ರೋಮನ್ ಕ್ಯಾಥೋಲಿಕ್ ಚರ್ಚಿಗೆ ಅಧಿಕಾರವನ್ನು ಹಾಗೂ ಕಳೆದುಹೋಗಿದ್ದ ಅದರ ವೈಭವವನ್ನು ಪುನಃ ಸ್ಥಾಪಿಸುವುದಾಗಿತ್ತು. ಈ ಸಂಘದ ಅನುಯಾಯಿಗಳಿಗೆ ಒಳ್ಳೆಯ ಶಿಕ್ಷಣ ಹಾಗೂ ತರಬೇತಿ ನೀಡಿ ಸಮಾಜದ ಸೇವೆಗೆ ತಮ್ಮ ಜೀವನವನ್ನು ಮುಡುಪಾಗಿಸುವುದೇ ಉದ್ದೇಶವಾಗಿತ್ತು.

ಚರ್ಚ್‌ನ ನಿಯಮ ಉಲ್ಲಂಘಿಸುವವರನ್ನು ವಿಚಾರಣೆ ನಡೆಸುವ ಹಾಗೂ ಶಿಕ್ಷಿಸುವ ಉದ್ದೇಶದ **"ಇಂಕ್ವಿಜಿಶನ್"** ಎಂಬ ಧಾರ್ಮಿಕ ವಿಚಾರಣಾ ಪದ್ಧತಿ 1542 ರಿಂದ ಜಾರಿಗೆ ಬಂದಿತು. ಅಲ್ಲದೆ ಇದು ಕ್ಯಾಥೋಲಿಕರು ಪ್ರೊಟೆಸ್ಟೆಂಟ್ ಮತ ಸ್ವೀಕರಿಸುವುದನ್ನು ತಪ್ಪಿಸಿತು.

© KTBS NOT TO BE REPUBLISHED

## ಕೈಗಾರಿಕಾ ಕ್ರಾಂತಿ

ವಸಾಹತುಗಳ ಸ್ಥಾಪನೆಯಿಂದ ವ್ಯಾಪಾರ ಹೆಚ್ಚಿ, ಸಿದ್ಧಪಡಿಸಿದ ವಸ್ತುಗಳಿಗೆ ಬೇಡಿಕೆ ಹೆಚ್ಚಾಯಿತು. ಹಿಂದಿನಿಂದ ನಡೆದು ಬಂದ ಉತ್ಪಾದನಾ ಕ್ರಮಗಳು ಹೆಚ್ಚಿನ ಬೇಡಿಕೆಯನ್ನು ಈಡೇರಿಸಲು ಶಕ್ತವಾಗಿರಲಿಲ್ಲ. ಇದೇ ವೇಳೆಗೆ ಬೌದ್ಧಿಕ ಜಾಗೃತಿ ಉಂಟಾಯಿತಲ್ಲದೆ, ಲಾಭಗಳಿಕೆಯ ನಿರೀಕ್ಷೆಯೂ ಹೆಚ್ಚಾಯಿತು. ಈ ಅಂಶಗಳಿಂದ ಕೈಗಾರಿಕೆಯಲ್ಲಿ ನಿರತರಾಗಿದ್ದ ಅನೇಕರನ್ನು ಉತ್ಪಾದನಾ ವಿಧಾನಗಳನ್ನು ಉತ್ತಮ ಪಡಿಸಲು ಪ್ರೇರೇಪಿಸಿದರು. 18ನೇ ಶತಮಾನದ ಉತ್ತರಾರ್ಧದಲ್ಲಿ ಹೊಸ ಹೊಸ ವಿಧಾನಗಳು ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಬದಲಾವಣೆ ಉಂಟು ಮಾಡಿದವು. 1760 ರಿಂದ 1830 ರವರೆಗೆ ಕೈಗಾರಿಕಾ ಕ್ಷೇತ್ರದಲ್ಲಿ ಉಂಟಾದ ಅನೇಕ ಬದಲಾವಣೆಗಳಿಗೆ 'ಕೈಗಾರಿಕಾ ಕ್ರಾಂತಿ' ಎಂದು ಹೆಸರು ಬಂದಿತು.



ಸ್ಪಿನ್ನಿಂಗ್‌ಜೆನ್ನಿ ಎಂಬ ಯಂತ್ರ

ಇದು ಪ್ರಾರಂಭವಾದದ್ದು ಇಂಗ್ಲೆಂಡಿನಲ್ಲಿ, ಅನಂತರ ಅದು ಪ್ರಪಂಚದ ಇತರೆ ದೇಶಗಳಿಗೆ ಹರಡಿತು. ಕ್ರಾಂತಿ ಎಂದರೆ ಸಾಮಾನ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಆಗುವಂತಹ ಶೀಘ್ರಗತಿಯ ಮತ್ತು ಹಿಂಸಾತ್ಮಕವಾದ ಭಾರಿ ಬದಲಾವಣೆ. ಆದರೆ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯಲ್ಲಿ ಆ ರೀತಿಯ ಶೀಘ್ರಗತಿಯ ಮತ್ತು ಹಿಂಸಾತ್ಮಕ ಬದಲಾವಣೆಗಳೇನೂ ಇರಲಿಲ್ಲ.

1760ಕ್ಕೆ ಮುಂಚೆ ಇಂಗ್ಲೆಂಡ್ ಕೃಷಿ ಪ್ರಧಾನವಾದ ದೇಶವಾಗಿದ್ದರೂ ಉಣ್ಣೆ ಬಟ್ಟೆಗಳು ಮತ್ತು ಹತ್ತಿ ಬಟ್ಟೆಗಳ ಕೈಗಾರಿಕೆಗಳು

ಅಭಿವೃದ್ಧಿ ಹೊಂದಿದ್ದವು. ವ್ಯಾಪಾರ ಹೆಚ್ಚಿದಂತೆಲ್ಲ ಸಿದ್ಧಪಡಿಸಿದ ವಸ್ತುಗಳಿಗೆ ಬೇಡಿಕೆ ಹೆಚ್ಚಿತು. ಆದರೆ ಬೇಡಿಕೆಗೆ ಸರಿಹೊಂದುವಂತಹ ಉತ್ಪಾದನೆ ಆಗುತ್ತಿರಲಿಲ್ಲ. ಕುಶಲ ಕರ್ಮಿಗಳು ಕಚ್ಚಾ ವಸ್ತುಗಳ ಮೇಲೆ ಹೆಚ್ಚು ಬಂಡವಾಳ ಹೂಡಿ ಉತ್ಪಾದನಾ ವಿಧಾನವನ್ನು ತ್ವರಿತಗೊಳಿಸುವಂತಿರಲಿಲ್ಲ. ಆದ್ದರಿಂದ ಕೆಲವು ಶ್ರೀಮಂತರು ಈ ಕುಶಲ ಕರ್ಮಿಗಳನ್ನು ಕೂಲಿಗೆ ನೇಮಿಸಿಕೊಂಡು ಅವರಿಗೆ ಕಚ್ಚಾವಸ್ತುಗಳನ್ನು ಒದಗಿಸಿ ಅವರು ಕಾರ್ಖಾನೆಗಳೆಂಬ ದೊಡ್ಡ ಕಟ್ಟಡಗಳಲ್ಲಿ ಕೆಲಸ ಮಾಡುವಂತೆ ಮಾಡಿದರು. ಇದೇ ಮುಂದೆ ಕಾರ್ಖಾನೆ ಪದ್ಧತಿಗೆ ನಾಂದಿಯಾಯಿತು. ಕಾರ್ಖಾನೆ ಮಾಲೀಕರು ಇಲ್ಲಿ ತಯಾರಾದ ವಸ್ತುಗಳನ್ನು ಮಾರಾಟ ಮಾಡಿ ಅಧಿಕ ಲಾಭ ಗಳಿಸಿದರೂ ಕುಶಲ ಕರ್ಮಿಗಳು ಹಾಗೂ ಇತರೆ ಕಾರ್ಮಿಕರು ಬಡವರಾಗಿಯೇ ಮುಂದುವರಿದರು.

1760 ರಿಂದ 1830 ರ ಅವಧಿಯಲ್ಲಿ ಇಂಗ್ಲೆಂಡಿನಲ್ಲಿ ಬಟ್ಟೆ ತಯಾರಿಕಾ ಕೈಗಾರಿಕೆಯಲ್ಲಿ ಮಹತ್ತರ ಬದಲಾವಣೆ ಉಂಟಾಯಿತು. 1764ರಲ್ಲಿ ಜೇಮ್ಸ್ ಹಾರ್‌ಗ್ರೀವ್ಸ್ ಎಂಬುವನು ಸ್ಪಿನ್ನಿಂಗ್ ಜೆನ್ನಿ ಎಂಬ ನೂಲುವ ಯಂತ್ರವನ್ನು ಕಂಡುಹಿಡಿದನು. ಕೆಲವು ವರ್ಷಗಳ ನಂತರ ರಿಚರ್ಡ್ ಆರ್ಕ್‌ರೈಟ್ ಎಂಬುವನು ಸ್ಪಿನ್ನಿಂಗ್ ಜೆನ್ನಿಯನ್ನು ಉತ್ತಮಪಡಿಸಿದನು ಹಾಗೂ 1769 ರಲ್ಲಿ ಅವನು ನೀರಿನ ಚೌಕಟ್ಟನ್ನು ಕಂಡು ಹಿಡಿದನು.

**ಚರ್ಚಿಸಿ :**

"ಅಂದಿನ ಕೈಗಾರಿಕಾ ಕ್ರಾಂತಿಯು ಇಂದಿನ ಆರ್ಥಿಕಾಭಿವೃದ್ದಿಗೆ ಪೂರಕ" ಈ ಬಗ್ಗೆ ಚರ್ಚಿಸಿ.

1779ರಲ್ಲಿ ಸ್ಯಾಮ್ಯುಯಲ್ ಕ್ಯಾಂಪ್ಟನ್ ಎಂಬುವನು 'ಮ್ಯೂಲ್' ಯಂತ್ರವನ್ನು ಕಂಡುಹಿಡಿದನು. ಜಾನ್‌ಕೇ ಎಂಬುವನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುವ ಲಾಳವನ್ನು ಕಂಡು ಹಿಡಿದನು. 1785ರಲ್ಲಿ ಎಡ್ಮಂಡ್ ಕಾರ್ಟ್‌ರೈಟ್ ಎಂಬುವನು ಪವರ್‌ಲೂಮ್ ಎಂಬ ನೇಯ್ಗೆ ಯಂತ್ರವನ್ನು ಕಂಡುಹಿಡಿದನು. ಇದರಿಂದ ಹೆಚ್ಚು ಬಟ್ಟೆಯನ್ನು ಅಲ್ಪ ಕಾಲದಲ್ಲಿ ಉತ್ಪಾದಿಸುವುದು ಸಾಧ್ಯವಾಯಿತು.

1793 ರಲ್ಲಿ ಎಲಿ ವಿಟ್ನಿ ಎಂಬುವನು ಕಾಟನ್‌ಜಿನ್ ಎಂಬ ಯಂತ್ರವನ್ನು ಕಂಡುಹಿಡಿದನು. ಈ ಎಲ್ಲ ಆವಿಷ್ಕಾರಗಳು ನೂಲುವ, ನೇಯುವ ಮತ್ತು ಹತ್ತಿಯಿಂದ ಬೀಜವನ್ನು ಬೇರ್ಪಡಿಸುವುದಲ್ಲದೇ ತೀವ್ರಗತಿಯ ಉತ್ಪಾದನೆಗೆ ಕಾರಣವಾದವು.

ಆವಿಯ ಯಂತ್ರದ ಆವಿಷ್ಕಾರ ಕೈಗಾರಿಕಾ ಕ್ರಾಂತಿಯಲ್ಲಿ ಮಹತ್ತರವಾದ ಮೈಲಿಗಲ್ಲಾಯಿತು. 1705 ರಲ್ಲಿ ಥಾಮಸ್ ನ್ಯೂಕೋಮೆನ್ಸ್‌ನು ಒಂದು ಆವಿಯ ಯಂತ್ರವನ್ನು ಕಂಡುಹಿಡಿದನು. 1774 ರಲ್ಲಿ ಜೇಮ್ಸ್‌ವ್ಯಾಟ್ ಎಂಬುವನು ಈ ಆವಿಯ ಯಂತ್ರವನ್ನು ಉತ್ತಮಪಡಿಸಿದನು. 1801 ರಲ್ಲಿ ರಿಚರ್ಡ್ ಟ್ರೆವೆಥಿಕ್ ಎಂಬುವನು ವ್ಯಾಟ್‌ನ ಹಬೆ ಯಂತ್ರವನ್ನು ರೈಲು ಬಂಡಿಗೆ ಜೋಡಿಸಿ ರಸ್ತೆಯ ಮೇಲೆ ಚಲಿಸುವಂತೆ ಮಾಡಿದನು. ಆನಂತರ ಹಳಿಗಳ ಮೇಲೆ ಚಲಿಸುವ ಒಂದು ಸ್ವಯಂಚಾಲಿತ ಆವಿ ಎಂಜಿನನ್ನು ಕಂಡುಹಿಡಿದನು. ಜಾರ್ಜ್ ಸ್ಟೀವನ್‌ಸನ್‌ನು 1815 ರಲ್ಲಿ. ಸಾಮಾನು ಸಾಗಣೆಯ ರೈಲು ಬಂಡಿಗಳನ್ನು ಕಂಡುಹಿಡಿದನು. ಇಂಗ್ಲೆಂಡಿನ ಸ್ಟಾಕ್‌ಟನ್ ಮತ್ತು ಡಾರ್ಲಿಂಗ್‌ಟನ್ ಪಟ್ಟಣಗಳ ನಡುವೆ ಪ್ರಯಾಣಿಕರನ್ನು ಸಾಗಿಸುವ ಒಂದು ರೈಲನ್ನು ಮತ್ತು ಲಿವರ್‌ಪೂಲ್ ಮತ್ತು ಮ್ಯಾಂಚೆಸ್ಟರ್‌ಗಳ ನಡುವೆ ಕೈಗಾರಿಕಾ ಉತ್ಪನ್ನಗಳ ಸಾಗಾಣಿಕೆಗಾಗಿಯೇ ರೈಲು ಮಾರ್ಗವನ್ನು ನಿರ್ಮಿಸಲಾಯಿತು.

1801 ರಲ್ಲಿ ವಿಲಿಯಂ ಸಿಮಿಂಗ್ಟನ್ ಎಂಬ ಅಮೇರಿಕನ್ನನು ವಾಡ್ಸನ ಒಂದು ಎಂಜಿನನ್ನು ಒಂದು ದೋಣಿಗೆ ಜೋಡಿಸಿ ಅದು ಚಲಿಸುವಂತೆ ಮಾಡಿದನು. ರಾಬರ್ಟ್‌ಫುಲ್ಟನ್ ಎಂಬ ಮತ್ತೊಬ್ಬ ಅಮೇರಿಕದವನು ಮತ್ತೊಂದು ಆವಿಯ ಹಡಗನ್ನು ಕಂಡುಹಿಡಿದನು.

©KTBS NOT TO BE REPUBLISHED

**ಪರಿಣಾಮಗಳು :** ಕೈಗಾರಿಕೆಗಳಲ್ಲಿ ಅನೇಕ ಬದಲಾವಣೆಗಳುಂಟಾಗಿ ಯಂತ್ರಗಳ ಬೇಡಿಕೆ ಹೆಚ್ಚಾಯಿತು. ಕೈಗಾರಿಕಾ ಕ್ರಾಂತಿಯಿಂದ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳಾದವು. ಹೊಸ ಕೈಗಾರಿಕೆಗಳು ಹುಟ್ಟಿಕೊಂಡವು. ಉತ್ಪಾದನಾ ವೆಚ್ಚ ಕಡಿಮೆ ಆಗಿ ಜೀವನಾವಶ್ಯಕ ವಸ್ತುಗಳು ಅಗ್ಗ ಬೆಲೆಗೆ ದೊರೆವಂತಾದವು. ಗೃಹಕೈಗಾರಿಕೆಗಳು ಬೃಹತ್ ಪ್ರಮಾಣದ ಕೈಗಾರಿಕೆಗಳೊಡನೆ ಸ್ಪರ್ಧಿಸಲಾಗದೆ ನಾಶವಾದವು. ಶ್ರೀಮಂತರು ಶ್ರೀಮಂತರಾದರು ಹಾಗೂ ಬಡವರು ಬಡವರಾಗೇ ಮುಂದುವರಿದರು. ಹಳ್ಳಿಗಳಿಂದ ಪಟ್ಟಣಗಳಿಗೆ ಜನರು ವಲಸೆ ಬರಬೇಕಾಯಿತು. ಸಮಾಜದಲ್ಲಿ ಬಂಡವಾಳಶಾಹಿ ವರ್ಗವು ಉದಯವಾಗಿ ಮಾಲೀಕರು ಮತ್ತು ಕೆಲಸಗಾರರ ನಡುವೆ ಬಾಂಧವ್ಯ ಹದಗೆಟ್ಟು ವರ್ಗ ಸಂಘರ್ಷಣೆ ಪ್ರಾರಂಭವಾಯಿತು.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ.**

1. ರಿನೈಜಾನ್ಸ್ ಎಂದರೆ _________ .
2. ಪುನರುಜ್ಜೀವನ ಜನಕ ಎಂದು _________ ನನ್ನು ಕರೆಯಲಾಗಿದೆ.
3. ಮಾರ್ಟಿನ್ ಲೂಥರ್‌ನ ಅನುಯಾಯಿಗಳು ________ .
4. ಪ್ರತಿ ಸುಧಾರಣಾ ಚಳವಳಿಯ ನಾಯಕ ________ .
5. ಸ್ಪಿನ್ನಿಂಗ್‌ಜೆನ್ನಿ ಯಂತ್ರವನ್ನು ಕಂಡು ಹಿಡಿದವನು ________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ರಿಲಿಜನ್ ಸುಧಾರಣೆಯ ಪರಿಣಾಮಗಳಾವುವು?
2. ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳನ್ನು ಬರೆಯಿರಿ.
3. ಲಿಯೋನಾರ್ಡ – ಡ– ವಿಂಚಿಯ ಮುಖ್ಯ ವರ್ಣ ಚಿತ್ರಗಳಾವುವು?
4. ಪುನರುಜ್ಜೀವನ ಕಾಲದಲ್ಲಿ ಸಾಹಿತ್ಯ ಬೆಳವಣಿಗೆಯನ್ನು ಉದಾಹರಣೆ ಸಹಿತ ವಿವರಿಸಿ.
5. ಕೈಗಾರಿಕಾ ಕ್ರಾಂತಿಯ ಪರಿಣಾಮಗಳನ್ನು ತಿಳಿಸಿ.

**III. ಚಟುವಟಿಕೆಗಳು :**

1. ಪುನರುಜ್ಜೀವನ ಕಾಲದ ವಿಜ್ಞಾನಿಗಳ ಬಗ್ಗೆ ನಿಮ್ಮ ಶಿಕ್ಷಕರಿಂದ ತಿಳಿದುಕೊಳ್ಳಿ.
2. ಕೈಗಾರಿಕಾ ಕ್ರಾಂತಿಯಲ್ಲಿ ಕಂಡು ಹಿಡಿದ ಯಂತ್ರಗಳ ಚಿತ್ರಗಳನ್ನು ಸಂಗ್ರಹಿಸಿ.

**IV. ಯೋಜನೆಗಳು :**

1. ಪುನರುಜ್ಜೀವನ ಕಾಲದ ಕಲಾಕಾರರು – ಅವರುಗಳ ರಚನೆಗಳನ್ನು ಸಂಗ್ರಹಿಸಿ ಒಂದು ಯೋಜನೆ ತಯಾರಿಸಿ.
2. ವಿಜ್ಞಾನಿಗಳು ಮತ್ತು ಅವರ ಸಂಶೋಧನೆಗಳನ್ನು ಪಟ್ಟಿ ಮಾಡಿ.
3. ನಿಮ್ಮ ಶಾಲಾ ಕಲಾ ಶಿಕ್ಷಕರೊಂದಿಗೆ ಚರ್ಚಿಸಿ ಈಗಿನ ವಿವಿಧ ಕಲಾಕಾರರ ಜೀವನ ಚರಿತ್ರೆಯನ್ನು ಸಂಗ್ರಹಿಸಿ.
4. ಯುರೋಪ್‌ನ ವಿಜ್ಞಾನಿಗಳ ಪೂರ್ವದಲ್ಲಿದ್ದ ಭಾರತದ ವಿಜ್ಞಾನಿಗಳ ಹೆಸರು ಹಾಗೂ ಸಂಶೋಧನೆಗಳನ್ನು ಪಟ್ಟಿಮಾಡಿ.

*****

© KTBS NOT TO BE REPUBLISHED

N3B7G5

# ಅಧ್ಯಾಯ – 20

# ಕ್ರಾಂತಿ ಹಾಗೂ ರಾಷ್ಟ್ರ ಪ್ರಭುತ್ವಗಳ ಉದಯ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ರಾಷ್ಟ್ರೀಯ ಪ್ರಭುತ್ವಗಳ ಉದಯ ಮತ್ತು ಬೆಳವಣಿಗೆ
- ಅಮೆರಿಕ ಸ್ವಾತಂತ್ರ ಸಂಗ್ರಮಕ್ಕೆ ಕಾರಣಗಳು ಮತ್ತು ಪರಿಣಾಮಗಳು
- ಫ್ರಾನ್ಸಿನ ಮಹಾಕ್ರಾಂತಿಗೆ ಕಾರಣಗಳು
- ಇಟಲಿ ಮತ್ತು ಜರ್ಮನಿಯ ಏಕೀಕರಣ

ಆಧುನಿಕ ಯುಗದ ಆರಂಭವನ್ನು ಸೂಚಿಸುವ ಬಹುಮುಖ್ಯ ಅಂಶವೆಂದರೆ ರಾಷ್ಟ್ರೀಯ ಪ್ರಭುತ್ವಗಳ ಉದಯ. ಸಾಮಾನ್ಯವಾಗಿ 15, 16 ಮತ್ತು 17ನೇಯ ಶತಮಾನಗಳಲ್ಲಿ ತಲೆಯೆತ್ತಿದ ರಾಜ್ಯಗಳ ರಚನೆಗೆ ತರ್ಕಬದ್ಧವಾದ ಆಧಾರವಿರಲಿಲ್ಲ. ಅವು ಚಕ್ರಾಧಿಪತ್ಯದಿಂದ ಹಿಡಿದು ನಗರ ರಾಜ್ಯಗಳವರೆಗೆ ವೈವಿಧ್ಯವನ್ನು ಹೊಂದಿದ್ದವು. ಆ ರಾಜ್ಯಗಳಲ್ಲಿ ವಾಸಿಸುತ್ತಿದ್ದ ಜನರು ಒಂದೇ ಬಗೆಯವರಾಗಿರಲಿಲ್ಲ. ಅವರು ಬೇರೆ ಬೇರೆ ರಾಷ್ಟ್ರತ್ವವನ್ನು ಪಡೆದವರಾಗಿದ್ದರು. ಬೇರೆ ಬೇರೆ ಭಾಷೆ ಮತ್ತು ಭಿನ್ನ ಭಿನ್ನ ಸಂಸ್ಕೃತಿಗಳನ್ನು ಹೊಂದಿದ್ದರು.

NOT TO BE REPUBLISHED
@KTBS

ಊಳಿಗಮಾನ್ಯ ಪದ್ಧತಿಯ ಅವನತಿಯಿಂದ ಉಂಬಳಿ ಜಮೀನುದಾರರ ರಾಜಕೀಯ ಶಕ್ತಿಯೂ ಕುಂದಿತು. ಇದರಿಂದ ಯುರೋಪಿನ ಅನೇಕ ರಾಜರು ಉಂಬಳಿ ಜಮೀನುದಾರರ ಮೇಲಿದ್ದ ತಮ್ಮ ಅವಲಂಬನೆಯನ್ನು ಕಡಿಮೆ ಮಾಡಿಕೊಂಡು ಎಲ್ಲಾ ಅಧಿಕಾರವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ಅನೇಕ ರಾಜರುಗಳು ದೈವದತ್ತಾಧಿಕಾರ **(Divine Right)**ದಲ್ಲಿ ನಂಬಿಕೆ ಇಟ್ಟಿದ್ದು ಪ್ರಜೆಗಳಿಗೆ ಉತ್ತರಿಸಬೇಕಿಲ್ಲವೆಂದು ತಿಳಿದಿದ್ದರು.

ಮಧ್ಯಮ ವರ್ಗವು ತನ್ನ ಹಿತದೃಷ್ಟಿಯಿಂದ ರಾಜರುಗಳಿಗೆ ಬೆಂಬಲ ನೀಡಿತು ಮತ್ತು ರಾಷ್ಟ್ರೀಯ ಪ್ರಭುತ್ವಗಳ ಉದಯ ಮತ್ತು ಬೆಳವಣಿಗೆಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿತ್ತು. ಅತಿ ಪ್ರಬಲವಾದ ರಾಷ್ಟ್ರೀಯ ಭಾವನೆ ಅಥವಾ ದೇಶಪ್ರೇಮ ತನ್ನದೇ ಆದ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳನ್ನು ಹೊಂದಿದ್ದಿತು. ಈ ರಾಷ್ಟ್ರಗಳು ಊಳಿಗಮಾನ್ಯ ಕಾಲದ ಅನಾಯಕತ್ವವನ್ನು ಅಂತ್ಯಗೊಳಿಸಿದವು. ಅವು ಒಂದೇ ಬಗೆಯ ಸಂಸ್ಕೃತಿಯನ್ನು ಹೊಂದಿದ್ದ ಜನರನ್ನು ಒಬ್ಬ ದೊರೆಯ ಆಳ್ವಿಕೆಯಲ್ಲಿ ಒಟ್ಟುಗೂಡುವಂತೆ ಮಾಡಿದವು.

ರಾಷ್ಟ್ರ–ರಾಷ್ಟ್ರಗಳ ನಡುವೆ ಘರ್ಷಣೆ ಮತ್ತು ಪೈಪೋಟಿ ಪ್ರಾರಂಭವಾಯಿತು. ಅಮೆರಿಕ ಮತ್ತು ಏಷ್ಯಾ ಖಂಡಗಳಲ್ಲಿ ವ್ಯಾಪಾರ ಮತ್ತು ವಸಾಹತುಗಳ ಹತೋಟಿಗಾಗಿ ಘರ್ಷಣೆ ಮತ್ತು ಯುದ್ಧಗಳಿಗೆ ಅವಕಾಶ ಮಾಡಿಕೊಟ್ಟಿತು.

**ಉತ್ತರ ಅಮೇರಿಕಾದ 13 ಇಂಗ್ಲಿಷ್ ವಸಾಹತುಗಳು**

1) ನ್ಯೂ ಹ್ಯಾಂಪ್‌ಷೈರ್
2) ನ್ಯೂಯಾರ್ಕ್
3) ಪೆನ್ಸಿಲ್ವೇನಿಯಾ
4) ಮಸ್ಸಾಚುಸೆಟ್ಸ್
5) ರೋಡ್ಸ್ ಐಲಂಡ್
6) ಕನೇಕ್ಟಿಕಟ್
7) ನ್ಯೂಜೆರ್ಸಿ
8) ದಿಲಾವೇರ್
9) ಮೇರಿಲ್ಯಾಂಡ್
10) ವರ್ಜೀನಿಯ
11) ಉತ್ತರ ಕೆರೋಲಿನ
12) ದಕ್ಷಿಣ ಕೆರೋಲಿನ
13) ಜಾರ್ಜಿಯ

## ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮ

ಅಮೆರಿಕ ಖಂಡವನ್ನು ಕಂಡುಹಿಡಿದ ನಂತರ ಯುರೋಪಿನ ಅನೇಕ ದೇಶಗಳು ಅಲ್ಲಿ ವಸಾಹತುಗಳನ್ನು ಸ್ಥಾಪಿಸಲು ಪ್ರಾರಂಭಿಸಿದವು. ಉತ್ತರ ಅಮೆರಿಕದಲ್ಲಿ ವಸಾಹತುಗಳನ್ನು ಸ್ಥಾಪಿಸಿದ ದೇಶಗಳಲ್ಲಿ ಫ್ರಾನ್ಸ್, ಸ್ಪೈನ್, ಹಾಲೆಂಡ್ ಮತ್ತು ಇಂಗ್ಲೆಂಡ್ ಮುಖ್ಯವಾದವು. ಉತ್ತರ ಅಮೆರಿಕದ ಅಟ್ಲಾಂಟಿಕ್ ತೀರದ ಉದ್ದಕ್ಕೂ ಇಂಗ್ಲೆಂಡಿನ ಹದಿಮೂರು ವಸಾಹತುಗಳು ಸ್ಥಾಪನೆಗೊಂಡವು. ಇವುಗಳನ್ನು "ಹೊಸ ಇಂಗ್ಲಿಷ್ ವಸಾಹತುಗಳು" ಎಂದು ಕರೆಯಲಾಗಿತ್ತು. ಉತ್ತರ ಅಮೆರಿಕಾದಲ್ಲಿ ವಸಾಹತುಗಳ ಸ್ಥಾಪನೆಗೆ ಫ್ರಾನ್ಸ್ ಮತ್ತು ಇಂಗ್ಲೆಂಡ್ ದೇಶಗಳು ಮುಖ್ಯ ಸ್ಪರ್ಧಿಗಳಾಗಿದ್ದವು. ಸಂಪೂರ್ಣ ಸ್ವಾತಂತ್ರ್ಯದ ಹೆಬ್ಬಯಕೆಯು ಅಮೆರಿಕಾದ ವಸಾಹತುಗಳು ಇಂಗ್ಲೆಂಡಿನ ವಿರುದ್ಧ ದಂಗೆ ಏಳುವಂತೆ ಮಾಡಿತು.

**ಕಾರಣಗಳು :** ವಸಾಹತುಗಳ ಬಗ್ಗೆ ಮಾತೃದೇಶದ ಧೋರಣೆ ಮತ್ತು ವಸಾಹತುಗಳ ಸ್ವಾತಂತ್ರ್ಯ ಪ್ರೇಮ, ಸಪ್ತವಾರ್ಷಿಕ ಯುದ್ಧದ ಪರಿಣಾಮಗಳು, ನೌಕಾ ಕಾಯಿದೆಗಳು, ಥಾಮಸ್ ಫೈನ್, ಜಾನ್ ಆಡಮ್ಸ್, ಸ್ಯಾಮುಯಲ್ ಆಡಮ್ಸ್, ಜಾನ್ ಎಡ್ವರ್ಡ್ ಕೋಕ್ ಮತ್ತು ಬೆಂಜಮಿನ್ ಫ್ರಾಂಕ್‌ಲಿನ್ ಮುಂತಾದ ಬರಹಗಾರರ ಪ್ರಭಾವ, ಕ್ವಿಬೆಕ್ ಕಾಯಿದೆ, ಟೌನ್‌ಶೆಂಡ್ ತೆರಿಗೆಗಳು ಮತ್ತು ಬಾಸ್ಟನ್ ಚಹಾಕೂಟ ಮುಂತಾದ ಕಾರಣಗಳಿಂದಾಗಿ ಅಮೆರಿಕದಲ್ಲಿ ಕ್ರಾಂತಿ ಉಂಟಾಯಿತು.

© KTBS NOT TO BE REPUBLISHED


**ನಿಮಗಿದು ತಿಳಿದಿರಲಿ :**

**ಸಪ್ತ ವಾರ್ಷಿಕ ಯುದ್ಧ (1756 – 63)** ವು ಫ್ರಾನ್ಸ್ ಮತ್ತು ಇಂಗ್ಲೆಂಡ್ ನಡುವೆ ನಡೆಯಿತು. ನೌಕಾ ಕಾಯಿದೆಯು 1760ರಲ್ಲಿ ಜಾರಿಗೊಂಡಿತು. ಇಂಗ್ಲೆಂಡ್ ವಸಾಹತು ಸಮುದ್ರ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಅನುಭವಿಸಿತು. 1764ರಲ್ಲಿ ಜಾರಿಗೆ ತಂದ ಮೊಲಾಸಿಸ್ (ಕಾಕಂಬಿ) ಕಾಯಿದೆಯು ಅಮೆರಿಕಾದ ಮದ್ಯ ತಯಾರಿಕರಿಗೆ ಕಾಕಂಬಿ ಸಾಗಿಸಲು ಅನುಕೂಲವೊದಗಿಸಿತು. 1774ರ ಕ್ವಿಬೆಕ್ ಕಾಯಿದೆಯು ವಸಾಹತುಗಳ ಅಸಹನೆಗೆ ಕಾರಣವಾಯಿತು. 1765ರಲ್ಲಿ ಸ್ಟಾಂಪ್ ಕಾಯಿದೆ ಜಾರಿಗೆ ಬಂದು, 1767ರಲ್ಲಿ ಚಹಾ, ಕಾಗದ, ಗಾಜು ಮುಂತಾದ ವಸ್ತುಗಳ ಮೇಲೆ ತೆರಿಗೆ ಹಾಕಲು ಸಾಧ್ಯವಾಯಿತು.

**ಬಾಸ್ಟನ್ ಚಹಾಕೂಟ (1773) :** ವಿರೋಧವಿದ್ದರೂ ಬ್ರಿಟನ್ ಚಹಾ ಪುಡಿ ತುಂಬಿದ ಹಡಗೊಂದನ್ನು ಬಾಸ್ಟನ್ ಬಂದರಿಗೆ ಕಳುಹಿಸಿತು. ಇದು ವಸಾಹತುಗಾರರನ್ನು ಕೆರಳಿಸಿತು. 50 ಜನರ ಗುಂಪೊಂದು ರೆಡ್ ಇಂಡಿಯನ್‌ರ ವೇಷ ಧರಿಸಿಕೊಂಡು ಚಹ ತುಂಬಿದ ಹಡಗನ್ನು ಪ್ರವೇಶಿಸಿ ಅದರಲ್ಲಿದ್ದ 340 ಚಹಾ ಪೆಟ್ಟಿಗೆಗಳನ್ನು ಸಮುದ್ರಕ್ಕೆ ಎಸೆದರು.

**ಸ್ವಾತಂತ್ರ್ಯ ಘೋಷಣೆ :** ಪರಿಸ್ಥಿತಿಯನ್ನು ವಿಮರ್ಶಿಸಲು 1774ರಲ್ಲಿ ಅಮೆರಿಕಾದ ಹದಿಮೂರು ಇಂಗ್ಲಿಷ್ ವಸಾಹತುಗಳ ಪ್ರತಿನಿಧಿಗಳು ಫಿಲಿಡೆಲ್ಫಿಯಾ ನಗರದಲ್ಲಿ ಸಭೆ ಸೇರಿದರು. ಅವರು ತಮ್ಮ ಸ್ವಾತಂತ್ರವನ್ನು ಮೊಟಕುಗೊಳಿಸುವ ತಾಯ್ನಾಡಿನ ಪ್ರಯತ್ನಗಳನ್ನು ಸಶಸ್ತ್ರ ಬಲದಿಂದ ಪ್ರತಿಭಟಿಸುವುದಾಗಿ ನಿರ್ಧರಿಸಿದರು. ಬ್ರಿಟನ್ನಿನ ರಾಜ ಅವರ ಕ್ರಮವನ್ನು ದಂಗೆ ಎಂದು ಘೋಷಿಸಿದನು ಮತ್ತು

ವಸಾಹತುಗಾರರ ಪ್ರತಿಭಟನೆಯನ್ನು ಅಡಗಿಸಲು ಸೈನ್ಯ–ತುಕಡಿಗಳನ್ನು ಕಳುಹಿಸಿದನು. ವಸಾಹತುಗಾರರಿಗೆ ಈಗ ತಮ್ಮ ಸ್ಥಳೀಯ ಸೈನ್ಯದೊಡನೆ ಬ್ರಿಟೀಷರನ್ನು ಎದುರಿಸುವುದರ ಹೊರತು ಬೇರೆ ಮಾರ್ಗವೇ ಇರಲಿಲ್ಲ. ಈ ರೀತಿಯಲ್ಲಿ 1775, ಏಪ್ರಿಲ್ 19ರಂದು **"ಲೆಕ್ಸಿಂಗ್‌ಟನ್"** ಎಂಬಲ್ಲಿ ವಸಾಹತುಗಾರರ ಒಂದು ಸೈನ್ಯದ ತುಕುಡಿಯು ಬ್ರಿಟೀಷರ ಮೇಲೆ ದಾಳಿ ಮಾಡಿದಾಗ, ಅಮೆರಿಕಾದ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾಯಿತು. ಫಿಲಿಡೆಲ್ಫಿಯಾ ಸಭೆಯು ಆಗ **ಜಾರ್ಜ್ ವಾಷಿಂಗ್ಟನ್**‌ನನ್ನು ವಸಾಹತುಗಾರರ ಸೈನ್ಯದ ದಂಡನಾಯಕನನ್ನಾಗಿ ನೇಮಿಸಿತು.


ಜಾರ್ಜ್ ವಾಷಿಂಗ್ಟನ್

**ಜಾರ್ಜ್‌ವಾಷಿಂಗ್ಟನ್ :** ಜಾರ್ಜ್ ವಾಷಿಂಗ್ಟನ್ ವರ್ಜೀನಿಯಾದ ಒಬ್ಬ ತೋಟಗಾರ. ಇವನು ಫ್ರೆಂಚರ ವಿರುದ್ಧ ನಡೆದ ಸಪ್ತ ವಾರ್ಷಿಕ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿ, ಸೈನ್ಯಾಧಿಕಾರಿಯಾಗಿ ಕೀರ್ತಿ ಗಳಿಸಿದ್ದ. ಅವನು ಅಶಿಕ್ಷಿತ ಮತ್ತು ಅವ್ಯವಸ್ಥಿತ ವಸಾಹತು ಸೈನಿಕರನ್ನು ಸ್ಥೈರ್ಯ ಮತ್ತು ಉತ್ಸಾಹಗಳಿಂದ ಹುರಿದುಂಬಿಸಿದ. ಅವರುಗಳು ಬ್ರಿಟಿಷರೊಡನೆ ಧೈರ್ಯದಿಂದ ಹೋರಾಡುವಂತೆ ಮಾಡಿದ. 1776, ಜುಲೈ 4ರಂದು ಫಿಲಿಡೆಲ್ಫಿಯಾದ ರಾಷ್ಟ್ರೀಯ ಸಭೆಯು ಪ್ರಖ್ಯಾತವಾದ 'ಸ್ವಾತಂತ್ರ ಘೋಷಣೆ'ಯನ್ನು ಅಂಗೀಕರಿಸಿತು ಹಾಗೂ ಎಲ್ಲಾ ಹದಿಮೂರು ವಸಾಹತುಗಳೂ ತಾಯ್ನಾಡಿನಿಂದ ಎಲ್ಲಾ ರಾಜಕೀಯ ಸಂಬಂಧವನ್ನು ಕಡಿದುಕೊಂಡು ಸ್ವತಂತ್ರವಾಗಿವೆ ಎಂದು ಘೋಷಿಸಿತು.

**ಯುದ್ಧ :** ಇಂಗ್ಲೆಂಡ್ ಮತ್ತು ವಸಾಹತುಗಳ ನಡುವಿನ ಯುದ್ಧ ಐದು ವರ್ಷಗಳ ಕಾಲ ಸಾಗಿತು. ಆರಂಭದಲ್ಲಿ ವಸಾಹತುಗಳಿಗೆ ಹಿನ್ನಡೆಯಾಯಿತು. ಜಾರ್ಜ್‌ವಾಷಿಂಗ್ಟನ್ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆದರೆ 'ಸಾರಟೋಗ' ಯುದ್ಧದಲ್ಲಿ ಬ್ರಿಟಿಷ್ ಸೇನೆಯು ಸೋತಿತು. ಫ್ರೆಂಚರ ಸೇನೆಯ ಸಹಾಯದಿಂದ ಜಾರ್ಜ್ ವಾಷಿಂಗ್ಟನ್ನನು ಯಾರ್ಕ್‌ಟೌನ್ ಕದನದಲ್ಲಿ ಬ್ರಿಟಿಷರ ಸೇನೆಯನ್ನು ಸಂಪೂರ್ಣವಾಗಿ ಸೋಲಿಸಿದನು. ಬ್ರಿಟಿಷ್ ಸೇನಾನಿ ಕಾರ್ನ್‌ವಾಲೀಸನು ತನ್ನ ಪಡೆಗಳೊಂದಿಗೆ ಶರಣಾದನು. 1783ರ ಪ್ಯಾರಿಸ್ ಒಪ್ಪಂದದಂತೆ ಹದಿಮೂರು ವಸಾಹತುಗಳನ್ನು ಬ್ರಿಟನ್ ಸ್ವತಂತ್ರವೆಂದು ಅಂಗೀಕರಿಸಿತು. ಜುಲೈ 4 ರಂದು ಸ್ವಾತಂತ್ರ್ಯ ಘೋಷಣೆ ಮಾಡಿದ್ದರಿಂದ ಅಮೆರಿಕನ್ನರಿಗೆ ಅದು ಮಹತ್ವದ ದಿನವಾಯಿತು. ಇಂದಿಗೂ ಸಹ ಜುಲೈ 4ನ್ನು ಅಮೆರಿಕನ್ನರು ಸ್ವಾತಂತ್ರ್ಯದಿನವನ್ನಾಗಿ ಆಚರಿಸುತ್ತಾರೆ.

1787ರಲ್ಲಿ ಫಿಲಿಡೆಲ್ಫಿಯಾದಲ್ಲಿ ಸ್ವಾತಂತ್ರ ಪಡೆದ ಎಲ್ಲಾ ವಸಾಹತುಗಳ ಪ್ರತಿನಿಧಿಗಳು ಸಭೆ ಸೇರಿ, ಜಾರ್ಜ್ ವಾಷಿಂಗ್ಟನ್‌ನನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷನನ್ನಾಗಿ ಆರಿಸಿದರು. ಅವರುಗಳು ಒಂದು ಸಂವಿಧಾನವನ್ನು ರಚಿಸಿದರು. ಅದೇ ಜಗತ್ತಿನ ಪ್ರಥಮ ಲಿಖಿತ ಸಂವಿಧಾನವಾಯಿತು.

**ಅಮೆರಿಕ ಸ್ವತಂತ್ರ ಸಂಗ್ರಾಮದ ಪರಿಣಾಮಗಳು :** ಇದು ಫ್ರಾನ್ಸ್ ಮಹಾಕ್ರಾಂತಿಗೆ ಪ್ರಚೋದನೆ ನೀಡಿತು. ವಸಾಹತುಗಾರರ ಪಕ್ಷ ವಹಿಸಿ ಹೋರಾಡಿದ ಅನೇಕ ಫ್ರೆಂಚರು ಫ್ರಾನ್ಸಿನ ಮಹಾಕ್ರಾಂತಿಯ ನಾಯಕರಾದರು. ಅಮೆರಿಕದಲ್ಲಿನ ಅನೇಕ ಸ್ಪೈನ್ ಮತ್ತು ಪೋರ್ಚ್‌ಗಲ್‌ನ ವಸಾಹತುಗಳು ತಮ್ಮ ತಾಯ್ನಾಡಿನ ವಿರುದ್ಧ ದಂಗೆ ಎದ್ದು ಸ್ವತಂತ್ರ್ಯರಾಗಲು ಉತ್ತೇಜನ ಪಡೆದವು. ಅಮೆರಿಕಾ ಸಂಯುಕ್ತ ಸಂಸ್ಥಾನ ಎಂಬ ಹೊಸ ರಾಷ್ಟ್ರದ ಉದಯವಾಯಿತು.

NOT TO BE REPUBLISHED ©KTBS

# ಫ್ರಾನ್ಸಿನ ಮಹಾಕ್ರಾಂತಿ

ತಮ್ಮ ದೊರೆಗಳ ನಿರಂಕುಶ ಪ್ರಭುತ್ವವನ್ನು ಕೊನೆಗಾಣಿಸಿ, ಸಮಾನತೆ ಮತ್ತು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಹೊಸ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸುವುದೇ ಫ್ರೆಂಚ್ ಕ್ರಾಂತಿಯ ಪ್ರಮುಖ ಉದ್ದೇಶವಾಗಿತ್ತು. ಇದು ಜಗತ್ತಿನ ಇತರ ದೇಶಗಳ ರಾಜಕೀಯ ಚಳವಳಿಗಳ ಮೇಲೂ ಅಗಾಧವಾದ ಪ್ರಭಾವವನ್ನು ಬೀರಿತು. ಫ್ರಾನ್ಸಿನ ಕ್ರಾಂತಿಗೆ ಈ ಕೆಳಕಂಡ ಅಂಶಗಳು ಕಾರಣವಾದವು.

**ಸಾಮಾಜಿಕ ಕಾರಣಗಳು :** ಫ್ರೆಂಚ್ ಸಮಾಜದಲ್ಲಿ ಅಸಮಾನತೆ ಎಲ್ಲಾ ರಂಗದಲ್ಲೂ ತಾಂಡವವಾಡುತ್ತಿತ್ತು. ಅದು ದುಸ್ಸಹನೀಯ ಮತ್ತು ಅವಮಾನವೀಯವಾಗಿತ್ತು. ಈ ಅಸಮಾನತೆಯ ನೋವು ಜನತೆಯ ಹೃದಯದಲ್ಲಿ ರೋಷವಾಗಿ ಕ್ರಾಂತಿಗೆ ಎಡೆಯಾಯಿತು. ಕ್ರಾಂತಿಗೆ ಮುನ್ನ ಫ್ರಾನ್ಸ್‌ನ ಸಮಾಜದಲ್ಲಿ ಮೂರು ವರ್ಗಗಳಿದ್ದವು. ಮೊದಲ ವರ್ಗದಲ್ಲಿ ಪಾದ್ರಿಗಳು, ಎರಡನೇ ವರ್ಗದಲ್ಲಿ ಶ್ರೀಮಂತರು ಮತ್ತು ಉಳಿದೆಲ್ಲ ಸಾಮಾನ್ಯರು ಮೂರನೇ ವರ್ಗದಲ್ಲಿದ್ದರು.

> **ನಿಮಗಿದು ತಿಳಿದಿರಲಿ.**
>
> ಇತಿಹಾಸಕಾರನೊಬ್ಬನ ಅಭಿಪ್ರಾಯದಲ್ಲಿ ಫ್ರಾನ್ಸಿನಲ್ಲಿ ಕ್ರಾಂತಿ ಘಟಿಸುವುದರೊಂದಿಗೆ ಯುರೋಪಿನ ಇತಿಹಾಸವು, ಒಂದು ರಾಷ್ಟ್ರ, ಒಂದು ಘಟನೆ ಮತ್ತು ಒಬ್ಬ ವ್ಯಕ್ತಿಯಲ್ಲಿ ಲೀನವಾಯಿತು. ಆ ರಾಷ್ಟ್ರವೇ ಫ್ರಾನ್ಸ್, ಘಟನೆಯೇ ಫ್ರೆಂಚ್ ಕ್ರಾಂತಿ ಮತ್ತು ಆ ವ್ಯಕ್ತಿಯೇ ನೆಪೋಲಿಯನ್.

ಮೊದಲ ಎರಡು ವರ್ಗದವರು ಎಲ್ಲಾ ರೀತಿಯ ಅನುಕೂಲಗಳನ್ನು ಪಡೆಯುತ್ತಿದ್ದರು ಹಾಗೂ ಅವರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದವರು. ಎಲ್ಲಾ ರೀತಿಯ ತೆರಿಗೆಗಳಿಂದ ವಿನಾಯತಿ ಪಡೆದಿದ್ದು ಐಷಾರಾಮಿ ಜೀವನವನ್ನು ನಡೆಸುತ್ತಿದ್ದರು.

ಮೂರನೇ ವರ್ಗದವರು ಸೌಲಭ್ಯ ವಂಚಿತರಾಗಿದ್ದರು. ಬುದ್ಧಿಜೀವಿಗಳು, ಕೃಷಿಕರು, ಕಾರ್ಮಿಕರು ಮತ್ತು ವೃತ್ತಿಪರರು ಇದರಲ್ಲಿ ಸೇರಿದ್ದರು. ಅವರ ಆದಾಯ ತೀರ ಕಡಿಮೆ. ತೆರಿಗೆಗಳು ವಿಪರೀತ. ಅವರ ಜೀವನ ದುಃಸ್ಥಿತಿಯಲ್ಲಿತ್ತು. ಈ ಎಲ್ಲ ಜನರಿಗೆ ಸಮಾಜದಲ್ಲಿ ಗೌರವದ ಸ್ಥಾನವಿರಲಿಲ್ಲ, ರಾಜಕೀಯ ಹಕ್ಕುಗಳಿರಲಿಲ್ಲ ಹಾಗೂ ಅವರು ಅವಮಾನಗಳನ್ನು ಅನುಭವಿಸಬೇಕಾಗಿತ್ತು. ಅವರಿಗೆ ಮತೀಯವಾಗಿಯಾಗಲಿ ಅಥವಾ ರಾಜಕೀಯವಾಗಿಯಾಗಲಿ ಅಥವಾ ಯಾವುದೇ ವಿಧವಾದ ಸ್ವಾತಂತ್ರ್ಯ ಇರಲಿಲ್ಲ. ಫ್ರಾನ್ಸಿನ ಜನರಲ್ಲಿ ಅವರೇ ಅತ್ಯಂತ ಅಸಮಾಧಾನಗೊಂಡಿದ್ದ ಜನರು. ಅವರು ಹಳೆಯ ವ್ಯವಸ್ಥೆಗಳನ್ನು ತೊಡೆದು ಹಾಕಲು ಸಮಯ ಕಾಯುತ್ತಿದ್ದರು.

**ಆರ್ಥಿಕ ಕಾರಣಗಳು :** ಫ್ರಾನ್ಸ್ ಕೃಷಿ ಪ್ರಧಾನವಾದ ದೇಶವಾಗಿತ್ತು. ಕೃಷಿ ಪದ್ಧತಿಯಲ್ಲಿ ಅಭಿವೃದ್ಧಿಗಳು ಆಗಿದ್ದರೂ ಸಹ, ಕೃಷಿ ಬಹಳ ಹಿಂದುಳಿದಿತ್ತು. ಭೂಮಿಯ ಉತ್ಪತ್ತಿ ಬಹಳ ಕಡಿಮೆ ಇತ್ತು. ರೈತರೇ ಹೆಚ್ಚಿನ ತೊಂದರೆಗೊಳಗಾಗಿದ್ದವರು. ಬರಗಾಲಗಳು ಸಾಮಾನ್ಯವಾಗಿದ್ದವು. ಇದರಿಂದ ಆಹಾರಕ್ಕಾಗಿ ದಂಗೆಗಳಾಗುತ್ತಿದ್ದವು. ಕೈಗಾರಿಕೆಗಳು ವೃತ್ತಿಸಂಘಗಳ ಅಧೀನದಲ್ಲಿದ್ದವು. ಆಂತರಿಕ ಅಡ್ಡಿಗಳಿಂದಲೂ ಮತ್ತು ಅಧಿಕಾರಿಗಳ ಅತಿಯಾದ ಮಧ್ಯ ಪ್ರವೇಶದಿಂದಲೂ ಅವುಗಳ ಬೆಳವಣಿಗೆ ಕುಂಠಿತಗೊಂಡಿತ್ತು. ಇದರ ಫಲವಾಗಿ ಉತ್ಪಾದನೆ ಕೆಳಮಟ್ಟದಲ್ಲಿತ್ತು.

**ರಾಜಕೀಯ ಕಾರಣಗಳು :** ಫ್ರಾನ್ಸನ್ನು ಬೂರ್‌ಬನ್ ಮನೆತನದವರು ಆಳುತ್ತಿದ್ದರು. ಈ ಸಂತತಿಯ 16ನೇ ಲೂಯಿ ಭವ್ಯ ಅರಮನೆಯಲ್ಲಿ ರಾಜಮನೆತನದವರೊಂದಿಗೆ ಅವನು ಆರಾಮವಾದ ಮತ್ತು ಸುಖಲೋಲುಪತೆಯಿಂದ ಕೂಡಿದ ದುಂದುಗಾರಿಕೆಯ ಜೀವನವನ್ನು ನಡೆಸುತ್ತಿದ್ದ. ಸರ್ಕಾರಿ ಕೆಲಸಗಳಲ್ಲಿ ಅಸಡ್ಡೆಯಿಂದಿದ್ದ. ಅವನಿಗೆ ಮೇರಿ ಅಂಟಾಯಿನೆಟ್ ಎಂಬ ರಾಣಿ ಇದ್ದಳು. ಅವಳು ಆಸ್ಟ್ರಿಯನ್ ದೇಶದ ರಾಜಕುಮಾರಿ. ತನ್ನ ಸುಖ ಭೋಗಗಳಿಗೆ, ಹಬ್ಬಗಳಿಗೆ ದುಂದು ವೆಚ್ಚ ಮಾಡುತ್ತಿದ್ದಳು.

©KTBS NOT TO BE REPUBLISHED


ಜನಗಳ ಸಂಕಟದ ಕಡೆಗೆ ಅವಳಿಗೆ ಚಿಂತೆ ಇರಲಿಲ್ಲ. ಅವಳು ದೇಶದ ಆಡಳಿತ ವ್ಯವಹಾರಗಳಲ್ಲಿ ತಲೆ ಹಾಕುತ್ತಿದ್ದಳು. ವಿದೇಶಿಯಳು ಮತ್ತು ತಮ್ಮ ವಿಷಯದಲ್ಲಿ ಪ್ರೀತಿಯಿಲ್ಲವೆಂಬ ಕಾರಣದಿಂದ ಜನರು ಅವಳನ್ನು ದ್ವೇಷಿಸುತ್ತಿದ್ದರು. ರಾಜನು ಅವಳನ್ನು ನಿಯಂತ್ರಿಸಲಾಗಲಿಲ್ಲ. ಕ್ರಮೇಣ ಪರಿಸ್ಥಿತಿ ಅವನ ಕೈಮೀರಿ ಹೋಗಿ ಕ್ರಾಂತಿಯಾಗಿ ಪರಿಣಮಿಸಿತು.


**ಫ್ರೆಂಚ್ ಚಿಂತಕರ ಪ್ರಭಾವ :** ಪ್ರಸಿದ್ಧ ತತ್ವಜ್ಞಾನಿಗಳು ಹಾಗೂ ವಿದ್ವಾಂಸರುಗಳಾದ ಮಾಂಟೆಸ್ಕ್ಯೂ, ರೂಸೋ ಮತ್ತು ವಾಲ್ಟೈರ್ ತಮ್ಮ ಕ್ರಾಂತಿಕಾರಿ ಬರಹಗಳಿಂದ ಕ್ರಾಂತಿಕಾರಿಗಳಿಗೆ ಉತ್ತೇಜನ ನೀಡಿದರು.


**ಮಾಂಟೆಸ್ಕ್ಯೂ :** ಮಾಂಟೆಸ್ಕ್ಯೂ ತನ್ನ **"Spirit of Laws"** ಕೃತಿಯಲ್ಲಿ ರಾಜರ ದೈವದತ್ತ ಅಧಿಕಾರ **(Divine Right of kings)** ನಿರಾಧಾರವೆಂದು ಟೀಕಿಸಿ, ಸಂವಿಧಾನಿಕ ರಾಜ ಪ್ರಭುತ್ವಕ್ಕೆ ಬೆಂಬಲ ನೀಡಿದನು.

**ರೂಸೋ :** ರೂಸೋ ತನ್ನ ಕೃತಿ "ಸಾಮಾಜಿಕ ಒಪ್ಪಂದ"ದಲ್ಲಿ **(Social Contract)** "ಮಾನವ ಸ್ವತಂತ್ರವಾಗಿ ಜನಿಸಿದ. ಆದರೆ ಎಲ್ಲೆಲ್ಲೂ ಸರಪಳಿಯಿಂದ ಬಂಧಿಸಲ್ಪಟ್ಟಿದ್ದಾನೆ" ಎಂದು ಹೇಳಿದ್ದಾನೆ.

**ವಾಲ್ಟೈರ್ :** ವಾಲ್ಟೈರ್ ಫ್ರಾನ್ಸಿನಲ್ಲಿ ಪ್ರಚಲಿತವಿದ್ದ ಸಂಪ್ರದಾಯ, ಏಕಾಚರಣೆ ಹಾಗೂ ಅಂಧಶ್ರದ್ಧೆಯನ್ನು ಖಂಡಿಸಿದನು. ಅಲ್ಲದೆ ರೋಮನ್ ಕ್ಯಾಥೋಲಿಕ್ ಚರ್ಚನ್ನು ಖಂಡಿಸಿದನು.


**ಮಾಂಟೆಸ್ಕ್ಯೂ**


**ರೂಸೋ**


**ವಾಲ್ಟೈರ್**

**ಅಮೆರಿಕ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವ :** ಅಮೆರಿಕ ಸ್ವಾತಂತ್ರ್ಯ ಸಂಗ್ರಾಮ ಕೂಡ ಫ್ರೆಂಚರ ಮೇಲೆ ಅಗಾಧ ಪ್ರಭಾವವನ್ನುಂಟುಮಾಡಿತು. ಅಮೆರಿಕಾದಲ್ಲಿ ಇಂಗ್ಲೀಷರ ವಿರುದ್ಧ ಹೋರಾಡಿದ್ದ ಅನೇಕ ಫ್ರೆಂಚ್ ಸೈನಿಕರು ತಾಯ್ನಾಡಿಗೆ ಹಿಂತಿರುಗಿದರು. ಅವರು ಕ್ರಾಂತಿಕಾರಿಗಳಿಗೆ ಅವಶ್ಯಕವಾದ ಬಲ ಮತ್ತು ಉತ್ಸಾಹಗಳನ್ನು ಒದಗಿಸಿ ಕ್ರಾಂತಿಯಲ್ಲಿ ಮಹತ್ತರ ಪಾತ್ರವನ್ನು ವಹಿಸಿದರು.

ಈ ಎಲ್ಲಾ ಘಟನೆಗಳಿಂದಾಗಿ ಫ್ರೆಂಚ್ ರಾಜನು 175 ವರ್ಷಗಳಿಂದ ಕರೆಯದಿದ್ದ "ಸ್ಟೇಟ್ಸ್ ಜನರಲ್" ಎಂಬ ಫ್ರಾನ್ಸಿನ ಶಾಸಕಾಂಗ ಸಭೆಯನ್ನು ಕರೆಯಬೇಕಾಯಿತು. ಮೂರನೆಯ ವರ್ಗದ ಸದಸ್ಯರು ತಾವೇ ರಾಷ್ಟ್ರೀಯ ಸಭೆ ಎಂದು ಘೋಷಿಸಿಕೊಂಡರು. ಉಳಿದೆರಡು ವರ್ಗಗಳ ಸದಸ್ಯರೂ ತಮ್ಮೊಡನೆ ಸೇರುವಂತೆ ಆಹ್ವಾನಿಸಿದರು.

1789ನೇ ಇಸವಿ ಜುಲೈ 14ರಂದು "ಬ್ಯಾಸ್ಟೈಲ್" ಎಂಬ ರಾಜ್ಯ ಬಂಧೀಖಾನೆಯ ಮೇಲೆ ದಾಳಿ ಮಾಡಿ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡಿ, ನಿರಂಕುಶ ಪ್ರಭುತ್ವಕ್ಕೆ ಅಂತ್ಯ ಹಾಡಿದರು. ಕ್ರಮೇಣ ಈ ಕ್ರಾಂತಿಯು ದೇಶದ ಇತರ ಭಾಗಗಳಿಗೆ ಹರಡಿತು. ರಾಜನು ಹೆಸರಿಗೆ ಮಾತ್ರ ರಾಜನಾಗಿದ್ದನು. ರಾಷ್ಟ್ರೀಯ ಸಭೆಯೇ ಎಲ್ಲಾ ಕಾನೂನುಗಳನ್ನು ರಚಿಸುತ್ತ ಮತ್ತು ಆಜ್ಞೆಗಳನ್ನು ಹೊರಡಿಸಿತು. 1789ನೇ ಆಗಸ್ಟ್ 27ರಂದು ಮಾನವನ ಮತ್ತು ಪೌರನ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿತು. ರಾಜತ್ವವನ್ನು ತೆಗೆದುಹಾಕಿ ಗಣರಾಜ್ಯವನ್ನು ಸ್ಥಾಪಿಸಿತು.

NOT TO BE REPUBLISHED

ಈ ಕ್ರಿಯೆಯು ಹಿಂಸಾತ್ಮಕ ರೂಪವನ್ನು ತಾಳಿತು. ತೀವ್ರವಾದ ಸುಧಾರಣೆಗಳನ್ನು ಬಯಸುವ "ಜಾಕೋಬಿಯನ್ನರು" ಎಂಬ ಒಂದು ಗುಂಪು ಅಧಿಕಾರಕ್ಕೆ ಬಂದಿತು. ಇದರ ನಾಯಕ ರೊಬಿಸ್ಪಿಯರ್. ಪ್ರಭುತ್ವದ ಪರ ಇದ್ದ ಮತ್ತು ಶಂಕಿತ ವ್ಯಕ್ತಿಗಳನ್ನು ಹತ್ಯೆಗಾಗಿಯೇ ಅವಿಷ್ಕರಿಸಿದ್ದ ಗಿಲೊಟಿನ್ ಯಂತ್ರಕ್ಕೆ ಬಲಿ ನೀಡಿದನು.


**ಪರಿಣಾಮಗಳು**

ಫ್ರೆಂಚ್ ಕ್ರಾಂತಿಯು ಪ್ರಮುಖ ಘಟನೆಗಳಿಗೆ ನಾಂದಿಯಾಯಿತು. ಊಳಿಗಮಾನ್ಯ ಪದ್ಧತಿಯು ನಾಶವಾಯಿತು. ಪಾದ್ರಿಗಳು ಮತ್ತು ಶ್ರೀಮಂತರು ಹೊಂದಿದ್ದ ವಿಶೇಷ ಅಧಿಕಾರ, ಸವಲತ್ತುಗಳು ರದ್ದಾದವು. ಶ್ರೀಮಂತರ ಭೂಮಿಯನ್ನು ಕಸಿದುಕೊಳ್ಳಲಾಯಿತು. ಚರ್ಚ್ ರಾಜ್ಯಕ್ಕೆ ಅಧೀನವಾಯಿತು. ದೇಶದಾದ್ಯಂತ ಒಂದೇ ರೀತಿಯ ಆಡಳಿತ ಕ್ರಮವು ಜಾರಿಗೆ ಬಂದಿತು. ಜನರಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ತತ್ವಗಳ ಆಶ್ವಾಸನೆ ಕೊಡಲಾಯಿತು.

## ಏಕೀಕರಣ ಚಳವಳಿಗಳು

### ಇಟಲಿಯ ಏಕೀಕರಣ

ಪ್ರಾಚೀನ ರೋಮನ್ ಸಾಮ್ರಾಜ್ಯದ ವೈಭವ ಕಂಡಿದ್ದ ಇಟಲಿ ದೇಶ ಒಂದೇ ಭಾಷೆ ಆಡುತ್ತಿದ್ದರೂ ಒಡೆದು ಚೂರಾಗಿತ್ತು. ರೋಮನ್ ಕ್ಯಾಥೋಲಿಕ್ ಮತವೇ ಇಟಲಿಯಲ್ಲಿ ಸಾರ್ವತ್ರಿಕವಾಗಿತ್ತು. ಒಂದೇ ರಾಷ್ಟ್ರೀಯ ಪ್ರಭುತ್ವ ಪಡೆಯಲು ಅರ್ಹವಾಗಿದ್ದರೂ ಇಂಥ ಏಕೀಕರಣ ಅಸಾಧ್ಯವಾಗಿತ್ತು.





@KTBS NOT TO BE REPUBLISHED

ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಇಟಲಿಯು ಅನೇಕ ಸಣ್ಣ ಸಣ್ಣ ರಾಜ್ಯಗಳಾಗಿ ಒಡೆದು ಹೋಗಿತ್ತು. ಅವುಗಳಲ್ಲಿ ಲೊಂಬಾರ್ಡಿ, ವೆನೇಷಿಯಾ, ಸಿಸಿಲಿ, ನೇಪಲ್ಸ್ (ಎರಡು ಸಿಸಿಲಿಗಳ ರಾಜ್ಯ) ಪೋಪರ ರಾಜ್ಯಗಳು, ಟಸ್ಕನಿ, ಪಾರ್ಮ ಮತ್ತು ಮೊಡೇನ ಪ್ರಮುಖವಾದುವು. ಪಿಡ್ಮಂಟ್ ರಾಜ್ಯವು ಸಾರ್ಡೀನಿಯ, ಪಿಡ್ಮಂಟ್ ಮತ್ತು ಜಿನೋವಗಳನ್ನು ಒಳಗೊಂಡಿತ್ತು.

1815 ಮತ್ತು 1848ರ ನಡುವೆ ಇಟಲಿ ದೇಶದ ಅನೇಕ ರಾಜ್ಯಗಳಲ್ಲಿ ದಂಗೆಗಳುಂಟಾದವು. ಈ ಎಲ್ಲಾ ದಂಗೆಗಳ ಮುಖ್ಯ ಗುರಿ ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಏಕೀಕರಣ. ಜೊಸೆಫ್ ಮ್ಯಾಜಿನಿ, ಕೌಂಟ್ ಕವೂರ್ ಮತ್ತು ಗ್ಯಾರಿಬಾಲ್ಡಿ ಇಟಲಿಯ ಏಕೀಕರಣದ ಶಿಲ್ಪಿಗಳಾಗಿದ್ದರು.

ಮ್ಯಾಜಿನಿ ಹೆಸರಾಂತ ಕ್ರಾಂತಿಕಾರಿ ಚಿಂತಕ ಮತ್ತು ಬರಹಗಾರ. ಅವನು ತನ್ನ ಗ್ರಂಥ "ಇಟಲಿ, ಆಸ್ಟ್ರೀಯ, ಪ್ಯಾಪಸಿ"ಯಲ್ಲಿನ ಲೇಖನಗಳಿಂದ ಇಟಲಿ ದೇಶದ ಯುವಕರನ್ನು ಪ್ರಚೋದಿಸಿದನು. ಅವನು ರಾಷ್ಟ್ರದ ಏಕೀಕರಣ, ಸ್ವಾತಂತ್ರ್ಯ ಮುಂತಾದ ಕ್ರಾಂತಿಕಾರಕ ಅಭಿಪ್ರಾಯಗಳಿಂದ ಅವರನ್ನು ಹುರಿದುಂಬಿಸಿ ಅಂದಿನ ರಾಜಕೀಯ ವ್ಯವಸ್ಥೆಯ ವಿರುದ್ಧ ದಂಗೆ ಏಳುವಂತೆ ಪ್ರಚೋದಿಸಿದನು. "ತರುಣ ಇಟಲಿ" (Young Italy) ಎಂಬ ಒಂದು ಪಕ್ಷವನ್ನು ಕಟ್ಟಿದ್ದಲ್ಲದೇ ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಇಟಲಿಯ ಏಕೀಕರಣದ ಗುರಿಗಳನ್ನು ಹೊಂದಿದ್ದನು.



**ಮ್ಯಾಜಿನಿ**

ಗ್ಯಾರಿಬಾಲ್ಡಿ ಒಬ್ಬ ಯೋಧ, ಹೋರಾಟಗಾರ. ಇವನು "ತರುಣ ಇಟಲಿ" ಪಕ್ಷವನ್ನು ಸೇರಿ ಅನೇಕ ಸಾರಿ ಅದರ ಕ್ರಾಂತಿಯ ನಾಯಕತ್ವವನ್ನು ವಹಿಸಿದ್ದನು. ಆನಂತರ "ಕೆಂಪಂಗಿ ದಳ" ಎಂಬ ಸೈನ್ಯವನ್ನು ವ್ಯವಸ್ಥೆಗೊಳಿಸಿ ಸಾರ್ಡೀನಿಯ ಜೊತೆಗೂಡಿ ಆಸ್ಟ್ರೀಯಾದೊಡನೆ ಹೋರಾಡಿದ. 1860ರಲ್ಲಿ ಎರಡು ಸಿಸಿಲಿಗಳ ರಾಜ್ಯದ ಮೇಲೆ ತನ್ನ "ಕೆಂಪಂಗಿ ದಳ"ದೊಡನೆ ದಾಳಿ ಮಾಡಿ ಅದನ್ನು ಆಕ್ರಮಿಸಿ ಇಟಲಿ ದೇಶದ ಏಕೀಕರಣವನ್ನು ತ್ವರಿತಗೊಳಿಸಿದನು ಹಾಗೂ ಪ್ರಜಾಪ್ರಭುತ್ವ ಸುಧಾರಣೆಗಳಿಗಾಗಿ ಆಗ್ರಹಿಸಿದನು.



**ಗ್ಯಾರಿಬಾಲ್ಡಿ**

ಇಟಲಿ ದೇಶದ ಏಕೀಕರಣದಲ್ಲಿ ಸಾರ್ಡೀನಿಯಾದ ಮುಖ್ಯಮಂತ್ರಿ ಕೌಂಟ್ ಕವೂರ್ ಪ್ರಧಾನ ವ್ಯಕ್ತಿಯಾಗಿದ್ದ. ಅವನು ಪತ್ರಿಕೋದ್ಯಮಿಯಾಗಿದ್ದು, ಇಟಲಿ ದೇಶದ ಸಾಹಿತ್ಯದ ಪುನರುಜ್ಜೀವನಕ್ಕಾಗಿ ಮೀಸಲಾಗಿದ್ದ "ರಿಸಾರ್ಜಿಮೆಂಟೋ" ಪತ್ರಿಕೆಯನ್ನು ಆರಂಭಿಸಿದನು. ತನ್ನ ಪ್ರಭಾವಶಾಲಿ ಬರವಣಿಗೆಗಳಿಂದ ಜನರ ಮನಸ್ಸಿನ ಮೇಲೆ ಮತ್ತು ರಾಜರುಗಳ ಮನಸ್ಸಿನ ಮೇಲೆ ಅತೀವ ಪ್ರಭಾವವನ್ನು ಬೀರಿದನು.

ಕೆವೂರ ಇಟಲಿಯಿಂದ ಆಸ್ಟ್ರಿಯಾವನ್ನು ಹೊರದೂಡಿ ಸಾರ್ಡೀನಿಯಾವನ್ನು ಇಟಲಿಯ ಅತಿದೊಡ್ಡ ಮತ್ತು ಅತ್ಯಂತ ಬಲಶಾಲಿಯಾದ ರಾಜ್ಯವನ್ನಾಗಿ ಮಾಡಲು ತೀರ್ಮಾನಿಸಿದನು. ಸಾರ್ಡೀನಿಯಾದ ಪ್ರಧಾನಿಯಾಗಿ ಅಧಿಕಾರವನ್ನು ಸ್ವೀಕರಿಸಿದ ಕೂಡಲೇ ತನ್ನ ಗುರಿಯನ್ನು ಸಾಧಿಸಲು ಕೆಲಸವನ್ನು ಆರಂಭಿಸಿದನು. ರಾಜ್ಯದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದು ಇಟಲಿಯನ್ನು ಅತ್ಯಂತ ಪ್ರಗತಿಪರ ರಾಜ್ಯವನ್ನಾಗಿ ಮಾಡಿದನು.

©KTBS NOT TO BE REPUBLISHED

ಕೌಂಟ್ ಕೆವೂರ್ ಫ್ರಾನ್ಸ್‌ನೊಡನೆ ರಹಸ್ಯ ಒಪ್ಪಂದ ಮಾಡಿಕೊಂಡನು. ಆಸ್ಟ್ರಿಯಾವನ್ನು ಯುದ್ಧಕ್ಕೆ ಕೆರಳಿಸಿ, ಫ್ರಾನ್ಸ್‌ನ ಜೊತೆಗೂಡಿ ಆಸ್ಟ್ರಿಯಾವನ್ನು ಸೋಲಿಸಿ, ಲಾಂಬಾರ್ಡಿಯಿಂದ ಹೊರಗಟ್ಟಿದ್ದಲ್ಲದೇ, ಸಾರ್ಡೀನಿಯಾ ಹಾಗೂ ಲಾಂಬಾರ್ಡಿಯಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಟಸ್ಕನಿ, ಮೊಡೆನ, ಪಾರ್ಮ ಮತ್ತು ಉತ್ತರದ ಪೋಪರ ರಾಜ್ಯಗಳಲ್ಲಿ ಕ್ರಾಂತಿಗಳುಂಟಾಗಿ ಅವು ಸಾರ್ಡೀನಿಯಾದ ಜೊತೆಗೆ ಐಕ್ಯವಾದವು.



ಕೌಂಟ್ ಕೆವೂರ್

ಕೌಂಟ್ ಕೆವೂರ್ ರಹಸ್ಯವಾಗಿ ಸಿಸಿಲಿಯ ಮೇಲೆ ದಂಡೆತ್ತಿ ಹೋಗುವಂತೆ ಗ್ಯಾರಿಬಾಲ್ಡಿಗೆ ಪ್ರೋತ್ಸಾಹ ನೀಡಿದನು. 1861ರಲ್ಲಿ ವಿಕ್ಟರ್ ಎಮ್ಯಾನುಯಲ್ ದೊರೆಯನ್ನು ಇಟಲಿಯ ರಾಜನನ್ನಾಗಿ ಘೋಷಿಸಲಾಯಿತು. ಇಟಲಿಗೆ ಆಸ್ಟ್ರಿಯಾದಿಂದ ವೆನಿಷಿಯ ದೊರೆಯಿತು. ಈಗ ರೋಮ್ ಮಾತ್ರ ಇಟಲಿ ದೇಶದಿಂದ ಹೊರಗುಳಿದಿತ್ತು. 1870ರಲ್ಲಿ ಫ್ರಾನ್ಸ್ ಮತ್ತು ಪ್ರಷ್ಯಾಗಳ ನಡುವೆ ಯುದ್ಧ ಪ್ರಾರಂಭವಾದಾಗ, ಫ್ರಾನ್ಸ್ ತನ್ನ ಸೈನ್ಯವನ್ನು ರೋಮ್‌ನಿಂದ ಹಿಂದಕ್ಕೆ ಕರೆಯಿಸಿಕೊಳ್ಳಬೇಕಾಯಿತು. ಈ ಅವಕಾಶವನ್ನು ಉಪಯೋಗಿಸಿಕೊಂಡು ವಿಕ್ಟರ್ ಎಮ್ಯಾನುಯಲ್ ರೋಮ್ ಮೇಲೆ ನುಗ್ಗಿ ಅದನ್ನು ಆಕ್ರಮಿಸಿಕೊಂಡನು. ರೋಮ್ ಇಟಲಿಯ ರಾಜಧಾನಿಯಾಯಿತು. ಇಟಲಿಯ ಏಕೀಕರಣ ಪೂರ್ಣಗೊಂಡಿತು.

## ಜರ್ಮನಿಯ ಏಕೀಕರಣ

ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಜರ್ಮನಿ ಅನೇಕ ಸ್ವತಂತ್ರ ರಾಜ್ಯಗಳಾಗಿ ವಿಭಾಗವಾಗಿತ್ತು. ಅದು ಅವುಗಳಲ್ಲಿ ಅತಿ ದೊಡ್ಡದೂ, ಅತ್ಯಂತ ಬಲಶಾಲಿಯಾದುದೂ ಆಗಿದ್ದಿತು. ವುಟೆಂಬರ್ಗ್, ಬವೇರಿಯ, ಬೇಡನ್ ಮತ್ತು ಹೇಸ್ ಇತರ ಮುಖ್ಯ ರಾಜ್ಯಗಳು. ಉಳಿದವು ಚಿಕ್ಕವು. ಅನೇಕ ವೇಳೆ ಅವು ಪರಸ್ಪರ ಕಾದಾಡುತ್ತಿದ್ದವು. ಆ ರಾಜ್ಯಗಳು ರಾಜಕೀಯವಾಗಿ ಬಲಹೀನವಾಗಿದ್ದವು ಮತ್ತು ಆರ್ಥಿಕವಾಗಿ ಹಿಂದುಳಿದಿದ್ದವು. ಪ್ರಸ್ತುತ ಪರಿಸ್ಥಿತಿಯಿಂದ ಜನರು ಅಸಮಾಧಾನಗೊಂಡಿದ್ದು ಸುಧಾರಣೆಗಳಿಗಾಗಿ ಹಾತೊರೆಯುತ್ತಿದ್ದರು.


ಫ್ರಾನ್ಸ್‌ನ ಮಹಾಕ್ರಾಂತಿಯು ಜರ್ಮನ್‌ರ ರಾಷ್ಟ್ರಪ್ರಜ್ಞೆಯನ್ನು ಕೆರಳಿಸಿತ್ತು. ಇದರಿಂದ ರಾಜ್ಯಗಳಲ್ಲಿನ ಜನರು ರಾಷ್ಟ್ರೀಯ ಏಕತೆಗಾಗಿ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಸುಧಾರಣೆಗಳಿಗಾಗಿ ಆಗ್ರಹಿಸಿದರು. ಆಸ್ಟ್ರಿಯ ದೇಶದ ನಾಯಕತ್ವದಲ್ಲಿ ಒಂದು ಜರ್ಮನ್ ರಾಜ್ಯಗಳ ಸಂಘ ಏರ್ಪಟ್ಟಿತ್ತು. ಆದರೆ ರಾಜ್ಯಗಳಲ್ಲಿನ ಆಳರಸರು ತಮ್ಮ ಸ್ವಾತಂತ್ರ್ಯವನ್ನು ಮತ್ತು ಅಸ್ತಿತ್ವದಲ್ಲಿದ್ದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.

ಜರ್ಮನಿ ದೇಶ ಪ್ರೇಮಿಗಳು ಮತ್ತು ರಾಷ್ಟ್ರವಾದಿಗಳು ಪ್ರಜಾಸತ್ತೆ ಸಂಸ್ಥೆಗಳಿಗಾಗಿ ಮತ್ತು ಜರ್ಮನಿಯ ಏಕೀಕರಣಕ್ಕಾಗಿ ಚಳವಳಿಗಳನ್ನು ಪ್ರಾರಂಭಿಸಿದರು. ಆದರೆ ಆ ಚಳವಳಿಗಳನ್ನು ಅಡಗಿಸಲಾಯಿತು ಹಾಗೂ ಕ್ರಾಂತಿಕಾರಿಗಳು ದೇಶಬಿಟ್ಟು ಓಡಿಹೋದರು. ಪ್ರಷ್ಯಾ ಈ ಚಟುವಟಿಕೆಗಳಲ್ಲಿ ಒಂದು ಮಹತ್ತರ ಪಾತ್ರವನ್ನು ವಹಿಸಿದ ಮೇಲೆ ಆರ್ಥಿಕ ಪ್ರಗತಿ ಮತ್ತು ಕೈಗಾರಿಕೀಕರಣ ಅಭಿವೃದ್ಧಿಗೊಂಡಿತು.

**ಬಿಸ್ಮಾರ್ಕ್ :** ಜರ್ಮನಿ ಏಕೀಕರಣದ ಪ್ರಧಾನ ಶಿಲ್ಪಿ, ಆಟ್ಟೋವಾನ್ ಬಿಸ್ಮಾರ್ಕ್. ಇವನು ಪ್ರಷ್ಯಾ ರಾಜ್ಯದ ದೊರೆ ಒಂದನೇ ವಿಲಿಯಂನ ಮುಖ್ಯಮಂತ್ರಿಯಾಗಿದ್ದನು. ಅವನು ಸರ್ಕಾರಿ ನೌಕರನಾಗಿ, ಜರ್ಮನಿಯ ಶಾಸನ ಸಭೆ 'ಡಯಟ್'ನ ಸದಸ್ಯನಾಗಿ, ವಿದೇಶಗಳಲ್ಲಿ ರಾಯಭಾರಿಯಾಗಿ ವೃತ್ತಿಯನ್ನು

©KTBS NOT TO BE REPUBLISHED

ಆರಂಭಿಸಿ ಪ್ರಾಮುಖ್ಯತೆಗೆ ಬಂದಿದ್ದನು. ಇವನು ಆಸ್ಟ್ರಿಯ ನಾಯಕತ್ವದಲ್ಲಿನ ಜರ್ಮನ್ ರಾಜ್ಯಗಳ ಸಂಘದ ಕಾರ್ಯವೈಖರಿಗಳ ಬಗ್ಗೆ ಸೂಕ್ಷ್ಮ ಪರಿಚಯ ಹೊಂದಿದ್ದು, ಅದರ ದೌರ್ಬಲ್ಯಗಳೇನು ಎಂಬುದನ್ನು ತಿಳಿದಿದ್ದ. ಆಸ್ಟ್ರಿಯ, ಫ್ರಾನ್ಸ್ ಮತ್ತು ರಷ್ಯಾಗಳಲ್ಲಿ ರಾಯಭಾರಿಯಾಗಿ ಕೆಲಸ ಮಾಡಿ, ಅವುಗಳ ಬಲಾಬಲಗಳನ್ನು ತಿಳಿದಿದ್ದ. ಜರ್ಮನ್ ಏಕೀಕರಣವನ್ನು ಸಾಧಿಸಲು ಪ್ರಷ್ಯಾ ಒಂದೇ ಸಮರ್ಥಶಾಲಿ ಎಂಬುದನ್ನು ಮನಗಂಡಿದ್ದ ಹಾಗೂ ಪ್ರಷ್ಯಾವನ್ನು ಜರ್ಮನಿಯಲ್ಲಿ ಅಗ್ರರಾಜ್ಯವನ್ನಾಗಿ ಮಾಡಬೇಕೆಂದು ಅಪೇಕ್ಷಿಸಿದ. ಈ ಉದ್ದೇಶದ ಸಾಧನೆಗಾಗಿ ಅವನ ಗುರಿಗಳು ಎರಡು ಬಗೆಯಾಗಿದ್ದವು. ಒಂದು ಆಸ್ಟ್ರಿಯಾವನ್ನು ಜರ್ಮನ್ ರಾಜ್ಯಗಳ ಸಂಘದಿಂದ ಹೊರಗಟ್ಟುವುದು, ಮತ್ತೊಂದು ಜರ್ಮನಿಯಲ್ಲಿ ಲೀನವಾಗಿ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದಕ್ಕಿಂತ ಜರ್ಮನಿಯನ್ನೇ ಪ್ರಷ್ಯಾಮಯವಾಗಿ ಮಾಡುವುದು. ಅಂದರೆ ಪ್ರಷ್ಯಾದ ಸಂಸ್ಕೃತಿ, ಸಂಪ್ರದಾಯ, ಆಡಳಿತ ಯಂತ್ರ ಮತ್ತು ಸೈನಿಕ ಬಲವನ್ನು ಜರ್ಮನಿ ದೇಶಕ್ಕೆಲ್ಲ ವಿಸ್ತರಿಸುವುದಾಗಿತ್ತು.



**ಬಿಸ್ಮಾರ್ಕ್**

ಬಿಸ್ಮಾರ್ಕ್ ಜರ್ಮನಿಯ ಸಮಸ್ಯೆಯನ್ನು ಬಗೆಹರಿಸಲು **"ರಕ್ತ ಮತ್ತು ಕಬ್ಬಿಣ"** ತತ್ವದಿಂದ ಮಾತ್ರ ಸಾಧ್ಯವೆಂದು ಮನಗೊಂಡಿದ್ದನು. ರಕ್ತ ಮತ್ತು ಕಬ್ಬಿಣ ತತ್ವ ಎಂದರೆ ಯುದ್ಧ ನೀತಿ. ಇದರಿಂದ ಅವನು ಒಂದು ಬಲವಾದ ಸೈನ್ಯವನ್ನು ಕಟ್ಟಿದನು. ಅವನ ಮುಂದಿನ ಗುರಿ ಆಸ್ಟ್ರಿಯಾವನ್ನು ಜರ್ಮನ್ ರಾಜ್ಯಗಳ ಸಂಘದಿಂದ ಹೊರಗಟ್ಟುವುದು.

ಡೆನ್ಮಾರ್ಕ್‌ನ ಆಳ್ವಿಕೆಗೆ ಒಳಪಟ್ಟಿದ್ದ ಎರಡು ಸಣ್ಣ ರಾಜ್ಯಗಳಾದ ಷೇಲ್ಸ್‌ವಿಗ್ ಮತ್ತು ಹಾಲ್‌ಸ್ಟೈನ್‌ನನ್ನು ಬಿಸ್ಮಾರ್ಕ್‌ನು ಸೇರಿಸಿಕೊಳ್ಳಬೇಕೆಂದು ಅಪೇಕ್ಷಿಸಿದನು. ಆಸ್ಟ್ರಿಯಾ ಜೊತೆಗೂಡಿ ಡೆನ್ಮಾರ್ಕಿನ ಮೇಲೆ ಯುದ್ಧ ಮಾಡಿ ಅವುಗಳನ್ನು ವಶಪಡಿಸಿಕೊಂಡನು.

ಆನಂತರ ಬಿಸ್ಮಾರ್ಕ್ ಇಟಲಿಯೊಡನೆ ಒಪ್ಪಂದ ಮಾಡಿಕೊಂಡು ಆಸ್ಟ್ರಿಯಾದೊಡನೆ ಯುದ್ಧವಾದರೆ ಅದರ ಬೆಂಬಲವನ್ನು ಬಯಸಿದನು. ಸುಸಜ್ಜಿತ ಜರ್ಮನಿಯ ಸೈನ್ಯಗಳು ಆಸ್ಟ್ರಿಯಾವನ್ನು ಸೋಲಿಸಿ, 1866ರಲ್ಲಿ **"ಉತ್ತರ ಜರ್ಮನ್ ರಾಜ್ಯಗಳ ಸಂಘ"**ವನ್ನು ರಚಿಸಿದನು. ಪ್ರಷ್ಯಾದ ದೊರೆಯನ್ನು ವಂಶಪಾರಂಪರ್ಯವಾಗಿ ಈ ರಾಜ್ಯ ಸಂಘದ ಮುಖ್ಯಸ್ಥನನ್ನಾಗಿ ಮಾಡಲಾಯಿತು.

ಆಸ್ಟ್ರಿಯಾವನ್ನು ಜರ್ಮನಿಯ ನೆಲದಿಂದ ಹೊರದೂಡಿದ ನಂತರವೂ ಜರ್ಮನಿಯ ಏಕೀಕರಣ ಇನ್ನೂ ಪೂರ್ಣಗೊಂಡಿರಲಿಲ್ಲ. ಫ್ರಾನ್ಸ್‌ಗೆ ಹೊಂದಿಕೊಂಡಂತೆ ದಕ್ಷಿಣದಲ್ಲಿದ್ದ ಹದಿನಾರು ಜರ್ಮನ್ ರಾಜ್ಯಗಳು ರಾಜ್ಯ ಸಂಘದಿಂದ ಹೊರಗುಳಿದಿದ್ದವು. ಜರ್ಮನಿಯನ್ನು ಬಲಹೀನವಾಗಿಡುವುದೇ ಫ್ರಾನ್ಸ್‌ನ ಚಕ್ರವರ್ತಿ ಮೂರನೇ ನೆಪೋಲಿಯನ್ನನ ಅಪೇಕ್ಷೆಯಾಗಿತ್ತು. ಜರ್ಮನಿಯ ಏಕೀಕರಣ ಪೂರ್ಣಗೊಳ್ಳಬೇಕಾದರೆ ಫ್ರಾನ್ಸ್‌ನೊಡನೆ ಯುದ್ಧ ಅನಿವಾರ್ಯ ಎಂದು ಕಂಡುಕೊಂಡನು. ಬಿಸ್ಮಾರ್ಕ್ ಯುದ್ಧ ಸಿದ್ಧತೆ ಮಾಡಿಕೊಳ್ಳತೊಡಗಿದ. ನೆಪೋಲಿಯನ್ ಪ್ರಷ್ಯಾದ ಮೇಲೆ ಯುದ್ಧ ಸಾರಿದಾಗ ದಕ್ಷಿಣ ಜರ್ಮನ್ ರಾಜ್ಯಗಳು ಅವನನ್ನು ಸೋಲಿಸಿದವು. ಇದರಿಂದಾಗಿ ಬಿಸ್ಮಾರ್ಕ್‌ನು ಉಳಿದ ರಾಜ್ಯಗಳನ್ನು ಜರ್ಮನ್ ಒಕ್ಕೂಟದಲ್ಲಿ ಲೀನವಾಗುವಂತೆ ಮಾಡಿದನು. ಜರ್ಮನ್ ಏಕೀಕರಣ ಸಂಪೂರ್ಣಗೊಂಡಿತು. ಪ್ರಷ್ಯಾದ ಒಂದನೇ ವಿಲಿಯಮ್ ಜರ್ಮನ್ ಚಕ್ರವರ್ತಿ ಎಂಬ ಬಿರುದನ್ನು ಧರಿಸಿದ. ಅಲ್ಸೇಸ್ ಮತ್ತು ಲೋರೇನ್ ಪ್ರಾಂತ್ಯಗಳು ಫ್ರಾನ್ಸ್‌ನಿಂದ ಜರ್ಮನಿಗೆ ದೊರೆತವು.

NOT TO BE REPUBLISHED ©KTBS

## ಅಭ್ಯಾಸಗಳು

**I. ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ.**

1. ಇಂಗ್ಲೆಂಡ್ ಅಟ್ಲಾಂಟಿಕ್ ತೀರದಲ್ಲಿ ಸ್ಥಾಪಿಸಿದ ಹದಿಮೂರು ವಸಾಹತುಗಳನ್ನು ______ ಎಂದು ಕರೆಯಲಾಗಿತ್ತು.
2. 1774 ರಲ್ಲಿ ಹದಿಮೂರು ವಸಾಹತುಗಳ ಪ್ರತಿನಿಧಿಗಳು ಸಭೆ ಸೇರಿದ್ದು ________ ದಲ್ಲಿ
3. ಅಮೆರಿಕ ಸ್ವಾತಂತ್ರ ಘೋಷಣೆ ಆದದ್ದು ______ ರಂದು .
4. ಸ್ಪಿರಿಟ್ ಆಫ್ ಲಾಸ್‌ನ ಕರ್ತೃ ______ .
5. 'ತರುಣ ಇಟಲಿ' ಎಂಬ ಪಕ್ಷವನ್ನು ಇಟಲಿಯಲ್ಲಿ ಕಟ್ಟಿದವನು _______ .
6. ರಕ್ತ ಮತ್ತು ಕಬ್ಬಿಣ ತತ್ವವನ್ನು ಪ್ರತಿಪಾದಿಸಿದವನು ______ .

**II. ಕೆಳಕಂಡ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಅಮೆರಿಕದ ಸ್ವಾತಂತ್ರ ಸಂಗ್ರಾಮಕ್ಕೆ ಕಾರಣಗಳನ್ನು ಹೆಸರಿಸಿ.
2. ಅಮೆರಿಕ ಸ್ವಾತಂತ್ರ ಸಂಗ್ರಾಮದ ಮಹತ್ವವನ್ನು ತಿಳಿಸಿ.
3. ಫ್ರಾನ್ಸಿನ ಕ್ರಾಂತಿಗೆ ಆರ್ಥಿಕ ಅಂಶಗಳು ಹೇಗೆ ಕಾರಣವಾಯಿತು?
4. ಇಟಲಿಯ ಏಕೀಕರಣದಲ್ಲಿ ಗ್ಯಾರಿಬಾಲ್ಡಿಯ ಪಾತ್ರವೇನು?
5. ಜರ್ಮನಿಯ ಏಕೀಕರಣ ಶಿಲ್ಪಿ ಯಾರು? ಅವನ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

**III. ಚಟುವಟಿಕೆಗಳು :**

1. ಫ್ರಾನ್ಸಿನ ಮಹಾಕ್ರಾಂತಿಯ ಕಾಲದಲ್ಲಿದ್ದ ಚಿಂತಕರ ಬಗ್ಗೆ ವಿವರವಾಗಿ ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿ.
2. ಇಟಲಿಯ ಏಕೀಕರಣಕ್ಕೆ ಕಾರಣವಾದ ಅಂಶಗಳನ್ನು ಶಿಕ್ಷಕರ ಮುಖಾಂತರ ಗುಂಪಿನಲ್ಲಿ ಚರ್ಚಿಸಿ.

**IV. ಯೋಜನೆಗಳು :**

1. ಫ್ರಾನ್ಸಿನ ಕ್ರಾಂತಿಯ ಸಂದರ್ಭದಲ್ಲಿದ್ದ ಚಿಂತಕರ ಬಗ್ಗೆ ಒಂದು ಛಾಯಚಿತ್ರ ಸಹಿತ ಯೋಜನೆ ತಯಾರಿಸಿ.
2. ಇಟಲಿಯ ಏಕೀಕರಣದಲ್ಲಿ ಪಾತ್ರವಹಿಸಿದ ಕ್ರಾಂತಿಕಾರಿಗಳ ಬಗ್ಗೆ ಒಂದು ಯೋಜನೆ ತಯಾರಿಸಿ.

*****

© KTBS NOT TO BE REPUBLISHED

## ಅಧ್ಯಾಯ – 21

# ಚುನಾವಣಾ ವ್ಯವಸ್ಥೆ

J4X5F6

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಚುನಾವಣಾ ಆಯೋಗ
- ಚುನಾವಣಾ ವ್ಯವಸ್ಥೆಯ ಪ್ರಕ್ರಿಯೆ
- ರಾಜಕೀಯ ಪಕ್ಷಗಳು
- ಸಮ್ಮಿಶ್ರ ಸರ್ಕಾರಗಳು
- ಮಾಧ್ಯಮ ಮತ್ತು ಪ್ರಜಾಪ್ರಭುತ್ವ

ಭಾರತವು ಜಗತ್ತಿನ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಲು ನಿಷ್ಪಕ್ಷಪಾತವಾದ ನಿರ್ಭಯವಾದ ಚುನಾವಣೆಗಳು ನಡೆಯುವುದು ಅಗತ್ಯವಾಗಿರುತ್ತದೆ. ಚುನಾವಣೆಗಳ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣ ಮಾಡಲು ನಮ್ಮ ಸಂವಿಧಾನದ XV ನೇ ಭಾಗದಲ್ಲಿ 324 ರಿಂದ 329ರ ವರೆಗಿನ ವಿಧಿಗಳಡಿಯಲ್ಲಿ ಸ್ವತಂತ್ರವಾದ ಚುನಾವಣಾ ಆಯೋಗದ ವ್ಯವಸ್ಥೆ ಕುರಿತು ತಿಳಿಸಲಾಗಿದೆ. ಈ ಚುನಾವಣಾ ಆಯೋಗ ಅಖಿಲ ಭಾರತ ಸಂಸ್ಥೆಯಾಗಿದೆ. ಅಂದರೆ ಕೇಂದ್ರ ಮತ್ತು ರಾಜ್ಯಗಳ ಚುನಾವಣೆಗಳ ಜವಾಬ್ದಾರಿಯನ್ನು ಹೊಂದಿರುತ್ತದೆ. ವಿಧಿ 324 K ಮತ್ತು ZA ಅನ್ವಯ ರಾಜ್ಯ ಚುನಾವಣಾ ಆಯೋಗವು ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸುತ್ತದೆ.

© KTBS NOT TO BE REPUBLISHED

### ಚುನಾವಣಾ ಆಯೋಗದ ರಚನೆ (Structure of Election Commision)

ಸಂವಿಧಾನದ ವಿಧಿ 324 ಚುನಾವಣಾ ಆಯೋಗದ ರಚನೆ ಕುರಿತು ತಿಳಿಸುತ್ತದೆ. ಭಾರತ ಚುನಾವಣಾ ಆಯೋಗ 1950 ಜನವರಿ 25ರಂದು ಸ್ಥಾಪಿತವಾಯಿತು. ಪ್ರಾರಂಭದಲ್ಲಿ ಒಬ್ಬ ಮುಖ್ಯಚುನಾವಣಾ ಆಯುಕ್ತರನ್ನು ಮಾತ್ರ ಒಳಗೊಂಡಿತ್ತು. 1989ರಲ್ಲಿ ಸಂವಿಧಾನದ 61ನೆಯ ತಿದ್ದುಪಡಿ ಅನ್ವಯ ಸಾರ್ವತ್ರಿಕ ವಯಸ್ಕ ಮತದಾನದ ವಯಸ್ಸನ್ನು 21 ವರ್ಷದಿಂದ 18ನೇ ವರ್ಷಕ್ಕೆ ಕಡಿಮೆಗೊಳಿಸಲಾಯಿತು. ಇದರಿಂದಾಗಿ ಚುನಾವಣಾ ಆಯೋಗದ ಕಾರ್ಯನಿರ್ವಹಣೆ ಹೆಚ್ಚಳವಾಯಿತು. ಹಾಗಾಗಿ ಮುಖ್ಯ ಚುನಾವಣಾ ಆಯುಕ್ತರ ಜೊತೆಗೆ ಇತರೆ ಇಬ್ಬರು ಚುನಾವಣಾ ಆಯುಕ್ತರನ್ನು ನೇಮಕ ಮಾಡಲಾಯಿತು. 1990ರಲ್ಲಿ ಇಬ್ಬರು ಚುನಾವಣಾ ಆಯುಕ್ತರನ್ನು ತೆಗೆದು ಹಾಕಲಾಯಿತು. 1993ರಿಂದ ಚುನಾವಣಾ ಆಯೋಗವು ಒಬ್ಬ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರೆ ಇಬ್ಬರು ಚುನಾವಣಾ ಆಯುಕ್ತರನ್ನು ಒಳಗೊಂಡಿರುತ್ತದೆ. ಮೂವರು ಚುನಾವಣಾ ಆಯುಕ್ತರು ಸಮಾನವಾದ ಅಧಿಕಾರವನ್ನು ಹೊಂದಿರುತ್ತಾರೆ. ಚುನಾವಣಾ ಆಯುಕ್ತರಲ್ಲಿ ಭಿನ್ನಾಭಿಪ್ರಾಯಗಳುಂಟಾದರೆ ಬಹುಮತದ ಮೂಲಕ ನಿರ್ಣಯ ಕೈಗೊಳ್ಳಲಾಗುತ್ತದೆ.

ರಾಷ್ಟ್ರಪತಿಯವರು ಚುನಾವಣಾ ಆಯುಕ್ತರನ್ನು ನೇಮಕ ಮಾಡುತ್ತಾರೆ. ಅವರ ಅಧಿಕಾರವಧಿ 6 ವರ್ಷಗಳು ಅಥವಾ ತಮ್ಮ ಅರವತ್ತೈದನೆಯ ವಯಸ್ಸನ್ನು ಹೊಂದುವವರೆಗೆ, ಇವುಗಳಲ್ಲಿ ಪ್ರಥಮವಾಗುವುದನ್ನು ಪರಿಗಣಿಸಲಾಗುತ್ತದೆ. ಇವರು ಯಾವುದೇ ಸಮಯದಲ್ಲಿ ರಾಷ್ಟ್ರಪತಿಗೆ ರಾಜೀನಾಮೆ ನೀಡಬಹುದಾಗಿದೆ. ಸಂಸತ್ತು ಅಸಮರ್ಥತೆ ಮತ್ತು ದುರ್ನಡತೆ ಆಧಾರದ ಮೇಲೆ ಪದಚ್ಯುತಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.

ಚುನಾವಣಾ ಆಯೋಗವು ರಾಷ್ಟ್ರಪತಿ, ಉಪರಾಷ್ಟ್ರಪತಿ, ರಾಜ್ಯಸಭೆ, ಲೋಕಸಭೆ, ವಿಧಾನ ಪರಿಷತ್ತು ಮತ್ತು ವಿಧಾನಸಭೆಗಳ ಚುನಾವಣೆಗಳನ್ನು ನಡೆಸುತ್ತದೆ. ಚುನಾವಣಾ ದಿನಾಂಕ ನಿಗದಿಪಡಿಸುವುದರಿಂದ ಫಲಿತಾಂಶವನ್ನು ಪ್ರಕಟಣೆಗೊಳಿಸುವವರೆಗಿನ ಅವಧಿಯಲ್ಲಿ ಸಂಪೂರ್ಣ ಅವಧಿಯನ್ನು ಹೊಂದಿರುತ್ತದೆ. ಈ ಅವಧಿಯನ್ನು "ನೀತಿ ಸಂಹಿತೆಯ ಅವಧಿ" ಎಂದು ಕರೆಯಲಾಗುತ್ತದೆ. ಚುನಾವಣೆಗಳನ್ನು ನಡೆಸಲು ಚುನಾವಣಾ ಆಯೋಗಕ್ಕೆ ತನ್ನದೇ ಆದ ಸಿಬ್ಬಂದಿಯನ್ನು ಹೊಂದಿರುವುದಿಲ್ಲ. ಚುನಾವಣಾ ಆಯೋಗವು ರಾಷ್ಟ್ರಪತಿಯ ಅನುಮತಿಯನ್ನು ಪಡೆದು ರಾಜ್ಯ ಸರ್ಕಾರದ ಸಿಬ್ಬಂದಿಯನ್ನು ತನ್ನ ಚುನಾವಣಾ ಸಿಬ್ಬಂದಿಯಾಗಿ ನೇಮಕ ಮಾಡಿಕೊಳ್ಳುತ್ತದೆ.

ಪಂಚಾಯತ್‌ಗಳ ಹಾಗು ಪೌರ ಸಂಸ್ಥೆಗಳ ಚುನಾವಣೆಯನ್ನು ರಾಜ ಚುನಾವಣಾ ಆಯೋಗ ನಡೆಸುತ್ತದೆ. ಸಂವಿಧಾನದ ವಿಧಿ 243 K ಮತ್ತು ZA ವಿಧಿಗಳನ್ವಯ ರಾಜ್ಯಪಾಲರು ಚುನಾವಣಾ ಆಯುಕ್ತರನ್ನು ನೇಮಕ ಮಾಡುತ್ತಾರೆ. ಕರ್ನಾಟಕದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರಲ್ಲಿಯ ಪ್ರಕರಣ 308ರನ್ವಯ ರಾಜ್ಯ ಚುನಾವಣಾ ಆಯೋಗವನ್ನು ಹೊಂದಲಾಗಿದ್ದು, ಇದು ರಾಜ್ಯದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿದೆ.

## ಚುನಾವಣಾ ವ್ಯವಸ್ಥೆಯ ಪ್ರಕ್ರಿಯೆ

## ಚುನಾವಣಾ ಕ್ಷೇತ್ರಗಳು (Constituencies)

ಚುನಾವಣೆಯ ಉದ್ದೇಶಕ್ಕಾಗಿ ದೇಶ ಮತ್ತು ರಾಜ್ಯವನ್ನು ಚಿಕ್ಕಚಿಕ್ಕ ಚುನಾವಣಾ ವಿಭಾಗಗಳಾಗಿ ವಿಭಾಗಿಸಿ ಅವುಗಳನ್ನು ಚುನಾವಣಾ ಕ್ಷೇತ್ರಗಳೆಂದು ಕರೆಯಲಾಗಿದೆ. ಈ ಚುನಾವಣಾ ಕ್ಷೇತ್ರಗಳು ಜನಸಂಖ್ಯೆ ಆಧಾರಿತವಾಗಿ ವಿಂಗಡಣೆಗೊಳ್ಳುತ್ತವೆ. ಚುನಾವಣಾ ಕ್ಷೇತ್ರಗಳಲ್ಲಿ ಎರಡು ವಿಧಗಳು. ಒಂದು ಲೋಕಸಭಾ ಕ್ಷೇತ್ರ, ಎರಡನೆಯದು ವಿಧಾನಸಭಾ ಚುನಾವಣಾ ಕ್ಷೇತ್ರ. ಲೋಕಸಭಾ ಚುನಾವಣೆ ಕ್ಷೇತ್ರಗಳಿಂದ ಆಯ್ಕೆಗೊಂಡ ಅಭ್ಯರ್ಥಿಗಳು ಲೋಕಸಭೆಯ ಸದಸ್ಯರು ಅಥವಾ ಎಂ.ಪಿ.ಗಳೆನಿಸಿಕೊಂಡರೆ, ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡ ಅಭ್ಯರ್ಥಿಗಳು ರಾಜ್ಯ ವಿಧಾನಸಭೆಯ ಸದಸ್ಯರು ಅಥವಾ ಶಾಸಕ ಅಥವಾ ಎಂ.ಎಲ್.ಎ ಎಂದು ಕರೆಸಿಕೊಳ್ಳುತ್ತಾರೆ. ಈ ಎರಡೂ ಚುನಾವಣಾಕ್ಷೇತ್ರಗಳಲ್ಲಿ ನಿಯಮಾನುಸಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಮೀಸಲು ಇಡಲಾಗುತ್ತದೆ. ಇವುಗಳನ್ನು ಮೀಸಲು ಚುನಾವಣಾಕ್ಷೇತ್ರಗಳೆಂದು ಕರೆಯುತ್ತಾರೆ.

© KTBS NOT TO BE REPUBLISHED

## ಮತದಾರರ ಪಟ್ಟಿ (Voters List)

ಮತದಾನ ಮಾಡುವವರ ಹೆಸರು ಹಾಗೂ ಕೆಲವು ವಿವರಗಳನ್ನು ಒಳಗೊಂಡಿರುವ ಪಟ್ಟಿಯನ್ನು ಮತದಾರರ ಪಟ್ಟಿ ಎಂದು ಕರೆಯುತ್ತಾರೆ. ಮತದಾರರ ಪಟ್ಟಿಯನ್ನು ಚುನಾವಣಾ ಆಯೋಗವು ಚುನಾವಣೆಗಿಂತ ಮುಂಚಿತವಾಗಿಯೇ ಸಿದ್ಧಪಡಿಸಿಕೊಳ್ಳುತ್ತದೆ. ಮತದಾರರ ಪಟ್ಟಿಯು ಪ್ರತಿ ವರ್ಷ ಪರಿಷ್ಕೃತಗೊಳ್ಳುತ್ತದೆ. ಹೀಗೆ ಪರಿಷ್ಕೃತಗೊಳ್ಳುವ ಸಂದರ್ಭದಲ್ಲಿ ಯಾರಿಗೆ ಹದಿನೆಂಟು (18) ವರ್ಷಗಳು ತುಂಬಿರುತ್ತವೋ ಅವರ



ಮತದಾರರ ಭಾವಚಿತ್ರ ಸಹಿತ ಗುರುತಿನ ಚೀಟಿ (EPIC)

ಹೆಸರುಗಳನ್ನು ಪಟ್ಟಿಗೆ ಹೊಸದಾಗಿ ಸೇರ್ಪಡೆ ಮಾಡಿಕೊಂಡು, ಯಾರು ಮರಣ ಹೊಂದಿರುತ್ತಾರೋ ಅಂತಹವರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕಲಾಗುತ್ತದೆ. ಈ ಮತದಾರರ ಪಟ್ಟಿಯು ಚುನಾವಣಾ ಅಧಿಕಾರಿಗಳು ಮತದಾರರನ್ನು ಮತದಾನದ ವೇಳೆ ಗುರುತಿಸಲು ಸಹಾಯಕವಾಗುತ್ತದೆ.

ಮತದಾರನ ಛಾಯಪ್ರತಿಯ ಗುರುತಿನ ಚೀಟಿಗಳನ್ನು (EPIC) ಅರ್ಹ ಮತದಾರನಿಗೆ ಚುನಾವಣಾ ಆಯೋಗದಿಂದ ನೀಡಲ್ಪಟ್ಟಿದ್ದು, ಇದು ಅನ್ಯ ವ್ಯಕ್ತಿಯ ಮತದಾನ ತಡೆಯುವ ಕ್ರಮವಾಗಿದೆ. ಈ ಗುರುತಿನ ಚೀಟಿ ಮತದಾರನ ಗುರ್ತಿಸುವಿಕೆಗೆ ಪುರಾವೆಯಾಗಿ ಬಳಸಲ್ಪಡುತ್ತದೆ. ಮತದಾರನು ಮತದಾನದ ವೇಳೆ ಮತದಾರನ ಗುರುತಿನ ಚೀಟಿ ಅಥವಾ ಇತರೆ ಪುರಾವೆಗಳಾದ ವರಮಾನತೆರಿಗೆ ಇಲಾಖೆ ನೀಡಿದ ಶಾಶ್ವತ ಲೆಕ್ಕ ಸಂಖ್ಯೆಯ ಚೀಟಿ (Permanent Account Number-PANCARD) ಅಥವಾ ಚಾಲನಾ ಪರವಾನಗಿ ಅಥವಾ ರಹದಾರಿ ಪತ್ರ ಅಥವಾ ಸರ್ಕಾರ ಸೂಚಿಸಿದ ಯಾವುದೇ ಗುರುತಿನ ಪುರಾವೆಯನ್ನು ಅಧಿಕಾರಿಗಳಿಗೆ ತೋರಿಸಬೇಕಿರುತ್ತದೆ.

*ಭಾರತ ಸರ್ಕಾರವು ದೇಶದ ಎಲ್ಲಾ ಪೌರರಿಗೂ ಜೈವಿಕ-ಮೀಟರ್ (Bio-Metric) ಮಾನದ ವಿಶಿಷ್ಟ ಗುರುತಿನ ಚೀಟಿಗಳನ್ನು (unique ID) ನೀಡುವ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು, ಇದನ್ನು* ***'ಆಧಾರ್'*** *ಸಂಖ್ಯೆ ಎಂದು ಕರೆಯಲಾಗುತ್ತದೆ. ಇತ್ತೀಚಿಗೆ ಆಧಾರ್ ಸಂಖ್ಯೆ ಪಡೆಯುವುದನ್ನು ಕಡ್ಡಾಯ ಮಾಡಲಾಗಿದೆ.*

© KTBS NOT TO BE REPUBLISHED

**ಅಧಿಸೂಚನೆ (Notification)** : ಚುನಾವಣಾ ಪ್ರಕ್ರಿಯೆಯು ಪ್ರಕಟಣೆಯೊಂದಿಗೆ ಆರಂಭವಾಗುತ್ತದೆ. ಚುನಾವಣಾ ಆಯೋಗವು ಚುನಾವಣೆಗಳು ನಡೆಯುವ ದಿನಾಂಕ, ವೇಳೆ ಮತ್ತಿತರ ಪೂರ್ಣ ಮಾಹಿತಿಗಳನ್ನು ಪತ್ರಿಕೆಗಳಲ್ಲಿ, ರೇಡಿಯೋ, ದೂರದರ್ಶನ ಮಾಧ್ಯಮಗಳಲ್ಲಿ ಮತ್ತು ಸರ್ಕಾರ ಪ್ರಕಟಿಸುವ ಗೆಜೆಟ್‌ನಲ್ಲಿ ಪ್ರಕಟಿಸುತ್ತದೆ.

**ಅಭ್ಯರ್ಥಿಗಳ ಉಮೇದುವಾರಿಕೆ (Nomination of the Candidates)** : ನಮ್ಮ ದೇಶದಲ್ಲಿ ಪ್ರತಿನಿಧಿತ್ವ ಪ್ರಜಾಪ್ರಭುತ್ವ ವ್ಯವಸ್ಥೆಯಿರುವುದರಿಂದ ಜನರಿಗೆ ಚುನಾವಣೆಗೆ ಸ್ಪರ್ಧಿಸುವ ಮತ್ತು ಚುನಾಯಿಸುವ ಹಕ್ಕಿರುತ್ತದೆ. ಚುನಾವಣೆಗೆ ಸ್ಪರ್ಧಿಸಲು ಬಯಸುವ ಅಭ್ಯರ್ಥಿಗಳು ಕೆಲವು ಅರ್ಹತೆಗಳನ್ನು ಪೂರೈಸಬೇಕಾಗುತ್ತದೆ. ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆಯ ಕಾಗದ ಪತ್ರಗಳನ್ನು ಆ ಉದ್ದೇಶಕ್ಕಾಗಿ ನೇಮಕಗೊಂಡ ಅಧಿಕಾರಿಗೆ ನಿಗದಿತ ವೇಳೆಯೊಳಗೆ ಸಲ್ಲಿಸಬೇಕು. ಅರ್ಜಿಯೊಂದಿಗೆ ನಿರ್ದಿಷ್ಟ ಮೊತ್ತವನ್ನು 'ಭದ್ರತಾ ಠೇವಣಿ'ಯ ಹಣ ಎಂದು ಪಾವತಿಸಬೇಕಾಗುತ್ತದೆ.

ರಾಜಕೀಯ ಪಕ್ಷಗಳು ತಮ್ಮ ಪಕ್ಷದ ಪ್ರತಿನಿಧಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಅಭ್ಯರ್ಥಿಯೊಬ್ಬನನ್ನು ಆಯ್ಕೆಮಾಡುತ್ತದೆ. ಅವನಿಗೆ ಪಕ್ಷದ ಅಧಿಕೃತ ಪರವಾನಗಿ ನೀಡುತ್ತದೆ. ಅದನ್ನು ಪಕ್ಷದ ಅಧಿಕೃತ ಪತ್ರ (Party Ticket) ಎನ್ನುತ್ತಾರೆ. ಪಕ್ಷದ ಅಧಿಕೃತ ಪತ್ರ ಪಡೆದ ಅಭ್ಯರ್ಥಿಯು ಚುನಾವಣಾ ಪ್ರಚಾರಕ್ಕೆ ಆ ಪಕ್ಷದ ಚಿಹ್ನೆ ಮತ್ತು ಬೆಂಬಲದೊಂದಿಗೆ ಪ್ರಚಾರ ಶಿಬಿರಗಳಲ್ಲಿ ಪಾಲ್ಗೊಂಡು ಮತದಾರರಲ್ಲಿ ಮತಯಾಚಿಸುವ ಅನುಕೂಲವಿದೆ. ಕೆಲವೊಮ್ಮೆ ಅಭ್ಯರ್ಥಿಗೆ ಹೆಚ್ಚು ಮತ ಪಡೆಯುವಂತೆ ಮಾಡುವಲ್ಲಿ, ಅಭ್ಯರ್ಥಿಗಳ ಪಕ್ಷವು ಹಾಗೂ ಪಕ್ಷದ ಅಧಿಕೃತ ಪತ್ರ ಪ್ರಧಾನ ಪಾತ್ರ ವಹಿಸುತ್ತದೆ. ಯಾವುದೇ ಪಕ್ಷದಿಂದ ಗುರುತಿಸಲ್ಪಡದಂತಹ ಅಭ್ಯರ್ಥಿಗಳನ್ನು 'ಸ್ವತಂತ್ರ ಅಭ್ಯರ್ಥಿಗಳು' ಎಂದು ಪರಿಗಣಿಸಿ ಅವರುಗಳಿಗೆ ಚುನಾವಣಾ ಆಯೋಗವು **ವಿವಿಧ ಚಿಹ್ನೆಗಳನ್ನು** ನೀಡುತ್ತದೆ.

**ನಾಮಪತ್ರಗಳ ಪರಿಶೀಲನೆ (Scrutiny of Nomination)** : ಅರ್ಜಿಸಲ್ಲಿಸಲು ಕೊನೆಯ ದಿನಾಂಕ ಮುಗಿದ ನಂತರ ನೇಮಕಗೊಂಡ ಅಧಿಕಾರಿಗಳು ಪ್ರತಿಯೊಬ್ಬ ಅಭ್ಯರ್ಥಿಯ ಉಮೇದುವಾರಿಕೆ ಅರ್ಜಿ ಮತ್ತು ಅದರೊಂದಿಗೆ ಸಲ್ಲಿಸಿರುವ ಅಗತ್ಯ ದಾಖಲೆಗಳನ್ನು ಕಟ್ಟುನಿಟ್ಟಾಗಿ ಪರಿಶೀಲಿಸಿ ಅರ್ಹಗೊಂಡ ಮತ್ತು ಅನರ್ಹಗೊಂಡ ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಣೆ ಮಾಡುತ್ತಾರೆ.

**ಉಮೇದುವಾರಿಕೆ ಹಿಂಪಡೆಯುವಿಕೆ (Withdrawal of Nomination) :** ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಗೊಂಡ ನಂತರ ಅಭ್ಯರ್ಥಿಗಳು ಬಯಸಿದಲ್ಲಿ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಒಂದು ದಿನಾಂಕವನ್ನು ನಿಗದಿಗೊಳಿಸಿ ಪ್ರಕಟಣೆ ನೀಡಲಾಗುತ್ತದೆ.

**ಚುನಾವಣಾ ಪ್ರಚಾರ :** ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಗೊಂಡ ನಂತರ ಚುನಾವಣಾ ಪ್ರಚಾರ ಕಾರ್ಯ ಆರಂಭವಾಗುತ್ತದೆ. ಬಾಹ್ಯ ಪ್ರಚಾರ ಕಾರ್ಯವು ಮತದಾನ ದಿನಕ್ಕಿಂತ 48 ಘಂಟೆಗಳ ಮುಂಚಿತವಾಗಿ ಮುಕ್ತಾಯವಾಗುತ್ತದೆ. ಪ್ರಚಾರ ವೇಳೆಯಲ್ಲಿ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ತಮ್ಮ ಪಕ್ಷಕ್ಕೆ ಅಥವಾ ತಮಗೆ ಜಯ ತಂದುಕೊಟ್ಟರೆ ಜನರಿಗೆ ಯಾವ ಯಾವ ಸೌಕರ್ಯ ಸವಲತ್ತುಗಳನ್ನು ಪೂರೈಕೆ ಮಾಡುವೆವು ಎಂಬ ಭರವಸೆಗಳನ್ನು ನೀಡುತ್ತಾ ಮತದಾರರನನ್ನು ತನ್ನತ್ತ ಸೆಳೆಯುವ ಪ್ರಯತ್ನಮಾಡುತ್ತಾರೆ. ಈ ಭರವಸೆಗಳನ್ನು 'ಚುನಾವಣಾ ಪ್ರಣಾಳಿಕೆ' (Election Manifesto) ಎಂದು ಕರೆಯುತ್ತಾರೆ. ಈ ಅವಧಿಯಲ್ಲಿ ಸಾರ್ವಜನಿಕ ಸಭೆಗಳು, ಮನೆಮನೆಗೆ ತೆರಳಿ ಮತಯಾಚಿಸುವುದು, ಧ್ವಜಗಳು, ನಿಶಾನೆಗಳು, ಬಟ್ಟೆಯಿಂದ ತಯಾರಾದ ತೋರಣಗಳು, ಗೋಡೆ ಪತ್ರಿಕೆಗಳು, ಭಿತ್ತಿಪತ್ರಗಳು, ಕರಪತ್ರಗಳು, ಘೋಷಣೆಗಳು ಇತ್ಯಾದಿಗಳು ಸರ್ವೇ ಸಾಮಾನ್ಯವಾದವುಗಳು. ಪ್ರತಿಯೊಬ್ಬ ಅಭ್ಯರ್ಥಿಯು ಚುನಾವಣಾ ಆಯೋಗ ನಿಗದಿಪಡಿಸಿದ **'ನೀತಿ ಸಂಹಿತೆ'**ಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

**ಮತದಾನದ ದಿನ :** ಮತದಾನದ ದಿನವೆಂದರೆ ಮತದಾರರು ಮತ ಚಲಾಯಿಸಲು ನಿಗದಿಪಡಿಸಿದ ದಿನವೆಂದರ್ಥ. ಆ ದಿವಸದಂದು ಮತದಾರನು ಮತದಾನಕ್ಕೆ ನಿಗದಿಪಡಿಸಿದ ಮತಗಟ್ಟೆ ಕೇಂದ್ರಕ್ಕೆ ಹೋಗಬೇಕಾಗುತ್ತದೆ. ಮತಗಟ್ಟೆ ಎಂದರೆ ಮತದಾನ ಮಾಡುವ ಸ್ಥಳವೆಂದರ್ಥ. ಅಲ್ಲಿ ತರಬೇತಿ ಪಡೆದ ಚುನಾವಣಾ ಅಧಿಕಾರಿಗಳು ನಿಯೋಜನೆ ಗೊಂಡಿರುತ್ತಾರೆ. ಮತಗಟ್ಟೆಗಳಲ್ಲಿ ಮತದಾರನ ಗುರುತು ಖಾತ್ರಿಯಾದ ಮೇಲೆ ಅವನಿಗೆ ಮತದಾನಕ್ಕಾಗಿ 'ಮತ ಪತ್ರ' (Ballot Paper)ವನ್ನು ನೀಡುತ್ತಾರೆ. ಈ ಮತಪತ್ರದಲ್ಲಿ ಎಲ್ಲಾ ಅಭ್ಯರ್ಥಿಗಳ ಹೆಸರುಗಳು ಮತ್ತು ಅವರವರ ಹೆಸರುಗಳ ಮುಂದೆ ಅವರವರಿಗೆ ಚುನಾವಣಾ ಆಯೋಗ ನೀಡಿರುವ ಚಿಹ್ನೆಗಳು ಮುದ್ರಿತಗೊಂಡಿರುತ್ತವೆ. ಅನಕ್ಷರಸ್ಥರೂ ಕೂಡ ತಮ್ಮ ಅಭ್ಯರ್ಥಿಯನ್ನು ಆಯ್ಕೆಮಾಡಿಕೊಳ್ಳಲು ಈ ಚಿಹ್ನೆಗಳು ಅನುವುಮಾಡಿಕೊಡುತ್ತವೆ.


ವಿದ್ಯುನ್ಮಾನ ಮತಯಂತ್ರ



ವಿವಿ ಪ್ಯಾಟ್

ಈಗ ವಿದ್ಯುನ್ಮಾನ ಮತಯಂತ್ರಗಳನ್ನು ಹಳೆಯ ಮತ ಪತ್ರಗಳ ಬದಲಿಗೆ ಅಳವಡಿಸಿಕೊಳ್ಳಲಾಗಿದೆ. ಮತದಾರರು ಈ ಯಂತ್ರದಲ್ಲಿ ತಮ್ಮ ಅಭ್ಯರ್ಥಿಯ ಆಯ್ಕೆಯನ್ನು ಅಭ್ಯರ್ಥಿಯ ಹೆಸರಿನ ಮುಂದೆ ಇರುವ ವಿದ್ಯುತ್ ಗುಂಡಿಯನ್ನು ಒತ್ತುವುದರ ಮೂಲಕ ತನ್ನ ಮತವನ್ನು ದಾಖಲಿಸುತ್ತಾನೆ. ಮತದಾನದ ಸಮಯ ಮುಗಿದ ಮೇಲೆ ಈ ಮತ ಪೆಟ್ಟಿಗೆ ಅಥವಾ ಮತಯಂತ್ರವನ್ನು ಸಂಬಂಧಿತ ಕೇಂದ್ರಗಳಿಗೆ ತಲುಪಿಸಲಾಗುತ್ತದೆ.

© KTBS NOT TO BE REPUBLISHED

**ನಿಮಗಿದು ತಿಳಿದಿರಲಿ:**

- ಪ್ರತಿ ಒಂದು ಚುನಾವಣಾ ಕ್ರೇತ್ರದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ನಿರ್ವಹಿಸುವ ಸಲುವಾಗಿ ಒಬ್ಬ ಅಧಿಕಾರಿಯನ್ನು ಚುನಾವಣಾ ಆಯೋಗವು ನೇಮಿಸುತ್ತದೆ. ಅವನನ್ನು 'ಚುನಾವಣಾಧಿಕಾರಿ' (Returning Officer) ಎಂದು ಕರೆಯಲಾಗುತ್ತದೆ. ಈ ಅಧಿಕಾರಿಯ ಅಧೀನದಲ್ಲಿ ಮತಗಟ್ಟೆಗಳಲ್ಲಿ ಕಾರ್ಯನಿರ್ವಹಿಸಲು ಬೇಕಾಗುವ ಚುನಾವಣಾ ಸಿಬ್ಬಂದಿ ನೇಮಕಗೊಳ್ಳುತ್ತದೆ.
- ವಿವಿಪ್ಯಾಟ್ – ವಿವಿಪ್ಯಾಟ್‌ಗಳನ್ನು ಮತಯಂತ್ರಗಳಿಗೆ ಜೋಡಿಸಲಾಗಿರುತ್ತದೆ. ಇವಿಎಂನಲ್ಲಿ ಮತದಾನ ಮಾಡುತ್ತಿದ್ದಂತೆ ಯಾರಿಗೆ ಮತ ಹಾಕಿದ್ದೇವೆ ಎನ್ನುವುದನ್ನು ತೋರಿಸುವ ಚೀಟಿಯೊಂದು ವಿವಿಪ್ಯಾಟ್‌ನಲ್ಲಿ ಕಾಣಿಸಿಕೊಳ್ಳುತ್ತದೆ.
- ನೋಟಾ (NOTA- None Of The Above): ಚುನಾವಣಾ ವ್ಯವಸ್ಥೆಯ ಪ್ರಮುಖ ಅಸ್ತ್ರ ಎಂದು ನೋಟಾ ಆಯ್ಕೆಯನ್ನು ಗುರುತಿಸಲಾಗುತ್ತಿದೆ. ಮತದಾನದ ಮೂಲಕ ದೇಶದ ಆಡಳಿತ ವ್ಯವಸ್ಥೆ ಬದಲಿಸುವ ಸಾಮರ್ಥ್ಯ ಈ ಮತದಾನಕ್ಕಿದೆ. ಮತ ಚಲಾವಣೆ ಪ್ರತಿಯೊಬ್ಬರ ಹಕ್ಕು ಮತ್ತು ಕರ್ತವ್ಯ. ಯಾವೊಬ್ಬ ಅಭ್ಯರ್ಥಿಗೂ ಮತ ಚಲಾಯಿಸದೇ ತನ್ನ ಮತದಾನದ ಕರ್ತವ್ಯವನ್ನು ನಿಭಾಯಿಸುವುದೇ ನೋಟಾ ಆಯ್ಕೆ. ಅಂದರೆ ಮತದಾನ ಪಟ್ಟಿಯಲ್ಲಿರುವ ಯಾರೂ ನನ್ನ ಮತಕ್ಕೆ ಅರ್ಹರಲ್ಲ ಎಂಬ ಅಭಿಪ್ರಾಯ ತಿಳಿಸುವ ಹಕ್ಕು.

NOT TO BE REPUBLISHED ©KTBS

**ಮತ ಎಣಿಕೆ :** ಚುನಾವಣೆ ಮುಗಿದ ಮೇಲೆ ನಿಗದಿತ ದಿನದಂದು ಅಭ್ಯರ್ಥಿಗಳು ಮತ್ತು ಅವರ ಮಧ್ಯವರ್ತಿಗಳ ಸಮ್ಮುಖದಲ್ಲಿ ಎಣಿಕೆಗೆ ನೇಮಕಗೊಂಡ ಅಧಿಕಾರಿಗಳಿಂದ ಮತಗಳ ಎಣಿಕೆಯು ನಿರ್ದಿಷ್ಟ ಕೇಂದ್ರದಲ್ಲಿ ನಡೆಯುತ್ತದೆ. ವಿದ್ಯುನ್ಮಾನ ಮತಯಂತ್ರಗಳು ಬಂದ ಮೇಲೆ ಮತ ಎಣಿಕೆಯು ಅತ್ಯಂತ ಸುಲಭವೆನಿಸಿದೆ. ವಿಶೇಷ ಸಂದರ್ಭದಲ್ಲಿ ಮರು ಎಣಿಕೆಗೆ ಅವಕಾಶವಿರುತ್ತದೆ ಹಾಗೂ ಏನಾದರು ಅವ್ಯವಹಾರಗಳು ಕಂಡು ಬಂದಲ್ಲಿ ಅಭ್ಯರ್ಥಿಗಳು ನ್ಯಾಯಾಲಯದ ಮೊರೆ ಹೋಗಬಹುದಾಗಿದೆ. ರಿಟರ್ನಿಂಗ್ ಅಧಿಕಾರಿಯು ಮತ ಎಣಿಕೆಯ ಫಲಿತಾಂಶ ಘೋಷಿಸುತ್ತಾನೆ.

**ರಾಜಕೀಯ ಪಕ್ಷಗಳು :** ಪ್ರಜಾಪ್ರಭುತ್ವ ಮಾದರಿ ಸರ್ಕಾರಗಳಲ್ಲಿ ರಾಜಕೀಯ ಪಕ್ಷಗಳು ಅವಶ್ಯಕ ಮತ್ತು ಅನಿವಾರ್ಯ. ಈ ರಾಜಕೀಯ ಪಕ್ಷಗಳು ಪ್ರತಿನಿಧಿಗಳು, ಸರ್ಕಾರ ಮತ್ತು ಜನ ಸಮುದಾಯದ ನಡುವಿನ ಕೊಂಡಿಯಿದ್ದಂತೆ. ರಾಜಕೀಯ ಪಕ್ಷಗಳು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗಾಗಿ ನಿಯಮಗಳನ್ನು ಹಾಗೂ ಕಾನೂನುಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ರಾಜಕೀಯ ಪಕ್ಷಗಳು ಕೆಲವೊಮ್ಮೆ ರಾಜಕೀಯ ಪ್ರವೇಶ ಬಯಸುವವರಿಗೆ ತರಬೇತಿ ಕೇಂದ್ರಗಳಾಗುತ್ತವೆ. ರಾಷ್ಟ್ರಮಟ್ಟದಲ್ಲಿ ಕೇಂದ್ರ ಸಂಸತ್ತಿನ ಕೆಳಮನೆ ಅಥವಾ ಲೋಕಸಭೆ, ರಾಜ್ಯಮಟ್ಟದಲ್ಲಿ ಕೆಳಮನೆ ಅಥವಾ ವಿಧಾನಸಭೆಯಲ್ಲಿ ಬಹುಮತ ಹೊಂದಿರುವ ರಾಜಕೀಯ ಪಕ್ಷವು ಸರ್ಕಾರ ರಚಿಸುತ್ತವೆ. ಯಾವ ಪಕ್ಷ ಸರ್ಕಾರ ರಚಿಸಿಕೊಳ್ಳುತ್ತದೆಯೋ ಆ ಪಕ್ಷವನ್ನು 'ಆಡಳಿತ ಪಕ್ಷ' ಎನ್ನುತ್ತಾರೆ. ಎರಡನೇ ಸ್ಥಾನದಲ್ಲಿ ಬಹುಮತ ಪಡೆದ ಪಕ್ಷವು 'ವಿರೋಧ ಪಕ್ಷ' ಎಂದು ಕರೆಸಿಕೊಂಡು ಆಡಳಿತ ಪಕ್ಷದ ಚಟುವಟಿಕೆಗಳ ವಿಮರ್ಶೆಮಾಡುವ ಅಧಿಕಾರ ಹೊಂದಿರುತ್ತದೆ. ಉಳಿದ ಸಣ್ಣ ಸಣ್ಣ ಪಕ್ಷಗಳು ಹಾಗೂ ಸ್ವತಂತ್ರ ಅಭ್ಯರ್ಥಿಗಳು ಸಮಯ ಬಂದಾಗ ತಮ್ಮ ಸ್ವ ಇಚ್ಛೆಯಿಂದ ಆಡಳಿತ ಅಥವಾ ವಿರೋಧ ಪಕ್ಷವನ್ನು ಬೆಂಬಲಿಸುವ ಅಧಿಕಾರ ಹೊಂದಿವೆ.

**ರಾಷ್ಟ್ರೀಯ ಪಕ್ಷಗಳು :** ಭಾರತದಲ್ಲಿ ಹಲವು ರಾಜಕೀಯ ಪಕ್ಷಗಳಿದ್ದು ಅವುಗಳನ್ನು ರಾಷ್ಟ್ರೀಯ ರಾಜಕೀಯ ಪಕ್ಷಗಳು ಮತ್ತು ಪ್ರಾಂತೀಯ ರಾಜಕೀಯ ಪಕ್ಷಗಳು ಎಂದು ವರ್ಗೀಕರಿಸಬಹುದಾಗಿದೆ. ರಾಷ್ಟ್ರೀಯ ರಾಜಕೀಯ ಪಕ್ಷಗಳು ನಮ್ಮ ದೇಶದ ಹಲವಾರು ರಾಜ್ಯಗಳಲ್ಲಿ ತಮ್ಮ ಶಾಖೆಗಳನ್ನು ಹೊಂದಿರುವುದು ಕಂಡು ಬರುತ್ತದೆ. ಈ ರಾಷ್ಟ್ರೀಯ ಪಕ್ಷಗಳು ಕೇಂದ್ರದ ಲೋಕಸಭೆ ಮತ್ತು ರಾಜ್ಯದ ವಿಧಾನಸಭೆಗಳಲ್ಲಿ ಗೌರವಯುತವಾದ ಸಂಖ್ಯೆಯ ಪ್ರತಿನಿಧಿಗಳನ್ನು ಹೊಂದಿರುತ್ತವೆ. ರಾಷ್ಟ್ರೀಯ ರಾಜಕೀಯ ಪಕ್ಷಗಳಿಗೆ ಚುನಾವಣಾ  ಆಯೋಗವು ಮಾನ್ಯತೆ ನೀಡುತ್ತದೆ. ರಾಷ್ಟ್ರೀಯ ಕಾಂಗ್ರೆಸ್ ಪಕ್ಷ, ಭಾರತೀಯ ಜನತಾ ಪಕ್ಷ, ಇತ್ಯಾದಿಗಳು ರಾಷ್ಟ್ರೀಯ ಪಕ್ಷಗಳಾಗಿದ್ದು ತಮ್ಮದೇ ಆದ ಪಕ್ಷದ ಚಿಹ್ನೆಗಳನ್ನು ಹೊಂದಿ ಗುರುತಿಸಿಕೊಂಡಿವೆ.

**ಪ್ರಾದೇಶಿಕ ರಾಜಕೀಯ ಪಕ್ಷಗಳು:** ಪ್ರಾದೇಶಿಕ ರಾಜಕೀಯ ಪಕ್ಷಗಳನ್ನು ರಾಜ್ಯಗಳ ರಾಜಕೀಯ ಪಕ್ಷಗಳೆಂತಲೂ ಕರೆಯುತ್ತಾರೆ. ವಿಧಾನಸಭೆಯಲ್ಲಿ ಗಣನೀಯ ಸಂಖ್ಯೆಯ ಅಭ್ಯರ್ಥಿಗಳನ್ನು ಅಥವಾ ಸದಸ್ಯರನ್ನು ಹೊಂದಿರುವ ರಾಜ್ಯ ಪಕ್ಷಗಳನ್ನು ಪ್ರಾದೇಶಿಕ ಪಕ್ಷಗಳೆಂದು ಮಾನ್ಯ ಮಾಡುತ್ತಾರೆ. ಹಲವಾರು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ತಮ್ಮ ವರ್ಚಸ್ಸಿನಿಂದಾಗಿ ಬಹುಮತ ಪಡೆದು ಸರ್ಕಾರ ರಚಿಸಿಕೊಂಡಿರುತ್ತವೆ. ಪ್ರಾದೇಶಿಕ ರಾಜಕೀಯ ಪಕ್ಷಗಳು ಸರ್ಕಾರ ರಚಿಸಿಕೊಂಡು ಆಡಳಿತ ನಡೆಸಿದ್ದಕ್ಕೆ ಉದಾಹರಣೆಯಾಗಿ ತಮಿಳುನಾಡಿನ ಡಿ.ಎಂ.ಕೆ ಮತ್ತು ಎ.ಐ.ಎ.ಡಿ.ಎಂ.ಕೆ ಪಕ್ಷ, ಅಸ್ಸಾಂನ ಅಸ್ಸಾಂಗಣ ಪರಿಷತ್, ಆಂದ್ರಪ್ರದೇಶದ ತೆಲುಗು ದೇಶಂ ಪಕ್ಷ, ಮಹಾರಾಷ್ಟ್ರದ ಶಿವಸೇನಾ ಪಕ್ಷ, ಕರ್ನಾಟಕದ ಜನತಾದಳ (ಜಾತ್ಯತೀತ) ಪಕ್ಷ ಮತ್ತು ಸಮಾಜವಾದಿ ಪಕ್ಷಗಳು ಪ್ರಮುಖವಾಗಿವೆ. ಈ ಎಲ್ಲಾ ಪ್ರಾದೇಶಿಕ ಪಕ್ಷಗಳು ತಮ್ಮವೇ ಆದ ಪಕ್ಷದ ಚಿಹ್ನೆಯನ್ನು ಹೊಂದಿರುತ್ತವೆ.

ಪ್ರಾದೇಶಿಕ ಪಕ್ಷಗಳು ಲೋಕಸಭೆಯಲ್ಲೂ ತನ್ನ ಪ್ರತಿನಿಧಿಗಳನ್ನು ಹೊಂದಿರಬಹುದು. ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರಕದಿದ್ದ ಪಕ್ಷದಲ್ಲಿ ಸರ್ಕಾರದ ರಚನೆಯಲ್ಲಿ ಪ್ರಾದೇಶಿಕ ಪಕ್ಷಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತಿರುವುದನ್ನು ನಾವೆಲ್ಲರೂ ಕೇಂದ್ರ ಮತ್ತು ರಾಜ್ಯಸರ್ಕಾರಗಳಲ್ಲಿ ಕಾಣುತ್ತಿದ್ದೇವೆ.

**ಸಮ್ಮಿಶ್ರ ಸರ್ಕಾರಗಳು :** ಇತ್ತೀಚಿನ ದಿನಗಳಲ್ಲಿ ಹಲವಾರು ಪಕ್ಷಗಳು ಅಧಿಕಾರಕ್ಕಾಗಿ ಚುನಾವಣೆಗಳಲ್ಲಿ ಭಾಗವಹಿಸುತ್ತಿವೆ. ಯಾವುದಾದರೊಂದು ಪಕ್ಷ ಸ್ಪಷ್ಟ ಬಹುಮತ ಪಡೆದರೆ ಅಂತಹ ಪಕ್ಷ ಸರ್ಕಾರ ರಚಿಸಿ ಆಡಳಿತ ನಡೆಸಿಕೊಂಡು ಹೋಗುತ್ತದೆ. ಎಷ್ಟೋ ಸಂದರ್ಭದಲ್ಲಿ ಯಾವ ಪಕ್ಷಕ್ಕೂ ಸರ್ಕಾರ ರಚನೆಗೆ ಬೇಕಿರುವ ಸ್ಪಷ್ಟ ಬಹುಮತ ಬರುವುದಿಲ್ಲ. ಅಂತಹ ಸಂದರ್ಭವನ್ನು "ಅತಂತ್ರ ಲೋಕಸಭೆ ಅಥವಾ ಅತಂತ್ರ ವಿಧಾನಸಭೆ" (Hung Parliament or Assembly) ಎನ್ನಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಕೆಲವು ಪಕ್ಷಗಳು ಸಂಯೋಜನೆಗೊಂಡು ಅವಶ್ಯವಿರುವ ಸದಸ್ಯ ಬಲವನ್ನು ಸಾಬೀತುಪಡಿಸಿ ಸರ್ಕಾರ ರಚಿಸಿಕೊಳ್ಳುತ್ತವೆ. ಈ ಪ್ರಕಾರದ ಮೈತ್ರಿಗೆ 'ಮತದಾನೋತ್ತರ ಮೈತ್ರಿ' (Post-Poll alliance) ಎನ್ನುತ್ತಾರೆ. ಕೆಲವೊಮ್ಮೆ ಚುನಾವಣೆಗೆ ಮುಂಚಿತವಾಗಿಯೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪಕ್ಷಗಳು ಕೂಡಿಕೊಂಡು ಸ್ಥಾನ ಹಂಚಿಕೆಯನ್ನು ಮಾಡಿಕೊಂಡು ಚುನಾವಣೆಗೆ ಜಂಟಿಯಾಗಿ ಸ್ಪರ್ಧಿಸುತ್ತವೆ. ಈ ಪ್ರಕಾರದ ಮೈತ್ರಿಯನ್ನು 'ಮತದಾನ ಪೂರ್ವ ಮೈತ್ರಿ' (Pre-Poll alliance) ಎಂದು ಕರೆಯುತ್ತಾರೆ. ಈ ಎರಡೂ ಪ್ರಕಾರದ ಮೈತ್ರಿಗಳು ಯಾವಾಗ ಅತಂತ್ರ ಸ್ಥಿತಿ ಉಂಟಾಗುತ್ತದೆಯೋ ಆ ಸಂದರ್ಭದಲ್ಲಿ ಸರ್ಕಾರ ರಚಿಸಿಕೊಳ್ಳಲು ಸಹಕಾರಿಯಾಗುತ್ತವೆ. ಈ ಪ್ರಕಾರವಾಗಿ ಎರಡಕ್ಕಿಂತ ಹೆಚ್ಚು ಪಕ್ಷಗಳ ಸಹಕಾರದಿಂದ ರಚಿತಗೊಂಡ ಸರ್ಕಾರವನ್ನು 'ಸಮ್ಮಿಶ್ರ ಸರ್ಕಾರ' ಎಂದು ಕರೆಯುತ್ತಾರೆ. ಸಮ್ಮಿಶ್ರ ಸರ್ಕಾರದಲ್ಲಿ ಮೈತ್ರಿ ಹೊಂದಿದ ಪಕ್ಷಗಳು ಮಂತ್ರಿಮಂಡಲದಲ್ಲಿ ತಮ್ಮ ತಮ್ಮ ಪಾಲುಗಳನ್ನು ಹಂಚಿಕೊಳ್ಳುತ್ತಾರೆ. ಕೆಲವೊಮ್ಮೆ

© KTBS NOT TO BE REPUBLISHED

ಮೈತ್ರಿಕೂಟದ ಪಕ್ಷವು ಅಧಿಕಾರದಲ್ಲಿ ಪಾಲು ಪಡೆಯದೆ ಪ್ರಮುಖ ಪಕ್ಷವೊಂದನ್ನು ಬೆಂಬಲಿಸಿದಾಗ ಅಂತಹ ಸಂದರ್ಭವನ್ನು 'ಬಾಹ್ಯ ಬೆಂಬಲ' ಎಂದು ಕರೆಯುತ್ತಾರೆ. ಸುಮಾರು 1989 ನೇ ಇಸವಿಯಿಂದ ಲೋಕಸಭೆ ಮತ್ತು ಕೆಲವು ವಿಧಾನಸಭೆಗಳಲ್ಲಿ ಅತಂತ್ರ ಸರ್ಕಾರಗಳು ಉಂಟಾಗಿರುವುದು ಸಾಮಾನ್ಯವಾಗಿದೆ.

**ಸಾರ್ವಜನಿಕ ಅಭಿಪ್ರಾಯ :** ಸಾಮಾನ್ಯ ಪ್ರಜೆಯೊಬ್ಬ ತನಗೆ ಸಂಬಂಧಿಸಿದ ನಿರ್ಧಿಷ್ಟ ವಿಷಯವೊಂದಕ್ಕೆ ತನ್ನ ಅಭಿಪ್ರಾಯವನ್ನು ಅಭಿವ್ಯಕ್ತಿಗೊಳಿಸುವುದೇ ಸಾರ್ವಜನಿಕ ಅಭಿಪ್ರಾಯವಾಗಿದೆ. ಈ ಅಭಿಪ್ರಾಯವು ಬಹುಜನರ ಅಥವಾ ರಾಜಕೀಯ ವ್ಯಕ್ತಿಗಳ ಅಭಿಪ್ರಾಯವೇನಲ್ಲ. ಸರ್ಕಾರವು ಸಾರ್ವಜನಿಕರ ಅಭಿಪ್ರಾಯಗಳ ಆಧಾರದ ಮೇಲೆ ನಿಯಮಗಳನ್ನು ರೂಪಿಸುತ್ತದೆ. ಇಂತಹ ಸಾರ್ವಜನಿಕ ಅಭಿಪ್ರಾಯಗಳು ವಿಷಯಾಧಾರಿತವಾಗಿ ಕಾಲಕಾಲಕ್ಕೆ ಬದಲಾಗುವ ಸಾಧ್ಯತೆಗಳಿವೆ. ಸಾರ್ವಜನಿಕರು ಘಟನೆಯೊಂದರ ಬಗ್ಗೆ ಜಾಗೃತಿ ಹೊಂದಿದ್ದು ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಸ್ವತಂತ್ರವಾಗಿ ಯಾವುದೇ ಹೆದರಿಕೆ ಅಥವಾ ಪೂರ್ವಾಗ್ರಹವಿಲ್ಲದೆ ವ್ಯಕ್ತಪಡಿಸಬಹುದಾಗಿದೆ. ಸರ್ಕಾರ ಮತ್ತು ರಾಜಕೀಯ ಪಕ್ಷಗಳು ಸಾರ್ವಜನಿಕ ಅಭಿಪ್ರಾಯಗಳನ್ನು ಪ್ರೋತ್ಸಾಹಿಸುತ್ತವೆ. ರೇಡಿಯೊ, ದೂರದರ್ಶನ, ವೃತ್ತಪತ್ರಿಕೆಗಳು, ನಿಯತಕಾಲಿಕಗಳು ಅಂತರ್ಜಾಲ ಮುಂತಾದ ಮಾಧ್ಯಮಗಳು ಸಾರ್ವಜನಿಕ ಅಭಿಪ್ರಾಯವನ್ನು ಹಂಚಿಕೊಳ್ಳಲು ನೆರವಾಗಿವೆ.

**ಮಾಧ್ಯಮ ಮತ್ತು ಪ್ರಜಾಪ್ರಭುತ್ವ :** ಪ್ರಸ್ತುತ ದಿನಂಪ್ರತಿ ಘಟಿಸುತ್ತಿರುವ ಘಟನೆಗಳ ಮಾಹಿತಿಗಳನ್ನು ಮಾಧ್ಯಮವು ಒದಗಿಸುತ್ತಿದೆ. ಮಾಧ್ಯಮಗಳು ಸರ್ಕಾರದ ಯೋಜನೆಗಳು ಮತ್ತು ನಿಯಮಗಳನ್ನು ಜನರು ತಿಳಿಯುವಂತೆ ಮಾಡುತ್ತವೆ. ಮಾಧ್ಯಮಗಳು ಸರ್ಕಾರದ ಕಾರ್ಯವೈಖರಿಯ ಬಗ್ಗೆ ಜನರಿಗೆ ಮಾಹಿತಿ ನೀಡುವುದರ ಜೊತೆ ಪ್ರಮುಖ ಸಂಗತಿಗಳ ಬಗೆಗಿನ ಜನಸಾಮಾನ್ಯರ ಅಭಿಪ್ರಾಯವನ್ನು ಸರ್ಕಾರ ಗಮನಿಸುವಂತೆ ಮಾಡುತ್ತದೆ. ಜನಸಾಮನ್ಯರಿಂದ ಎತ್ತಲ್ಪಟ್ಟ ವಿಷಯಗಳಿಗೆ ಜನಪ್ರತಿನಿಧಿಗಳು ಉತ್ತರಿಸುವಂತೆ ಮತ್ತು ಜವಾಬ್ದಾರರಾಗುವಂತೆ ಮಾಧ್ಯಮಗಳು ನೋಡಿಕೊಳ್ಳುತ್ತವೆ. ಆದಕಾರಣ ಮಾಧ್ಯಮವು ಯಾವತ್ತೂ ಸತ್ಯವಾದ, ಭೀತಿಯಿಲ್ಲದ, ಪಕ್ಷಪಾತವಿಲ್ಲದ ಅಭಿಪ್ರಾಯಗಳನ್ನು ದೊರಕಿಸಿಕೊಡಬೇಕೆ ಹೊರತು ಸೂಕ್ಷ್ಮ ವಿಚಾರಗಳನ್ನು ವೈಭವೀಕರಿಸಿ ಭಯದ ವಾತಾವರಣ ಸೃಷ್ಟಿಸಬಾರದು. ಮಾಧ್ಯಮವು ಸಂಗತಿಗಳನ್ನು ಬಿತ್ತರಿಸುವಾಗ ಐಕ್ಯತೆ, ಜಾತ್ಯತೀತತೆ, ಪ್ರಜಾಪ್ರಭುತ್ವದ ತತ್ವಗಳಿಗೆ ಹಾನಿಯುಂಟಾಗದಂತೆ ಎಚ್ಚರವಹಿಸಬೇಕು.

ಪತ್ರಿಕಾ ಮಾಧ್ಯಮವು ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಒಳಗೊಂಡಿದ್ದು, ಭಾರತದಲ್ಲಿ ಈ ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಕಡ್ಡಾಯವಾಗಿ ದಿನಪತ್ರಿಕಾ ನೋಂದಣಿ (Registrar of News Papers) ಕಛೇರಿಯಲ್ಲಿ ನೋಂದಾಯಿಸಿಕೊಂಡಿರತಕ್ಕದ್ದು. ದಿನಪತ್ರಿಕೆಗಳ ಗುಣಮಟ್ಟ ಹೆಚ್ಚಿಸಲು ಮತ್ತು ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಗಾಗಿ 'ಭಾರತೀಯ ಪತ್ರಿಕಾ ಪರಿಷತ್ತು' (Press Council of India) ಎಂಬ ಸಂಸ್ಥೆಯನ್ನು ಭಾರತದಲ್ಲಿ ಸ್ಥಾಪಿಸಲಾಗಿದೆ.

ಮಾಧ್ಯಮಕ್ಷೇತ್ರದಲ್ಲಿ ದೂರದರ್ಶನ, ರೇಡಿಯೋ, ಅಂತರ್ಜಾಲ ಇತ್ಯಾದಿ ವಿದ್ಯುನ್ಮಾನ ಮಾಧ್ಯಮಗಳೂ ಸೇರ್ಪಡೆಗೊಂಡಿವೆ. ಈ ವಿದ್ಯುನ್ಮಾನ ಮಧ್ಯವರ್ತಿಗಳು 1962ರ ಬಾನುಲಿ ಪ್ರಸರಣ ಸಂಹಿತೆಯಡಿ ಕಾರ್ಯನಿರ್ವಹಿಸುತ್ತಿದ್ದು ಜನಸಾಮಾನ್ಯರು, ಅಧಿಕಾರಿಗಳು ಮತ್ತು ಇತರೆ ನಾಯಕರುಗಳು ಅನೇಕ ಪ್ರಸಂಗಗಳಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿವೆ.

NOT TO BE REPUBLISHED ©KTBS

## ಅಭ್ಯಾಸಗಳು

**I. ಖಾಲಿಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಮತದಾರರ ಪಟ್ಟಿಯು ________________ ವರ್ಷಗಳಿಗೊಮ್ಮೆ ಪರಿಷ್ಕೃತಗೊಳ್ಳುತ್ತದೆ.
2. ಪ್ರಚಾರ ಕಾರ್ಯವು ಮತದಾನದ ದಿನಕ್ಕಿಂತ ________________ ಗಂಟೆಗಳ ಮುಂಚಿತವಾಗಿ ಮುಕ್ತಾಯವಾಗುತ್ತದೆ.
3. ರಾಜಕೀಯ ಪಕ್ಷಗಳಿಗೆ ________________ ಮಾನ್ಯತೆ ನೀಡುತ್ತವೆ.
4. ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಗಾಗಿ ಇರುವ ಸಂಸ್ಥೆ ________________

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಮತದಾರರ ಪಟ್ಟಿಯ ಕುರಿತು ಟಿಪ್ಪಣಿ ಬರೆಯಿರಿ.
2. 'ರಾಜಕೀಯ ಪಕ್ಷಗಳು ಪ್ರತಿನಿಧಿಗಳು ಸರ್ಕಾರ ಮತ್ತು ಜನ ಸಮುದಾಯದ ನಡುವಿನ ಕೊಂಡಿಯಿದ್ದಂತೆ' ಸಮರ್ಥಿಸಿರಿ.
3. ಸಮ್ಮಿಶ್ರ ಸರ್ಕಾರಗಳ ಕುರಿತು ಬರೆಯಿರಿ.

**III. ಚಟುವಟಿಕೆಗಳು**

1. ಚುನಾವಣಾ ಪ್ರಕ್ರಿಯೆ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸುವುದು.
2. ಚುನಾವಣಾ ಆಯೋಗದ ಕಾರ್ಯಗಳ ಪಟ್ಟಿ ತಯಾರಿಸುವುದು.
3. ರಾಷ್ಟ್ರೀಯ ಪಕ್ಷಗಳ ಪಟ್ಟಿ ತಯಾರಿಸುವುದು.
4. ನೋಟಾ ಸೌಲಭ್ಯವು ಪ್ರಜಾಪ್ರಭುತ್ವಕ್ಕೆ ಪೂರಕವೋ ಮಾರಕವೋ ಎಂದು ಚರ್ಚಿಸಿ.

©KTBS
NOT TO BE REPUBLISHED

# ಅಧ್ಯಾಯ – 22

# ದೇಶದ ರಕ್ಷಣೆ

T1L4T5

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಸೇನಾ ಪಡೆಗಳ ವಿಧಗಳು, ಅವುಗಳ ಹೊಣೆಗಾರಿಕೆ
- ಸೇನಾ ಪಡೆಗಳ ಕೇಂದ್ರ ಸ್ಥಾನಗಳು ಮತ್ತು ಮುಖ್ಯಸ್ಥರು
- ಸೇನಾ ಕ್ಷೇತ್ರದಲ್ಲಿ ರಾಷ್ಟ್ರ ರಕ್ಷಣೆಗೆ ಆಗಿರುವ ಅಭಿವೃದ್ಧಿ
- ಸೇನಾ ಪಡೆಗಳಲ್ಲದೆ ಎರಡನೇ ಸಾಲಿನ ರಕ್ಷಣಾ ವ್ಯವಸ್ಥೆಯ ಘಟಕಗಳು

ನಮ್ಮ ದೇಶ ಈಗಾಗಲೇ ನಿಮಗೆ ತಿಳಿದಿರುವಂತೆ ಪರಕೀಯರ ಆಕ್ರಮಣಕ್ಕೆ ಒಳಗಾಗಿದ್ದು, ಅನೇಕ ಹೋರಾಟ, ತ್ಯಾಗ, ಬಲಿದಾನಗಳಿಂದ 1947 ಆಗಸ್ಟ್ 15 ರಂದು ಸ್ವಾತಂತ್ರ್ಯ ಪಡೆಯಿತು. ಈ ಸ್ವಾತಂತ್ರ್ಯ ಭಾರತವು ಮತ್ತೊಮ್ಮೆ ಪರಕೀಯರ ಆಕ್ರಮಣಕ್ಕೆ ಒಳಗಾಗದಂತೆ ರಕ್ಷಿಸುವುದು ಪ್ರಥಮ ಕರ್ತವ್ಯವಾಗಿದೆ. ಇದೇ ವೇಳೆ ನಮ್ಮ ರಕ್ಷಣಾ ವ್ಯವಸ್ಥೆಯನ್ನು ಸಾಕಷ್ಟು ಸಜ್ಜುಗೊಳಿಸಿ ಇತರರ ದಾಳಿಯಿಂದ ರಕ್ಷಿಸಬೇಕಾಗುತ್ತದೆ.

ಭಾರತವು ಸುಮಾರು 15,200 ಕಿ.ಮೀ. ಭೂಗಡಿಯನ್ನೂ, 7516.50 ಕಿ.ಮೀ. ಜಲಗಡಿಯನ್ನೂ ಹೊಂದಿದೆ. ಪಾಕಿಸ್ತಾನ, ಚೈನಾ, ಭೂತಾನ್, ನೇಪಾಳ, ಬಾಂಗ್ಲಾದೇಶ, ಮಯನ್ಮಾರ್ ಮತ್ತು ಶ್ರೀಲಂಕಾ ದೇಶಗಳು ನೆರೆ ದೇಶಗಳಾಗಿವೆ. ಇಂಡೋನೇಷಿಯಾ, ಮಲೇಶಿಯಾ, ಕಾಂಬೋಡಿಯಾ, ಥೈಲ್ಯಾಂಡ್, ವಿಯಟ್ನಾಂ ಮತ್ತು ಮಾಲ್ಡೀವ್ಸ್‌ಗಳು ಸಮುದ್ರ ಸಂಪರ್ಕದ ನೆರೆ ರಾಷ್ಟ್ರಗಳಾಗಿವೆ. ನಾವು ಶಾಂತಿಯನ್ನು ಬಯಸಿದರೂ, ನೆರೆ ರಾಷ್ಟ್ರಗಳು ನಮ್ಮನ್ನು ಶಾಂತಿಯಿಂದ ಇರಲು ಬಿಡುವುದಿಲ್ಲ. ಶಾಂತಿ ಸಂಧಾನ, ಮಾತುಕತೆಗಳು ಮತ್ತು ಒಪ್ಪಂದಗಳ ಮೂಲಕ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಭಾರತವು ನಡೆಸಿದ್ದರೂ ಈ ದಿಶೆಯಲ್ಲಿ ಸಾಕಷ್ಟು ಯಶಸ್ಸು ದೊರೆತಿಲ್ಲ. ಆದುದರಿಂದ ನಮ್ಮ ರಾಷ್ಟ್ರವನ್ನು ನಾವು ರಕ್ಷಿಸಿಕೊಳ್ಳಬೇಕಾಗಿದೆ. ಇದಕ್ಕೆ ನಮ್ಮ ರಕ್ಷಣಾಪಡೆಗಳ ಪಾತ್ರ ಅಪಾರವಾಗಿದೆ.

**ನಮ್ಮ ಸೇನಾಪಡೆಗಳ ರಚನೆ**

ನಮ್ಮ ದೇಶದಲ್ಲಿ ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಗಳಿವೆ. ಭಾರತದ ರಾಷ್ಟ್ರಪತಿಯವರು ಈ ಸೇನಾಪಡೆಗಳ ಪ್ರಧಾನ ದಂಡನಾಯಕರಾಗಿದ್ದಾರೆ. ಭೂಸೇನೆಯ ಮುಖ್ಯಸ್ಥರನ್ನು ದಂಡನಾಯಕ (ಜನರಲ್) ಎಂದೂ, ನೌಕಾಪಡೆಯ ಮುಖ್ಯಸ್ಥರನ್ನು ಅಡ್ಮಿರಲ್ ಎಂದೂ ಮತ್ತು ವಾಯುದಳದ ಮುಖ್ಯಸ್ಥರನ್ನು ಏರ್ ಚೀಫ್ ಮಾರ್ಷಲ್ ಎಂತಲೂ ಕರೆಯುತ್ತಾರೆ. 2001 ರಲ್ಲಿ ಈ ಮೂರು ಘಟಕಗಳ ಸಮನ್ವಯಕ್ಕಾಗಿ ಚೀಫ್ ಆಫ್ ಇಂಟಿಗ್ರೇಟೆಡ್ ಡಿಫೆನ್ಸ್ ಸ್ಟಾಫ್ ಎಂಬ ಅಧಿಕಾರಿಯನ್ನು ನೇಮಿಸಿದೆ. ರಾಷ್ಟ್ರದ ರಕ್ಷಣಾ ಮಂತ್ರಿಗಳು ಸಮಗ್ರ ಮೂರೂ ಪಡೆಗಳ (ಭೂಸೇನೆ, ವಾಯುಪಡೆ, ನೌಕಾಪಡೆ) ಕಾರ್ಯಗಳನ್ನು ಸಂಘಟಿಸುತ್ತಾರೆ. ಅಲ್ಲದೆ ಮೂರೂ ಪಡೆಗಳ ಕಾರ್ಯಗಳನ್ನು ಆಯಾ ಪಡೆಗಳ ದಂಡನಾಯಕರು (ಅಧಿಪತಿ) ನಿರ್ವಹಿಸುತ್ತಾರೆ. ಸೇನಾಪಡೆಗಳ ಪ್ರತಿಯೊಂದು ವಿಭಾಗವೂ ತನ್ನದೇ ಆದ ತರಬೇತಿ ಕೇಂದ್ರಗಳನ್ನು ಹೊಂದಿವೆ.

ರಕ್ಷಣಾ ಸಚಿವಾಲಯದ ಪ್ರಧಾನ ಕಛೇರಿ ದೆಹಲಿಯಲ್ಲಿದೆ. ಈ ಸಚಿವಾಲಯ 4 ಇಲಾಖೆಗಳನ್ನು (ವಿಭಾಗಗಳು) ಒಳಗೊಂಡಿದೆ. (1) ರಕ್ಷಣಾ ವಿಭಾಗ (2) ರಕ್ಷಣಾ ಉತ್ಪಾದನಾ ವಿಭಾಗ (3) ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗ ಮತ್ತು (4) ನಿವೃತ್ತಿ ಸೇನಾ ಕಲ್ಯಾಣ ವಿಭಾಗ.

© KTBS NOT TO BE REPUBLISHED

**ಭಾರತೀಯ ಭೂಸೇನೆ**

ಭೂಸೇನೆಯ ಪ್ರಧಾನ ಕಛೇರಿ ದೆಹಲಿಯಲ್ಲಿದೆ. ಇದರ ಮುಖ್ಯಸ್ಥರನ್ನು ಮಹಾ ದಂಡನಾಯಕರು ಎಂದು ಕರೆಯುತ್ತಾರೆ. ಇವರಿಗೆ ಉಪ ಮಹಾದಂಡನಾಯಕರು, ಸೇನಾಪತಿ, ಸೇನಾ ಪ್ರಧಾನ ಅಧಿಕಾರಿ, ಮಾಸ್ಟರ್ ಜನರಲ್, ಮಿಲಿಟರಿ ಕಾರ್ಯದರ್ಶಿ, ಮಿಲಿಟರಿ ಇಂಜಿನಿಯರ್ ಮುಂತಾದವರು ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ. ಭೂಸೇನೆಯು ಪದಾತಿದಳ (ಸೈನಿಕ), ಅಶ್ವದಳ (ಕ್ಯಾವಲ್ರಿ), ಟ್ಯಾಂಕುಗಳ ದಳ, ಫಿರಂಗಿ ದಳಗಳನ್ನು ಒಳಗೊಂಡಿದೆ. ಅಲ್ಲದೆ ಸರಬರಾಜು ಮತ್ತು ಇಂಜಿನಿಯರಿಂಗ್ ಘಟಕವೂ ಇದರಲ್ಲಿದೆ. ಆಡಳಿತದ ದೃಷ್ಟಿಯಿಂದ ಭಾರತೀಯ ಭೂಸೇನೆಯನ್ನು ಏಳು ಕಮಾಂಡುಗಳಾಗಿ ರೂಪಿಸಿದೆ. ಅವುಗಳು ಈ ಕೆಳಕಂಡಂತಿವೆ;

1) ಪಶ್ಚಿಮ ಕಮಾಂಡ್ – ಚಾಂದಿಮಂದಿರ್ (ಚಂಡೀಗಡ)
2) ಪೂರ್ವ ಕಮಾಂಡ್ – ಕೋಲ್ಕತ್ತಾ (ಪಶ್ಚಿಮಬಂಗಾಳ)
3) ಉತ್ತರ ಕಮಾಂಡ್ – ಉದಾಂಪುರ್ (ಕಾಶ್ಮೀರ)
4) ದಕ್ಷಿಣ ಕಮಾಂಡ್ – ಪುಣೆ (ಮಹಾರಾಷ್ಟ್ರ)
5) ಕೇಂದ್ರ ಕಮಾಂಡ್ – ಲಕ್ನೋ (ಉತ್ತರಪ್ರದೇಶ)
6) ತರಬೇತಿ ಕಮಾಂಡ್ – ಮಾವ್ (ಮಧ್ಯಪ್ರದೇಶ)
7) ವಾಯುವ್ಯ ಕಮಾಂಡ್ – ಜೈಪುರ (ರಾಜಸ್ತಾನ)



**ಭೂಸೇನೆ**

ಈ ಕಮಾಂಡ್‌ಗಳನ್ನು ಮತ್ತೆ ಏರಿಯಾ (ವಲಯ) ಮತ್ತು ಸಬ್ ಏರಿಯಾ (ಉಪವಲಯ) ಗಳಾಗಿ ವಿಂಗಡಿಸಿದೆ. ಲೆಫ್ಟಿನೆಂಟ್ ಜನರಲ್ ಎಂಬ ಪದಾಧಿಕಾರಿ ಕಮಾಂಡಿನ ಮುಖ್ಯಸ್ಥರಾಗಿರುತ್ತಾರೆ. ಪ್ರತಿ ವಲಯದಲ್ಲಿ ಮೇಜರ್ ಜನರಲ್ ಮುಖ್ಯಸ್ಥರಾಗಿರುತ್ತಾರೆ. ಉಪವಲಯದ ಮುಖ್ಯಸ್ಥರನ್ನು ಬ್ರಿಗೇಡಿಯರ್ ಎಂದು ಕರೆಯುತ್ತಾರೆ. ಪುಣೆ ನಗರದ ಹತ್ತಿರವಿರುವ ಖಡಕ್‌ವಾಸ್ಲಾದಲ್ಲಿಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿ, ಉದಕಮಂಡಲದ ಬಳಿಯಲ್ಲಿರುವ ವೆಲ್ಲಿಂಗ್‌ಟನ್‌ನಲ್ಲಿಯ ರಕ್ಷಣಾ ಸೇನಾ ಸಿಬ್ಬಂದಿ ಕಾಲೇಜು, ನವದೆಹಲಿಯಲ್ಲಿರುವ ರಾಷ್ಟ್ರೀಯ ರಕ್ಷಣಾ ಕಾಲೇಜು, ಡೆಹರಾಡೂನ್‌ನಲ್ಲಿರುವ ಭಾರತೀಯ ಮಿಲಿಟರಿ ಅಕಾಡೆಮಿ, ಚೆನ್ನೈನಲ್ಲಿರುವ ಅಧಿಕಾರಿಗಳ ತರಬೇತಿ ಶಾಲೆ ಮುಂತಾದುವು ಪ್ರಮುಖ ತರಬೇತಿ ಕೇಂದ್ರಗಳಾಗಿವೆ.

@KTBS NOT TO BE REPUBLISHED

ಭೂಸೇನೆಯಲ್ಲಿ ಒಟ್ಟು 12,37,117 ಯೋಧರಿದ್ದಾರೆ. 9,60,000ದಷ್ಟು ಕಾಯ್ದಿಟ್ಟ ಯೋಧರಿದ್ದಾರೆ.

ಭೂಸೈನ್ಯದ ಕಾರ್ಯವೇನೆಂದರೆ ಯಾವುದೇ ಹೊರ ರಾಷ್ಟ್ರದ ದಾಳಿಯಿಂದ ರಾಷ್ಟ್ರದ ಭೂಭಾಗವನ್ನು, ಸಮಗ್ರತೆಯನ್ನು ಕಾಪಾಡುವುದಾಗಿದೆ. ಈಗಿರುವ ನಮ್ಮ ಭೌಗೋಳಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಪರಿಸರದ ಮೇಲಿನ ರಕ್ಷಣೆ ಬಹುದೊಡ್ಡ ಕೆಲಸವಾಗಿದೆ. ಅಲ್ಲದೆ ಭೂಸೈನ್ಯ ಯಾವಾಗಲೂ ಯಾವುದೇ ಸವಾಲನ್ನು ಸ್ವೀಕರಿಸಲು ಸನ್ನದ್ಧವಾಗಿರುತ್ತದೆ. ದೇಶದ ಬಹುದೊಡ್ಡ ವಿಸ್ತಾರವನ್ನು ಹೊಂದಿರುವ ಗಡಿ ಪ್ರದೇಶದ ರಕ್ಷಣೆ, ನೈಸರ್ಗಿಕ ವಿಪತ್ತನ್ನು ಎದುರಿಸುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ.

ದೇಶದ ಗಡಿಗಳ ರಕ್ಷಣೆಯ ಜೊತೆಗೆ ನೈಸರ್ಗಿಕ ವಿಕೋಪಗಳಾದ ಭೂಕಂಪ, ಪ್ರವಾಹ, ಬರಗಾಲ, ಭೂಕುಸಿತ, ಬಿರುಗಾಳಿ ಮುಂತಾದ ಸಂದರ್ಭಗಳಲ್ಲಿ ಮಾನವೀಯ ಕಾರ್ಯಗಳನ್ನು ಭೂಸೇನೆ ನಿರ್ವಹಿಸುತ್ತದೆ. ಭೂಸೇನೆಯು ತಾಂತ್ರಿಕವಾಗಿ ಅತ್ಯಂತ ಮುಂದುವರಿದಿದೆಯಲ್ಲದೆ ಬೇಹುಗಾರಿಕೆ ವ್ಯವಸ್ಥೆಯನ್ನೂ ಹೊಂದಿದೆ.

**ಭಾರತೀಯ ನೌಕಾದಳ**

ಪ್ರಪಂಚದ ಬಹುದೊಡ್ಡ ಜಲಮೇರೆಯನ್ನು ಹೊಂದಿರುವ ಭಾರತ, ಉದ್ದವಾದ ಕರಾವಳಿಯನ್ನು, ಅಂಡಮಾನ್, ನಿಕೋಬಾರ್ ಮತ್ತು ಲಕ್ಷದ್ವೀಪಗಳನ್ನು ಒಳಗೊಂಡಿದೆ. ಇವುಗಳನ್ನು ರಕ್ಷಿಸಲು ಬಲಿಷ್ಠವಾದ ನೌಕಾದಳವಿದೆ. ಇದರ ಕೇಂದ್ರ ಕಛೇರಿಯೂ ಸಹ ದೆಹಲಿಯಲ್ಲಿದೆ. ಇದರ ಪ್ರಧಾನ ಅಧಿಪತಿ ರಾಷ್ಟ್ರಪತಿಗಳು.

ನಮ್ಮ ನೌಕಾದಳವನ್ನು ಮೂರು ಪ್ರಾಂತೀಯ (Area) ಕಮಾಂಡ್‌ಗಳಾಗಿ ವಿಭಜಿಸಿದೆ. ಅವುಗಳೆಂದರೆ (1) ಪಶ್ಚಿಮ ನೌಕಾ ಕಮಾಂಡ್ (ಕೇಂದ್ರ ಕಛೇರಿ–ಮುಂಬೈ) (2) ಪೂರ್ವ ನೌಕಾ ಕಮಾಂಡ್ (ಕೇಂದ್ರ ಕಛೇರಿ – ವಿಶಾಖಪಟ್ಟಣಂ) ಮತ್ತು (3) ದಕ್ಷಿಣ ನೌಕಾ ಕಮಾಂಡ್ (ಕೇಂದ್ರ ಕಛೇರಿ–ಕೊಚ್ಚಿನ್) ಎಂಬುದಾಗಿ ವಿಭಜಿಸಲಾಗಿದೆ. ಅಲ್ಲದೆ ಭಾರತೀಯ ನೌಕಾದಳಕ್ಕೆ ಎರಡು ಫ್ಲೀಟ್‌ಗಳಿವೆ. ಪಶ್ಚಿಮ ಫ್ಲೀಟ್ ಹಾಗೂ ಪೂರ್ವ ಫ್ಲೀಟ್. ವಿಶಾಖಪಟ್ಟಣದಲ್ಲಿ ಹಿಂದೂಸ್ಥಾನ ಹಡಗು ಕಾರ್ಖಾನೆಯಿದೆ. ಅಲ್ಲದೆ ಕೊಲ್ಕತ್ತಾ ಮತ್ತು ಗೋವಾಗಳಲ್ಲಿ ಕೂಡ ಹಡಗು ನಿರ್ಮಾಣ ಕಾರ್ಯ ನಡೆಯುತ್ತದೆ. ಈ ನೌಕಾ ನಿರ್ಮಾಣ ಕೇಂದ್ರಗಳಲ್ಲಿ ಹಡಗುಗಳು, ಜಲಂತರ್ಗಾಮಿಗಳು ಹಾಗೂ ಚಿಕ್ಕ ದೋಣಿಗಳನ್ನು ನಿರ್ಮಿಸಲಾಗುತ್ತಿದೆ.

ಅರುಲಿಯಾಂಡರ್ ವರ್ಗದ ಫ್ರಿಗೇಟ್ಸ್ ಅಂದರೆ ಯುದ್ಧ ಹಡಗುಗಳನ್ನು ಐ.ಎನ್.ಎಸ್. ನೀಲಗಿರಿ, ಹಿಮಗಿರಿ, ದೇವಗಿರಿ, ತಾರಾಗಿರಿ, ವಿಂಧ್ಯಗಿರಿ, ಚಕ್ರಧಾರಿ (ಮಾರ್ಚ್ 2012 ರಲ್ಲಿ ಹೊಸ ಸೇರ್ಪಡೆ) ಹಾಗೂ ಭಾರತೀಯ ಮಾದರಿಯನ್ನು ಹೊಂದಿರುವ ಐ.ಎನ್.ಎಸ್. ಗೋದಾವರಿ, ಸಂಚಾರಿ ಸರ್ವೇ ಹಡಗುಗಳನ್ನು ಮತ್ತು ಕರಾವಳಿ ರಕ್ಷಣಾ ಪಡೆಗಳನ್ನು ನಿರ್ಮಿಸಲಾಗಿದೆ. ಈಚಿನ ದಿನಗಳಲ್ಲಿ ಭಾರತೀಯ ಮಾದರಿಯ ಐ.ಎನ್.ಎಸ್. ವಿಭೂತಿ ಕ್ಷಿಪಣಿ ಹಡಗನ್ನು ನಿರ್ಮಿಸಲಾಗಿದೆ. ಈ ಮೂಲಕ ಭಾರತವು ಇಂತಹ ಅತ್ಯಾಧುನಿಕ ಯುದ್ಧನೌಕೆಗಳನ್ನು ಹೊಂದಿರುವ ರಾಷ್ಟ್ರಗಳಲ್ಲಿ 6 ನೇ ರಾಷ್ಟ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

© KTBS NOT TO BE REPUBLISHED



ನೌಕಾಪಡೆ

ಭಾರತೀಯ ನೌಕಾದಳದ ನೌಕಾಧಿಕಾರಿಗಳಿಗೆಂದೇ ಎರಡು ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ಅವುಗಳೆಂದರೆ ಕೇರಳದ ಐ.ಎನ್.ಎಸ್. – ವಂಡುರ್ತಿ ಮತ್ತು ಮಹಾರಾಷ್ಟ್ರದ ಲೋನಾವಾಲದಲ್ಲಿನ ಐ.ಎನ್.ಎಸ್. ಶಿವಾಜಿ.

**ವಾಯುದಳ**

ಭಾರತೀಯ ವಾಯುದಳ ಆಧುನಿಕತೆ ಹೊಂದಿದ್ದು, ತಂತ್ರಜ್ಞಾನದಿಂದ ಕೂಡಿದ, ಸುಸಜ್ಜಿತವಾದ ಸಾಧನ ಸಲಕರಣೆಗಳನ್ನು ಹೊಂದಿದೆ. ಅಲ್ಲದೆ ಶಸ್ತ್ರಾಸ್ತ್ರಗಳ ವ್ಯವಸ್ಥೆ, ಉತ್ತಮ ಸಂಪರ್ಕ ವ್ಯವಸ್ಥೆ, ಪತ್ತೆ ಹಚ್ಚುವ ವಿಧಾನ, ವೈರಿಗಳನ್ನು ಎದುರಿಸುವ ಮತ್ತು ರಕ್ಷಣಾತ್ಮಕ ಸಾಮರ್ಥ್ಯವನ್ನು ಹೊಂದಿದೆ. ವಾಯುದಳದ ಅತಿ ಮುಖ್ಯವಾದ ಸಾಧನಗಳಾದ ಯುದ್ಧ ವಿಮಾನಗಳು, ಘರ್ಷಣೆಯ ವಾಯುಪಡೆ ಬಹು ಮಹತ್ವದ್ದಾಗಿದೆ.



ವಾಯುದಳ

© KTBS NOT TO BE REPUBLISHED

ಭಾರತೀಯ ವಾಯುದಳವು ಯುದ್ಧ ಮತ್ತು ಶಾಂತಿ ಕಾಲದಲ್ಲಿ ದೇಶಕ್ಕೆ ಧೈರ್ಯದಿಂದ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಸಮಗ್ರ ರಾಷ್ಟ್ರೀಯ ರಕ್ಷಣೆ, ಭದ್ರತೆ ಹಾಗೂ ಸ್ಥಿರತೆಯನ್ನು ಕಾಪಾಡುವಲ್ಲಿ ಯಶಸ್ಸು ಸಾಧಿಸಿದೆ. ವಾಯುದಳದ ಕೇಂದ್ರ ಕಛೇರಿ ದೆಹಲಿಯಲ್ಲಿದೆ. ಇದು ಐದು ಪರಿಣಾಮಕಾರಿ (Operational) ಕಮಾಂಡನ್ನು ಮತ್ತು ಎರಡು ಔಪಚಾರಿಕ (Functional) ಕಮಾಂಡನ್ನು ಹೊಂದಿದೆ.

**ಚಟುವಟಿಕೆ**

ಮಾಜಿ ಸೈನಿಕರೊಂದಿಗೆ ನಮ್ಮ ಸೇನಾಪಡೆಗಳ ವ್ಯವಸ್ಥೆ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ.

ನಮ್ಮ ವಾಯುಪಡೆಯು ಜಾಗ್ವಾರ್, ರಾಫೆಲ್‌ನಂತಹ ಆಧುನಿಕ ಯುದ್ಧ ವಿಮಾನಗಳನ್ನು ಹೊಂದಿದೆ. ಅದು ಒಟ್ಟು 1,೦೦,೦೦೦ರಷ್ಟು ಯೋಧರು ಮತ್ತು 1330ರಷ್ಟು ಯುದ್ಧ ವಿಮಾನಗಳನ್ನು ಹೊಂದಿದೆ. ವಾಯುಪಡೆಯು ಬಲಾಢ್ಯವಾಗಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ಸಂಗತಿಯಾಗಿದೆ.

**ಪರಿಣಾಮಕಾರಿ ಕಮಾಂಡ್ (Operational)**

1) ಪಶ್ಚಿಮ ಕಮಾಂಡ್ – ದೆಹಲಿ

2) ಪೂರ್ವ ಕಮಾಂಡ್ – ಷಿಲ್ಲಾಂಗ್ (ಮೇಘಾಲಯ)

3) ಕೇಂದ್ರ ಕಮಾಂಡ್ – ಅಲಹಾಬಾದ್ (ಉತ್ತರಪ್ರದೇಶ)

4) ಈಶಾನ್ಯ ಕಮಾಂಡ್ – ಗಾಂಧಿನಗರ (ಗುಜರಾತ್)

5) ದಕ್ಷಿಣ ಕಮಾಂಡ್ – ತಿರುವನಂತಪುರಂ. (ಕೇರಳ)

**ಔಪಚಾರಿಕ ಕಮಾಂಡ್ (Functional)**

1) ತರಬೇತಿ ಕಮಾಂಡ್ – ಬೆಂಗಳೂರು (ಕರ್ನಾಟಕ)

2) ನಿರ್ವಹಣಾ ಕಮಾಂಡ್ – ನಾಗಪುರ (ಮಹಾರಾಷ್ಟ್ರ)

ಇವಲ್ಲದೆ ವಾಯುಪಡೆಗೆ ತರಬೇತಿ ನೀಡುವ ಎರಡು ಪ್ರಮುಖ ಕೇಂದ್ರಗಳೆಂದರೆ ಬೆಂಗಳೂರು ಹಾಗೂ ಹೈದರಾಬಾದ್. ಹಾಗೆಯೇ ವಾಯುಪಡೆಗೆ ಆಯ್ಕೆಯಾಗಿ ಉಡ್ಡಣದ ತರಬೇತಿಯನ್ನು ಪಡೆಯಲು ವಿಶೇಷವಾದ ಒಂದು ತರಬೇತಿ ಅಕಾಡೆಮಿಯನ್ನು ದುಂಡಿಘಾಟ್‌ನಲ್ಲಿ ತೆರೆಯಲಾಗಿದೆ. ಅದರಂತೆಯೇ ಆಡಳಿತ ಮತ್ತು ತಂತ್ರಜ್ಞಾನ ತರಬೇತಿ ಕೇಂದ್ರಗಳು ಬೆಂಗಳೂರು ಮತ್ತು ಕೊಯಮತ್ತೂರಿನಲ್ಲಿವೆ. ನಮ್ಮ ವಾಯುಪಡೆಯು ಇಂದು ಒಂದು ಸಾವಿರಕ್ಕೂ ಮಿಗಿಲಾಗಿ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಹೊಂದಿದೆ. ಅದರಲ್ಲಿ ಪ್ರಮುಖ ಮಾದರಿಯ ವಿಮಾನಗಳೆಂದರೆ ಕೆನ್‌ಬೆರಾ, ಹಂಟರ್, ಅಜಿತ್, ಮಿಗ್ 21, ಮಿಗ್ 23, ಮಿಗ್ 25, ಮಿಗ್ 27, ಮಿಗ್ 29, ಮಿರೇಜ್ 2000 ಮುಂತಾದವು.

**ಸೇನಾ ನೇಮಕಾತಿ :** ಭಾರತದ ಪ್ರತಿಯೊಬ್ಬ ಪ್ರಜೆಯೂ ಸ್ವ ಇಚ್ಛೆಯಿಂದ ಅವನ/ಅವಳ ಯಾವುದೇ ಜಾತಿ, ಧರ್ಮ, ವರ್ಗ ಮತ್ತು ಸಮುದಾಯಕ್ಕೆ ಸೇರಿದವರು ಎಂಬ ತಾರತಮ್ಯವಿಲ್ಲದೆ ಸೇರಬಹುದು. ಆದರೆ ಸರ್ಕಾರ ನಿಗದಿಪಡಿಸಿದ ಕೆಲವು ದೈಹಿಕ, ಮಾನಸಿಕ ಆರೋಗ್ಯ, ಶೈಕ್ಷಣಿಕವಾದ ಸಾಮಾನ್ಯ ಅರ್ಹತೆ ಮತ್ತು ಆ ಹುದ್ದೆಗೆ ಬೇಕಾದ ತಾಂತ್ರಿಕ ಅರ್ಹತೆಯಂತಹ ವಿಶೇಷ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.

NOT TO BE REPUBLISHED © KTBS

| ನಿಮಗಿದು ತಿಳಿದಿರಲಿ<br>3 ಪಡೆಗಳ ಸೇವಾದರ್ಜೆಗಳು | | |
|---|---|---|
| **1. ಭೂಸೇನೆ** | **2. ನೌಕಾದಳ** | **3. ವಾಯುದಳ** |
| a) ಜನರಲ್ | a) ಅಡ್ಮಿರಲ್ | a) ಏರ್ ಚೀಫ್ ಮಾರ್ಷಲ್ |
| b) ಲೆಫ್ಟಿನೆಂಟ್ ಜನರಲ್ | b) ವೈಸ್ ಅಡ್ಮಿರಲ್ | b) ಏರ್ ಮಾರ್ಷಲ್ |
| c) ಮೇಜರ್ ಜನರಲ್ | c) ರಿಯರ್ ಅಡ್ಮಿರಲ್ | c) ಏರ್ ವೈಸ್ ಮಾರ್ಷಲ್ |
| d) ಬ್ರಿಗೇಡಿಯರ್ | d) ಕಮಡೊರ್ | d) ಏರ್ ಕಮಾಂಡರ್ |
| e) ಕರ್ನಲ್ | e) ಕ್ಯಾಪ್ಟನ್ | e) ಗ್ರೂಪ್ ಕಮಾಂಡರ್ |
| f) ಲೆಫ್ಟಿನೆಂಟ್ ಕರ್ನಲ್ | f) ಕಮಾಂಡರ್ | f) ವಿಂಗ್ ಕಮಾಂಡರ್ |
| g) ಮೇಜರ್ | g) ಲೆಫ್ಟಿನೆಂಟ್ ಕಮಾಂಡರ್ | g) ಸ್ಕ್ವಾಡ್ರನ್ ಲೀಡರ್ |
| h) ಕ್ಯಾಪ್ಟನ್ | h) ಲೆಫ್ಟಿನೆಂಟ್ | h) ಫ್ಲೈಟ್ ಲೆಫ್ಟಿನೆಂಟ್ |
| i) ಲೆಫ್ಟಿನೆಂಟ್ | i) ಸಬ್ ಲೆಫ್ಟಿನೆಂಟ್ | i) ಫ್ಲೆಯಿಂಗ್ ಆಫೀಸರ್ |

©KTBS NOT TO BE REPUBLISHED

ಭೂಸೇನೆಯಲ್ಲಿ ಕೆಳದರ್ಜೆಯ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ನೇಮಕಾತಿ ಹೊಂದ ಬಯಸುವ ಪುರುಷ ಜನಸಂಖ್ಯೆಗೆ ಅನುಗುಣವಾಗಿ (The Recruitable Male Population (RMP) ) ನೇಮಕಾತಿ ಮಾಡಲಾಗುತ್ತದೆ. ವಾಯುಪಡೆಗೆ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮತ್ತು ನೋಂದಣಿ ಮೂಲಕ ಅಖಿಲ ಭಾರತ ಮಟ್ಟದಲ್ಲಿ ನೇಮಿಸಲಾಗುತ್ತದೆ. ಇದು ಕೇಂದ್ರ ವಾಯುಪಡೆ ಆಯ್ಕೆ ಮಂಡಳಿ ಮೂಲಕ (Central Airmen Selection Board (CASB)) ನಡೆಯುತ್ತದೆ. ನೌಕಾಪಡೆಯ ನಾವಿಕರ ನೇಮಕಾತಿಯು ನೌಕಾದಳ ನೇಮಕಾತಿ ಸಂಘಟನೆ ಮೂಲಕ ನಡೆಯುತ್ತದೆ. (Naval Recruitment Organisation (NRO)) ಇದರ ಜವಾಬ್ದಾರಿ ಮಾನವ ಸಂಪನ್ಮೂಲ ಯೋಜನೆ ಮತ್ತು ನೌಕಾದಳದ ಕೇಂದ್ರ ಕಛೇರಿ ನಿರ್ದೇಶನಾಲಯದ್ದಾಗಿರುತ್ತದೆ. ಇದಲ್ಲದೆ ಈ ಮೂರು ಪಡೆಗಳಿಗೆ ಮಹಿಳೆಯರನ್ನು ನೇಮಕಾತಿ ಮಾಡುವಾಗ ಮಹಿಳಾ ಸೇರ್ಪಡೆಯ ವಿಶೇಷ ಯೋಜನೆಯ ಮೂಲಕ ನಡೆಯುತ್ತದೆ (Women Special Entry Scheme (WSES)).

**ರಕ್ಷಣಾ ಉತ್ಪಾದನೆ :** ರಕ್ಷಣಾ ಉತ್ಪಾದನೆಯ ಕಾರ್ಯಚಟುವಟಿಕೆಗಳನ್ನು 2 ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯದು ಇಲಾಖಾ ವತಿಯಿಂದಲೇ ನಡೆಸುವ ಕಾರ್ಖಾನೆಗಳು ಹಾಗೂ ಎರಡನೆಯದು ರಕ್ಷಣಾ ಸಾರ್ವಜನಿಕ ವಲಯದಲ್ಲಿನ ಕಾರ್ಖಾನೆಗಳು. ಇವುಗಳಲ್ಲಿ ಮೊದಲನೆಯದು ಮದ್ದುಗುಂಡುಗಳು, ಶಸ್ತ್ರಾಸ್ತ್ರಗಳು, ಟ್ಯಾಂಕ್‌ಗಳು ಮುಂತಾದುವುಗಳನ್ನು ತಯಾರಿಸಿದರೆ ಸಾರ್ವಜನಿಕ ಒಡೆತನದ ಉದ್ದಿಮೆಗಳು ಹಡಗುಗಳು, ವಿಮಾನಗಳು, ಭೂವಾಹನಗಳಾದ ಬುಲ್‌ಡೋಜರ್‌ಗಳು, ಸಬ್ ಮೆರಿನ್‌ಗಳು, ಕ್ಷಿಪಣಿಗಳು ಮುಂತಾದುವುಗಳನ್ನು ತಯಾರಿಸುತ್ತವೆ.

**ನಿಮಗಿದು ತಿಳಿದಿರಲಿ :**

ಸಾರ್ವಜನಿಕ ಒಡೆತನದ ರಕ್ಷಣಾ ಉದ್ದಿಮೆಗಳು

*1954 - BEL (Bharath Electronics Ltd. )*

*1964 - HAL (Hindustan Aeronautics Ltd.)*

*1964 - BEML (Bharath Earth Movers Ltd.)*

*1970 - BDL ( Bharath Dynamics Ltd. etc)*

**ನಮ್ಮ ರಕ್ಷಣಾ ಸನ್ನದ್ಧತೆ ಮತ್ತು ಸಂಶೋಧನಾ ಅಭಿವೃದ್ಧಿ :** ಇಂದು ನಮ್ಮ ರಕ್ಷಣಾ ಪಡೆಗಳು ಅನೇಕ ಸವಾಲುಗಳನ್ನು ಎದುರಿಸಬೇಕಾಗಿದೆ. ಆದುದರಿಂದ ರಾಷ್ಟ್ರದ ಗಡಿಯನ್ನು ರಕ್ಷಿಸುವಲ್ಲಿ ನಮ್ಮ ಸೈನಿಕರು ಸದಾ ಸಿದ್ಧರಾಗಿದ್ದಾರೆ. ನಮ್ಮ ಸೇನಾಪಡೆಯು ಗಾತ್ರದಲ್ಲಿ ಜಗತ್ತಿನ 4 ನೇ ಸ್ಥಾನದಲ್ಲಿದೆ. ವಾಯುಪಡೆಯಲ್ಲಿ 5 ನೆಯದು ಮತ್ತು ನೌಕಾಪಡೆಯಲ್ಲಿಯೂ 5 ನೇ ಸ್ಥಾನ ಗಳಿಸಿಕೊಂಡಿದೆ.

ನಮ್ಮ ಸೇನೆಯನ್ನು ಬಲಪಡಿಸಲೆಂದೇ ಕಾರವಾರದ ಬಳಿ ಸೀಬರ್ಡ್ ನೌಕಾನೆಲೆಯನ್ನು ತೆರೆಯಲಾಗಿದೆ. ಅಲ್ಲದೆ 1958 ರಲ್ಲಿ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯನ್ನು (DRDO – Defence Research and Development Organisation) ಸ್ಥಾಪಿಸಿ ಭೂಮಿಯಿಂದ ಭೂಮಿಗೆ ಜಿಗಿಯುವ ಕ್ಷಿಪಣಿಯಾದ ಪೃಥ್ವಿ, ತ್ರಿಶೂಲ್, ಆಕಾಶ್, ನಾಘ, ಅಗ್ನಿ ಇವುಗಳ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದೆ (19 ಏಪ್ರಿಲ್ 2012 ರಲ್ಲಿ ಅಗ್ನಿ 5 ನ್ನು 5 ಸಾವಿರ ಕಿ.ಮೀ.ನ್ನು ಗುರಿ ಹೊಂದಿದ ಕ್ಷಿಪಣಿಯನ್ನು ಉಡಾಯಿಸಲಾಯಿತು. ಸಬ್‌ಮೆರಿನ್, ಆಂಟಿ ಸಬ್‌ಮೆರಿನ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದು, ಭಾರತ ಇಂದು ಗಣ್ಯ ರಾಷ್ಟ್ರಗಳ ಸಾಲಿಗೆ ಸೇರಿದೆ. (Elite Countries – ಅಮೆರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್ ಇತರ ರಾಷ್ಟ್ರಗಳು).

ಬೋಫೋರ್ಸ್ ಫಿರಂಗಿಗಳನ್ನು ಕಾರ್ಗಿಲ್ ಯುದ್ಧದಲ್ಲಿ (ಭಾರತ ಮತ್ತು ಪಾಕಿಸ್ತಾನ) ಸಮರ್ಥವಾಗಿ ಬಳಸಿಕೊಳ್ಳಲಾಗಿದೆ. ಸಮಯ ಬಂದರೆ ಅಣ್ವಸ್ತ್ರ ಹೋರಾಟವನ್ನು ಸಮರ್ಥವಾಗಿ ಎದುರಿಸಬಲ್ಲ ತಂತ್ರಜ್ಞಾನವನ್ನು ಪೋಕ್ರಾನ್ ಪ್ರಯೋಗದಿಂದ ತಿಳಿಯಲಾಗಿದೆ. ಅಲ್ಲದೆ ರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ 55 ರಕ್ಷಣಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಆದುದರಿಂದ ನಮ್ಮ ರಾಷ್ಟ್ರದ ಹಿತಾಸಕ್ತಿ ಮತ್ತು ಅದರ ಉಜ್ವಲ ಭವಿಷ್ಯಗಳಿಗೆ ನಾವು ಸೈನ್ಯಕ್ಕೆ ಸೇರಬೇಕು ನಮ್ಮ ಸೇನಾಪಡೆಗಳಂತೆ ಸರ್ವ ತ್ಯಾಗಕ್ಕೂ ಸಿದ್ಧರಿರಬೇಕು.

NOT TO BE REPUBLISHED

**ನಿಮಗಿದು ತಿಳಿದಿರಲಿ :**

**ಕಾರ್ಗಿಲ್ ಯುದ್ಧ – 1999 :** ಭಾರತ ಮತ್ತು ಪಾಕಿಸ್ತಾನಗಳ ನಡುವೆ 1999ರ ಮೇ–ಜೂನ್‌ನಲ್ಲಿ ಕಾರ್ಗಿಲ್ ಯುದ್ಧ ನಡೆಯಿತು. ಮೇ. 16 ರಂದು ಪಾಕ್ ಸೈನಿಕರು ಕಾಶ್ಮೀರದ ಅತ್ಯಂತ ಎತ್ತರವಾದ ಪ್ರದೇಶದ ಮೇಲೆ ವೈಮಾನಿಕ ದಾಳಿ ಆರಂಭಿಸಿದರು. ಇದಕ್ಕೆ ಪ್ರತಿಯಾಗಿ ಆಪರೇಷನ್ ವಿಜಯ್ ಎಂಬ ಹೆಸರಿನಲ್ಲಿ ಭಾರತ್ ಪ್ರತಿದಾಳಿ ಆರಂಭಿಸಿತು. ಮೊದಲು ಭಾರತದ ಸೈನ್ಯಕ್ಕೆ ಹಿನ್ನಡೆಯಾಯಿತು. ಆನಂತರ ಹೋರಾಟ ದ್ವಿಗುಣಗೊಳಿಸಿ ಬೋಫೋರ್ಸ್ ಬಂದೂಕಗಳಿಂದ ಜೂನ್ 14 ರಂದು ಪ್ರತಿ ದಾಳಿ ಮಾಡಿದಾಗ ಪಾಕಿಸ್ತಾನ ಅವಮಾನಕರ ಸೋಲುಂಡು ಹಿಂದಕ್ಕೆ ಸರಿಯಿತು. ಇದರಿಂದ ಪಾಕಿಸ್ತಾನಕ್ಕೆ ಭಾರಿ ಮುಖಭಂಗವಾಯಿತು. ಇದೊಂದು ಸಣ್ಣ ಪ್ರಮಾಣದ ಯುದ್ಧವಾದರೂ ವಿಶ್ವದ ಗಮನ ಸೆಳೆಯಿತು. ಶಾಂತಿ ಪ್ರಿಯ ದೇಶವಾದ ಭಾರತದ ಮೇಲೆ ದಾಳಿ ಮಾಡಿದ ಪಾಕಿಸ್ತಾನವನ್ನು ಆಕ್ರಮಣಕಾರಿ ದೇಶ ಎಂದು ಇಡೀ ವಿಶ್ವವೇ ದೂಷಿಸಿತು. ಈ ಯುದ್ಧ ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಿತು.

ಈ ಯುದ್ಧದಲ್ಲಿ ಭಾರತದ ಸುಮಾರು 30,000 ಸೈನಿಕರು ಕಾರ್ಯಾಚರಣೆ ನಡೆಸಿದ್ದರು. ಪಾಕಿಸ್ತಾನದ ಆಕ್ರಮಣಕಾರಿ ಸೈನಿಕರ ಸಂಖ್ಯೆ 5000 ಎಂದು ಯುದ್ಧದ ನಂತರ ಅಂದಾಜಿಸಲಾಯಿತು. ಭಾರತದ ಭೂಸೇನೆಗೆ ಬೆಂಬಲವಾಗಿ ಭಾರತೀಯ ವಾಯುಪಡೆ ಆಪರೇಷನ್ ಸೇಫ್ಡ್ ಸಾಗರ್ ಕಾರ್ಯಾಚರಣೆಯನ್ನು ಆರಂಭಿಸಿತು. ಜುಲೈ ಕೊನೆಯ ವಾರದಲ್ಲಿ ಭಾರತದ ಸೇನೆ ಅಂತಿಮ ದಾಳಿಯನ್ನು ಆರಂಭಿಸಿತು. ಜುಲೈ 26ರಂದು ಹೋರಾಟ ಸ್ಥಗಿತಗೊಂಡಿತು. ಪಾಕಿಸ್ತಾನ ವಿರುದ್ಧ ಗೆಲುವು ಸಾಧಿಸಿದ ದಿನವನ್ನು ಕಾರ್ಗಿಲ್ ವಿಜಯ್ ದಿವಸ್ (ಕಾರ್ಗಿಲ್ ವಿಜಯೋತ್ಸವ ದಿನ) ಎಂದು ಭಾರತದಲ್ಲಿ ಗುರುತಿಸಲಾಗಿದೆ. ಪ್ರತಿ ವರ್ಷವೂ ಜುಲೈ 26 ರಂದು ಈ ದಿನವನ್ನು ಆಚರಿಸಲಾಗುತ್ತಿದೆ.

**ಎರಡನೇ ಸಾಲಿನ ರಕ್ಷಣಾ ವ್ಯವಸ್ಥೆ : (Paramilitary)**

ನಮ್ಮ ಸೇನಾಪಡೆಗಳಿಗೆ ಪೂರಕವಾಗಿ ಇರುವ ಎರಡನೆಯ ಸಾಲಿನ ರಕ್ಷಣಾ ವ್ಯವಸ್ಥೆಯನ್ನು ವಿವಿಧ ಘಟಕಗಳ ಮೂಲಕ ಕಲ್ಪಿಸಲಾಗಿದೆ. ಆ ಘಟಕಗಳೆಂದರೆ,

1) ಪ್ರಾದೇಶಿಕ ಸೇನೆ (Territorial Army)
2) ಎನ್.ಸಿ.ಸಿ. (National Cadet Corps)
3) ಕರಾವಳಿ ಪಹರೆ (Coastal Guard)
4) ಗಡಿ ಭದ್ರತಾ ದಳ (Border Security Force)
5) ನಾಗರಿಕ ರಕ್ಷಣೆ (Civil Defence)
6) ಗೃಹರಕ್ಷಕ ದಳ (Home Guards)
7) ರೆಡ್ ಕ್ರಾಸ್ (Red Cross)

**ಪ್ರಾದೇಶಿಕ ಸೇನೆ (Territorial Army) :** ಇದೊಂದು ಅರೆಕಾಲಿಕ ಸ್ವಯಂ ಸೇವಾದಳ. ಇದನ್ನು 1949 ರಲ್ಲಿ ಸಂಸತ್ತಿನ ಕಾಯಿದೆಯಂತೆ ಸ್ಥಾಪಿಸಲಾಯಿತು. ಇದರಲ್ಲಿ ವೃತ್ತಿಪರ ಯೋಧರು ಇರುವುದಿಲ್ಲ. ಅಭಿಲಾಷೆಯುಳ್ಳ ನಾಗರಿಕರು ತಮ್ಮ ಬಿಡುವಿನ ಸಮಯದಲ್ಲಿ ಮಿಲಿಟರಿ ತರಬೇತಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಉದ್ಯೋಗಸ್ಥರಾದ ಹಾಗೂ 18 ರಿಂದ 42 ವಯೋಮಿತಿಯಲ್ಲಿರುವವರು ಈ ಸೇವೆಗೆ ಸೇರಲು ಅರ್ಹರಾಗಿರುತ್ತಾರೆ. ಇದರ ಕಾರ್ಯವೆಂದರೆ ರಾಷ್ಟ್ರ ತುರ್ತುಪರಿಸ್ಥಿತಿಯನ್ನು ಎದುರಿಸುವ ಸಂದರ್ಭದಲ್ಲಿ, ಪ್ರಕೃತಿ ವಿಕೋಪದಂತಹ ಸಂದರ್ಭದಲ್ಲಿ ಕೆಲಸ ನಿರ್ವಹಿಸುತ್ತದೆ. ಪ್ರತಿ ವರ್ಷ ನವೆಂಬರ್ ತಿಂಗಳ ಮೂರನೇ ಶನಿವಾರ ಪ್ರಾದೇಶಿಕ ಸೇನಾ ದಿನವಾಗಿದೆ.

**ಎನ್.ಸಿ.ಸಿ. (National Cadet Corps) :** ಎನ್.ಸಿ.ಸಿ.ಯು ರಾಷ್ಟ್ರದ ಒಂದು ಪ್ರಧಾನ ಯುವ ಸಂಘಟನೆಯಾಗಿದ್ದು, 1948 ರಲ್ಲಿ ಸ್ಥಾಪಿಸಲಾಯಿತು. ಇದನ್ನು ಶಾಲಾ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಸ್ವಯಂ ಆಸಕ್ತಿಯಿಂದ ಸೇರಿಕೊಳ್ಳಲು ತೆರೆಯಲಾಗಿದೆ. ಇದರ ಮುಖ್ಯ ಗುರಿ ವೈಯಕ್ತಿಕ ಗುಣಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು, ನಾಯಕತ್ವ ಗುಣ ಬೆಳೆಸಿಕೊಳ್ಳುವುದು, ಗೆಳೆತನ ಬೆಳೆಸಿಕೊಳ್ಳುವುದು ಹಾಗೂ ಆದರ್ಶ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳುವುದಾಗಿದೆ. ಇದು ಶಿಸ್ತುಬದ್ಧವಾದ ತರಬೇತಿ ಪಡೆದ ಮಾನವ ಪಡೆಯನ್ನು ಹೊಂದಿದ್ದು, ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಾಷ್ಟ್ರಕ್ಕೆ ಸಹಾಯ ಮಾಡುತ್ತದೆ. ಎನ್.ಸಿ.ಸಿ.ಯಲ್ಲಿ ಎರಡು ಘಟಕಗಳಿವೆ. ಅವುಗಳೆಂದರೆ ಸೀನಿಯರ್ ಅಂದರೆ ಕಾಲೇಜು ವಿದ್ಯಾರ್ಥಿಗಳಿಗೆ ಮತು ಜೂನಿಯರ್ ಅಂದರೆ ಶಾಲಾ ವಿದ್ಯಾರ್ಥಿಗಳಿಗೆ. ಈ ಕ್ಯಾಡೆಟ್‌ಗಳಿಗೆ ಹಲವು ಸೌಲಭ್ಯಗಳನ್ನು ಒದಗಿಸಲಾಗಿದೆ. ಅವುಗಳೆಂದರೆ



**ಚಟುವಟಿಕೆ**

ನಿಮ್ಮ ಶಾಲೆಯಲ್ಲಿನ ಎನ್.ಸಿ.ಸಿ. ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಸೇರಿ ಹೆಚ್ಚಿನ ಮಾಹಿತಿಯ ಬಗ್ಗೆ ನೇರ ಅನುಭವ ಪಡೆಯಿರಿ.

- ಎನ್.ಸಿ.ಸಿ. ತರಬೇತಿ ಪಡೆದವರಿಗೆ ರಕ್ಷಣಾ ಸೇನೆಗಳಿಗೆ ಸೇರಲು ವಿಶೇಷ ಅವಕಾಶ.
- ತರಬೇತಿಯಲ್ಲಿ ವಿಶಿಷ್ಟ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ವೃತ್ತಿಪರ ಕಾಲೇಜುಗಳಲ್ಲಿ ಮೀಸಲಾತಿ ಸೌಲಭ್ಯ.
- ತರಬೇತಿಯಲ್ಲಿ ಆಯುಧ ಶಿಕ್ಷಣ ನೀಡುವುದು.

NOT TO BE PUBLISHED

- ದೂರ ನಡಿಗೆ (ಹೈಕಿಂಗ್)
- ಸಾಹಸ ಪ್ರಯಾಣ (ಟ್ರೆಕಿಂಗ್)
- ಜಾರಾಟ (ಗ್ಲೈಡಿಂಗ್)
- ಪರ್ವತಾರೋಹಣ (ಸ್ಕೇಲಿಂಗ್)

**ಭಾರತೀಯ ಕರಾವಳಿ ಪಡೆಗಳು (Indian Coast Guards) :** ಇದೊಂದು ಅರೆ ಮಿಲಿಟರಿ ಪಡೆಯಾಗಿದೆ. ಎರಡನೇ ಸಾಲಿನ ರಕ್ಷಣಾ ವ್ಯವಸ್ಥೆಯಲ್ಲಿ ಇದು ಬಹಳ ಮುಖ್ಯವಾಗಿದ್ದು, ಇತ್ತೀಚೆಗೆ ಅಂದರೆ 1978 ರಲ್ಲಿ ರಚಿಸಲಾಗಿದೆ. ಇದು ಕಡಲ ಸಂಬಂಧ (Maritime) ವಾದ ಮತ್ತು ರಾಷ್ಟ್ರೀಯ ಹಿತಾಸಕ್ತಿಗೆ ಸಂಬಂಧಿಸಿದ ಕಾವಲು ಪಡೆಯಾಗಿದೆ. ಇದು ಸುಮಾರು 7,516.5 ಕಿ.ಮೀ. ಕರಾವಳಿ ಪ್ರದೇಶದ ರಕ್ಷಣೆಯ ಕಾರ್ಯವನ್ನು ನಿರ್ವಹಿಸುತ್ತದೆ. ಈ ಕಾವಲು ಪಡೆಯ ನೌಕೆಗಳಿಗೆ ವೀರೋಚಿತವಾದ ಹೆಸರುಗಳನ್ನು ನೀಡಲಾಗಿದೆ. ಅವುಗಳೆಂದರೆ – ಪುತಾರ್, ವಿಕ್ರಮ್, ವಿಜಯ್ ಹಾಗೂ ವೀರ. ಅಕ್ರಮ ಸಮುದ್ರ ವ್ಯಾಪಾರ, ಕಳ್ಳ ಸಾಗಾಣಿಕೆ ಮುಂತಾದ ಅವ್ಯವಹಾರಗಳನ್ನು ತಡೆಗಟ್ಟಲು ಇದು ಸಹಕಾರಿಯಾಗಿದೆ. ಇದರ ಪ್ರಧಾನ ಕಛೇರಿ ದೆಹಲಿಯಲ್ಲಿದ್ದು, ಓರ್ವ ಡೈರೆಕ್ಟರ್ ಜನರಲ್‌ನ್ನು ಹೊಂದಿದೆ. ಈ ಸಂಘಟನೆ ನಾಲ್ಕು ಪ್ರಾದೇಶಿಕ ಮುಖ್ಯ ಠಾಣೆಗಳನ್ನು ಹೊಂದಿದ್ದು, ಮುಂಬೈ, ಚೆನ್ನೈ, ಗಾಂಧಿನಗರ್ ಹಾಗೂ ಅಂಡಮಾನ್ ನಿಕೋಬಾರ್‌ನ ಪೋರ್ಟ್ ಬ್ಲೇರ್‌ನಲ್ಲಿ ಸ್ಥಾಪಿಸಲಾಗಿದೆ.

| |
|---|
| ಕರಾವಳಿ ಪಹರೆಯು 1402 ಅತ್ಯಾಧುನಿಕ ಹಡಗುಗಳು ಮತ್ತು 381 ವಿಮಾನ ಹಾಗೂ 60 ಹೆಲಿಕಾಪ್ಟರ್‌ಗಳನ್ನು ಹೊಂದಿದೆ. 12,585 ಯೋಧರು ಕರಾವಳಿ ಪಹರೆಯಲ್ಲಿದ್ದಾರೆ. |

**ಗಡಿ ಭದ್ರತಾ ದಳ (Border Security Force) :** ಗಡಿ ಭದ್ರತಾ ಪಡೆಯನ್ನು 1965 ರಲ್ಲಿ ಸ್ಥಾಪಿಸಲಾಯಿತು. ಈ ಸೈನಿಕರು ನಮ್ಮ ದೇಶದ ಸುಮಾರು 15200 ಕಿ.ಮೀ. ಪ್ರದೇಶದ ಗಡಿ ಭಾಗಗಳನ್ನು ಕಟ್ಟೆಚ್ಚರದಿಂದ ಕಾಪಾಡುತ್ತಾರೆ. ಇದರ ತರಬೇತಿ ಕೇಂದ್ರ ಬೆಂಗಳೂರಿನ ಯಲಹಂಕದಲ್ಲಿದೆ. ಗಡಿಭಾಗದಲ್ಲಿಯ ಅತಿಕ್ರಮ ಹಾಗೂ ಅಕ್ರಮ ಪ್ರವೇಶ, ಕಳ್ಳ ಸಾಗಾಣಿಕೆಗಳನ್ನು ತಡೆಗಟ್ಟಲು ಇದು ಸಹಕಾರಿಯಾಗಿದೆ. ಅಲ್ಲದೆ ಆಂತರಿಕ ಭದ್ರತೆಯ ದೃಷ್ಟಿಯಿಂದ ಅಸ್ಸಾಂ ರೈಫಲ್ಸ್, ಇಂಡೋ–ಟಿಬೆಟಿಯನ್ ಗಡಿ ಪೋಲಿಸ್ (ITBP), ಕೇಂದ್ರ ಮೀಸಲು ಪೋಲಿಸ್ ಪಡೆ (CRPF), ಭಯೋತ್ಪಾದನೆ ನಿಗ್ರಹದ ವಿಶೇಷ ಪಡೆ, ಕೇಂದ್ರ ಕೈಗಾರಿಕಾ ಭದ್ರತಾ ಪಡೆ (CISF), ರೈಲ್ವೆ ರಕ್ಷಣಾ ಪಡೆ (RPF) ಮುಂತಾದುವು ಸಹಾಯಕ ಸೇನಾಪಡೆಗಳಾಗಿ ಕಾರ್ಯನಿರ್ವಹಿಸುತ್ತವೆ.

**ನಾಗರಿಕ ರಕ್ಷಣೆ (Civil Defence) :** ಇದರ ಮುಖ್ಯ ಗುರಿ ಜೀವರಕ್ಷಣೆ ಅಥವಾ ನಾಗರಿಕರ ಜೀವ ಉಳಿಸುವುದು. ನಾಗರಿಕರ ಆಸ್ತಿಯ ಮೇಲೆ ಆಗುವ ಹಾನಿಯನ್ನು ಕಡಿಮೆ ಮಾಡುವುದು ಮತ್ತು ಕೈಗಾರಿಕಾ ಉತ್ಪಾದನೆಗಳ ಮೇಲೆ ಆಗುವ ಅಕ್ರಮಗಳನ್ನು ತಡೆಯುವುದು. ಇದು ಸ್ವಯಂ ಸೇವಾಪಡೆಯ ಸಂಘಟನೆಯಾಗಿದೆ. ಈ ನಾಗರಿಕ ರಕ್ಷಣೆಯ ಚಟುವಟಿಕೆ ಇದೇ ರಾಷ್ಟ್ರದಲ್ಲಿನ ಸುಮಾರು 22 ವಿಭಾಗ ಅಥವಾ ವರ್ಗದ ನಗರಗಳಿಗೆ ನಿರ್ಬಂಧಗೊಳಿಸಿದೆ. ಪ್ರಸ್ತುತ 13 ಲಕ್ಷ ನಾಗರಿಕ ರಕ್ಷಣಾ ಸ್ವಯಂ ಸೇವಕರಿದ್ದು ಅದರಲ್ಲಿ ಈಗಾಗಲೇ 6.64 ಲಕ್ಷ ಸ್ವಯಂ ಸೇವಕರು ತರಬೇತಿ ಪಡೆದಿದ್ದಾರೆ.

**ಗೃಹರಕ್ಷಕ ದಳ (Home Guards) :** ಗೃಹರಕ್ಷಕ ದಳವು ಒಂದು ಸ್ವಯಂ ಸೇವಕ ಶಕ್ತಿಯಾಗಿದೆ. ಇದು ಮೊದಲು 1946 ರಂದು ಅಸ್ತಿತ್ವಕ್ಕೆ ಬಂದಿದ್ದು, ಸ್ಥಳೀಯ ಪೋಲೀಸರಿಗೆ ಸಹಾಯಕವಾಗಿದೆ. ಇದು ನಾಗರಿಕ ಸಮಾಜದಲ್ಲಿನ ಕೋಮು ಗಲಭೆಗಳನ್ನು ನಿಯಂತ್ರಿಸುವಲ್ಲಿ, ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಹಾಗೂ ಚುನಾವಣಾ ಸಂದರ್ಭದಲ್ಲಿ ಪೋಲೀಸರಿಗೆ ಸಹಾಯಕವಾಗಿದೆ. ಇದನ್ನು ಕೆಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅಳವಡಿಸಿಕೊಂಡಿವೆ. 1962 ರಲ್ಲಿ ಚೈನಾ ಭಾರತದ ಮೇಲೆ ಆಕ್ರಮಣ

NOT TO BE REPUBLISHED ©KTBS

ಮಾಡಿದಾಗ ಅಸ್ತಿತ್ವದಲ್ಲಿದ್ದ ಈ ಸ್ವಯಂಸೇವಕರ ಸಂಘಟನೆಯು ಸಮವಸ್ತ್ರ ಧರಿಸುವ ಮೂಲಕ ರಕ್ಷಣೆಗೆ ಸಹಕರಿಸಿತು. ನಮ್ಮ ಭಾರತದಲ್ಲಿ ಸುಮಾರು 5,73,793 ಗೃಹರಕ್ಷಕ ದಳದ ಸ್ವಯಂ ಸೇವಕರಿದ್ದಾರೆ. ಈ ಸಂಘಟನೆಯು ಇಡೀ ರಾಷ್ಟ್ರಾದ್ಯಂತ ಆವರಿಸಿದೆ.

**ರೆಡ್ ಕ್ರಾಸ್ (Red Cross) :** ರೆಡ್‌ಕ್ರಾಸ್ ಸಂಸ್ಥೆಯು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿದೆ. 1920 ರಲ್ಲಿ ಭಾರತದ ಸಂಸತ್ತು ಕಾಯಿದೆಯೊಂದನ್ನು ಪಾಸು ಮಾಡುವುದರ ಮೂಲಕ ಅಸ್ತಿತ್ವಕ್ಕೆ ತಂದಿತು. ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ.

ಭಾರತದ ರೆಡ್‌ಕ್ರಾಸ್ ಸಂಸ್ಥೆಯು ಮಾನವೀಯ ಸ್ವಯಂ ಸಂಘಟನೆಯಾಗಿದ್ದು, ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು 700 ಶಾಖೆಗಳನ್ನು ಒಳಗೊಂಡಿದೆ. ಭಾರತದ ರಾಷ್ಟ್ರಪತಿಗಳು ಇದರ ಅಧ್ಯಕ್ಷರಾಗಿದ್ದರೆ, ರಾಜ್ಯಶಾಖೆಗೆ ರಾಜ್ಯಪಾಲರು ಅಧ್ಯಕ್ಷರಾಗಿರುತ್ತಾರೆ. ಅಲ್ಲದೆ ಒಬ್ಬರು ಸೆಕ್ರೆಟರಿ ಜನರಲ್ ಮುಖ್ಯ ಕಾರ್ಯನಿರ್ವಾಹಕರಾಗಿರುತ್ತಾರೆ. ಈ ಸಂಸ್ಥೆಯು 19 ಸದಸ್ಯರನ್ನು ಒಳಗೊಂಡ ಆಡಳಿತ ಮಂಡಳಿಯನ್ನು ಹೊಂದಿದ್ದು, ಕಾರ್ಯಾಧ್ಯಕ್ಷ ಮತ್ತು 6 ಮಂದಿ ಸದಸ್ಯರನ್ನು ರಾಷ್ಟ್ರಪತಿಗಳು ನಾಮಕರಣ ಮಾಡಿದರೆ ಉಳಿದ 12 ಸದಸ್ಯರನ್ನು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದ ಶಾಖೆಗಳು ಮತದಾನದ ಮೂಲಕ ಚುನಾಯಿಸುತ್ತಾರೆ. ಈ ಸಂಘಟನೆಯು ರಾಷ್ಟ್ರದಲ್ಲಿನ ಆಪತ್ತು ಮತ್ತು ತುರ್ತು ಪರಿಸ್ಥಿತಿಯಂತಹ ಸಂದರ್ಭದಲ್ಲಿ ಜನರಿಗೆ ನೆರವು ನೀಡುತ್ತದೆ. ಇದು ಯಾವುದೇ ಭೇದಭಾವವಿಲ್ಲದೆ ಯುದ್ಧಭೂಮಿಯಲ್ಲಿನ ಗಾಯಾಳುಗಳಿಗೆ, ಅನಾರೋಗ್ಯಪೀಡಿತರಿಗೆ ಸೇವೆ ಸಲ್ಲಿಸುತ್ತದೆ. ಈ ಸಂಸ್ಥೆಯು 7 ಮೂಲಭೂತ ತತ್ವಗಳನ್ನು ಹೊಂದಿದೆ. ಅವುಗಳೆಂದರೆ (1) ಮಾನವೀಯತೆ (2) ನಿಷ್ಪಕ್ಷಪಾತ (3) ತಾಟಸ್ಥ್ಯ (4) ಸ್ವಾತಂತ್ರ್ಯ (5) ಸ್ವಯಂಸೇವೆ (6) ಏಕತೆ ಮತ್ತು (7) ವಿಶ್ವವ್ಯಾಪಕತೆ.

ನಮ್ಮ ಮೂರು ರಕ್ಷಣಾ ಪಡೆಗಳ ಜೊತೆಗೆ ಎರಡನೇ ಸಾಲಿನ ರಕ್ಷಣಾ ಪಡೆಗಳಿಂದ ರಾಷ್ಟ್ರ ಸುರಕ್ಷಿತವಾಗಿದೆ. ನಮ್ಮ ಸೈನಿಕರಿಗೆ ಬೆಂಬಲ ನೀಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಪರಮವೀರಚಕ್ರ, ಮಹಾವೀರಚಕ್ರ, ವೀರಚಕ್ರ ಮುಂತಾದ ಪ್ರಶಸ್ತಿಗಳನ್ನು ಸೈನಿಕರಿಗೆ ನೀಡಲಾಗುತ್ತಿದೆ. ಇಂತಹ ಪ್ರಶಸ್ತಿಗಳು ಶಾಂತಿ ಸಮಯದಲ್ಲಿ ನೀಡುವ ಅಶೋಕ ಚಕ್ರಕ್ಕೆ ಸರಿಸಮನಾಗಿರುತ್ತದೆ.

**ರಾಷ್ಟ್ರೀಯ ರಕ್ಷಣಾ ದಳ:** ರಾಷ್ಟ್ರೀಯ ರಕ್ಷಣಾ ದಳವು ಗಣ್ಯರಿಗೆ ರಕ್ಷಣೆಯನ್ನು ನೀಡುತ್ತದೆ. ಇದು ದೇಶದಲ್ಲಿಯ ಆಂತರಿಕ ಭದ್ರತೆಗೆ ಮತ್ತು ಭಯೋತ್ಪಾದನೆ ನಿಗ್ರಹಕ್ಕೆ ಹೆಚ್ಚು ಒತ್ತು ನೀಡುತ್ತದೆ. ಬಾಂಬ್ ನಿಷ್ಕ್ರಿಯ ದಳ ಇದಕ್ಕೆ ಪೂರಕವಾಗಿದೆ.

**ರಕ್ಷಣಾ ಪಡೆಗಳು ಮತ್ತು ಅಂತಾರಾಷ್ಟ್ರೀಯ ಶಾಂತಿ :** ನಮ್ಮ ಸೇನಾಪಡೆಗಳು ಕೇವಲ ರಾಷ್ಟ್ರರಕ್ಷಣೆಗೆ ಮಾತ್ರ ಸೀಮಿತವಾಗಿರದೆ ವಿದೇಶಗಳಲ್ಲಿ ಶಾಂತಿ ಸ್ಥಾಪನಾ ಕಾರ್ಯಗಳನ್ನು ಮಾಡುವುದರ ಮೂಲಕ ಗೌರವಕ್ಕೆ ಪಾತ್ರವಾಗಿವೆ. ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ನಮ್ಮ ಸೈನಿಕರು ಗಾಝು, ಕೊರಿಯಾ, ಕಾಂಗೋ, ಶ್ರೀಲಂಕಾ ಮುಂತಾದ ದೇಶಗಳಲ್ಲಿ ಸೇವೆ ಮಾಡಿ ಹೆಸರು ಗಳಿಸಿದ್ದಾರೆ. ನಮ್ಮ ಸೈನಿಕರ ಸಹಾಯದಿಂದ ಬಾಂಗ್ಲಾ ದೇಶವು ಸ್ವತಂತ್ರ ದೇಶವಾಯಿತು.

ಹೀಗೆ ಯುದ್ಧ ಸಮಯವಷ್ಟೇ ಅಲ್ಲದೆ ಶಾಂತಿ ಸಮಯದಲ್ಲಿಯೂ ನಮ್ಮ ರಕ್ಷಣಾ ಪಡೆಗಳು ದೇಶಕ್ಕಾಗಿ ದುಡಿಯುತ್ತಿವೆ. ಪ್ರವಾಹ, ಬರಗಾಲ, ಭೂಕಂಪ, ಭೂಕುಸಿತ, ಬಿರುಗಾಳಿ ಮುಂತಾದ ಪ್ರಕೃತಿ ವಿಕೋಪಗಳು ಉಂಟಾಗಿ ಸಂಕಷ್ಟದಲ್ಲಿರುವವರಿಗೆ ಸಹಾಯ ಸಲ್ಲಿಸುತ್ತವೆ.

© KTBS NOT TO BE REPUBLISHED

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1) ನಮ್ಮ ರಕ್ಷಣಾ ನೀತಿಯ ಮುಖ್ಯ ಗುರಿ __________ ಕಾಪಾಡುವುದಾಗಿದೆ.
2) ನಮ್ಮ ಮೂರು ಸೇನಾಪಡೆಗಳ ಸರ್ವೋಚ್ಚ ಪ್ರಧಾನ ದಂಡನಾಯಕರು __________ .
3) ಭೂ ಸೇನಾ ಮುಖ್ಯಸ್ಥರನ್ನು __________ ಎಂದು ಕರೆಯಲಾಗುತ್ತದೆ.
4) ರಕ್ಷಣಾ ಸಚಿವಾಲಯದ ಪ್ರಧಾನ ಕಛೇರಿ __________ ಯಲ್ಲಿದೆ.
5) ಹಿಂದೂಸ್ಥಾನದ ಹಡಗು ಕಾರ್ಖಾನೆ __________ ನಲ್ಲಿದೆ.
6) ಗಡಿ ಭದ್ರತಾ ಪಡೆಯ ತರಬೇತಿ ಕೇಂದ್ರ __________ ದಲ್ಲಿದೆ.
7) ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯು __________ ರಲ್ಲಿ ಸ್ಥಾಪನೆಯಾಯಿತು.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1) ಕಾರವಾರದ ಬಳಿ ಇರುವ ನೌಕಾ ನೆಲೆಯನ್ನು ಏನೆಂದು ಕರೆಯಲಾಗುತ್ತದೆ ?
2) ನಮ್ಮ ರಕ್ಷಣಾ ಸಚಿವಾಲಯದ ನಾಲ್ಕು ಇಲಾಖೆಗಳಾವುವು ?
3) ಭಾರತದ ಭೂಸೇನಾ ರಚನೆಯನ್ನು ವಿವರಿಸಿ.
4) ಭಾರತೀಯ ಭೂಸೇನೆ ಕಮಾಂಡ್‌ಗಳಾವುವು ?
5) ಭಾರತೀಯ ವಾಯುದಳದ ಕಾರ್ಯಗಳನ್ನು ವಿವರಿಸಿ.
6) ಸೇನಾ ನೇಮಕಾತಿಗೆ ಇರಬೇಕಾದ ಅರ್ಹತೆಗಳಾವುವು ?
7) ಎನ್.ಸಿ.ಸಿ. ಯ ಗುರಿಗಳೇನು ? ಅದರ ಸೌಲಭ್ಯಗಳಾವುವು ?
8) ಭಾರತದ ರೆಡ್ ಕ್ರಾಸ್ ಸಂಸ್ಥೆಯ ಸಂಘಟನೆಯನ್ನು ವಿವರಿಸಿ.

**III. ಚಟುವಟಿಕೆಗಳು.**

1) ದೇಶದ ಭದ್ರತೆ ನಮ್ಮ ಸೈನಿಕ ಪಡೆಗಳನ್ನು ಅವಲಂಬಿಸಿದೆ ಎಂಬುದರ ಬಗ್ಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿ.
2) ನಿಮಗೆ ಹತ್ತಿರವಿರುವ ರೆಡ್ ಕ್ರಾಸ್ ಸಂಸ್ಥೆಗೆ ಭೇಟಿ ನೀಡಿರಿ. ಅದು ನಿರ್ವಹಿಸುತ್ತಿರುವ ಕಾರ್ಯಗಳ ಪರಿಚಯ ಮಾಡಿಕೊಳ್ಳಿ.
3) ನಿವೃತ್ತ ಸೈನಿಕರನ್ನು ಶಾಲೆಗೆ ಆಹ್ವಾನಿಸಿ ಅವರಿಂದ ಸೇವಾ ಅನುಭವಗಳನ್ನು ಹಂಚಿಕೊಳ್ಳಿ.

**IV. ಯೋಜನೆಗಳು.**

1) ನಮ್ಮ ಸೇನಾ ಪಡೆಗಳ ಚಿತ್ರಗಳನ್ನು ತಯಾರಿಸಿ ಶಾಲೆಯಲ್ಲಿ ಹಾಕಿರಿ.
2) ಶಾಲೆಯಲ್ಲಿ ರೆಡ್‌ಕ್ರಾಸ್ ಸಂಸ್ಥೆ ತೆರೆದು ಸಾರ್ವಜನಿಕರಿಗೆ ಸೇವೆ ಮಾಡಿರಿ.
3) ಯುದ್ಧ ವಿಮಾನಗಳು, ಯುದ್ಧ ಹಡಗುಗಳ ಛಾಯಾ ಚಿತ್ರ ಸಂಗ್ರಹಿಸಿ.

*****

© KTBS NOT TO BE REPUBLISHED

# ಅಧ್ಯಾಯ – 23

# ರಾಷ್ಟ್ರೀಯ ಭಾವೈಕ್ಯ

C1H6S9

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ರಾಷ್ಟ್ರೀಯತೆಯ ಅರ್ಥ
- ದೇಶದ ವಿವಿಧತೆಯಲ್ಲಿ ಏಕತೆಯನ್ನು ಮೂಡಿಸುವ ಅಂಶಗಳು
- ರಾಷ್ಟ್ರೀಯ ಭಾವೈಕ್ಯ ಸಾಧಿಸುವಲ್ಲಿನ ಅಂಶಗಳು

**ರಾಷ್ಟ್ರೀಯತೆ :** ರಾಷ್ಟ್ರ ಎಂಬ ಪದದಿಂದ ರಾಷ್ಟ್ರೀಯತೆ ಎನ್ನುವ ಪದ ಬಂದಿದೆ. ಆಧುನಿಕ ವಿದ್ವಾಂಸರ ಅಭಿಪ್ರಾಯದಲ್ಲಿ ರಾಷ್ಟ್ರೀಯತೆಯನ್ನು ನಿರ್ಧರಿಸುವ ಅಂಶಗಳೆಂದರೆ – ತಾವು ವಾಸಿಸುವ ನೆಲವನ್ನು ಮಾತೃಭೂಮಿ ಎಂದು ತಿಳಿಯುವ ಜನಸಮೂಹ, ಆ ಜನ ಸಮೂಹದಲ್ಲಿ ಪರಸ್ಪರ ಸೋದರತೆಯ ಭಾವನೆ ಮತ್ತು ರಾಷ್ಟ್ರದ ಸುಖ–ದುಃಖಗಳಲ್ಲಿ ಸಮಾನ ಭಾಗಿತ್ವ. ಇಂತಹ ಜನರನ್ನು ರಾಷ್ಟ್ರೀಯರು ಮತ್ತು ಈ ಭಾವನೆಯನ್ನು ರಾಷ್ಟ್ರೀಯತೆ ಎನ್ನುತ್ತಾರೆ.

ಅನಾದಿಕಾಲದಿಂದ ಭಾರತದ ಉದ್ದಗಲಕ್ಕೂ ವಾಸಿಸುವ ಜನರಲ್ಲಿ ಇಂತಹ ರಾಷ್ಟ್ರೀಯ ಭಾವನೆ ಇರುವುದನ್ನು ಕಾಣುತ್ತೇವೆ. ನಮ್ಮ ದೇಶದ ಮೇಲೆ ಆದ ವಿದೇಶಿಯರ ಆಕ್ರಮಣಗಳ ವಿರುದ್ಧ ಹೋರಾಡಲು ಪ್ರೇರೇಪಿಸಿದ್ದು ಈ ರಾಷ್ಟ್ರೀಯ ಭಾವನೆಯೆ. ಬ್ರಿಟಿಷರ ವಿರುದ್ಧ ನಮ್ಮ ಹೋರಾಟದ ಮೂಲಸ್ಫೂರ್ತಿ ಇದೇ.

@KTBS NOT TO BE REPUBLISHED



**ರಾಷ್ಟ್ರೀಯ ಭಾವೈಕ್ಯ :** ಒಂದು ರಾಷ್ಟ್ರದ ಜನರು ನಾವೆಲ್ಲಾ ಒಂದೇ ಎನ್ನುವ ಭಾವನೆಯೇ ರಾಷ್ಟ್ರೀಯ ಭಾವೈಕ್ಯ. ಇದರ ಅರ್ಥ ವಿವಿಧ ಜಾತಿ, ಧರ್ಮ, ಪ್ರಾದೇಶಿಕತೆ ಮತ್ತು ವಿವಿಧ ಭಾಷೆಗಳನ್ನು ಮಾತನಾಡುವ ಜನರು ನಾವೆಲ್ಲಾ ಒಂದೇ ಎಂದು ಗುರುತಿಸಿಕೊಳ್ಳುವುದು. ಈ ರೀತಿಯ ಐಕ್ಯತೆಯು ಶಕ್ತಿಯುತವಾದ ರಾಷ್ಟ್ರವನ್ನು ಕಟ್ಟಲು ಬಹಳ ಮಹತ್ವದ್ದಾಗಿದೆ.

ಭಾರತವು ವಿಶಾಲವಾದ ರಾಷ್ಟ್ರವಾಗಿದ್ದು, ಪ್ರಪಂಚದ ಜನಸಂಖ್ಯೆಯಲ್ಲಿ ಎರಡನೇ ಸ್ಥಾನ ಪಡೆದಿದೆ. ಈ ದೇಶದಲ್ಲಿ ಸುಮಾರು 1652 ಭಾಷೆ ಮತ್ತು ಉಪಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಇದರಲ್ಲಿ 22 ಭಾಷೆಗಳನ್ನು ರಾಷ್ಟ್ರೀಯ ಭಾಷೆಗಳನ್ನಾಗಿ ನಮ್ಮ ಸಂವಿಧಾನ ಅಂಗೀಕರಿಸಿದೆ. ನಮ್ಮ ದೇಶದಲ್ಲಿ ಹಲವಾರು ಧರ್ಮ ಮತ್ತು ಮತಗಳು (ಹಿಂದೂ, ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ, ಸಿಖ್ ಮತ್ತು ಪಾರ್ಸಿ) ಆಚರಣೆಯಲ್ಲಿರುವುದು ಒಂದು ಅದ್ವಿತೀಯ ಲಕ್ಷಣವಾಗಿದೆ. ಅದೇ ರೀತಿ ವಿವಿಧ ಉಡುಗೆ, ಆಹಾರ ಪದ್ಧತಿ ಮತ್ತು ಸಾಮಾಜಿಕ ವ್ಯವಸ್ಥೆ ಇದ್ದರೂ ನಾವೆಲ್ಲಾ ಒಂದೇ ಎಂಬ ಭಾವನೆಯುಳ್ಳವರಾಗಿದ್ದೇವೆ. ಭೌಗೋಳಿಕವಾಗಿ ಮತ್ತು ಪ್ರಾಕೃತಿಕವಾಗಿ ವೈವಿಧ್ಯದಿಂದ ಕೂಡಿದ್ದರೂ ರಾಜಕೀಯವಾಗಿ ಒಗ್ಗಟ್ಟಾಗಿ ಪ್ರತಿ ಭಾಗವೂ ಒಂದೇ ಸಂವಿಧಾನದಡಿಯಲ್ಲಿ ಆಳಲ್ಪಟ್ಟಿದೆ.

**ವಿವಿಧತೆಯಲ್ಲಿ ಏಕತೆ :** ಭಾರತವು ತನ್ನ ಅನೇಕ ವೈವಿಧ್ಯತೆಗಳ ನಡುವೆಯೂ ಐಕ್ಯತೆಯ ಮೂಲ ಬುನಾದಿಯನ್ನು ಹೊಂದಿದೆ. ಭೌಗೋಳಿಕ, ಸಾಮಾಜಿಕ, ಭಾಷೆ, ಸಂಪ್ರದಾಯ, ರಾಜಕೀಯ, ಧಾರ್ಮಿಕ, ಜನಾಂಗೀಯ ಹಾಗೂ ಸಂಸ್ಕೃತಿಗಳ ನಡುವೆ ಅನೇಕ ವೈವಿಧ್ಯವನ್ನು ಹೊಂದಿದ್ದರೂ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಭಾರತೀಯರ ಜೀವನದ ವಿಧಾನದಲ್ಲಿ ಏಕತೆಯ ಅಂಶಗಳು ಅಡಗಿವೆ. ಏಕರೀತಿಯ ಆಡಳಿತ ವ್ಯವಸ್ಥೆ, ಸುಲಭ ಸಂಪರ್ಕ ಸಾಧನಗಳು, ಆಧುನಿಕ ಶಿಕ್ಷಣ, ಸ್ವಾಸ್ಥ್ಯ, ಕಾನೂನು ಪದ್ಧತಿಗಳು ಮುಂತಾದುವು ಏಕತೆಯ ಅಂಶವನ್ನು ಮೂಡಿಸಿವೆ.

**ವಿವಿಧತೆಯಲ್ಲಿ ಐಕ್ಯತೆ ಮೂಡಿಸುವ ಅಂಶಗಳು**

**ಭೌಗೋಳಿಕ ಐಕ್ಯತೆ :** ಭಾರತವು ವಿಶ್ವದ ಇತರ ರಾಷ್ಟ್ರಗಳಿಂದ ಬೇರ್ಪಡಿಸಿರುವ ಹಿಮಾಲಯ ಪರ್ವತ, ಬಂಗಾಳ ಕೊಲ್ಲಿ, ಹಿಂದೂ ಮಹಾಸಾಗರ, ಅರಬ್ಬೀ ಸಮುದ್ರ ಇವುಗಳು ಭಾರತವನ್ನು ನೈಸರ್ಗಿಕವಾಗಿ ಐಕ್ಯಗೊಳ್ಳುವಂತೆ ಮಾಡಿವೆ. ಭೌಗೋಳಿಕವಾಗಿ ವಾಸಿಸುವ ಜನರು ರಾಷ್ಟ್ರಗೀತೆಯನ್ನು ಹಾಡುವುದು ರಾಷ್ಟ್ರದ ಐಕ್ಯತೆಯನ್ನು ಸೂಚಿಸುತ್ತದೆ.

**ರಾಜಕೀಯ ಐಕ್ಯತೆ :** ಆನಾದಿ ಕಾಲದಿಂದಲೂ ಏಕರೂಪತೆಯನ್ನು ಹೊಂದಿರುವ ಭಾರತ ಇಂದಿಗೂ ಒಂದೇ ಸಂವಿಧಾನ, ಏಕ ರೀತಿಯ ಕಾನೂನು, ಶಿಕ್ಷಣ ಕ್ರಮ, ಒಕ್ಕೂಟ ನ್ಯಾಯಾಂಗ ವ್ಯವಸ್ಥೆ, ಬಲಿಷ್ಠ ಕೇಂದ್ರ ಸರ್ಕಾರದ ಆಡಳಿತಗಳಿಂದ ರಾಜಕೀಯ ಐಕ್ಯತೆಯನ್ನು ಸಾಧಿಸಿದೆ. ನಾವು ಭಾರತೀಯರೆಂಬ ರಾಜಕೀಯ ಗುರುತಿಸುವಿಕೆ, ಜೊತೆಗೆ ಶಿಕ್ಷಣ, ಸ್ವಾಸ್ಥ್ಯ ಕಾನೂನು, ಸಂಪರ್ಕ ಸಾಧನ ಮುಂತಾದ ಕ್ಷೇತ್ರಗಳು ಸರ್ವಮಾನ್ಯ ಮಾನದಂಡಗಳಾಗಿವೆ.

**ಧಾರ್ಮಿಕ ಐಕ್ಯತೆ :** ಭಾರತವು ಅನೇಕ ಮತಗಳಿಂದ ಕೂಡಿದ್ದು, ಹಿಂದೂ, ಬೌದ್ಧ, ಜೈನ, ಸಿಖ್, ಕ್ರಿಶ್ಚಿಯನ್, ಇಸ್ಲಾಂ, ಪಾರ್ಸಿ ಮುಂತಾದ ಮತಗಳು ಇಲ್ಲಿ ಬೇರೂರಿವೆ. ಪ್ರತಿಯೊಂದು ಮತವೂ ತನ್ನದೇ ಆದ ಹಬ್ಬ, ಹರಿದಿನಗಳನ್ನು ಆಚರಿಸುತ್ತಿವೆ. ಒಂದು ಮತದ ಜನತೆಯನ್ನು ಇನ್ನೊಂದು ಮತದ ಜನತೆಯು ತಮ್ಮೊಡನೆ, ಭಾಗವಹಿಸುವುದರ ಮೂಲಕ ಐಕ್ಯತೆಯನ್ನು ಮೂಡಿಸುವುದೇ ಅಲ್ಲದೆ, ಸರ್ವಮತ ಸಮನ್ವಯತೆ ಅಥವಾ ಭಾರತದಲ್ಲಿ ಎಲ್ಲ ಮತೀಯರಿಗೂ ತಮ್ಮ ತಮ್ಮ ಮತ ಪಾಲಿಸುವ ಸಮಾನ ಹಕ್ಕು ಇದೆ.

**ಭಾಷಾ ಐಕ್ಯತೆ :** ಭಾರತವು ವಿವಿಧ ಭಾಷೆಗಳ ತವರೂರಾಗಿದೆ. ಬಹುತೇಕ ಭಾಷೆಗಳಿಗೆ ಸಂಸ್ಕೃತವು ಮೂಲವಾಗಿದೆ. ವಿವಿಧ ಭಾಷೆಗಳನ್ನು ಮಾತನಾಡುವ ಜನರು ಭಾರತದಲ್ಲಿದ್ದಾರೆ. ಪ್ರತಿಯೊಂದು ರಾಜ್ಯವೂ ತನ್ನದೇ ಆದ ಭಾಷೆ, ಸಾಹಿತ್ಯವನ್ನು ಹೊಂದಿದೆ. ಆದರೂ ಭಾಷಾ ಐಕ್ಯತೆಗೆ ಧಕ್ಕೆ ಬಂದಿಲ್ಲ. ಒಂದು ಭಾಷೆಯ ಜನರು ಇತರೆ ಭಾಷೆಗಳನ್ನು ಗೌರವಿಸುತ್ತಾರೆ.

**ಸಾಂಸ್ಕೃತಿಕ ಐಕ್ಯತೆ :**ಭಾರತದಲ್ಲಿ ವಿವಿಧ ಜನಾಂಗಗಳು, ಧರ್ಮಗಳಿದ್ದರೂ ಸಾಂಸ್ಕೃತಿಕ ಐಕ್ಯತೆಯನ್ನು ಎಲ್ಲೆಲ್ಲೂ ಕಾಣಬಹುದು. ವಿವಿಧ ಭಾಗದ ಜನರು ತಮ್ಮದೇ ಆದ ಸಂಪ್ರದಾಯ, ಆಚಾರ ವಿಚಾರಗಳು, ವೇಷಭೂಷಣಗಳು, ಆಹಾರ ಪದ್ಧತಿ, ಜೀವನ ಶೈಲಿ ಮುಂತಾದ ಸಾಂಸ್ಕೃತಿಕ ವೈವಿಧ್ಯ ಇದ್ದರೂ ಸಾಮ್ಯತೆಯನ್ನು ಹೊಂದಿದ್ದಾರೆ.

©KTBS
NOT TO BE REPUBLISHED

**ರಾಷ್ಟ್ರೀಯ ಐಕ್ಯತೆಯನ್ನು ವೃದ್ಧಿಸುವ ಅಂಶಗಳು (ಪ್ರೋತ್ಸಾಹಿಸುವ ಅಂಶಗಳು)**

**ಜಾತ್ಯತೀತತೆ (ಮತನಿರಪೇಕ್ಷ) :** ಭಾರತ ಒಂದು ಜಾತ್ಯತೀತ ರಾಷ್ಟ್ರ. ಧರ್ಮ ವಿರೋಧಿ ರಾಷ್ಟ್ರವಲ್ಲ. ಇದರ ಅರ್ಥ ರಾಷ್ಟ್ರದ ಪ್ರತಿಯೊಬ್ಬ ಪೌರನು ತನ್ನದೇ ಆದ ಮತವನ್ನು ಆಚರಿಸುವ ಧಾರ್ಮಿಕ ಹಕ್ಕನ್ನು ಹೊಂದಿದ್ದಾನೆ. ಸರ್ವಧರ್ಮ ಸಮನ್ವಯತೆಯಿದೆ. ಆದುದರಿಂದ ಇದು ರಾಷ್ಟ್ರದ ಐಕ್ಯತೆಯನ್ನು ಪ್ರೋತ್ಸಾಹಿಸಿದಂತಾಗುತ್ತದೆ.


**ಪ್ರಜಾಪ್ರಭುತ್ವ :** ಭಾರತ ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಎಲ್ಲಾ ಪೌರರು ದೇಶದ ಕಾನೂನಿನಡಿಯಲ್ಲಿ ಸಮಾನರಾಗಿರುತ್ತಾರೆ. ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ತ್ವಗಳಲ್ಲಿ ರಾಜ್ಯದ ಎಲ್ಲಾ ಪೌರರು ಒಂದೇ ಎಂದು ಪರಿಗಣಿಸಲ್ಪಟ್ಟಿದೆ. ಜನತೆ ವಿವಿಧ ಭಾಷೆ ಮತ್ತು ಸಂಸ್ಕೃತಿಯ ಆಧಾರದ ಮೇಲೆ ಭೇದಭಾವ ಮಾಡುವಂತಿಲ್ಲ. ಇದರಿಂದ ಭಾರತ ಒಂದು ಐಕ್ಯ ರಾಷ್ಟ್ರವೆಂದು ತಿಳಿಯಬಹುದು.

**ರಾಷ್ಟ್ರೀಯ ಹಬ್ಬಗಳು :** ದೇಶದ ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ಗಾಂಧಿ ಜಯಂತಿ ಮುಂತಾದುವುಗಳು ಭಾರತೀಯರನ್ನು ಒಂದುಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಹಬ್ಬಗಳನ್ನು ಎಲ್ಲಾ ಭಾರತೀಯ ಪೌರರು ಪ್ರತಿಯೊಂದು ಭಾಗದಲ್ಲೂ ಆಚರಿಸುತ್ತಾರೆ. ಯಾವುದೇ ಭಾಷೆ, ಮತ್ತು ಸಂಸ್ಕೃತಿಯನ್ನು ಗಣನೆಗೆ ತೆಗೆದುಕೊಳ್ಳದೆ ಆಚರಿಸುವುದರಿಂದ ನಮ್ಮ ಹಬ್ಬಗಳು ನಮ್ಮ ಏಕ ರಾಷ್ಟ್ರೀಯತೆಯನ್ನು ನೆನಪಿಸುತ್ತವೆ.

**ನಮ್ಮ ರಾಷ್ಟ್ರೀಯ ಲಾಂಛನಗಳು :** ನಮ್ಮ ರಾಷ್ಟ್ರೀಯ ಚಿನ್ಹೆಗಳು ಅಥವಾ ರಾಷ್ಟ್ರಲಾಂಛನ, ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರೀಯ ಹೂ, ರಾಷ್ಟ್ರ ಪಕ್ಷಿ, ರಾಷ್ಟ್ರೀಯ ಪ್ರಾಣಿ ಮುಂತಾದುವು ಸಹ ನಾವೆಲ್ಲಾ ಒಂದು ಎಂದು ಗುರುತಿಸಿಕೊಳ್ಳಲು ಸಹಾಯಕವಾಗಿವೆ. ಈ ಅಂಶವೂ ಸಹ ಆಚರಣೆಯ ಸಂದರ್ಭದಲ್ಲಿಯಾಗಲೀ ಅಥವಾ ವಿಪತ್ತಿನ ಸಂದರ್ಭದಲ್ಲಾಗಲೀ ನಾವೆಲ್ಲಾ ಒಂದು ಎಂದು ಒಗ್ಗೂಡಿಸುವ ಆರೋಗ್ಯಕರ ಅಂಶವಾಗಿದೆ.



**ರಾಷ್ಟ್ರ ಲಾಂಛನ**



**ರಾಷ್ಟ್ರ ಪಕ್ಷಿ – ನವಿಲು**



**ರಾಷ್ಟ್ರೀಯ ಹೂ – ಕಮಲ**



**ರಾಷ್ಟ್ರ ಪ್ರಾಣಿ – ಹುಲಿ**

**ಪರಸ್ಪರ ಅನ್ಯೋನ್ಯತೆ :** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಮಾನ್ಯ ಧ್ಯೇಯೋದ್ದೇಶಗಳ ಮೂಲಕ ಕಾರ್ಯ ಸಾಧನೆ ಮಾಡುತ್ತವೆ. ರಾಷ್ಟ್ರದ ಪ್ರತಿಯೊಂದು ಭಾಗವೂ ಇನ್ನೊಂದು ಭಾಗದ ಮೇಲೆ ಅವಲಂಬಿತವಾಗಿವೆ. ಆಯಾ ಭಾಗದ ಉತ್ಪಾದನೆಗಳು ಆರ್ಥಿಕ ಬೆಳವಣಿಗೆಯನ್ನು ಒಳಗೊಂಡಿರುತ್ತದೆ. ಉದಾ :– ಪಂಜಾಬ್‌ನಲ್ಲಿ ಗೋಧಿ ಬೆಳೆದರೆ ತಮಿಳುನಾಡಿನಲ್ಲಿ ಮಾರಾಟವಾಗುತ್ತದೆ. ಹತ್ತಿ ಗುಜರಾತ್‌ನಲ್ಲಿ ಬೆಳೆದರೆ ಬಿಹಾರ್‌ನಲ್ಲಿ ಮಾರಾಟವಾಗುತ್ತದೆ. ಆದುದರಿಂದ ಯಾವುದೇ ಭಾಗವು ಇತರೆ ಭಾಗದ ಮೇಲೆ ಅವಲಂಬಿಸಬೇಕಾಗುತ್ತದೆ. ಯಾವುದು ಸಂಪೂರ್ಣವಾಗಿ ಸ್ವಾವಲಂಬಿಯಾಗದು. ಈ ಅಂಶವೂ ಕೂಡ ನಾವೆಲ್ಲಾ ಒಂದೇ ರಾಷ್ಟ್ರದವರು ಎಂಬುದನ್ನು ಸೂಚಿಸುತ್ತದೆ.

@KTBS NOT TO BE REPUBLISHED

ಇವಲ್ಲದೆ ಇತರೆ ಅಂಶಗಳಾದ ಸಂಪರ್ಕ ವಿಧಾನ, ಸಮೂಹ ಮಾಧ್ಯಮಗಳು, ನೈಸರ್ಗಿಕ ಅಂಶಗಳು, ವಿವಿಧ ಸಂಸ್ಕೃತಿ, ಪ್ರಾಂತೀಯತೆ, ಮತ, ಭಾಷೆ ಮುಂತಾದುವುಗಳಿದ್ದರೂ ಇಡೀ ರಾಷ್ಟ್ರದ ಜನತೆ ಒಂದೇ ಎಂಬ ಐಕ್ಯತೆ ಕಾಣಬಹುದಾಗಿದೆ.

**ಚಟುವಟಿಕೆ**

ನಿಮ್ಮ ಶಾಲೆಯಲ್ಲಿ ರಾಷ್ಟ್ರೀಯ ಭಾವೈಕ್ಯವನ್ನು ವೃದ್ಧಿಸಬಹುದಾದ ಸಂದರ್ಭಗಳ ಬಗ್ಗೆ ಟಿಪ್ಪಣಿ ಬರೆಯಿರಿ.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1) ಭಾರತ ಒಂದು ಜಾತ್ಯಾತೀತ ರಾಷ್ಟ್ರವಾಗಿದ್ದು ................. ವಿರೋಧಿ ರಾಷ್ಟ್ರವಲ್ಲ.
2) ಕೋಮುವಾದವು ನಮ್ಮ ................. ಗೆ ಒಂದು ದೊಡ್ಡ ಅಪಾಯವಾಗಿದೆ.
3) ಗಣರಾಜ್ಯೋತ್ಸವವು ................. ಹಬ್ಬಗಳಲ್ಲಿ ಒಂದಾಗಿದೆ.
4) ಭಾರತವು ರಾಷ್ಟ್ರೀಯ ಭಾಷೆಗಳನ್ನಾಗಿ ಅಂಗೀಕರಿಸಿರುವ ಭಾಷೆಗಳ ಸಂಖ್ಯೆ .................
5) ನಮ್ಮ ರಾಷ್ಟ್ರೀಯ ಪ್ರಾಣಿ ................. .

**II. ಈ ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳ ಜೊತೆ ಚರ್ಚಿಸಿ ಉತ್ತರಿಸಿ.**

1) ರಾಷ್ಟ್ರೀಯತೆ ಎಂದರೇನು ?
2) ರಾಷ್ಟ್ರೀಯ ಐಕ್ಯತೆ ಎಂದರೇನು ?
3) ವೈವಿಧ್ಯದಲ್ಲಿ ಏಕತೆಯನ್ನು ಮೂಡಿಸುವ ಅಂಶಗಳಾವುವು ?
4) ರಾಷ್ಟ್ರೀಯ ಐಕ್ಯತೆಯನ್ನು ಪ್ರೋತ್ಸಾಹಿಸುವ ಅಂಶಗಳಾವುವು ?

**III. ಚಟುವಟಿಕೆಗಳು.**

1) ವೈವಿಧ್ಯದಲ್ಲಿ ಏಕತೆ ಮೂಡಿಸುವ ಚಿತ್ರಗಳನ್ನು ತಯಾರಿಸಿ ಶಾಲೆಯಲ್ಲಿ ಹಾಕಿರಿ.
2) ನಿಮ್ಮ ಸ್ಥಳದಲ್ಲಿ ವಿವಿಧ ಧರ್ಮ / ಮತದವರು ಆಚರಿಸುವ ಹಬ್ಬಗಳ ರೀತಿಯ ಬಗ್ಗೆ ಸಂಬಂಧಿಸಿದವರಿಂದ ಮಾಹಿತಿ ಸಂಗ್ರಹಿಸಿ ಬರೆಯಿರಿ.

**IV. ಯೋಜನೆಗಳು.**

1) ರಾಷ್ಟ್ರೀಯ ಐಕ್ಯತೆ ಮೂಡಿಸುವ ಛಾಯಾಚಿತ್ರಗಳನ್ನು ಸಂಗ್ರಹಿಸಿರಿ.
2) ರಾಷ್ಟ್ರೀಯ ಐಕ್ಯತೆಯನ್ನು ಪ್ರೋತ್ಸಾಹಿಸುವ ಧರ್ಮಗ್ರಂಥಗಳನ್ನು ಸಂಗ್ರಹಿಸಿರಿ.

*****

NOT TO BE REPUBLISHED ©KTBS

ಸಮಾಜಶಾಸ್ತ್ರ

ಅಧ್ಯಾಯ – 24

# ಸಾಮಾಜೀಕರಣ ಹಾಗೂ ಕುಟುಂಬದ ಸಂಬಂಧಗಳು

X9J8Y5

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಸಾಮಾಜೀಕರಣದ ಅರ್ಥ ಹಾಗೂ ಅದರ ಮಹತ್ವ
- ವ್ಯಕ್ತಿಯ ಮೇಲೆ ಸಾಮಾಜೀಕರಣದ ಪ್ರಭಾವ
- ಸಾಮಾಜೀಕರಣದ ನಿಯೋಗಿಗಳು

## ಸಾಮಾಜೀಕರಣ

ಮಾನವ ಸಮಾಜಜೀವಿ. ಆತನ/ಆಕೆಯ ಶಿಶುವು ಇತರ ಎಲ್ಲ ಪ್ರಾಣಿಗಳಂತೆ ಕೇವಲ ಪ್ರಾಣಿಯಾಗಿ ಜನಿಸುತ್ತದೆ. ಕಾಲಕ್ರಮೇಣ ಸಮಾಜಜೀವಿಯಾಗಿ ಬೆಳೆಯುತ್ತದೆ. ಮಗುವು ಬೆಳೆದು ಕ್ರಮೇಣ ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಳ್ಳುವ ಪ್ರಕ್ರಿಯೆಯನ್ನು ಸಾಮಾಜೀಕರಣ ಎನ್ನುತ್ತೇವೆ.

ಸಾಮಾಜೀಕರಣವು ಸಾರ್ವತ್ರಿಕವಾದುದು. ಮಾನವನ ಜೀವನಪರ್ಯಂತ ನಡೆಯುವ ಕ್ರಿಯೆಯಾಗಿದೆ. ಪ್ರಾಣಿಗಳು ತಮ್ಮ ಮೂಲಪ್ರವೃತ್ತಿಗಳನ್ನು ಮಾತ್ರ ಅನುಸರಿಸಿ ವರ್ತಿಸುತ್ತವೆ. ಅವುಗಳ ವರ್ತನೆಗಳಲ್ಲಿ ವೈವಿಧ್ಯತೆ ಇರುವುದಿಲ್ಲ. ಅವುಗಳಿಗೆ ಕಲಿಕೆಯ ಸಾಮರ್ಥ್ಯ ಬಹಳ ಕಡಿಮೆಯಿರುತ್ತದೆ. ಆದರೆ ಮಾನವನು ಹಾಗಲ್ಲ. ಅವನ/ಳ ಹುಟ್ಟಿನಿಂದಲೇ ಬರುವ ಸಹಜ ಪ್ರವೃತ್ತಿಗಳು ಮತ್ತು ಸಂಸ್ಕೃತಿಗಳು ಅವನ/ಅವಳ ಮೇಲೆ ಪ್ರಭಾವ ಬೀರುತ್ತವೆ. ನೈಸರ್ಗಿಕ ಕೊಡುಗೆಯಾಗಿರುವ ಕಲಿಕಾ ಸಾಮರ್ಥ್ಯವನ್ನು ಅವನು/ಅವಳು ಯಥಾವತ್ತಾಗಿ ಬಳಸುತ್ತಾನೆ/ಳೆ. ಪರಿಸರ ಮತ್ತು ಪರಿಸ್ಥಿತಿಗಳಿಗೆ ತಕ್ಕಂತೆ ಹೊಂದಿಕೊಂಡು ಬಾಳಲು ಯತ್ನಿಸುತ್ತಾನೆ/ಳೆ. ಸಮಾಜದ ಪ್ರಚಲಿತ ಸಂಪ್ರದಾಯಗಳು, ಆಚಾರಗಳು, ನೈತಿಕ ನಿಯಮಗಳು ಮೊದಲಾದ ಸಂಸ್ಕೃತಿಯ ಅಂಶಗಳನ್ನು ಅನುಸರಿಸಲು ಶ್ರಮಿಸುತ್ತಾನೆ/ಳೆ. ಅವುಗಳನ್ನು ತನ್ನ ಸಾಮಾಜಿಕ ವರ್ತನೆಗಳಲ್ಲಿ ಅಳವಡಿಸಿಕೊಳ್ಳುತ್ತಾನೆ/ಳೆ. ಇವೆಲ್ಲವೂ ವ್ಯಕ್ತಿಯ ಸಾಮಾಜೀಕರಣದಿಂದಲೆ ಸಾಧ್ಯವಾಗುತ್ತದೆ. ಆದುದರಿಂದ ಸಾಮಾಜೀಕರಣ ಮಾನವನಿಗೆ ವಿಶಿಷ್ಟವಾದ ಲಕ್ಷಣವಾಗಿದೆ.

ಶಿಶುವು ಹುಟ್ಟಿದಾಗ ಸಮಾಜದಲ್ಲಿ ಪಾಲ್ಗೊಳ್ಳಲು ಸಮರ್ಥವಾಗಿರುವುದಿಲ್ಲ. ಅದರ ಮನಸ್ಸನ್ನು ಅರಿಯಲು ನಮಗೆ ತಿಳಿಯುವುದಿಲ್ಲ. ಆದರೆ ಅದಕ್ಕೆ ತನ್ನ ದೇಹದ ಚಲನೆಗಳನ್ನು ನಿಯಂತ್ರಿಸುವ ಆಸಕ್ತಿಯಿರುವುದಿಲ್ಲವೆಂದು ತಿಳಿಯುತ್ತೇವೆ. ತನ್ನ ಶರೀರದ ಬಗ್ಗೆ ತಿಳಿಸಲು, ಇಚ್ಛೆ ವ್ಯಕ್ತಪಡಿಸಲು ಅದು ತಿಳಿದಿರುವುದಿಲ್ಲ. ಅದು ತನ್ನದೇ ಆದ ಸ್ವಯಂ ಪರಿಕಲ್ಪನೆಯನ್ನು ಹೊಂದಿರುವುದಿಲ್ಲ. ಕ್ರಮೇಣ ಮಾನವ ಸಮಾಜದ ಸಂಬಂಧಗಳನ್ನು ಅಭಿವೃದ್ಧಿಪಡಿಸಿಕೊಂಡು ಕಲಿಕೆಯ ಪ್ರಕ್ರಿಯೆಯನ್ನು ನಿರ್ವಹಿಸುತ್ತಾನೆ/ಳೆ. ಸಮಾಜದಲ್ಲಿ ಪಾಲ್ಗೊಳ್ಳಲು ಅವಶ್ಯಕವಾದ ಪ್ರಚೋದನೆ ಮತ್ತು ಸಾಮರ್ಥ್ಯವನ್ನು ನೀಡುವ ಕಲಿಕೆಯು ಸಾಮಾಜೀಕರಣವೆನಿಸಿಕೊಳ್ಳುತ್ತದೆ. ಸಾಮಾಜೀಕರಣದಿಂದ ಕಲಿತದ್ದು ಸಂಸ್ಕೃತಿಯಾಗುತ್ತದೆ.

## ಸಾಮಾಜೀಕರಣದ ಮಹತ್ವ / ಕಾರ್ಯಗಳು

- ಮಾನವನನ್ನು ಸಮೂಹ–ಜೀವಿಯಾಗಿಸುತ್ತದೆ.
- ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯಕವಾಗಿದೆ.
- ಜೀವನದಲ್ಲಿ ಶಿಸ್ತನ್ನು ಮೂಡಿಸುತ್ತದೆ.
- ವಿವಿಧ ಕೌಶಲ್ಯಗಳ ಕಲಿಕೆಗೆ ಮತ್ತು ಅಳವಡಿಕೆಗೆ ಅವಕಾಶವನ್ನು ಒದಗಿಸುತ್ತದೆ.
- ಸರಿಯಾದ ಆಕಾಂಕ್ಷೆಗಳನ್ನು ಬೆಳೆಸಿಕೊಳ್ಳಲು ಸಹಾಯಮಾಡುತ್ತದೆ.

© KTBS NOT TO BE REPUBLISHED

- ಸಾಮಾಜಿಕ ಅಂತರವನ್ನು ತಗ್ಗಿಸುತ್ತದೆ.
- ಭವ್ಯ ಭವಿಷ್ಯವನ್ನು ರೂಪಿಸಲು ಅವಕಾಶವನ್ನು ನೀಡುತ್ತದೆ.
- ಸಂಸ್ಕೃತಿಯ ನಿರಂತರ ಮುಂದುವರಿಕೆಗೆ ಸಹಕಾರಿಯಾಗಿದೆ.
- ಸಾಮಾಜಿಕ ವ್ಯವಸ್ಥೆಗೆ ಭದ್ರತೆ ನೀಡುತ್ತದೆ.

**ಸಾಮಾಜೀಕರಣದ ನಿಯೋಗಿಗಳು :** ಸಾಮಾಜೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಲ್ಲಿ ಮುಖ್ಯವಾಗಿ ಎರಡು ವಿಧಗಳನ್ನು ಗುರುತಿಸಬಹುದಾಗಿದೆ. ಮೊದಲನೆಯದಾಗಿ ವಯಸ್ಸು, ಅನುಭವ ಮತ್ತು ಹಿರಿಯರು ಬೀರುವ ಪ್ರಭಾವ. ಎರಡನೆಯದು ವ್ಯಕ್ತಿಯ ಸಮವಯಸ್ಕರು ಉಂಟುಮಾಡುವ ಪ್ರಭಾವ. ಮೊದಲನೆಯ ವಿಭಾಗದಲ್ಲಿ ತಾಯಿ, ತಂದೆ, ಗುರುಹಿರಿಯರು ಹಾಗೂ ಅಧಿಕಾರಿಗಳನ್ನು ಸೇರಿಸಬಹುದು. ಎರಡನೆಯ ವಿಭಾಗದಲ್ಲಿ ಸ್ನೇಹಿತರು ಹಾಗೂ ಸಮವಯಸ್ಕರನ್ನು ಸೇರಿಸಬಹುದು. ಇದರ ಆಧಾರದ ಮೇಲೆ ಈ ಕೆಳಗಿನ ಅಂಶಗಳನ್ನು ಸಾಮಾಜೀಕರಣದ ನಿಯೋಗಿಗಳೆಂದು ಗುರುತಿಸಬಹುದು.

> **ಚಟುವಟಿಕೆ :**
> ನಿಮ್ಮ ಕುಟುಂಬವನ್ನು ಆಧಾರವಾಗಿಟ್ಟುಕೊಂಡು ನಿಮ್ಮ ಅಜ್ಜಿ, ತಂದೆ, ತಾಯಿ, ಸೋದರಿ/ಸೋದರ, ಅತ್ತಿಗೆ, ಅತ್ತೆ ಇವರುಗಳು ನಿರ್ವಹಿಸುತ್ತಿರುವ/ ತ್ತಿದ್ದ ಕಾರ್ಯಚಟುವಟಿಕೆಗಳನ್ನು ಪಟ್ಟಿ ಮಾಡಿ.

1. **ಕುಟುಂಬ** : ಮಗುವಿನ ಸಾಮಾಜೀಕರಣದಲ್ಲಿ ಕುಟುಂಬದ ಪಾತ್ರ ಬಹಳ ಮುಖ್ಯವಾದುದು. ತಂದೆ ತಾಯಿ ಮಗುವಿಗೆ ನೇರವಾದ ರಕ್ತಸಂಬಂಧಿಗಳಾಗುತ್ತಾರೆ. ತಾಯಿಯೇ ಮಗುವಿನ ಮೊದಲ ಗುರು. ಮನೆಯೇ ಮೊದಲ ಪಾಠಶಾಲೆ ಎಂಬ ನಾಣ್ಣುಡಿ ಅಕ್ಷರಶಃ ನಿಜವಾದುದು. ತಾಯಿ–ತಂದೆಯರ ನಡೆ ನುಡಿ, ಚಟುವಟಿಕೆಗಳು, ವ್ಯವಹರಿಸುವಿಕೆ, ಮೊದಲಾದ ಅಂಶಗಳು ಮಗುವಿನ ನೈತಿಕ ಹಾಗೂ ಭಾವನಾತ್ಮಕ ಬೆಳವಣಿಗೆಯ ಮೇಲೆ ಬಹಳ ಪ್ರಭಾವ ಬೀರುತ್ತವೆ. ಪ್ರೀತಿ, ವಾತ್ಸಲ್ಯ, ವಿಶ್ವಾಸ, ಸಹನೆ, ಸಹೃದಯತೆ, ಸಹಕಾರ ಮೊದಲಾದ ಜೀವನ ಮೌಲ್ಯಗಳ ಮೊದಲ ಪಾಠಗಳನ್ನು ಮಗುವು ಮನೆಯಲ್ಲಿಯೇ ಕಲಿಯುತ್ತದೆ. ಕುಟುಂಬದ ಹೊಗಳಿಕೆಗಳು ಆಕೆಯ / ಆತನ ಚಟುವಟಿಕೆಗಳಿಗೆ ಉತ್ತೇಜನಕಾರಿಯಾಗುತ್ತದೆ. ತಪ್ಪು ಮಾಡಿದಾಗ ಶಿಕ್ಷೆಯು ಸರಿಯಾದ ದಾರಿಯಲ್ಲಿ ನಡೆಸುತ್ತದೆ. ತಂದೆ ತಾಯಿಯರು ವಯಸ್ಸಿನಲ್ಲಿ, ಅನುಭವದಲ್ಲಿ, ಅಧಿಕಾರದಲ್ಲಿ ಹಿರಿಯರಾದ್ದರಿಂದ ಮಕ್ಕಳು ವಿಧೇಯತೆಯಿಂದ ನಡೆದುಕೊಳ್ಳುತ್ತಾರೆ. ತಾಯಿ–ತಂದೆಯರ ಒಡನಾಟದ ಪರಿಸರದಿಂದ ಪ್ರಭಾವಿತರಾಗುತ್ತಾರೆ. ಮಲ್ಲಿಗೆ ಮೊಗ್ಗುಗಳಂತಿದ್ದ ಮಕ್ಕಳ ಮನಸ್ಸು ಸಾಮಾಜೀಕರಣದಿಂದಾಗಿ ಅರಳುತ್ತದೆ ಹಾಗೂ ಪ್ರಫುಲ್ಲವಾಗುತ್ತದೆ.

2. **ಸಮವಯಸ್ಕರು :** ಸಾಮಾಜೀಕರಣದ ಬಹುಮುಖ್ಯ ನಿಯೋಗಿಗಳು ಸಮವಯಸ್ಕರು, ಜೊತೆಯ ಆಟಗಾರರು ಮತ್ತು ಸ್ನೇಹಿತರು ಆಗಿರುತ್ತಾರೆ. ಈ ಸಂಬಂಧವು ಸಹಕಾರ ಹಾಗೂ ಪರಸ್ಪರ ಹೊಂದಾಣಿಕೆಯನ್ನು ಆಧರಿಸಿರುತ್ತದೆ. ಅವರು ಬಹುಮಟ್ಟಿಗೆ ಒಂದೇ ವಯಸ್ಸಿನವರಾಗಿದ್ದು, ತನ್ನ ಪೋಷಕರಿಂದ ಮತ್ತು ಶಿಕ್ಷಕರಿಂದ ತಿಳಿಯಲಾಗದ ವಿಷಯಗಳನ್ನು ಸ್ನೇಹಿತರಿಂದ ಮಗುವು ತಿಳಿಯುತ್ತದೆ. ಸಮಾಜದ ದೃಷ್ಟಿಯಿಂದ ಈ ಅರಿವು ಅಗತ್ಯವಾಗಿರುತ್ತದೆ.

3. **ಧರ್ಮ :** ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಧರ್ಮದ ಪಾತ್ರವು ಮುಖ್ಯವಾಗಿರುತ್ತದೆ. ಧರ್ಮವು ಸಾಮಾಜಿಕ ಜೀವನಕ್ಕೆ ಆದರ್ಶದ ತಳಹದಿ ಹಾಕುತ್ತದೆ. ನೀತಿಯುತವಾದ ಜೀವನ ನಡೆಸಲು ಬೋಧಿಸುತ್ತದೆ. ತಂದೆ ತಾಯಿಯರು, ಹಿರಿಯರು, ಸಂಬಂಧಿಗಳು ಧಾರ್ಮಿಕ ಸ್ಥಳಗಳಿಗೆ

NOT TO BE REPUBLISHED

ಹೋಗುವುದನ್ನು ಮಕ್ಕಳು ಗಮನಿಸುತ್ತಾರೆ. ಪೂಜೆ, ಹಬ್ಬ, ಜಾತ್ರೆ, ಉತ್ಸವ ಮೊದಲಾದ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. ಧಾರ್ಮಿಕ ಚಟುವಟಿಕೆಗಳನ್ನು ಮೈಗೂಡಿಸಿಕೊಳ್ಳುತ್ತಾರೆ. ಇದರಿಂದ ಸಮಾಜಸೇವೆಯಲ್ಲಿ ಆಸಕ್ತಿ, ದಾನ, ಧರ್ಮ, ಮುಂತಾದವುಗಳಿಂದ ಸಮಾಜದ ಒಳಿತಿಗೆ ನೆರವಾಗುತ್ತಾರೆ.



4. **ಶಾಲೆ :** ಮಗುವಿನ ಸಾಮಾಜೀಕರಣದಲ್ಲಿ ಶಾಲೆಯ ಪಾತ್ರ ಮಹತ್ವಪೂರ್ಣವಾದುದು. ಶಾಲೆಯಲ್ಲಿ ಶಿಕ್ಷಣದ ಪರಿಣಾಮದ ಜೊತೆಗೆ ತಮ್ಮ ಗುರುಗಳ ಮತ್ತು ಸ್ನೇಹಿತರ ವ್ಯಕ್ತಿತ್ವದ ಪ್ರಭಾವಕ್ಕೆ ಒಳಪಡುತ್ತಾನೆ/ಳೆ. ಶಿಕ್ಷಣದಿಂದ ಮಗುವಿನ ವರ್ತನೆ, ಜ್ಞಾನ, ಶೀಲ ಮತ್ತು ಮನೋಭಾವಗಳು ರೂಪುಗೊಳ್ಳುತ್ತವೆ. ಆತನ ಸುಪ್ತಶಕ್ತಿ, ಸಾಮರ್ಥ್ಯಗಳು ಪ್ರಕಟಗೊಳ್ಳುತ್ತವೆ. ಅವನ/ಳ ಜೀವನವನ್ನು ವಿಶಾಲಗೊಳಿಸಿ, ಸಾಮಾಜಿಕ ಜೀವನಕ್ಕೆ ಅಣಿಗೊಳಿಸುತ್ತದೆ. ಮಗುವಿನ ಸಾಮಾಜೀಕರಣದಲ್ಲಿ ಶಿಕ್ಷಕ/ಶಿಕ್ಷಕಿಯರ ಪಾತ್ರ ಮಹತ್ವಪೂರ್ಣವಾದುದು. ಅವರು ಆ ವಯಸ್ಸಿನಲ್ಲಿ ಶಿಕ್ಷಕರಿಂದ ಹೆಚ್ಚು ಪ್ರಭಾವಿತರಾಗುತ್ತಾರೆ. ಸನ್ನಡತೆ, ಸದ್ಭಾವನೆ, ಸಮಾನತೆ ಈ ಗುಣಗಳು ಶಿಕ್ಷಕರ ನಡೆನುಡಿಗಳಲ್ಲಿ ಅಭಿವ್ಯಕ್ತವಾಗಿ ಮಕ್ಕಳಿಗೆ ಪ್ರೀತಿ, ವಿಶ್ವಾಸ, ಸಹನೆ, ಸಹೃದಯತೆ ಮೊದಲಾದ ಜೀವನ ಮೌಲ್ಯಗಳನ್ನು ಮೈಗೂಡಿಸಿಗೊಳ್ಳುವಂತೆ ತರಬೇತಿ ನೀಡಬೇಕು. ಪಠ್ಯೇತರ ಚಟುವಟಿಕೆಗಳು, ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು. ಶಾಲಾ ಪಠ್ಯವಿಷಯಗಳಲ್ಲಿ ವೃತ್ತಿಶಿಕ್ಷಣ, ಲೈಂಗಿಕಶಿಕ್ಷಣ, ಆಧ್ಯಾತ್ಮಿಕಶಿಕ್ಷಣ, ದೈಹಿಕಶಿಕ್ಷಣ, ಜೀವನ ಕೌಶಲ್ಯಗಳು ಮೊದಲಾದುವುಗಳನ್ನು ಯೋಗ್ಯರೀತಿಯಲ್ಲಿ ಲಭ್ಯವಾಗುವಂತೆ ಮಾಡಬೇಕು. ಈ ಅಂಶಗಳನ್ನು ಮಗುವು ಕಲಿಯುವುದರಿಂದ ಸಾಮಾಜೀಕರಣ ಸಾಧಿತವಾಗುತ್ತದೆ.

**ನೀವೇ ಯೋಚಿಸಿ :**

ಸಾಮಾಜೀಕರಣದ ಹಿನ್ನೆಲೆಯಲ್ಲಿ ಬಾಲಕ/ಕಿಯಾಗಿ ಶಾಲೆಯಲ್ಲಿ ನೀವು ನಿರ್ವಹಿಸುವ ಪಾತ್ರಗಳ ಕಾರ್ಯ ಕ್ಷಮತೆಯನ್ನು ಯೋಚಿಸಿ.

5. **ಸಮೂಹ ಮಾಧ್ಯಮ :** ಆಧುನಿಕ ಸಮಾಜದಲ್ಲಿ ಸಮೂಹ ಮಾಧ್ಯಮಗಳು ಪ್ರಮುಖ ನಿಯೋಗಿಯಾಗಿ ಕೆಲಸಮಾಡುತ್ತವೆ. ದೂರದರ್ಶನ, ಚಲನಚಿತ್ರ, ಸುದ್ದಿಪತ್ರಿಕೆಗಳು, ನಿಯತಕಾಲಿಕೆಗಳು, ನಾಟಕಗಳು, ರೇಡಿಯೋ, ಮೊದಲಾದ ಸಮೂಹ ಮಾಧ್ಯಮಗಳು ಸಾಹಿತ್ಯವನ್ನು ವಿಪುಲವಾಗಿ ಬಳಸುತ್ತವೆ. ಜಾಹಿರಾತು, ರೇಡಿಯೋ ಕಾರ್ಯಕ್ರಮಗಳು, ಕಥೆ, ಕವನ, ಕಾದಂಬರಿಗಳು, ನಾಟಕ, ನೃತ್ಯರೂಪಕ, ಸಂಗೀತ, ಭಿತ್ತಿಪತ್ರ, ಮಹಾನ್‌ವ್ಯಕ್ತಿಗಳ ವಿಶೇಷ ಹೇಳಿಕೆಗಳು, ಅಮೃತವಾಣಿಗಳು ಮತ್ತು ಅನುಭವದ ನುಡಿಗಳಿಂದ ಆಳವಾಗಿ ಪ್ರಭಾವಿತರಾಗುತ್ತಾನೆ/ಳೆ. ವಾರ್ತೆಗಳು, ರಸಪ್ರಶ್ನೆ ಕಾರ್ಯಕ್ರಮಗಳು, ಪರಿಚಯ, ಸಂವಾದ, ವಿಚಾರ ಸಂಕಿರಣ, ವಿವಿಧ ಸ್ಥಳಗಳ ವೀಕ್ಷಣೆ, ಅನ್ವೇಷಣೆ, ಮೊದಲಾದವುಗಳಿಂದ ಸಮೂಹ ಮಾಧ್ಯಮಗಳ ಸದ್ಬಳಕೆಯಾಗುತ್ತದೆ. ಉತ್ತಮ ಸಂಸ್ಕಾರ ಹಾಗೂ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯಕವಾಗುವ, ಶೈಕ್ಷಣಿಕ ಮಹತ್ವವುಳ್ಳ ಕಾರ್ಯಕ್ರಮಗಳು ಉತ್ತಮ ಪರಿಣಾಮ ಬೀರುತ್ತದೆ. ಆದರೆ ಆಧುನಿಕತೆಯ ಪ್ರಭಾವದಿಂದ ಬೆಳೆಯುತ್ತಿರುವ ಯುವ ಜನಾಂಗವು ಸಂಸ್ಕೃತಿ ಹಾಗೂ ಮೌಲ್ಯಗಳಿಂದ ದೂರ ಸರಿಯುತ್ತಿದೆ.

**ಚಟುವಟಿಕೆ :**

ನಿಮ್ಮ ಪಕ್ಕದ ಮನೆಯವರೊಂದಿಗೆ ನಿಮ್ಮ ಮನೆಯ ಸಂಬಂಧವನ್ನು ವಿಶ್ಲೇಷಿಸಿ.

6. **ನೆರೆ ಹೊರೆ** (Neighbourhood) **:** ನೆರೆಹೊರೆ ಎಂದರೆ ಅಕ್ಕಪಕ್ಕದವರು ಎಂದರ್ಥ. ಸಮುದಾಯದ ಗುಣಗಳನ್ನು ಹೊಂದಿರುವ ಚಿಕ್ಕ ಸಮೂಹ. ನೆರೆಹೊರೆ ಗಾತ್ರದಲ್ಲಿ ಚಿಕ್ಕದಾಗಿರುತ್ತದೆ. ಜನರು

© KTBS NOT TO BE REPUBLISHED

ಪರಸ್ಪರ ಸಂಬಂಧ ಹೊಂದಿರುತ್ತಾರೆ. ಸ್ಥಳೀಯವಾಗಿ ವಾಸಿಸುವ ಜನರಿಗೆ ಹಲವಾರು ರೀತಿಯಲ್ಲಿ ಅಗತ್ಯ ಸೇವೆ ಮಾಡುತ್ತಾರೆ. ನೆರೆಹೊರೆಯ ಪಾತ್ರ ಗ್ರಾಮ ಮತ್ತು ನಗರ ಪ್ರದೇಶಗಳೆರಡರಲ್ಲೂ ಕಂಡುಬರುತ್ತದೆ. ಆದರೆ ಎರಡು ಪರಿಸರಗಳಲ್ಲೂ ಪಾತ್ರ ಮತ್ತು ಸ್ವರೂಪ ಬೇರೆ ಬೇರೆ ಇರುತ್ತದೆ. ಗ್ರಾಮಿಣ ಪ್ರದೇಶಗಳಲ್ಲಿ ಇದರ ಪಾತ್ರ ಮಹತ್ವದ್ದಾಗಿದೆ. ನೆರೆಹೊರೆಯ ಜನರು ಕಷ್ಟ-ಸುಖ ಸಂತೋಷ ಸಮಾರಂಭ ಮುಂತಾದವುಗಳನ್ನು ಪರಸ್ಪರ ಹಂಚಿಕೊಂಡು ಒಂದೇ ಕುಟುಂಬದವರಂತೆ ಜೀವಿಸುವರು. ಆಸಕ್ತಿ, ಅಭಿರುಚಿ, ಹಬ್ಬ ಹರಿದಿನ, ವಿವಾಹ, ಧಾರ್ಮಿಕ ಸಮಾರಂಭ ಮುಂತಾದ ಸಂದರ್ಭಗಳಲ್ಲಿ ಒಬ್ಬರಿಗೊಬ್ಬರು ಸ್ಪಂದಿಸುವರು. ಗ್ರಾಮೀಣ ಪರಿಸರದಲ್ಲಿ ಎಂತಹ ಸಂದರ್ಭದಲ್ಲೂ ನೆರೆಹೊರೆಯವರಿದ್ದಾರೆ ಎಂಬ ಭಾವನೆಯೊಂದಿಗೆ ಜೀವಿಸುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ನಗರ ಪರಿಸರದಲ್ಲಿ ಇಂತಹ ಭಾವನೆಗಳಿಗೆ, ಕಷ್ಟ-ಸುಖಗಳಿಗೆ ನೆರೆಹೊರೆಯವರಿದ್ದಾರೆ ಎಂಬ ಭಾವನೆ ಊಹಿಸಲಾಗುವುದಿಲ್ಲ. ಸಾಮಾನ್ಯವಾಗಿ ನಗರಗಳಲ್ಲಿ ನೆರೆಹೊರೆಯವರನ್ನು ನಮ್ಮವರು ಎಂದು ಗುರುತಿಸುವುದಕ್ಕಿಂತ ವೈಯಕ್ತಿಕವಾಗಿ ಗುರುತಿಸುವುದೇ ಹೆಚ್ಚು.

**ಲಿಂಗ ಹಾಗೂ ಸಾಮಾಜೀಕರಣ :** ಈಗಾಗಲೇ ತಿಳಿಸಿದಂತೆ ಸಾಮಾಜೀಕರಣವು ಪ್ರತಿಯೊಬ್ಬ ಮಾನವ ಜೀವಿಗೂ ಅತ್ಯವಶ್ಯವಾದುದು. ಸಾಮಾಜೀಕರಣದ ಪ್ರಕ್ರಿಯೆಯು ಎಲ್ಲಾ ಕುಟುಂಬದಲ್ಲಿ ಒಂದೇ ತೆರನಾಗಿ ನಡೆಯುವುದಿಲ್ಲ. ಹೆತ್ತವರ ಆಚಾರ-ವಿಚಾರಗಳು, ಶೈಕ್ಷಣಿಕ ಮಟ್ಟ, ಆಸೆ-ಆಕಾಂಕ್ಷೆ, ಅಭಿರುಚಿ-ಆದ್ಯತೆಗಳು ಇತ್ಯಾದಿ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಪ್ರಭಾವಿಸುತ್ತವೆ. ಇದರಿಂದ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಅರಿತೊ ಅಥವಾ ಅರಿಯದೆಯೋ ಮೌಲ್ಯಗಳನ್ನು, ಆಚಾರ-ವಿಚಾರಗಳನ್ನು ಭಿನ್ನ-ಭಿನ್ನ ರೀತಿಯಲ್ಲಿ ತಮ್ಮ ಮಕ್ಕಳಿಗೆ ತಿಳಿಸುತ್ತಾ ಇರುತ್ತಾರೆ. ಉದಾಹರಣೆಗೆ ಮಗ ಆಟವಾಡಿ ಮನೆಗೆ ವಿಳಂಬವಾಗಿ ಬಂದರೆ ಗದರಿಸುವ ರೀತಿಗೂ, ಮಗಳು ವಿಳಂಬದಿಂದ ಮನೆಗೆ ಬಂದರೆ ಗದರಿಸುವ ರೀತಿಗೂ ವ್ಯತ್ಯಾಸವನ್ನು ಕಾಣಬಹುದು. ಸಾಮಾನ್ಯವಾಗಿ ಮಗನನ್ನು "ಬಂದಿಯಾ ಮಗನೆ" ಅಂದರೆ ಮಗಳಿಗೆ "ಇಷ್ಟೇಕೆ ತಡ ಮಾಡಿದೆ" ಕತ್ತಲಾಗುವ ಮುಂಚೆನೆ ಮನೆ ಸೇರಬೇಕು ಎನ್ನುತ್ತಿರುತ್ತಾರೆ. ವಿಶೇಷವಾಗಿ ಭಾರತದಲ್ಲಿ ಮಗಳನ್ನು ಅಡುಗೆಗೆ ಸಹಾಯ ಮಾಡಲು ಅಪೇಕ್ಷಿಸುತ್ತಾರೆ. ಆದರೆ ಮಗನಿಂದ ಇದನ್ನು ನಿರೀಕ್ಷಿಸುವುದಿಲ್ಲ. ಅದೇ ರೀತಿ ಹೆಣ್ಣು ಮಗುವಿಗೆ ಆಟವಾಡಲು 'ಡೋಲ್' ನ್ನೂ, ಮಗನಿಗೆ 'ಕ್ರಿಕೆಟ್ ಬ್ಯಾಟನ್ನು' ನೀಡುತ್ತಾರೆ. ಈ ರೀತಿಯ ಭಿನ್ನವಾಗಿ ಲಿಂಗಾಧಾರಕ್ಕೆ ಅನುಗುಣವಾಗಿ ಸಾಮಾಜೀಕರಣ ಪ್ರಕ್ರಿಯೆ ಸಾಮಾನ್ಯವಾಗಿ ನಡೆಯುತ್ತಿರುತ್ತದೆ. ಇದನ್ನು ವ್ಯತ್ಯಾಸ ತೋರುವ ಸಾಮಾಜೀಕರಣ ಎನ್ನುತ್ತೇವೆ.

ಇಂದಿನ ಆಧುನಿಕ ಸಂಕೀರ್ಣ ಸಮಾಜದಲ್ಲಿ ಮಹಿಳೆಯರ ಸಾಮಾಜಿಕ ಸ್ಥಾನಮಾನಗಳು ಗಣನೀಯವಾಗಿ ಬದಲಾವಣೆಗಳಾಗುತ್ತಿವೆ. ಇದು ಕಾಲಕಾಲಕ್ಕೆ ದೇಶದಿಂದ ದೇಶಕ್ಕೆ ಬದಲಾಗಿವೆ. ಭಾರತದಲ್ಲಿ ರಾಷ್ಟ್ರೀಯ ಮತ್ತು ಪ್ರಜಾಸತ್ತಾತ್ಮಕ ಪ್ರಜ್ಞೆ, ಹೊಸ ಅರ್ಥವ್ಯವಸ್ಥೆ, ಆಧುನಿಕ ಶಿಕ್ಷಣ ಮಹಿಳೆಯರನ್ನು ಪರಾಧೀನತೆಯಿಂದ ಬಿಡುಗಡೆಗೊಳಿಸಿ ಹೊಸ ರೂಪ ನೀಡಿತು. ಮೊದಲು ಪುರುಷರು ಮಾತ್ರ ಪಡೆಯಬಹುದಾಗಿದ್ದ ಕೆಲವು ಅಂತಸ್ತುಗಳನ್ನು ಸ್ತ್ರೀಯರು ಇದೀಗ ಪಡೆಯಲಾರಂಭಿಸಿದ್ದಾರೆ. ಆದಾಗ್ಯೂ ಲಿಂಗ ಭೇದವನ್ನು ಆಧರಿಸಿದ ಶ್ರಮವಿಭಜನೆ ಇನ್ನೂ ಮುಂದುವರೆದಿದೆ. ಗಣಿ ಕೆಲಸ, ಉಕ್ಕಿನ ಕಾರ್ಖಾನೆಗಳಲ್ಲಿನ ಕೆಲಸ, ಸುರಂಗ ತೋಡುವ ಕೆಲಸ, ಸಾಗರದಾಳಗಳಿಂದ ಸಂಪನ್ಮೂಲಗಳನ್ನು ತೆಗೆಯುವ ಕೆಲಸ ಮುಂತಾದ ಕಾರ್ಯಕ್ಷೇತ್ರಗಳಲ್ಲಿಯೂ ಸ್ತ್ರೀಯರು ಇತ್ತೀಚೆಗೆ ಅವಕಾಶಗಳನ್ನು ಪಡೆಯುತ್ತಿದ್ದಾರೆ. ವೈದ್ಯಕೀಯ ವೃತ್ತಿ, ವಕೀಲಿ ವೃತ್ತಿ, ವಿಶ್ವವಿದ್ಯಾನಿಲಯ ಮಟ್ಟದ ಸಂಶೋಧನೆ, ಕಾರ್ಖಾನೆಯ ಕಾರ್ಯ, ಸೈನಿಕೋದ್ಯಮ ಯುದ್ಧೋಪಕರಣಗಳ ಉತ್ಪಾದನಾ ಕಾರ್ಯಗಳಲ್ಲಿ ಈಗಾಗಲೇ ಸ್ತ್ರೀಯರು ಕಾರ್ಯನಿರ್ವಹಿಸುತ್ತಿದ್ದಾರೆ.

**ಚಟುವಟಿಕೆ :**

ವಿಶೇಷ ಸಾಧನೆಗಳನ್ನು ಮಾಡಿರುವ ಮಹಿಳೆಯರ ಬಗ್ಗೆ ಮಾಹಿತಿ ಸಂಗ್ರಹಿಸಿ.

ಸ್ವಾತಂತ್ರ್ಯಾನಂತರ, ಭಾರತದಲ್ಲಿ ಕಂಡುಬಂದ ಸಮಾನತೆಯ ತತ್ವದ ಅನುಷ್ಠಾನ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ಕೈಗೊಂಡ ವಿಶೇಷ ಕಾರ್ಯಕ್ರಮಗಳು, ಆರ್ಥಿಕ ಪ್ರಗತಿ, ಹಾಗು ನಗರ ಪ್ರದೇಶಗಳ ಅಭಿವೃದ್ಧಿ, ಬದಲಾದ ಸಾಮಾಜಿಕ ಧೋರಣೆಗಳು ಸಾಮಾಜೀಕರಣದಲ್ಲಿ ಲಿಂಗಸಮಾನತೆಯನ್ನು ತರುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಮಾನವನು ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಳ್ಳುವ ಪ್ರಕ್ರಿಯೆಯನ್ನು ____________ ಎನ್ನುತ್ತೇವೆ.
2. ತಾಯಿಯೇ ಮಗುವಿನ ಮೊದಲ ______________ .
3. ಮಲ್ಲಿಗೆ ಮೊಗ್ಗುಗಳಂತಿದ್ದ ಮಕ್ಕಳ ಮನಸ್ಸು__________ದಿಂದಾಗಿ ಅರಳುತ್ತದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಸಾಮಾಜೀಕರಣದಲ್ಲಿ ಸಮವಯಸ್ಕರ ಪಾತ್ರವನ್ನು ತಿಳಿಸಿ.
2. ಕುಟುಂಬದ ಪರಿಸರದಲ್ಲಿ ಮಗುವು ಕಲಿಯುವ ಮೌಲ್ಯಗಳಾವುವು ?
3. ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಧರ್ಮದ ಪಾತ್ರವೇನು ?
4. ಸಾಮಾಜೀಕರಣದ ಮಹತ್ವವನ್ನು ತಿಳಿಸಿ.
5. ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಶಾಲೆಯ ಪಾತ್ರವನ್ನು ವಿವರಿಸಿ.
6. ಆಧುನಿಕ ಸಮಾಜದಲ್ಲಿ ಸಾಮಾಜೀಕರಣದ ನಿಯೋಗಿಯಾಗಿ ಸಮೂಹ ಮಾಧ್ಯಮಗಳು ಹೇಗೆ ಕೆಲಸ ಮಾಡುತ್ತವೆ ?

**III. ಚಟುವಟಿಕೆಗಳು.**

1. 'ಸಮಾಜ ನಿರ್ಮಾಣದಲ್ಲಿ ಸಮೂಹ ಮಾಧ್ಯಮಗಳ ಪಾತ್ರ' – ಈ ಕುರಿತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿ.
2. ವೃತ್ತ ಪತ್ರಿಕೆಗಳಲ್ಲಿ ಸಾಮಾಜೀಕರಣಕ್ಕೆ ಸಂಬಂಧಿಸಿದಂತೆ ಬರುವ ಲೇಖನಗಳನ್ನು ಸಂಗ್ರಹಿಸಿ.

**IV. ಯೋಜನೆ.**

ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿರುವ ಕರ್ನಾಟಕದ ಮಹಿಳೆಯರ ಬಗ್ಗೆ ಮಾಹಿತಿ ಸಂಗ್ರಹಿಸಿರಿ.

*****

@KTBS NOT TO BE REPUBLISHED

# ಅಧ್ಯಾಯ – 25

# ಸಮುದಾಯ

L7Q8A9

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ಸಮುದಾಯದ ಪದದ ಅರ್ಥ
- ನಗರ – ಪದದ ಅರ್ಥ ಹಾಗೂ ನಗರ ಸಮುದಾಯದ ಲಕ್ಷಣಗಳು
- ಕೈಗಾರಿಕೀಕರಣ – ನಗರೀಕರಣದ ಸಂಬಂಧ
- ಗ್ರಾಮೀಣ ಹಾಗೂ ಆದಿವಾಸಿ ಸಮುದಾಯದ ಲಕ್ಷಣಗಳು

**ಸಮುದಾಯ**


ಮಾನವನು ಒಂಟಿಯಾಗಿ ಇರಲಾರ. ಅವನು/ಳು ಸಂಘಜೀವಿ. ಅವನು/ಳು ತಾನು ವಾಸಿಸುವ ಗುಂಪಿನ ಸದಸ್ಯರೊಂದಿಗೆ ಅನೇಕ ರೀತಿಯಲ್ಲಿ ಸಂಬಂಧ ಹೊಂದಿರುತ್ತಾನೆ/ಳೆ ನಿರಂತರವಾಗಿ ವಾಸಿಸುತ್ತಿರುವ ನಿರ್ದಿಷ್ಟ ಪ್ರದೇಶದ ಸಹಸದಸ್ಯರೊಂದಿಗೆ ವಾಸಿಸುವುದಲ್ಲದೇ ಸಾಮಾಜಿಕ ಒಲವು, ಕಳಕಳಿಯನ್ನು ಬೆಳೆಸಿಕೊಳ್ಳುತ್ತಾನೆ/ಳೆ. ಇದರಿಂದ ಆತನಲ್ಲಿ/ಳಲ್ಲಿ ಸಾಮಾನ್ಯ ಪರಿಕಲ್ಪನೆಗಳು ಮೂಡುತ್ತವೆ. ಈ ರೀತಿಯ ನಿರ್ಧಿಷ್ಟ ಪ್ರದೇಶದಲ್ಲಿ ಸಾಮಾನ್ಯ ಸಾಮಾಜಿಕ ಬದುಕು ನಡೆಸುವ ಪರಿಕಲ್ಪನೆಯೇ ಸಮುದಾಯ ಎಂದು ಕರೆಸಿಕೊಳ್ಳುತ್ತದೆ. ಸಮುದಾಯವು ಈ ಕೆಳಕಂಡ ಗುಣಲಕ್ಷಣಗಳನ್ನು ಹೊಂದಿರುತ್ತದೆ.

1) ಜನರ ಗುಂಪು 2) ಸೀಮಿತ ನಿರ್ದಿಷ್ಟ ಪ್ರದೇಶ 3) ಒಗ್ಗಟ್ಟಿನ ಭಾವನೆಗಳು
4) ಜೀವನದ ಬಗ್ಗೆ ಸಾಮಾನ್ಯ ದೃಷ್ಟಿ 5) ಕಾನೂನುಗಳಿಂದ ಸ್ಥಾಪಿತವಾಗಿರುವುದಿಲ್ಲ.

©KTBS NOT TO BE REPUBLISHED

**ನಗರ ಎಂದರೇನು?**

ನಗರವೆಂಬುದು ಸಾಪೇಕ್ಷ ದೊಡ್ಡ ಗಾತ್ರದ ಹೆಚ್ಚು ಜನಸಾಂದ್ರತೆಯುಳ್ಳ ಹಾಗೂ ಸಾಮಾಜಿಕವಾಗಿ ವೈವಿಧ್ಯತೆಯನ್ನು ಹೊಂದಿದ ಜನರ ಶಾಶ್ವತ ನೆಲೆಯಾಗಿದೆ. ನಗರವೂ ಒಂದು ಸಮುದಾಯ. ಯಾವುದೇ ಪ್ರದೇಶವನ್ನು "ನಗರ" ವೆಂದು ಪರಿಗಣಿಸುವಲ್ಲಿ 2011ರ ಜನಗಣತಿ ನಿಗಧಿಪಡಿಸಿದ ಅಂಶಗಳು ಹೀಗಿವೆ.



ನಗರ

1) ಕನಿಷ್ಟ 50,000 ಜನಸಂಖ್ಯೆ.
2) ಒಂದು ಚದರ ಮೈಲಿಗೆ 1000 ಜನಸಾಂದ್ರತೆ.
3) ಹೆಚ್ಚಿನ ಭಾಗದಷ್ಟು ಜನರು ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿರುವುದು.
4) ನಾಗರಿಕ ಸೌಲಭ್ಯಗಳ ಲಭ್ಯತೆ.
5) ನಗರ ಸಮುದಾಯವನ್ನು ಪಟ್ಟಣ, ನಗರ ಮತ್ತು ಮಹಾನಗರಗಳೆಂದು ಗುರುತಿಸುತ್ತಾರೆ.

**ನಗರ ಸ್ವರೂಪದ ಲಕ್ಷಣಗಳು :**

1) ಸಾಮಾಜಿಕ ವೈವಿಧ್ಯತೆ 2) ಅನಾಮಿಕತೆ 3) ಹೆಚ್ಚಿನ ಪ್ರಮಾಣದ ಸಾಮಾಜಿಕ ಚಲನೆ
4) ವ್ಯಕ್ತಿವಾದ, ವಿಲಾಸವಾದ, ಹಾಗೂ ವೈಯಕ್ತಿಕತೆಗೆ ಹೆಚ್ಚು ಒತ್ತು
5) ಸಂಘ, ಸಂಘಟನೆಗಳ ಬೆಳವಣಿಗೆ 6) ಚಿಕ್ಕ ಗಾತ್ರದ ಕುಟುಂಬ
7) ಸಾಮಾಜಿಕ ಪರಿವರ್ತನೆಯ ತೀವ್ರ ವೇಗ

**ಕೈಗಾರಿಕೀಕರಣ ಮತ್ತು ನಗರೀಕರಣ :**

ಕೈಗಾರಿಕೀಕರಣ ಎಂದರೆ ಸರಕು ಮತ್ತು ಸೇವೆಗಳ ಉತ್ಪಾದನೆಗೆ ಬಳಸುವ ತಂತ್ರಜ್ಞಾನದಲ್ಲಿ ಉಂಟಾಗುವ ಬದಲಾವಣೆಯ ಪ್ರಕ್ರಿಯೆ. ಸ್ಪಷ್ಟವಾಗಿ ಹೇಳುವುದಾದರೆ, ತಯಾರಿಕೆಯ ಉದ್ಯಮದ ಬೆಳವಣಿಗೆಯನ್ನು ಸೂಚಿಸಲು ಇದನ್ನು ಬಳಸಲಾಗುತ್ತದೆ.

**ಚಟುವಟಿಕೆ :**

ನಿಮ್ಮ ವಾಸಸ್ಥಳಕ್ಕೆ ಹತ್ತಿರವಿರುವ ನಗರ ಹಾಗೂ ಹಳ್ಳಿಯಲ್ಲಿ ಕಂಡು ಬರುವ ವ್ಯತ್ಯಾಸಗಳನ್ನು (ಜನಸಂಖ್ಯೆ, ವಿಸ್ತೀರ್ಣ, ಸೌಲಭ್ಯಗಳು) ಕಂಡುಹಿಡಿಯಿರಿ.

ಬ್ರಿಟಿಷರ ಪ್ರತ್ಯೇಕತಾ ನೀತಿಯ ಪರಿಣಾಮದಿಂದ, ಪ್ರಥಮ ಜಾಗತಿಕ ಯುದ್ಧದವರೆಗೆ ಅವರು ಭಾರತದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಿಲ್ಲ. ನಂತರ ಕೈಗಾರಿಕೆಗಳ ಸ್ಥಾಪನೆಯು ಹಳೆಯ ಗುಡಿಕೈಗಾರಿಕೆಗಳನ್ನು ನಾಶಪಡಿಸಿತು. ಗ್ರಾಮೀಣ ಜನರನ್ನು ನಗರ ಮತ್ತು ಕೈಗಾರಿಕಾ ಕೇಂದ್ರಗಳಿಗೆ ಕರೆ ತಂದಿತು. ಹಳ್ಳಿಗಳನ್ನು ತೊರೆದು ಜನರು ಕೈಗಾರಿಕಾನಗರಗಳಲ್ಲಿ ಆಶ್ರಯ ಪಡೆದುದಲ್ಲದೇ ಹಾಗೂ ದೊರಕಿದ ಉದ್ಯೋಗಾವಕಾಶಗಳನ್ನು ಒಪ್ಪಿಕೊಂಡರು. ಭೌಗೋಳಿಕ ಮತ್ತು ವೃತ್ತಿಪರ ಚಲನೆಗಳು ದೂರದ ಜನರನ್ನು ಹತ್ತಿರ ಸೆಳೆದುಕೊಂಡಿತು. ರೈಲು ಮತ್ತು ಬಸ್ಸುಗಳಂಥ ಸೌಕರ್ಯಗಳು ಎಲ್ಲರನ್ನು ಒಟ್ಟಾಗಿಸಿತು. ಕೈಗಾರಿಕೀಕರಣ ವಿಶೇಷವಾಗಿ ನಮ್ಮ ಸಾಮಾಜಿಕ ವಾತಾವರಣವನ್ನು ಬದಲಾಯಿಸಿ. ನಗರಗಳನ್ನು ಸೃಷ್ಟಿಸಿತು.

**ನೀವೇ ಮಾಡಿ :**

ನಿಮ್ಮ ಜಿಲ್ಲಾ ಕೇಂದ್ರ ವ್ಯಾಪ್ತಿ-ಯಲ್ಲಿರುವ ಬೃಹತ್ ಕೈಗಾರಿಕೆಗಳ ಪಟ್ಟಿ ಮಾಡಿ ಮತ್ತು ಅವುಗಳು ಉತ್ಪಾದಿಸುವ ಸರಕುಗಳ ಹೆಸರನ್ನು ಬರೆಯಿರಿ.



ಕೈಗಾರಿಕೆ

©KTBS NOT TO BE REPUBLISHED

## ಗ್ರಾಮೀಣ ಸಮುದಾಯ ಮತ್ತು ಅದರ ಲಕ್ಷಣಗಳು

> **ಚಟುವಟಿಕೆ :**
>
> *ನೀವು ವಾಸವಾಗಿರುವ ಸ್ಥಳದಲ್ಲಿನ ನೆರೆ-ಹೊರೆಯ ಬಾಂದವ್ಯದ ಬಗ್ಗೆ ನಿಮಗೇನು ತಿಳಿದಿದೆ ?*

ಗ್ರಾಮೀಣ ಸಮುದಾಯವು ಭಾರತೀಯ ಸಮಾಜದ ಆಧಾರಸ್ತಂಭವಾಗಿದೆ. ಇದರ ನೆಲೆಗಟ್ಟು ಹಳ್ಳಿಯಾಗಿದೆ. ಭಾರತೀಯ ಸಂಸ್ಕೃತಿ ಮತ್ತು ಐತಿಹಾಸಿಕ ಬೆಳವಣಿಗೆಯಲ್ಲಿ ಗ್ರಾಮಗಳಿಗೆ ಮಹತ್ತರವಾದ ಸ್ಥಾನವಿದೆ. ಸೀಮಿತ ಕ್ಷೇತ್ರದೊಳಗೆ ಮೂಡಿಬರುವ ಸಾಮಾಜಿಕ ಜೀವನದ ಪೂರ್ಣ ಸಂಘಟನೆಯನ್ನು ಸಮುದಾಯ ಎನ್ನಲಾಗಿದೆ. ಸಾಮಾನ್ಯ ಜೀವನ ನಡೆಸುತ್ತಿರುವ ಸೀಮಿತ ಭೂ ಪ್ರದೇಶದಲ್ಲಿ ವಾಸಿಸುವ ಜನರ ಗುಂಪು ಹಳ್ಳಿಯಾಗಿದೆ. ಗ್ರಾಮ ಎಂಬ ಕಲ್ಪನೆ ಕೃಷಿಯನ್ನು ಕೇವಲ ಉದ್ಯೋಗವಷ್ಟೇ ಅಲ್ಲದೇ ಒಂದು ಜೀವನ ವಿಧಾನವಾಗಿ ಅನುಸರಿಸುವ ಒಂದು ಸಣ್ಣ ಜನಸಂಖ್ಯಾ ಸಮೂಹ.

## ಗ್ರಾಮ ಸಮುದಾಯದ ಲಕ್ಷಣಗಳು

ಜನಸಂಖ್ಯೆ, ವಿಸ್ತಾರತೆ ಹಾಗೂ ಜೀವನ ವಿಧಾನ ಈ ವಿಷಯಗಳಲ್ಲಿ ಒಂದು ಹಳ್ಳಿ ಇನ್ನೊಂದು ಹಳ್ಳಿಗಿಂತ ಭಿನ್ನವಾಗಿದೆ. ಬಯಲು ಸೀಮೆಯ ಹಳ್ಳಿ ಕರಾವಳಿ ತೀರದ ಹಳ್ಳಿಯಿಂದ ಭಿನ್ನವಾಗಿದೆ. ಮರುಭೂಮಿ ಅಥವಾ ಬೆಟ್ಟ-ಗುಡ್ಡಗಳಲ್ಲಿ ಕಾಣುವ ಹಳ್ಳಿಗಳ ಜೀವನ ವಿಧಾನದಲ್ಲಿ ವ್ಯತ್ಯಾಸ ಕಾಣಬಹುದು. ಅನೇಕ ವ್ಯತ್ಯಾಸಗಳಿದ್ದರೂ ಹಳ್ಳಿಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಬಹುದು.

1. ಚಿಕ್ಕ ಗಾತ್ರದ ಸಮುದಾಯ
2. ಅನ್ಯೋನ್ಯ ಸಂಬಂಧಗಳು
3. ಸಾಮಾಜಿಕ ಐಕ್ಯತೆ
4. ಅನೌಪಚಾರಿಕ ನಿಯಂತ್ರಣ
5. ಅವಿಭಕ್ತ ಕುಟುಂಬಗಳ ಪ್ರಾಧಾನ್ಯತೆ
6. ಕೃಷಿಯ ಪ್ರಾಧಾನ್ಯತೆ
7. ನಿಸರ್ಗದ ಪ್ರಭಾವ
8. ನೆರೆಹೊರೆಯ ಪ್ರಭಾವ
9. ಸರಳತೆ
10. ಅತಿಯಾದ ಧರ್ಮಶ್ರದ್ಧೆ
11. ಸಾಂಪ್ರದಾಯಿಕ ದೃಷ್ಟಿಕೋನ
12. ವ್ಯಾಪಕವಾಗಿ ಕಂಡುಬರುವ ಜಾತಿ ವ್ಯವಸ್ಥೆ
13. ಅನಕ್ಷರತೆ, ಬಡತನ ಮುಂತಾದವು



**ಗ್ರಾಮ ಸಮುದಾಯ**

> **ನಿಮಗಿದು ತಿಳಿದಿರಲಿ :**
>
> *ನಿಮ್ಮ ಊರಿನಲ್ಲಿ ನಡೆಯುವ ಜಾತ್ರಾ ಮಹೋತ್ಸವವನ್ನು ಆಧಾರವಾಗಿಟ್ಟು ಕೊಂಡು ಗ್ರಾಮೀಣ ಸಮುದಾಯದ ಲಕ್ಷಣಗಳನ್ನು ಗಮನಿಸಿ.*

## ಗ್ರಾಮ ಸಮುದಾಯದ ಸಮಸ್ಯೆಗಳು

1. ಕೃಷಿ ಸಮಸ್ಯೆಗಳು
2. ಗುಡಿ ಕೈಗಾರಿಕೆಯ ಸಮಸ್ಯೆಗಳು
3. ಅನಕ್ಷರತೆ ಬಡತನ ಮತ್ತು ನಿರುದ್ಯೋಗ
4. ಆರೋಗ್ಯ ವ್ಯವಸ್ಥೆಯ ಕೊರತೆ
5. ನಾಗರಿಕ ಸೌಲಭ್ಯಗಳ ಕೊರತೆ

**ಬುಡಕಟ್ಟು – ಆದಿವಾಸಿ ಸಮುದಾಯ ಹಾಗು ಅದರ ಲಕ್ಷಣಗಳು**

ನಾಗರಿಕ ಸಮಾಜದಿಂದ ದೂರವಾಗಿ ದುರ್ಗಮವಾದ ಕಾಡು, ಕಣಿವೆ, ಬೆಟ್ಟ ಇತ್ಯಾದಿ ಪ್ರದೇಶಗಳಲ್ಲಿ ವಾಸಿಸುವ ಜನಸಮುದಾಯವನ್ನು ಬುಡಕಟ್ಟು ಸಮುದಾಯ ಎನ್ನುವರು. ವಿಶ್ವದಾದ್ಯಂತ ಇವರು ಏಕಪ್ರಕಾರವಾಗಿದ್ದು ಕೆಲವು ರಾಷ್ಟ್ರಗಳಲ್ಲಿ ಗಣನೀಯ ಸಂಖ್ಯೆಯನ್ನು ಹೊಂದಿದ್ದಾರೆ. ಆಫ್ರಿಕಾದ ನಂತರ ವಿಶ್ವದಲ್ಲಿ ಅತಿ ಹೆಚ್ಚು ಬುಡಕಟ್ಟು ಜನರನ್ನು ಹೊಂದಿರುವ ರಾಷ್ಟ್ರವೆಂದರೆ ಭಾರತ. ಮಾನವಶಾಸ್ತ್ರದ ಪದಕೋಶದಲ್ಲಿ ಬುಡಕಟ್ಟನ್ನು ಹೀಗೆಂದು ವ್ಯಾಖ್ಯಾನಿಸಿದೆ "ಸಾಮಾನ್ಯವಾಗಿ ನಿರ್ದಿಷ್ಟ ಭೂಪ್ರದೇಶ, ಭಾಷೆ, ಸಾಂಸ್ಕೃತಿಕ ಸಾಮ್ಯತೆ ಮತ್ತು ಸಾಮಾಜಿಕ ಸಂಘಟನೆಯನ್ನು ಹೊಂದಿದ ಸಮೂಹ". ಭಾರತದಲ್ಲಿರುವ ಬುಡಕಟ್ಟು ಜನರನ್ನು ನೀಗ್ರಿಟೋ, ಮಂಗೋಲಿಯನ್ ಮತ್ತು ಮೆಡಿಟರೇನಿಯನ್ ಎಂಬ ಮೂರು ಪ್ರವರ್ಗಗಳಲ್ಲಿ ಸೇರಿಸಬಹುದಾಗಿದೆ.

**ಬುಡಕಟ್ಟು ಜನಾಂಗದ ಲಕ್ಷಣಗಳು**

1) ಸಾಮಾನ್ಯ ಭೂಪ್ರದೇಶ
2) ಕುಟುಂಬ/ಕುಟುಂಬ ಸಮೂಹಗಳ ಗುಂಪು
3) ಒಳಬಾಂಧವ್ಯದ ಕ್ರಮ
4) ಸಾಮಾನ್ಯ ಭಾಷೆ
5) ಸರಳತೆ ಮತ್ತು ಸ್ವಯಂಪರಿಪೂರ್ಣತೆ
6) ಸಾಮಾನ್ಯ ಧರ್ಮ
7) ಸಾಮಾನ್ಯ ಸಂಸ್ಕೃತಿ
8) ಸಾಮಾನ್ಯ ಹೆಸರು
9) ಸಂಸಕ್ತತೆ (ಏಕತೆಯ ಪ್ರಜ್ಞೆ ಪ್ರಬಲವಾಗಿರುವುದು)
10) ನಿರಕ್ಷರತೆ


**ಬುಡಕಟ್ಟು ಜನಾಂಗ**

@KTBS NOT TO BE REPUBLISHED

ಭಾರತೀಯ ಬುಡಕಟ್ಟು ಜನಾಂಗಗಳನ್ನು ಭೌಗೋಳಿಕವಾಗಿ ಕೆಳಕಂಡಂತೆ ವಿಭಾಗಿಸಲಾಗಿದೆ.

**1. ಈಶಾನ್ಯ ವಲಯ ಆದಿವಾಸಿಗಳು :** ಮಂಗೋಲರ ಜನಾಂಗಕ್ಕೆ ಸೇರಿದ ಇವರು ನಾಗಾಲ್ಯಾಂಡ್,ಮೇಘಾಲಯ, ಅರುಣಾಚಲಪ್ರದೇಶ, ಅಸ್ಸಾಂ, ತ್ರಿಪುರ, ಮಣಿಪುರಗಳಲ್ಲಿ ಕಂಡುಬರುತ್ತಾರೆ. ಇವರು ಚೈನಾ–ಟಿಬೆಟ್ ಭಾಷಾ ಪ್ರವರ್ಗಕ್ಕೆ ಸೇರಿದ ಭಾಷೆಗಳನ್ನು ಮಾತನಾಡುತ್ತಾರೆ. ಗುರುಂಗ್, ಲಿಂಬಿ, ಲೆಪ್ಚಾ, ಅಕಾ, ಮಿಶಿ, ಗಾರೊ, ಖಾಸಿ, ಚಕ್ಮಾ, ನಾಗಾ, ಸೇಮಾ, ಕಚಾರಿ ಇವರ ಕೆಲವು ಪ್ರಮುಖ ವರ್ಗಗಳು.

**2. ಕೇಂದ್ರ ವಲಯದ ಆದಿವಾಸಿಗಳು :** ಕೃಷ್ಣಾ ನದಿಯ ಉತ್ತರ ಮತ್ತು ಗಂಗಾನದಿಯ ದಕ್ಷಿಣ ಭಾಗಗಳಲ್ಲಿ ಬರುವ ಪರ್ವತ ಮತ್ತು ತಪ್ಪಲು ಪ್ರದೇಶಗಳನ್ನು ಒಳಗೊಂಡಿರುತ್ತದೆ. ಈ ಪ್ರದೇಶಗಳಲ್ಲಿ ಸಂತಾಲರು, ಮುಂಡಾಗಳು, ಭಿಲ್ಲರು, ಗೊಂಡರು, ಓರಾನ್‌ರುಗಳು, ಬೈಗಾಗಳು, ಖಾರಿಯಾಗಳು, ಖೊಂಡರು, ಕೋಲರು, ಭೂಮಿಗಳು,ಸವಾರುಗಳು ಮುಂತಾದ ಬುಡಕಟ್ಟು ಜನಾಂಗದವರು ನೆಲೆಸಿದ್ದಾರೆ. ಇತರೆ ಬುಡಕಟ್ಟು ಜನಾಂಗಕ್ಕೆ ಹೋಲಿಸಿದಾಗ ಇವರು ಅಭಿವೃದ್ಧಿ ಹೊಂದಿದವರಾಗಿದ್ದಾರೆ.

**3. ದಕ್ಷಿಣದ ಆದಿವಾಸಿಗಳು :** ಕೃಷ್ಣಾ ನದಿಯಿಂದ ದಕ್ಷಿಣಕ್ಕೆ ಮತ್ತು ಕನ್ಯಾಕುಮಾರಿಯಿಂದ ಉತ್ತರಕ್ಕೆ ಇರುವ ಪ್ರದೇಶವನ್ನು ದಕ್ಷಿಣ ವಲಯ ಒಳಗೊಳ್ಳುತ್ತದೆ. ಆಂಧ್ರ ಪ್ರದೇಶ, ಕರ್ನಾಟಕ, ಕೇರಳ, ತಮಿಳುನಾಡಿನ

ಕೆಲವು ಭಾಗಗಳಲ್ಲಿ ಈ ಬುಡಕಟ್ಟುಗಳು ಕಂಡುಬರುತ್ತವೆ. ಸೋಲಿಗ, ಯೆರವ, ತೊಡವ, ಕೋಟಾ, ಚೆಂಚು, ಪಣಿಯ, ಕಾಡಾರ್, ಸಿದ್ದಿಗಳು, ಜೇನುಕುರುಬರು ಮೊದಲಾದವರು.

ಇದಲ್ಲದೇ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ವಾಸಿಸುವ ಬುಡಕಟ್ಟು ಗುಂಪನ್ನು ನಾಲ್ಕನೆಯ ವಲಯವಾಗಿ ಸೇರಿಸಬಹುದು. ಈ ವಲಯದ ಪ್ರಮುಖ ಬುಡಕಟ್ಟುಗಳೆಂದರೆ: ಜಾರ್ವಾಗಳು, ಓಂಗೇಗಳು, ಸೆಂತಿನೇಲಿಗಳು, ಅಂಡಮಾನ್‌ಗಳು ಮತ್ತು ನಿಕೊಬಾರಿಗಳು.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ನಿರ್ದಿಷ್ಟ ಪ್ರದೇಶದಲ್ಲಿ ಸಾಮಾನ್ಯ ಸಾಮಾಜಿಕ ಬದುಕು ನಡೆಸುವ ಪರಿಕಲ್ಪನೆಯೇ ______
2. ಭಾರತೀಯ ಸಮಾಜದ ಆಧಾರ ಸ್ತಂಭ __________ ಸಮುದಾಯ.
3. ಈಶಾನ್ಯ ವಲಯದ ಆದಿವಾಸಿಗಳು __________ ಜನಾಂಗಕ್ಕೆ ಸೇರಿದವರಾಗಿರುತ್ತಾರೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ನಗರ ಎಂದರೇನು?
2. ಕೈಗಾರಿಕೀಕರಣ ಯಾವುದನ್ನು ಸೂಚಿಸುತ್ತದೆ?
3. ಗ್ರಾಮ ಎಂಬ ಪರಿಕಲ್ಪನೆಯನ್ನು ತಿಳಿಸಿ.
4. ಮಾನವಶಾಸ್ತ್ರದ ಪದಕೋಶ 'ಬುಡಕಟ್ಟು' ಎಂಬ ಪದಕ್ಕೆ ಯಾವ ವಿವರಣೆ ನೀಡುತ್ತದೆ?
5. ನಗರ ಸ್ವರೂಪದ ಲಕ್ಷಣಗಳನ್ನು ನಿರೂಪಿಸಿ.
6. ಗ್ರಾಮ ಸಮುದಾಯದ ಲಕ್ಷಣಗಳನ್ನು ಪಟ್ಟಿಮಾಡಿ.
7. ಗ್ರಾಮ ಸಮುದಾಯದ ಸಮಸ್ಯೆಗಳನ್ನು ತಿಳಿಸಿ.
8. ಬುಡಕಟ್ಟು ಜನಾಂಗದ ವಿಶಿಷ್ಟ ಲಕ್ಷಣಗಳನ್ನು ಗುರುತಿಸಿ.
9. ಭಾರತೀಯ ಬುಡಕಟ್ಟು ಜನಾಂಗವನ್ನು ಹೇಗೆ ವಿಭಾಗಿಸಬಹುದು?

**III. ಚಟುವಟಿಕೆಗಳು.**

1. ನಗರ – ಗ್ರಾಮೀಣ ಬದುಕಿನ ಅನುಕೂಲ – ಅನಾನುಕೂಲಗಳ ಕುರಿತಂತೆ ಚರ್ಚಾಕೂಟ ಏರ್ಪಡಿಸಿ.
2. ನಿಮ್ಮ ಸಮೀಪವಿರುವ ಅಥವಾ ಗೊತ್ತಿರುವ ಬುಡಕಟ್ಟಿನ ಜನರ ಜೀವನ ಕ್ರಮ ಸಂಗ್ರಹಿಸಿರಿ.

**IV. ಯೋಜನೆ.**

ನಿಮ್ಮ ಗ್ರಾಮ/ನಗರದಲ್ಲಿನ ಸೌಲಭ್ಯಗಳ ಕೊರತೆಯನ್ನು ನಿವಾರಿಸಲು ಕೈಗೊಂಡಿರುವ ಬಗ್ಗೆ ಸಂಬಂಧಿಸಿದ ಗ್ರಾಮ ಪಂಚಾಯಿತಿ / ನಗರಸಭಾ ಸದಸ್ಯರಿಂದ ಮಾಹಿತಿ ಪಡೆಯಿರಿ.

*****

NOT TO BE REPUBLISHED ©KTBS

ಭೂಗೋಳಶಾಸ್ತ್ರ

ಅಧ್ಯಾಯ – 26


# ಕರ್ನಾಟಕದ ಖನಿಜ ಸಂಪನ್ಮೂಲಗಳು

Y4C2Z5

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಕರ್ನಾಟಕದಲ್ಲಿ ದೊರೆಯುವ ಖನಿಜಗಳ ಪರಿಚಯ ಮತ್ತು ಅವುಗಳ ಪ್ರಾಮುಖ್ಯತೆ
- ಕರ್ನಾಟಕದ ಪ್ರಮುಖ ಖನಿಜಗಳ ಹಂಚಿಕೆ ಹಾಗು ಉತ್ಪಾದನೆ

ಒಂದು ದೇಶ, ರಾಜ್ಯ ಅಥವಾ ಪ್ರದೇಶವು ಆರ್ಥಿಕವಾಗಿ ಮುಂದುವರಿಯಲು ಅಲ್ಲಿ ಸಿಗುವ ಅಪಾರವಾದ ಖನಿಜ ಸಂಪನ್ಮೂಲಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕರ್ನಾಟಕ ರಾಜ್ಯವು ವಿವಿಧ ರೀತಿಯ ಖನಿಜ ಸಂಪತ್ತನ್ನು ಹೊಂದಿದೆ. ಅವುಗಳಲ್ಲಿ ಕಬ್ಬಿಣದ ಅದಿರು, ಚಿನ್ನ, ಮ್ಯಾಂಗನೀಸ್, ಸುಣ್ಣಕಲ್ಲು, ತಾಮ್ರ, ಬಾಕ್ಸೈಟ್, ಕ್ರೋಮೈಟ್, ಕಲ್ನಾರು, ಅಭ್ರಕ ಮತ್ತು ಗ್ರಾನೈಟ್ ಪ್ರಮುಖ ಖನಿಜಗಳಾಗಿವೆ. ಪ್ರಮುಖ ಖನಿಜಗಳನ್ನು ಕುರಿತು ಮುಂದೆ ತಿಳಿಯೋಣ.




**ಕಬ್ಬಿಣದ ಅದಿರು :** ಇದು ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ಕಚ್ಚಾ ವಸ್ತು. ಕರ್ನಾಟಕವು ಉತ್ತಮ ದರ್ಜೆಯ ಮ್ಯಾಗ್ನಟೈಟ್ ಮತ್ತು ಹೆಮಾಟೈಟ್ ವರ್ಗದ ಅಪಾರವಾದ ಕಬ್ಬಿಣದ ಅದಿರಿನ ನಿಕ್ಷೇಪ ಹೊಂದಿದೆ. ಭಾರತದ ಕಬ್ಬಿಣದ ಅದಿರಿನ ಉತ್ಪಾದನೆಯಲ್ಲಿ ಕರ್ನಾಟಕವು ಎರಡನೆಯ ಸ್ಥಾನದಲ್ಲಿದೆ. ರಾಜ್ಯದಲ್ಲಿ 75 ಕಬ್ಬಿಣದ ಅದಿರಿನ ಗಣಿಗಳಿವೆ.

©KTBS NOT TO BE REPUBLISHED

ನಮ್ಮ ರಾಜ್ಯ ಉತ್ಪಾದಿಸುವ ಕಬ್ಬಿಣದ ಅದಿರಿನಲ್ಲಿ ಶ್ರೇಷ್ಠ ದರ್ಜೆಯ ಮ್ಯಾಗ್ನಟೈಟ್‌ನ ಪಾಲು ಶೇ.63 ಭಾಗದಷ್ಟಿದೆ. ಉಳಿದದ್ದು ಹೆಮಾಟೈಟ್ ದರ್ಜೆಯದಾಗಿದೆ.

**ಹಂಚಿಕೆ :** ಕರ್ನಾಟಕದ ಕಬ್ಬಿಣದ ಅದಿರಿನ ಹಂಚಿಕೆ ಅಧಿಕವಾಗಿ ಬಳ್ಳಾರಿ, ಚಿಕ್ಕಮಗಳೂರು, ಬಾಗಲಕೋಟೆ, ಚಿತ್ರದುರ್ಗ, ತುಮಕೂರು, ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಗದಗ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯು ಅಪಾರವಾದ ನಿಕ್ಷೇಪವನ್ನು ಹೊಂದಿದ್ದು, ಪ್ರಥಮ ಸ್ಥಾನದಲ್ಲಿದೆ. ಅದು ಹೊಸಪೇಟೆ ಮತ್ತು ಸಂಡೂರು ಪ್ರದೇಶಗಳಲ್ಲಿ ಕಂಡುಬರುತ್ತದೆ.
ದೋಣಿಮಲೈ, ವಿಭೂತಿಗುಡ್ಡ, ಬೆಳಗಾಳ, ಕುಮಾರಸ್ವಾಮಿ ಬೆಟ್ಟಗಳು, ತಿಮ್ಮಪ್ಪನ ಗುಡಿ, ದೇವಾದ್ರಿ ಶ್ರೇಣಿ, ರಾಮದುರ್ಗ ಬೆಟ್ಟಗಳಲ್ಲಿ ಕಬ್ಬಿಣದ ಅದಿರನ್ನು ಉತ್ಪಾದಿಸಲಾಗುತ್ತಿದೆ.

**ಚಟುವಟಿಕೆ**

ನಿಮ್ಮ ಜಿಲ್ಲೆಯಲ್ಲಿ ದೊರೆಯುವ ಖನಿಜ ಸಂಪನ್ಮೂಲಗಳ ಪಟ್ಟಿ ತಯಾರಿಸಿ.

ಚಿಕ್ಕಮಗಳೂರು ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ಬಾಬಾಬುಡನ್‌ಗಿರಿ (ಇನಾಮ್ ದತ್ತಾತ್ರೇಯ ಪೀಠ), ಕೆಮ್ಮಣ್ಣುಗುಂಡಿ, ಕುದುರೆಮುಖ, ಗಂಗಾಮೂಲ, ಕಲ್ಹತ್ತಗಿರಿ, ಜೇನುಸುರಿ ಗುಡ್ಡಗಳಲ್ಲಿ ಕಬ್ಬಿಣದ ಅದಿರು ದೊರೆಯುತ್ತದೆ. ಜೀವವೈವಿಧ್ಯತೆಯನ್ನು ಕಾಪಾಡಲು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರೀಯ ಉದ್ಯಾನವಿರುವ ಕುದುರೆಮುಖದಲ್ಲಿ ಗಣಿಗಾರಿಕೆಯನ್ನು ಸ್ಥಗಿತಗೊಳಿಸಿ, ತೀರ್ಪು ನೀಡಿದೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಸಾಸಲು, ಬಾಗಲಕೋಟೆಯ ಅಮೀನಗಡ, ತುಮಕೂರು ಜಿಲ್ಲೆಯ ಹುಳಿಯಾರು, ಚಿಕ್ಕನಾಯಕನಹಳ್ಳಿ, ಶಿವಮೊಗ್ಗ ಜಿಲ್ಲೆಯ ಕುಂಸಿ, ಶಂಕರಗುಡ್ಡ, ಸಿದ್ದರಹಳ್ಳಿ ಮುಂತಾದ ಕಡೆಗಳಲ್ಲಿಯೂ ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ.

ರಾಜ್ಯದಲ್ಲಿ ಉತ್ಪಾದನೆಯಾಗುವ ಕಬ್ಬಿಣದ ಅದಿರನ್ನು ಭದ್ರಾವತಿ ಮತ್ತು ಬಳ್ಳಾರಿ ಸಮೀಪದ ಜಿಂದಾಲ್ ವಿಜಯನಗರ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳಿಗೆ ಉಪಯೋಗಿಸಿ, ಉಳಿದ ಭಾಗವನ್ನು ರಫ್ತು ಮಾಡಲಾಗುತ್ತದೆ.

**ಮ್ಯಾಂಗನೀಸ್ :** ಮ್ಯಾಂಗನೀಸ್ ಅದಿರು ಮುಖ್ಯವಾಗಿ ಪದರು ಶಿಲೆ ಮತ್ತು ರೂಪಾಂತರ ಶಿಲೆಗಳಲ್ಲಿ ಆಕ್ಸೈಡ್ ರೂಪದಲ್ಲಿ ದೊರೆಯುತ್ತದೆ. ಇದನ್ನು ಮಿಶ್ರ ಲೋಹವಾಗಿ ಉಕ್ಕಿನ ತಯಾರಿಕೆಯಲ್ಲಿ ಕಾಠಿಣ್ಯತೆಯನ್ನು ಹೆಚ್ಚಿಸಲು ಬಳಸುವರು. ಜೊತೆಗೆ ರಾಸಾಯನಿಕ, ವಿದ್ಯುತ್ ಕೈಗಾರಿಕೆ, ರಾಸಾಯನಿಕ ಗೊಬ್ಬರ, ಕ್ಯಾಲಿಕೋ ಪ್ರಿಂಟಿಂಗ್ ಹಾಗೂ ಬಣ್ಣಗಳ ತಯಾರಿಕೆಯಲ್ಲಿಯೂ ಬಳಸುವರು. ಆದ್ದರಿಂದ ಇದನ್ನು 'ಬಹು ಉಪಯೋಗಿ ಖನಿಜ'ವೆನ್ನುವರು.

**ಹಂಚಿಕೆ :** ಕರ್ನಾಟಕದಲ್ಲಿ ಮ್ಯಾಂಗನೀಸ್ ಅದಿರಿನ ನಿಕ್ಷೇಪ ಹೇರಳವಾಗಿದ್ದು, ದೇಶದ ಒಟ್ಟು ನಿಕ್ಷೇಪದಲ್ಲಿ ಶೇ.27 ಭಾಗದಷ್ಟಿದೆ. ಮ್ಯಾಂಗನೀಸ್ ಉತ್ಪಾದನೆಯಲ್ಲಿ ಒಡಿಶಾದ ನಂತರ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ. ರಾಜ್ಯದ ಮ್ಯಾಂಗನೀಸ್ ಹಂಚಿಕೆಯು ಕಬ್ಬಿಣದ ಅದಿರಿನ ಪ್ರದೇಶಗಳಲ್ಲೇ ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯ ಸಂಡೂರು ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ಪ್ರದೇಶವಾಗಿದೆ. ಇಲ್ಲಿ ರಾಜ್ಯದ ಶೇ.90 ರಷ್ಟು ಮ್ಯಾಂಗನೀಸ್ ಉತ್ಪಾದಿಸಲಾಗುತ್ತಿದೆ. ಇತರೆ ಪ್ರಮುಖ ಮ್ಯಾಂಗನೀಸ್ ಗಣಿ ಕೇಂದ್ರಗಳೆಂದರೆ ಶಿವಮೊಗ್ಗ ಜಿಲ್ಲೆಯ ಕುಂಸಿ, ಶಂಕರಗುಡ್ಡ, ಹೊಸಹಳ್ಳಿ, ಚಿತ್ರದುರ್ಗ ಜಿಲ್ಲೆಯ ಸಾದರಹಳ್ಳಿ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕು, ಸೂಪ, ಲೋಂಡ, ಉಸ್ಕಾಂಡ ಹಾಗೂ ಧಾರವಾಡ, ವಿಜಯಾಪುರ, ಚಿಕ್ಕಮಗಳೂರು ಜಿಲ್ಲೆಗಳು. ರಾಜ್ಯದ ಮ್ಯಾಂಗನೀಸ್ ಉತ್ಪಾದನೆಯ ಬಹುಪಾಲು ಮ್ಯಾಂಗನೀಸ್ ಜಪಾನ್, ಚೀನಾ ಮುಂತಾದ ರಾಷ್ಟ್ರಗಳಿಗೆ ರಫ್ತಾಗುವುದು.

**ಬಾಕ್ಸೈಟ್ :** ಬಾಕ್ಸೈಟ್ ಅದಿರನ್ನು ಅಲ್ಯೂಮಿನಿಯಂ ಲೋಹವನ್ನು ಉತ್ಪಾದಿಸಲು ಅಧಿಕವಾಗಿ ಬಳಸುತ್ತಾರೆ. ಸಿಮೆಂಟ್, ಉಕ್ಕು, ವಿದ್ಯುತ್ ತಂತಿಗಳ ತಯಾರಿಕೆಯಲ್ಲೂ ಬಳಸುತ್ತಿರುವುದರಿಂದ ಇದಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ.

NOT TO BE REPUBLISHED
© KTBS

**ಹಂಚಿಕೆ :** ಕರ್ನಾಟಕದಲ್ಲಿ ಬಾಕ್ಸೈಟ್ ಅದಿರಿನ ನಿಕ್ಷೇಪವು ಬೆಳಗಾವಿ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ. ಬೆಳಗಾವಿ ಜಿಲ್ಲೆಯು ಪ್ರಮುಖ ಬಾಕ್ಸೈಟ್ ಉತ್ಪಾದಿಸುವ ಜಿಲ್ಲೆಯಾಗಿದೆ. ಇಲ್ಲಿನ ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕುಗಳಲ್ಲಿ ಬಾಕ್ಸೈಟ್ ಗಣಿಗಳಿವೆ. ಈ ಅದಿರನ್ನು ಬೆಳಗಾವಿಯ ಇಂಡಿಯನ್ ಅಲ್ಯೂಮಿನಿಯಂ ಕಂಪನಿಯ ಕೈಗಾರಿಕೆಯಲ್ಲಿ ಬಳಸಲಾಗುತ್ತಿದೆ.

**ಚಿನ್ನ :** ಚಿನ್ನವು ಅಪರೂಪದ, ಹೊಳೆಯುವ, ಹೆಚ್ಚು ಬಾಳಿಕೆ ಬರುವ ಹಳದಿ ಲೋಹವಾಗಿದೆ. ಇದನ್ನು ಆಭರಣಗಳ ತಯಾರಿಕೆ, ಗಡಿಯಾರ ಮುಂತಾದ ಅಮೂಲ್ಯ ವಸ್ತುಗಳ ತಯಾರಿಕೆಯಲ್ಲಿ ಅಧಿಕವಾಗಿ ಬಳಸುತ್ತಾರೆ. ಚಿನ್ನದ ಬೇಡಿಕೆ ಮತ್ತು ಬಳಕೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವುದರಿಂದ ಬೆಲೆಯೂ ದುಪ್ಪಟ್ಟಾಗಿದೆ.

ಕರ್ನಾಟಕವು ಚಿನ್ನದ ಗಣಿಗಾರಿಕೆಯಲ್ಲಿ ಭಾರತದಲ್ಲಿ ಪ್ರಥಮ ಸ್ಥಾನ ಪಡೆದಿದೆ. ಉತ್ಪಾದನೆಯ ಹೆಚ್ಚು ಚಿನ್ನವನ್ನು ಕರ್ನಾಟಕದ ಗಣಿಗಳಿಂದಲೇ ಪಡೆಯಲಾಗುತ್ತಿದೆ. ಆದ್ದರಿಂದ ಇದನ್ನು 'ಚಿನ್ನದ ನಾಡು' ಎಂದು ಕರೆಯುವರು. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಚಿನ್ನ ಗಣಿಗಾರಿಕೆ ಕಂಡು ಬಂದಿದೆ. ಆದರೆ ದೊಡ್ಡ ಪ್ರಮಾಣದಲ್ಲಿ ಚಿನ್ನದ ಗಣಿಗಾರಿಕೆ 1880 ರಲ್ಲಿ ಜಾನ್ ಟೇಲರ್ ಎಂಬುವನು ಪ್ರಾರಂಭ ಮಾಡಿ, 1885 ರಲ್ಲಿ ಕೆ.ಜಿ.ಎಫ್. ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ನಾಲ್ಕು ಪ್ರಮುಖ ಗಣಿಗಳಿವೆ. ಅವುಗಳೆಂದರೆ ನಂದಿದುರ್ಗ, ಉರಿಗಾಂ, ಚಾಂಪಿಯನ್ ರೀಫ್ ಮತ್ತು ಮೈಸೂರು ಗಣಿ. ಇದರಲ್ಲಿ ಚಾಂಪಿಯನ್ ರೀಫ್ ಗಣಿಯು ಅತ್ಯಂತ ಆಳವಾದ ಚಿನ್ನದ ಗಣಿಯಾಗಿದೆ (3217 ಮೀ.). ಈ ಗಣಿಗಳಲ್ಲಿ ಹಲವು ವರ್ಷಗಳ ನಿರಂತರ ಗಣಿಗಾರಿಕೆಯಿಂದ ಚಿನ್ನದ ನಿಕ್ಷೇಪದ ಪ್ರಮಾಣ ಕಡಿಮೆಯಾಗಿದೆ. ಈಗ ಗಣಿಗಾರಿಕೆ ಸ್ಥಗಿತಗೊಂಡಿದೆ. ಹಟ್ಟಿ ಪ್ರದೇಶದಲ್ಲಿ ಗಣಿಗಾರಿಕೆ ಮುಂದುವರಿದಿದೆ.

ಪ್ರಸ್ತುತ ರಾಯಚೂರು ಜಿಲ್ಲೆಯ ಹಟ್ಟಿ ಭಾರತದ ಅತಿ ದೊಡ್ಡ ಚಿನ್ನದ ಗಣಿಯಾಗಿದೆ. ಇಲ್ಲಿ ಹೆಚ್ಚು ಚಿನ್ನವನ್ನು ಉತ್ಪಾದಿಸಲಾಗುತ್ತಿದೆ. ತುಮಕೂರು ಜಿಲ್ಲೆಯ ಬೆಳ್ಳಾರ, ಶಿರಾ ಸಮೀಪವಿರುವ ಅಜ್ಜನಹಳ್ಳಿಯಲ್ಲೂ ಚಿನ್ನದ ಅದಿರನ್ನು ಉತ್ಪಾದಿಸಲಾಗುತ್ತಿದೆ. ಇತರೆ ಚಿನ್ನದ ನಿಕ್ಷೇಪವಿರುವ ಸ್ಥಳಗಳೆಂದರೆ ಗದಗ ಜಿಲ್ಲೆಯ ಮುಳಗುಂದ, ಕಪ್ಪತ್ತಗುಡ್ಡ, ಹಾಸನ ಜಿಲ್ಲೆಯ ಕೆಂಪಿನಕೋಟೆ ಮೊದಲಾದವುಗಳು.

@KTBS NOT TO BE REPUBLISHED

### ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದ ಭರ್ತಿ ಮಾಡಿರಿ.**

1) ಕುದುರೆಮುಖದಲ್ಲಿ ............... ಅದಿರು ದೊರೆಯುತ್ತದೆ.

2) ಉತ್ತಮದರ್ಜೆಯ ಕಬ್ಬಿಣದ ಅದಿರು ...............

3) ಬಳ್ಳಾರಿ ಜಿಲ್ಲೆಯ ಸಂಡೂರು ............... ಗಣಿಗಳನ್ನು ಹೊಂದಿದೆ.

4) ಬಾಕ್ಸೈಟ್ ಅದಿರಿನಿಂದ ............... ಲೋಹವನ್ನು ಉತ್ಪಾದಿಸುತ್ತಾರೆ.

5) ಅತ್ಯಂತ ಆಳವಾದ ಚಿನ್ನದ ಗಣಿ ...............

## II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.

1) ಕರ್ನಾಟಕವನ್ನು 'ಚಿನ್ನದ ನಾಡು' ಎಂದು ಏಕೆ ಕರೆಯುತ್ತಾರೆ ?
2) ಕರ್ನಾಟಕದಲ್ಲಿ ಸಿಗುವ ಪ್ರಮುಖ ಖನಿಜಗಳಾವುವು ?
3) ಮಿಶ್ರಲೋಹವಾಗಿ ಬಳಸುವ ಅದಿರು ಯಾವುದು ?
4) ನಮ್ಮ ರಾಜ್ಯದಲ್ಲಿ ಕಬ್ಬಿಣದ ಅದಿರು ದೊರೆಯುವ ಪ್ರದೇಶಗಳನ್ನು ತಿಳಿಸಿ.
5) ಬಾಕ್ಸೈಟ್ ಉತ್ಪಾದಿಸುವ ಪ್ರಮುಖ ಜಿಲ್ಲೆ ಯಾವುದು ?
6) ಕರ್ನಾಟಕದ ಪ್ರಮುಖ ಚಿನ್ನದ ಗಣಿಗಳನ್ನು ತಿಳಿಸಿ.

## III. ಹೊಂದಿಸಿ ಬರೆಯಿರಿ.

| ಅ | ಆ |
|---|---|
| 1) ಸೂಪ | ಎ) ಮ್ಯಾಂಗನೀಸ್ |
| 2) ಹಟ್ಟಿ | ಬಿ) ಬಾಕ್ಸೈಟ್ |
| 3) ಕುಂಸಿ | ಸಿ) ಸುಣ್ಣಕಲ್ಲು |
| 4) ಖಾನಾಪುರ | ಡಿ) ಕಬ್ಬಿಣದ ಅದಿರು |
| | ಇ) ಚಿನ್ನದ ಗಣಿ |

## IV. ಚಟುವಟಿಕೆಗಳು

1) ಕರ್ನಾಟಕದಲ್ಲಿ ದೊರೆಯುವ ಖನಿಜಗಳ ಮಾದರಿಯನ್ನು (ಸ್ಯಾಂಪಲ್) ಸಂಗ್ರಹಿಸಿರಿ ಮತ್ತು ಟಿಪ್ಪಣಿ ಬರೆಯಿರಿ.
2) ಖನಿಜಗಳ ಹಂಚಿಕೆಯನ್ನು ಕರ್ನಾಟಕದ ನಕ್ಷೆಯಲ್ಲಿ ಗುರುತಿಸಿ ಮತ್ತು ಹೆಸರಿಸಿ.

*****

@KTBS NOT TO BE REPUBLISHED

## ಅಧ್ಯಾಯ – 27


# ಕರ್ನಾಟಕದಲ್ಲಿ ಸಾರಿಗೆ ವ್ಯವಸ್ಥೆ

M9B1K3

**ಈ ಅಧ್ಯಾಯದಲ್ಲಿ ಈ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಕರ್ನಾಟಕದಲ್ಲಿ ಸಾರಿಗೆಯ ಮಹತ್ವ
- ರಸ್ತೆ ಸಾರಿಗೆ – ವಿಧಗಳು, ಪ್ರಮುಖ ಹೆದ್ದಾರಿಗಳು
- ರೈಲು ಸಾರಿಗೆಯ ಮಹತ್ವ, ಪ್ರಮುಖ ರೈಲು ಮಾರ್ಗಗಳು
- ಜಲಸಾರಿಗೆ ಮತ್ತು ವಾಯುಸಾರಿಗೆ

ಸ್ಥಳದಿಂದ ಸ್ಥಳಕ್ಕೆ ಸರಕುಗಳು ಹಾಗೂ ಪ್ರಯಾಣಿಕರನ್ನು ಸಾಗಿಸುವ ಮಾಧ್ಯಮವೇ ಸಾರಿಗೆ. ಕೃಷಿ, ಕೈಗಾರಿಕೆ ಮತ್ತು ವ್ಯಾಪಾರದ ಪ್ರಗತಿಯಲ್ಲಿ ಸಾರಿಗೆ ಸಂಪರ್ಕಗಳು ಜೀವನಾಡಿಯಿದ್ದಂತೆ. ಕರ್ನಾಟಕವು ಅನೇಕ ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದ ರಾಜ್ಯ. ಇಲ್ಲಿ ಖನಿಜ ವಸ್ತುಗಳು, ವಾಣಿಜ್ಯ ಬೆಳೆಗಳು, ಅರಣ್ಯ ವಸ್ತುಗಳು, ಶಕ್ತಿ ಸಾಧನಗಳು ದೊರೆಯುವುವು. ಇವುಗಳ ಸಮರ್ಥ ಬಳಕೆಯಿಂದ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಸುವ್ಯವಸ್ಥಿತವಾದ ಸಾರಿಗೆ ಸೌಲಭ್ಯವು ಅಗತ್ಯ. ಕರ್ನಾಟಕವು ಕೃಷಿ ಪ್ರಧಾನ ರಾಜ್ಯ. ಆಹಾರ ಧಾನ್ಯ ಹಾಗೂ ಇತರ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು, ಗೊಬ್ಬರ, ಕೃಷಿ ಉಪಕರಣಗಳನ್ನು ಕೃಷಿ ವಲಯಗಳಿಗೆ ಸಾಗಿಸಲು, ಗಣಿಗಳಿಂದ ಖನಿಜಗಳನ್ನು, ಕೈಗಾರಿಕೆಗಳಿಂದ ಸಿದ್ಧವಸ್ತುಗಳನ್ನು ಮಾರುಕಟ್ಟೆಗೆ ಸಾಗಿಸಲು, ಪ್ರಯಾಣಿಕರನ್ನು ಸಾಗಿಸಲು, ಇನ್ನೂ ಹಲವಾರು ಉದ್ದೇಶಗಳಿಗೆ ವಿವಿಧ ರೀತಿಯ ಸಾರಿಗೆ ಸೌಲಭ್ಯವು ಅವಶ್ಯಕ. ಕರ್ನಾಟಕವು ರಸ್ತೆ, ರೈಲು, ಜಲಸಾರಿಗೆ ಮತ್ತು ವಾಯುಸಾರಿಗೆ ವ್ಯವಸ್ಥೆಗಳನ್ನು ಹೊಂದಿದೆ.




## ರಸ್ತೆ ಸಾರಿಗೆ

**ಪ್ರಾಮುಖ್ಯತೆ :** ಕರ್ನಾಟಕದ ಜನರು ಹೆಚ್ಚಾಗಿ ಹಳ್ಳಿಗಾಡಿನಲ್ಲೇ ವಾಸ ಮಾಡುವುದರಿಂದ ಪ್ರತಿಯೊಂದು ಹಳ್ಳಿ–ಪಟ್ಟಣ ಹಾಗೂ ಇತರ ಜನವಸತಿಗಳನ್ನು

NOT TO BE REPUBLISHED @KTBS

ಸಂಪರ್ಕಿಸುವುದರಲ್ಲಿ ರಸ್ತೆ ಸಾರಿಗೆಯ ಪಾತ್ರ ಮಹತ್ವವುಳ್ಳದ್ದಾಗಿದೆ. ರಸ್ತೆಗಳನ್ನು ಸುಲಭವಾಗಿ, ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದು. ಇದರಿಂದ ಪ್ರಯಾಣಿಕರು ಮತ್ತು ಸರಕುಗಳನ್ನು ರಾಜ್ಯದ ಮೂಲೆ ಮೂಲೆಗೂ ಸಾಗಿಸಬಹುದು. ರಸ್ತೆಗಳ ಅಭಿವೃದ್ಧಿಯು ರಾಜ್ಯದ ಕೃಷಿ, ಕೈಗಾರಿಕೆ, ಗಣಿಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಯನ್ನು ನಿರ್ಧರಿಸುತ್ತದೆ.

**ರಸ್ತೆ ಸಾರಿಗೆಯ ಬೆಳವಣಿಗೆ :** ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ರಸ್ತೆ ಸಾರಿಗೆಯು ರೂಢಿಯಲ್ಲಿದೆ. ರಾಜಮಹಾರಾಜರುಗಳು ತಮ್ಮ ಸೈನಿಕರು ಮತ್ತು ಆಡಳಿತ ನಿರ್ವಹಣೆಗಾಗಿ ರಸ್ತೆಗಳನ್ನು ನಿರ್ಮಾಣ ಮಾಡುತ್ತಿದ್ದರು. ಪ್ರಮುಖ ರಸ್ತೆ ಮಾರ್ಗಗಳಲ್ಲಿ ಅರವಂಟಿಗೆ, ತಂಗುದಾಣ, ತೋಪುಗಳು ಹಾಗೂ ಛತ್ರಗಳಿದ್ದವು. ಕರಾವಳಿ ಮತ್ತು ಒಳನಾಡನ್ನು ಸಂಪರ್ಕಿಸುವ ರಸ್ತೆಗಳನ್ನು ನಿರ್ಮಾಣ ಮಾಡಿದ್ದರು.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಅಷ್ಟಾಗಿ ರಸ್ತೆಗಳು ನಿರ್ಮಾಣವಾಗಿರಲಿಲ್ಲ. ಹಳೆ ಮೈಸೂರು ಪ್ರಾಂತ್ಯದಲ್ಲಿ ಬೆಂಗಳೂರು ಮತ್ತು ಜಿಲ್ಲಾ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಿದ್ದವು. ಅವು ಸುವ್ಯವಸ್ಥಿತವಾಗಿರಲಿಲ್ಲ. ಸ್ವಾತಂತ್ರ್ಯಾನಂತರ ವಿಶಾಲ ಮೈಸೂರು ರಾಜ್ಯ ನಿರ್ಮಾಣವಾದ ಮೇಲೆ 1961 ರಲ್ಲಿ ಒಟ್ಟು 43,182 ಕಿ.ಮೀ.ಗಳಷ್ಟು ಉದ್ದದ ರಸ್ತೆಗಳಿದ್ದವು. ಪ್ರಸ್ತುತ ಒಟ್ಟು ರಸ್ತೆಗಳ ಉದ್ದ 2,31,062 ಕಿ.ಮೀ.ಗಳು. ಇವುಗಳಲ್ಲಿ ಶೇ.35.70 ಭಾಗದಷ್ಟು ಪಕ್ಕಾ ರಸ್ತೆಗಳು ಮತ್ತು ಶೇ. 64.30 ಭಾಗದಷ್ಟು ಕಚ್ಚಾ ರಸ್ತೆಗಳಾಗಿರುತ್ತವೆ. ಇತ್ತೀಚೆಗೆ ರಸ್ತೆಗಳ ಗುಣಮಟ್ಟದಲ್ಲಿಯೂ ಪ್ರಗತಿಯಾಗಿರುವುದು ಕಂಡುಬರುತ್ತದೆ.

> **ನೀವೇ ಮಾಡಿ :**
> ನಿಮ್ಮ ಜಿಲ್ಲೆಯಲ್ಲಿ ಹಾಯ್ದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳನ್ನು ಮತ್ತು ಅವುಗಳು ನಿಮ್ಮ ಜಿಲ್ಲೆಯ ಯಾವ ತಾಲ್ಲೂಕುಗಳಲ್ಲಿ ಹಾಯ್ದು ಹೋಗಿವೆ ಎಂಬುದನ್ನು ಪಟ್ಟಿ ಮಾಡಿ.

**ರಸ್ತೆಗಳ ವಿಧಗಳು :** ಕರ್ನಾಟಕದ ರಸ್ತೆಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ; (1) ರಾಷ್ಟ್ರೀಯ ಹೆದ್ದಾರಿಗಳು (2) ರಾಜ್ಯ ಹೆದ್ದಾರಿಗಳು (3) ಜಿಲ್ಲಾ ರಸ್ತೆಗಳು ಹಾಗೂ (4) ಗ್ರಾಮೀಣ ರಸ್ತೆಗಳು.

**1) ರಾಷ್ಟ್ರೀಯ ಹೆದ್ದಾರಿಗಳು :** ಪ್ರಮುಖ ನಗರಗಳು, ರಾಜ್ಯಗಳ ರಾಜಧಾನಿಗಳು ಹಾಗೂ ಬಂದರುಗಳನ್ನು ಸಂಪರ್ಕಿಸುವ ರಸ್ತೆಗಳಿಗೆ 'ರಾಷ್ಟ್ರೀಯ ಹೆದ್ದಾರಿ'ಗಳೆನ್ನುವರು. ಇವು ಗುಣಮಟ್ಟದ ಮತ್ತು ಅಗಲವಾದ ರಸ್ತೆಗಳಾಗಿದ್ದು, ದ್ವಿಮುಖ, ನಾಲ್ಕು ಪಥ ಮತ್ತು ಆರು ಪಥಗಳ ರಸ್ತೆಗಳನ್ನು ಹೊಂದಿರುತ್ತವೆ. ಇವು ಕೇಂದ್ರ ಸರ್ಕಾರದ ಅಧೀನದಲ್ಲಿದ್ದು, ಇವುಗಳ ನಿರ್ವಹಣೆ ಕಾರ್ಯವು 'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ' (NHAI) ಕ್ಕೆ ಸೇರಿದೆ. ಕರ್ನಾಟಕದಲ್ಲಿ ಪ್ರಸ್ತುತ 14 ರಾಷ್ಟ್ರೀಯ ಹೆದ್ದಾರಿಗಳಿವೆ. ಇವುಗಳ ಒಟ್ಟು ಉದ್ದ 4491 ಕಿ.ಮೀ.ಗಳು. ಉತ್ತರ ಕನ್ನಡ, ವಿಜಯಾಪುರ, ಬೆಳಗಾವಿ, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ, ತುಮಕೂರು, ದಕ್ಷಿಣ ಕನ್ನಡ ಹಾಗೂ ಬಳ್ಳಾರಿ ಜಿಲ್ಲೆಗಳು ಹೆಚ್ಚು ರಾಷ್ಟ್ರೀಯ ಹೆದ್ದಾರಿಗಳನ್ನು ಹೊಂದಿವೆ. ಆದರೆ ರಾಯಚೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳಿಲ್ಲ.

> **ಕರ್ನಾಟಕದಲ್ಲಿ ಹಾದು ಹೋಗುವ ಅತಿ ಉದ್ದದ ರಾಷ್ಟ್ರೀಯ ಹೆದ್ದಾರಿ ಸಂಖ್ಯಾ 13**
> ಮಂಗಳೂರು – ಮೂಡಬಿದ್ರಿ, ಕೊಪ್ಪ, ಶಿವಮೊಗ್ಗ, ಚಿತ್ರದುರ್ಗ, ಹೊಸಪೇಟೆ, ಇಳಕಲ್, ವಿಜಯಾಪುರ ಮಾರ್ಗವಾಗಿ ಸೊಲ್ಲಾಪುರಕ್ಕೆ ಸೇರುತ್ತದೆ.

ರಾಷ್ಟ್ರೀಯ ಹೆದ್ದಾರಿ NH - 4 ಮತ್ತು NH - 7 ಗಳು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ 'ಸುವರ್ಣ ಚತುಷ್ಕೋನ ಹೆದ್ದಾರಿ ಯೋಜನೆ' ಹಾಗೂ 'ಕಾರಿಡಾರ್ ಯೋಜನೆ' ಗಳಿಗೆ ಸೇರಿವೆ. ಅವು ಆರು ಪಥಗಳನ್ನು ಹೊಂದಿವೆ. ರಾಜ್ಯದಲ್ಲಿ ಹಾಯ್ದು ಹೋಗುವ ಇತರೆ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳೆಂದರೆ NH – 13, NH – 17, NH - 48, NH - 206, NH - 209 ಮತ್ತು NH -212.


© KTBS NOT TO BE REPUBLISHED

**2) ರಾಜ್ಯ ಹೆದ್ದಾರಿಗಳು :** ರಾಜಧಾನಿ ಬೆಂಗಳೂರಿನಿಂದ ಜಿಲ್ಲಾ ಕೇಂದ್ರ, ಪ್ರಮುಖ ಪಟ್ಟಣಗಳು ಹಾಗೂ ರಾಷ್ಟ್ರೀಯ ಹೆದ್ದಾರಿಗಳೊಡನೆ ಸಂಪರ್ಕಿಸುವ ರಸ್ತೆಗಳಿಗೆ 'ರಾಜ್ಯ ಹೆದ್ದಾರಿ' ಎಂದು ಕರೆಯುವರು. ಇವುಗಳ ನಿರ್ಮಾಣ–ನಿರ್ವಹಣೆ ರಾಜ್ಯ ಸರ್ಕಾರಗಳಿಗೆ ಸೇರಿದೆ. ಕರ್ನಾಟಕ ರಾಜ್ಯದಲ್ಲಿ 20,905 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳಿವೆ. ಬೆಳಗಾವಿ ಜಿಲ್ಲೆ ಅತಿ ಉದ್ದದ ರಾಜ್ಯ ಹೆದ್ದಾರಿ ಹೊಂದಿರುವ ಜಿಲ್ಲೆಯಾಗಿದೆ. ಬೆಂಗಳೂರು ಅತಿ ಕಡಿಮೆ ಉದ್ದದ ರಾಜ್ಯ ಹೆದ್ದಾರಿಯುಳ್ಳ ಜಿಲ್ಲೆಯಾಗಿದೆ. ಏಕೆಂದರೆ ಇಲ್ಲಿ ನಗರ ರಸ್ತೆಗಳು ಹೆಚ್ಚು.

**3) ಜಿಲ್ಲಾ ರಸ್ತೆಗಳು :** ಜಿಲ್ಲಾ ಕೇಂದ್ರದಿಂದ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ, ಪ್ರಮುಖ ಪಟ್ಟಣ, ಗ್ರಾಮಗಳು, ರೈಲು ಮಾರ್ಗ ಹಾಗೂ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಜಿಲ್ಲಾ ರಸ್ತೆಗಳೆನ್ನುವರು. ಇವುಗಳ ನಿರ್ಮಾಣ ಅಭಿವೃದ್ಧಿ ಮೇಲ್ವಿಚಾರಣೆಯು 'ಜಿಲ್ಲಾ ಪಂಚಾಯತ್' ಗೆ ಸೇರಿರುತ್ತದೆ. ರಾಜ್ಯದಲ್ಲಿ ಒಟ್ಟು 47,836 ಕಿ.ಮೀ. ಉದ್ದದ ಜಿಲ್ಲಾ ರಸ್ತೆಗಳಿವೆ. ತುಮಕೂರು ಜಿಲ್ಲೆ ಹೆಚ್ಚು ಜಿಲ್ಲಾ ರಸ್ತೆಗಳನ್ನೊಳಗೊಂಡಿದೆ. ರಾಯಚೂರು ಜಿಲ್ಲೆ ಕಡಿಮೆ ಜಿಲ್ಲಾ ರಸ್ತೆಗಳನ್ನೊಳಗೊಂಡಿದೆ.

**4) ಗ್ರಾಮೀಣ ರಸ್ತೆಗಳು :** ತಾಲ್ಲೂಕು ಕೇಂದ್ರದಿಂದ ಪ್ರತಿಯೊಂದು ಗ್ರಾಮಗಳಿಗೂ, ಎಲ್ಲಾ ಜಿಲ್ಲಾ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳೇ 'ಗ್ರಾಮೀಣ ರಸ್ತೆ'ಗಳು. ಇವುಗಳ ನಿರ್ಮಾಣ, ನಿರ್ವಹಣೆ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಆಡಳಿತಕ್ಕೆ ಸೇರಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು 1,47,212 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳಿವೆ.

ಮೇಲ್ಕಂಡ ವರ್ಗದ ರಸ್ತೆಗಳಲ್ಲದೆ, ವಿವಿಧ ಉದ್ದೇಶ ಮತ್ತು ಸ್ಥಳೀಯ ಆಡಳಿತ ವ್ಯವಸ್ಥೆಗಳ ಅಧೀನದ ರಸ್ತೆಗಳಿವೆ. ಉದಾ : ಲೋಕೋಪಯೋಗಿ ರಸ್ತೆ, ಅರಣ್ಯ ಇಲಾಖೆ, ನೀರಾವರಿ ಇಲಾಖೆ ಹಾಗೂ ಪುರಸಭೆ–ನಗರಪಾಲಿಕೆ ರಸ್ತೆಗಳು.




# ರೈಲು ಸಾರಿಗೆ

ಕರ್ನಾಟಕದಲ್ಲಿ ರಸ್ತೆ ಸಾರಿಗೆಯ ನಂತರ ರೈಲು ಸಾರಿಗೆಯು ಪ್ರಮುಖವಾದುದು. ಕಡಿಮೆ ದರದಲ್ಲಿ ದೂರದ ಸ್ಥಳಗಳಿಗೆ ಪ್ರಯಾಣಿಸಲು ಹಾಗೂ ಸರಕುಗಳನ್ನು ಸಾಗಿಸಲು ರೈಲು ಸಾರಿಗೆಯು ಮಹತ್ವ ಪಡೆದಿದೆ.

ಕರ್ನಾಟಕದಲ್ಲಿ ಮೊಟ್ಟಮೊದಲು ರೈಲು ಸಂಚಾರ ಆರಂಭವಾಗಿದ್ದು

NOT TO BE REPUBLISHED
@KTBS

1864ರಲ್ಲಿ, ಇದನ್ನು ಬೆಂಗಳೂರು ಮತ್ತು ಮದರಾಸು ನಗರಗಳ ಮಧ್ಯೆ 'ಮದರಾಸು ರೈಲ್ವೆ ಕಂಪನಿ'ಯು ನಿರ್ಮಿಸಿತು. 1956 ರ ವೇಳೆಗೆ ಒಟ್ಟು 2595 ಕಿ.ಮೀ.ಗಳಿದ್ದು ಅದು ದಕ್ಷಿಣ ರೈಲ್ವೆ ವಲಯಕ್ಕೆ ಸೇರಿತ್ತು. ಈಗ ನೈಋತ್ಯ ರೈಲ್ವೆ ವಲಯವು ಅಸ್ತಿತ್ವಕ್ಕೆ ಬಂದಿದೆ. ಅದರ ಆಡಳಿತ ಕೇಂದ್ರ ಹುಬ್ಬಳ್ಳಿಯಲ್ಲಿದೆ. ಕರ್ನಾಟಕದಲ್ಲಿ ಇಂದು ಒಟ್ಟು 3244 ಕಿ.ಮೀ ಉದ್ದದ ರೈಲು ಮಾರ್ಗಗಳಿವೆ.

**ಚಟುವಟಿಕೆ**

ರಸ್ತೆಸಾರಿಗೆ ಮತ್ತು ರೈಲು ಸಾರಿಗೆಯ ಪ್ರವಾಸದಲ್ಲಿ ನಿಮಗಾದ ಅನುಭವವನ್ನು ಗುಂಪಿನಲ್ಲಿ ಚರ್ಚಿಸಿ, ನಂತರ ಯಾವ ಸಾರಿಗೆ ಉತ್ತಮ ಎಂಬುದನ್ನು ತೀರ್ಮಾನಿಸಿ.

ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ರೈಲು ಮಾರ್ಗಗಳು ಸಮನಾಗಿ ಹಂಚಿಕೆಯಾಗಿಲ್ಲ. ಬೆಂಗಳೂರು, ಬಳ್ಳಾರಿ, ಬೆಳಗಾವಿ, ಹಾಸನ, ಉತ್ತರ ಕನ್ನಡ, ಚಿತ್ರದುರ್ಗ, ಉಡುಪಿ, ರಾಮನಗರ, ದಕ್ಷಿಣ ಕನ್ನಡ ಜಿಲ್ಲೆಗಳು ಸರಾಸರಿ 150–200 ಕಿ.ಮೀ. ಉದ್ದದ ರೈಲು ಮಾರ್ಗಗಳನ್ನು ಹೊಂದಿರುತ್ತವೆ. ಕೊಡಗು ಜಿಲ್ಲೆಯು ಯಾವುದೇ ರೈಲು ಮಾರ್ಗವನ್ನು ಹೊಂದಿರುವುದಿಲ್ಲ.

**ಕೊಂಕಣ ರೈಲ್ವೆ :** ಇದು ಪಶ್ಚಿಮ ಕರಾವಳಿಯ ಮಹತ್ವಪೂರ್ಣವಾದ ರೈಲು ಮಾರ್ಗ. ಇದು ಮಂಗಳೂರು–ಮುಂಬೈನ ನಡುವಿನ ಪ್ರಯಾಣದ ಅವಧಿ 41 ಗಂಟೆಗಳಿಂದ 18 ಗಂಟೆಗಳಿಗೆ ಕಡಿಮೆ ಮಾಡಿದೆ. ಇದರ ಉದ್ದ ಕರ್ನಾಟಕದಲ್ಲಿ 273 ಕಿ.ಮೀ.ಗಳು. ಇದರಲ್ಲಿ 13 ಪ್ರಮುಖ ಮತ್ತು 310 ಇತರೆ ಸೇತುವೆಗಳಿವೆ. ಅವುಗಳಲ್ಲಿ ಶರಾವತಿ ಸೇತುವೆ (2.2 ಕಿ.ಮೀ.) ಅತ್ಯಂತ ಉದ್ದವಾಗಿದೆ. ಕಾಳಿ ನದಿ ಸೇತುವೆ (1.2 ಕಿ.ಮೀ.) ಯೂ ಪ್ರಮುಖವಾಗಿದೆ. ಹಲವಾರು ಸುರಂಗ ಮಾರ್ಗಗಳು ಮತ್ತು ಸೇತುವೆಗಳ ಮೂಲಕ ಹಾದು ಹೋಗುವ ಈ ಮಾರ್ಗವು ಅತ್ಯಂತ ಸುಂದರವಾದ ಪ್ರಾಕೃತಿಕ ದೃಶ್ಯಾವಳಿಯಿಂದ ಕೂಡಿದೆ.

**ಮೆಟ್ರೋ ರೈಲು :** ಬೆಂಗಳೂರು ಬೃಹತ್ ನಗರವಾಗಿ ಬೆಳೆದಿದ್ದು, ಟ್ರಾಫಿಕ್ ಸಮಸ್ಯೆ ಅತಿಯಾಗಿದೆ. ಅದನ್ನು ನಿವಾರಿಸಲು 'ನಮ್ಮ ಮೆಟ್ರೋ' ನಗರ ರೈಲು ಯೋಜನೆಯನ್ನು ಜಾರಿಗೆ ತರಲಾಯಿತು. ಇದರಿಂದ ಅಕ್ಟೋಬರ್ 20, 2011 ರಲ್ಲಿ ಮೊಟ್ಟ ಮೊದಲ ಮೆಟ್ರೋ ರೈಲು ಬೆಂಗಳೂರು ನಗರದ ಬೈಯಪ್ಪನ ಹಳ್ಳಿಯಿಂದ ಎಂ.ಜಿ. ರಸ್ತೆಯವರೆಗೆ ಕಾರ್ಯಾರಂಭಗೊಂಡು ಲಕ್ಷಾಂತರ ಜನರು ಪ್ರಯಾಣಿಸುತ್ತಿದ್ದಾರೆ. ಇದರಿಂದ ತ್ವರಿತವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಲುಪಬಹುದು. ಇನ್ನೂ ಮೆಟ್ರೋ ರೈಲು ಮಾರ್ಗಗಳು ನಿರ್ಮಾಣ ಹಂತದಲ್ಲಿವೆ.

NOT TO BE REPUBLISHED

## ವಾಯು ಸಾರಿಗೆ

ವಾಯು ಸಾರಿಗೆ ಅತಿ ವೇಗ ಚಾಲಿತ ಸಾರಿಗೆ ಮಾಧ್ಯಮ. ಇದು ಪ್ರಯಾಣಿಕರು, ಅಂಚೆ ಮತ್ತು ಬೆಲೆ ಬಾಳುವ ಹಗುರವಾದ ವಸ್ತುಗಳನ್ನು ದೂರದ ಸ್ಥಳಗಳಿಗೆ ಬೇಗ ಸಾಗಿಸುವುದಕ್ಕೆ ಬಹಳ ಉಪಯುಕ್ತವಾದುದು. ನೈಸರ್ಗಿಕ ವಿಪತ್ತುಗಳು ಸಂಭವಿಸಿದಾಗ ಹಾಗೂ ಯುದ್ಧಗಳಂತಹ ತುರ್ತು ಪರಿಸ್ಥಿತಿಗಳಲ್ಲಿ ಪರಿಹಾರ ಕಾರ್ಯ ಕೈಗೊಳ್ಳುವುದಕ್ಕೂ ನೆರವಾಗುವುದು. ಆದರೆ ಇದು ದುಬಾರಿಯಾದ ಸಾರಿಗೆ ಮಾಧ್ಯಮವಾಗಿದ್ದು ಎಲ್ಲ ವರ್ಗದ ಜನರಿಗೂ ಲಭ್ಯವಾಗದು.

ಕರ್ನಾಟಕದಲ್ಲಿ ಮೊದಲ ವಿಮಾನ ಯಾನವನ್ನು 1946 ರಲ್ಲಿ ಬೆಂಗಳೂರು – ಹೈದರಾಬಾದ್ ನಡುವೆ 'ಡೆಕ್ಕನ್ ಏರ್‌ವೇಸ್' ಎಂಬ ಕಂಪನಿಯು ಪ್ರಾರಂಭಿಸಿತು. ಭಾರತೀಯ ವಿಮಾನ ಸಂಚಾರವು 1953 ರಲ್ಲಿ ರಾಷ್ಟ್ರೀಕರಣಗೊಂಡು, ಇಂಡಿಯನ್ ಏರ್‌ಲೈನ್ಸ್ ಸಂಸ್ಥೆ ಆರಂಭಗೊಂಡ ಮೇಲೆ ಬೆಂಗಳೂರಿನಿಂದ ವಿವಿಧ ಕೇಂದ್ರಗಳಿಗೆ ವಿಮಾನಯಾನದ ಸೌಲಭ್ಯವನ್ನು ಕಲ್ಪಿಸಲಾಯಿತು. ರಾಜ್ಯದ ರಾಜಧಾನಿಯಾದ

ಬೆಂಗಳೂರು 1996 ರಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೆಂದು ಘೋಷಿಸಲ್ಪಟ್ಟಿತ್ತು. ಬೆಳಗಾವಿ, ಹುಬ್ಬಳ್ಳಿ, ಮೈಸೂರು, ಮಂಗಳೂರುಗಳಲ್ಲಿ ದೇಶೀಯ ವಿಮಾನ ನಿಲ್ದಾಣಗಳಿವೆ. ಹೊಸದಾಗಿ ಹಾಸನ, ಕಲಬುರಗಿ(ಗುಲ್ಬರ್ಗ)ಗಳಲ್ಲಿ ನಿರ್ಮಾಣಗೊಳ್ಳಲಿವೆ.

ಈ ಹಿಂದೆ ಬೆಂಗಳೂರು ನಗರದ ಹೆಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿದ್ದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಅಲ್ಲಿಂದ 34 ಕಿ.ಮೀ. ದೂರದಲ್ಲಿ ದೇವನಹಳ್ಳಿಗೆ ದಿನಾಂಕ 24–05–2008 ರಂದು ಸ್ಥಳಾಂತರಗೊಂಡಿತು. ಎಚ್.ಎ.ಎಲ್. ವಿಮಾನ ನಿಲ್ದಾಣವನ್ನು ಈಗ ಪೈಲಟ್‌ಗಳ ತರಬೇತಿಗೆ ಬಳಸಲಾಗುತ್ತಿದೆ. ಹೊಸದಾಗಿ ನಿರ್ಮಿಸಿದ ದೇವನಹಳ್ಳಿ ವಿಮಾನ ನಿಲ್ದಾಣವು ಭಾರತದ ಮೊದಲ 'ಹಸಿರು ಕ್ಷೇತ್ರದ ವಿಮಾನ ನಿಲ್ದಾಣ'ವಾಗಿದೆ. (Green field Airport) ಇದು ಸುಸಜ್ಜಿತ ಸೌಲಭ್ಯಗಳಿಂದ ಕೂಡಿರುವ ಅತ್ಯಾಧುನಿಕ ವಿಮಾನ ನಿಲ್ದಾಣವಾಗಿದೆ.

## ಜಲ ಸಾರಿಗೆ

ಕರ್ನಾಟಕದಲ್ಲಿ ಒಳನಾಡಿನ ಮತ್ತು ಸಮುದ್ರ ಜಲಸಂಚಾರಗಳೆರಡೂ ರೂಢಿಯಲ್ಲಿವೆ. ಅವುಗಳ ಲಭ್ಯತೆ ಬಹು ಸೀಮಿತವಾಗಿದ್ದು, ಅವು ಅಷ್ಟೊಂದು ಮಹತ್ವ ಹೊಂದಿಲ್ಲ. ಹಿಂದೆ ಒಳನಾಡಿನ ಜಲಸಂಚಾರವು ನಾಡದೋಣಿ, ಹರಿಗೋಲು, ತೆಪ್ಪಗಳಿಗೆ ಸೀಮಿತಗೊಂಡಿತ್ತು. ಇತ್ತೀಚೆಗೆ ಯಂತ್ರಚಾಲಿತ ದೋಣಿಗಳ ಸಂಚಾರ ರೂಢಿಗೆ ಬಂದಿದೆ. ಇದು ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡುಬರುವುದು. ಈ ಜಿಲ್ಲೆಗಳಲ್ಲಿ ಹರಿಯುವ ಗಂಗಾವಳಿ, ಕಾಳಿ, ಶರಾವತಿ, ಹಾಲಾಡಿ, ಚಕ್ರ, ಕೊಲ್ಲೂರು (ಉಡುಪಿ ಜಿಲ್ಲೆ), ಉದ್ಯಾವರ, ನೇತ್ರಾವತಿ ನದಿಗಳು ಮುಖ್ಯ ಒಳನಾಡಿನ ಜಲಸಾರಿಗೆಯನ್ನು ಪೂರೈಸುತ್ತವೆ. ಕೃಷ್ಣಾನದಿಯನ್ನು ದಾಟಲು ಕೆಲವೆಡೆ ದೋಣಿಗಳನ್ನು ಬಳಸಲಾಗುವುದು. ರಸ್ತೆ ಮತ್ತು ಸಂಚಾರ ಸೌಲಭ್ಯದ ಅಭಿವೃದ್ಧಿಯಿಂದಾಗಿ ಜಲ ಸಾರಿಗೆ ವ್ಯವಸ್ಥೆ ಕಡಿಮೆಯಾಗಿದೆ.

**ಬಂದರುಗಳು :** ಹಡಗು ನಿಲ್ಲುವ ಸಮುದ್ರ ತೀರದ ಸ್ಥಳಗಳನ್ನು ಬಂದರುಗಳೆನ್ನುವರು. ಮೀನುಗಾರಿಕೆ, ವ್ಯಾಪಾರ, ಜನರ ಪ್ರಯಾಣ ಮತ್ತು ಸರಕುಗಳ ಸಾಗಾಣಿಕೆಗಳಿಗೆ ಹಡಗುಗಳನ್ನು ಬಳಸುತ್ತಾರೆ. ಕರ್ನಾಟಕದಲ್ಲಿ ಸುಮಾರು 25 ಸಣ್ಣ ಮತ್ತು ದೊಡ್ಡ ಪ್ರಮಾಣದ ಬಂದರುಗಳಿವೆ. 1957 ರಲ್ಲಿ ಬಂದರು ಅಭಿವೃದ್ಧಿ ಇಲಾಖೆಯು ಸ್ಥಾಪಿತಗೊಂಡು ಸೌಲಭ್ಯಗಳ ವಿಸ್ತರಣೆ ಆರಂಭಗೊಂಡಿತು. 'ನವ ಮಂಗಳೂರು' 1974 ರ ಮೇ 4 ರಂದು ಭಾರತದ ಒಂಬತ್ತನೆಯ 'ಪ್ರಮುಖ ಬಂದರು' ಎಂದು ಘೋಷಿಸಲ್ಪಟ್ಟಿತು. ಇದನ್ನು 'ಕರ್ನಾಟಕದ ಹೆಬ್ಬಾಗಿಲು' ಎಂದು ಕರೆಯುವರು. ಈ ಬಂದರಿನಿಂದ ಕಬ್ಬಿಣದ ಅದಿರು, ಕಾಫಿ, ಸಾಂಬಾರ ಪದಾರ್ಥಗಳು, ಗೋಡಂಬಿ, ಶ್ರೀಗಂಧ, ಹೆಂಚು, ಕ್ರೋಮೈಡ್, ಗ್ರಾನೈಟ್ ಶಿಲೆ, ಸಂಸ್ಕರಿಸಿದ ಹಣ್ಣು ಮತ್ತು ಮೀನುಗಳು ರಫ್ತಾಗುತ್ತವೆ. ಪೆಟ್ರೋಲಿಯಂ ಆಮದಾಗುತ್ತದೆ. ಇದರ ಜೊತೆಗೆ ರಾಜ್ಯವು 10 ಚಿಕ್ಕ ಬಂದರುಗಳನ್ನು ಅಭಿವೃದ್ಧಿಪಡಿಸಿದೆ. ಅವುಗಳೆಂದರೆ ಹಳೆಯ ಮಂಗಳೂರು ಬಂದರು, ಮಲ್ಪೆ, ಹಂಗಾರಕಟ್ಟೆ, ಕುಂದಾಪುರ, ಪಡುಬಿದ್ರಿ, ಭಟ್ಕಳ, ಹೊನ್ನಾವರ, ಬೇಲೆಕೇರಿ, ತದ್ರಿ ಮತ್ತು ಕಾರವಾರ. ಇವುಗಳಲ್ಲಿ ಕಾರವಾರ ಬಂದರು ಅತಿ ಸುಂದರವಾದ ಬಂದರು ಎಂದು ಪ್ರಸಿದ್ಧಿಯಾಗಿದೆ. ಇದು ಸರ್ವಋತು ಬಂದರಾಗಿದ್ದು ತನ್ಮೂಲಕ ಕಬ್ಬಿಣದ ಅದಿರು, ಮ್ಯಾಂಗನೀಸ್, ಗ್ರಾನೈಟ್ ಹಾಗೂ ವ್ಯವಸಾಯೋತ್ಪನ್ನಗಳು ರಫ್ತಾಗುತ್ತವೆ.

© KTBS NOT TO BE REPUBLISHED

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1) ಪ್ರತಿಯೊಂದು ಹಳ್ಳಿ-ಪಟ್ಟಣಗಳನ್ನು ................ ಸಾರಿಗೆ ಸಂಪರ್ಕಿಸುತ್ತದೆ.
2) ಕರ್ನಾಟಕದಲ್ಲಿ ಒಟ್ಟು ................ ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತವೆ.
3) ಬೆಂಗಳೂರಿನಲ್ಲಿರುವ ನಗರ ರೈಲನ್ನು ................ ಎನ್ನುತ್ತಾರೆ.
4) ಕರ್ನಾಟಕದ ಹೆಬ್ಬಾಗಿಲು ಎಂದು ................ ಬಂದರನ್ನು ಕರೆಯಲಾಗಿದೆ.
5) ಕರ್ನಾಟಕದ ಕರಾವಳಿಯ ರೈಲುಮಾರ್ಗವನ್ನು ................ ಎಂದು ಕರೆಯುತ್ತಾರೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1) ರಸ್ತೆ ಸಾರಿಗೆಯ ಮಹತ್ವವನ್ನು ತಿಳಿಸಿ.
2) ಕರ್ನಾಟಕದ ರಸ್ತೆಗಳ ವಿಧಗಳನ್ನು ಬರೆಯಿರಿ.
3) ಕರ್ನಾಟಕದ ಪ್ರಮುಖ ರೈಲುಮಾರ್ಗಗಳನ್ನು ಹೆಸರಿಸಿ.
4) ವಾಯು ಸಾರಿಗೆಯ ಅನುಕೂಲಗಳೇನು ?
5) ಕರ್ನಾಟಕದಲ್ಲಿರುವ ಬಂದರುಗಳನ್ನು ಹೆಸರಿಸಿ.

**III. ಹೊಂದಿಸಿ ಬರೆಯಿರಿ.**

| ಅ | | ಆ |
|---|---|---|
| 1) ಸುವರ್ಣ ಚತುಷ್ಕೋನ | ಎ) | ಬಂದರು |
| 2) ಬ್ರಾಡ್‌ಗೇಜ್ | ಬಿ) | ಬೆಂಗಳೂರು |
| 3) ಹೆಚ್.ಎ.ಎಲ್ | ಸಿ) | NH - 4 |
| 4) ಬೇಲಿಕೇರಿ | ಡಿ) | ವಿಮಾನ ನಿಲ್ದಾಣ |
| 5) ನಮ್ಮ ಮೆಟ್ರೋ | ಇ) | ರೈಲು ಮಾರ್ಗ |
| | ಎಫ್) | ಜಲಮಾರ್ಗ |

**IV. ಚಟುವಟಿಕೆ.**

1) ಕರ್ನಾಟಕದಲ್ಲಿ ಹಾದು ಹೋಗುವ ಹೆದ್ದಾರಿಗಳನ್ನು ನಕ್ಷೆಯಲ್ಲಿ ಗುರುತಿಸಿ ಮತ್ತು ಹೆಸರಿಸಿ.

**V. ಯೋಜನೆಗಳು.**

1) ನೀವು ರೈಲು ಪ್ರಯಾಣಿಸಿದ ಅನುಭವಗಳನ್ನು ಕುರಿತು ಬರೆಯಿರಿ.
2) ನಿಮ್ಮ ಸ್ಥಳೀಯ ಸಾರಿಗೆ ವ್ಯವಸ್ಥೆ ಬಗ್ಗೆ ಟಿಪ್ಪಣಿ ಬರೆಯಿರಿ.

*****

@KTBS NOT TO BE REPUBLISHED

S9P1B9

# ಅಧ್ಯಾಯ – 28

# ಕರ್ನಾಟಕದ ಕೈಗಾರಿಕೆಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಕರ್ನಾಟಕದ ಕೈಗಾರಿಕೆಗಳ ಮಹತ್ವ
- ಕರ್ನಾಟಕದ ಪ್ರಮುಖ ಕೈಗಾರಿಕಾವಲಯಗಳು
- ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳ ಹಂಚಿಕೆ ಮತ್ತು ಉತ್ಪಾದನೆ
- ಹತ್ತಿ ಬಟ್ಟೆ, ಸಕ್ಕರೆ, ಸಿಮೆಂಟ್, ಕಾಗದ ಕೈಗಾರಿಕೆಗಳು
- ಬೆಂಗಳೂರು – ಭಾರತದ ಪ್ರಮುಖ ಮಾಹಿತಿ ತಂತ್ರಜ್ಞಾನ ಕೈಗಾರಿಕೆಯ ಕೇಂದ್ರ

ದೇಶದ ಯಾವುದೇ ರಾಜ್ಯದ ತ್ವರಿತವಾದ ಅಭಿವೃದ್ಧಿಯಲ್ಲಿ ಕೈಗಾರಿಕಾಭಿವೃದ್ಧಿ ಮಹತ್ವದ ಪಾತ್ರ ವಹಿಸುತ್ತದೆ. ಇಂತಹ ಉತ್ತಮ ಅವಕಾಶ ನಮ್ಮ ರಾಜ್ಯಕ್ಕಿದೆ. ಅಪಾರ ಖನಿಜ ಸಂಪತ್ತು, ಕಚ್ಚಾ ವಸ್ತುಗಳು, ಸೂಕ್ತ ವಾಯುಗುಣ, ಸಾಕಷ್ಟು ನೀರಿನ ಪೂರೈಕೆ, ಸಾರಿಗೆ ವ್ಯವಸ್ಥೆ, ನುರಿತ ಕಾರ್ಮಿಕರ ಲಭ್ಯತೆ, ವಿಶಾಲ ಮಾರುಕಟ್ಟೆ ಹಾಗೂ ತಂತ್ರಜ್ಞಾನ ಇರುವುದರಿಂದ ಕರ್ನಾಟಕವು ಅನೇಕ ವೈವಿಧ್ಯಮಯ ಕೈಗಾರಿಕೆಗಳಿಗೆ ಹೆಸರುವಾಸಿಯಾಗಿದೆ. ನಮ್ಮ ರಾಜ್ಯವು ಕೃಷಿ ಆಧಾರಿತ ಗುಡಿ ಕೈಗಾರಿಕೆಗಳಿಂದ ಆಧುನಿಕ ಕೈಗಾರಿಕೋದ್ಯಮದೆಡೆಗೆ ದಾಪುಗಾಲು ಹಾಕಿದೆ.

ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಸರ್. ಎಂ. ವಿಶ್ವೇಶ್ವರಯ್ಯನವರ ಕೊಡುಗೆ ಅಪಾರ. 'ಕೈಗಾರಿಕೀಕರಣ ಇಲ್ಲವೆ ವಿನಾಶ' ಎಂಬ ತತ್ವವನ್ನು ಹೊಂದಿದ್ದ ಅವರು ರಾಜ್ಯದ ಅನೇಕ ಕೈಗಾರಿಕೆಗಳಿಗೆ ಬುನಾದಿಯನ್ನು ಹಾಕಿದರು. 1902 ರಂದು ಶಿವನಸಮುದ್ರದಲ್ಲಿ ಜಲ ವಿದ್ಯುಚ್ಛಕ್ತಿ ಉತ್ಪಾದನೆ ಪ್ರಾರಂಭಗೊಂಡ ಮೇಲೆ ವಿವಿಧ ಮೂಲ ಸಾಮಗ್ರಿ, ದಿನೋಪಯೋಗಿ ವಸ್ತುಗಳನ್ನು ತಯಾರಿಸುವ ಉದ್ಯಮಗಳು ಅಸ್ತಿತ್ವಕ್ಕೆ ಬಂದವು. ಅಕ್ಕಿ ಗಿರಣಿ, ಹೆಂಚಿನ ತಯಾರಿಕೆ, ಬೀಡಿ, ಸಿಗರೇಟು, ಕಬ್ಬಿಣ ಮತ್ತು ಹಿತ್ತಾಳೆ ಫೌಂಡ್ರಿಗಳು ಸ್ಥಾಪನೆಯಾದವು. 1923 ರ ನಂತರ ರಾಜ್ಯದಲ್ಲಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ, ಸಾಬೂನು ತಯಾರಿಕೆ, ಹತ್ತಿ ಮತ್ತು ರೇಷ್ಮೆ ಗಿರಣಿ, ಕಾಗದ, ಸಿಮೆಂಟ್, ಬಣ್ಣ, ಸಕ್ಕರೆ, ಶ್ರೀಗಂಧದೆಣ್ಣೆ ಮುಂತಾದ ಆಧುನಿಕ ಕೈಗಾರಿಕೆಗಳು ಸ್ಥಾಪನೆಗೊಂಡವು. ಸ್ವಾತಂತ್ರ್ಯ ಪೂರ್ವದಲ್ಲೇ ಅಂದಿನ ಮೈಸೂರು ಪ್ರಾಂತ್ಯ ಕೈಗಾರಿಕೆಯಲ್ಲಿ ಮಾದರಿ ರಾಜ್ಯವಾಗಿತ್ತು. ಇದಕ್ಕೆ ಆರಂಭದಲ್ಲಿ ಬ್ರಿಟಿಷರು ಮತ್ತು ಅಂದಿನ ಆಳರಸರ ಆಸಕ್ತಿಯೂ ಕಾರಣ.

ಸ್ವಾತಂತ್ರ್ಯಾ ನಂತರ ಕೇಂದ್ರ ಸರ್ಕಾರದ ಕೈಗಾರಿಕಾ ನೀತಿ ರಾಜ್ಯದ ಕೈಗಾರಿಕಾ ಪ್ರಗತಿಗೆ ಪೂರಕವಾಯಿತು. ಇದರ ಫಲವಾಗಿ ಅನೇಕ ಕೈಗಾರಿಕೆಗಳು ಸ್ಥಾಪನೆಗೊಂಡವು. ಅವುಗಳೆಂದರೆ ; ವಿಮಾನ ತಯಾರಿಕೆ, ಎಂಜಿನೀಯರಿಂಗ್, ಮೆಷಿನ್ ಟೂಲ್ಸ್, ಗಡಿಯಾರಗಳು, ಕಬ್ಬಿಣ ಮತ್ತು ಉಕ್ಕು, ಅಲ್ಯೂಮಿನಿಯಂ, ಮಾಹಿತಿ ತಂತ್ರಜ್ಞಾನ, ವಿದ್ಯುನ್ಮಾನ, ಜೈವಿಕ ತಂತ್ರಜ್ಞಾನ ಉದ್ಯಮ ಇತ್ಯಾದಿ.

NOT TO BE REPUBLISHED

**ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ**

ಕರ್ನಾಟಕವು ದಕ್ಷಿಣ ಭಾರತದಲ್ಲೇ ಮೊಟ್ಟ ಮೊದಲ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ಸ್ಥಾಪಿಸಿದ ಕೀರ್ತಿಗೆ ಪಾತ್ರವಾಗಿದೆ. ಸರ್ ಎಂ. ವಿಶ್ವೇಶ್ವರಯ್ಯನವರ ದೂರದೃಷ್ಟಿಯಿಂದ ಬಾಬಾಬುಡನ್‌ಗಿರಿ ಬೆಟ್ಟಗಳಲ್ಲಿ (ಇನಾಮ್ ದತ್ತಾತ್ರೇಯ ಪೀಠ) ಸಿಗುವ ಉತ್ತಮ ಹಾಗೂ ಅಪಾರ ಕಬ್ಬಿಣದ ಅದಿರನ್ನು ಬಳಸಿಕೊಳ್ಳಲು ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ 1923 ರಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಸ್ಥಾಪಿಸಲಾಯಿತು. ಇದನ್ನು ಮೈಸೂರು ಐರನ್ ಅಂಡ್ ಸ್ಟೀಲ್ ಇಂಡಸ್ಟ್ರೀಸ್ ಲಿಮಿಟೆಡ್ (MISL) ಎಂದು ಕರೆಯಲಾಯಿತು. ಅನಂತರ 1989 ರಲ್ಲಿ ಭಾರತದ ಉಕ್ಕು ಪ್ರಾಧಿಕಾರಕ್ಕೆ (SAIL) ವಹಿಸಿಕೊಡಲಾಯಿತು. ಇಂದು ಇದಕ್ಕೆ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯೆಂದು (VISL) ಹೆಸರಿಡಲಾಗಿದೆ. ಈ ಕಾರ್ಖಾನೆಗೆ ಅಗತ್ಯವಾದ ಕಬ್ಬಿಣದ ಅದಿರು ಕೆಮ್ಮಣ್ಣುಗುಂಡಿಯಿಂದ, ಬಂಡಿಗುಡ್ಡದಿಂದ ಸುಣ್ಣ, ಭದ್ರಾ ನದಿಯಿಂದ ನೀರು ಹಾಗೂ ಸಂಡೂರಿನಿಂದ ಮ್ಯಾಂಗನೀಸ್ ಪೂರೈಕೆಯಾಗುತ್ತದೆ. ಆರಂಭದಲ್ಲಿ ಊದುಕುಲುಮೆಗೆ ಉರುವಲನ್ನು ಉಪಯೋಗಿಸಲಾಗುತ್ತಿತ್ತು. ಶರಾವತಿ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರ ಪ್ರಾರಂಭವಾದ ಮೇಲೆ ಜಲ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳಲಾಗಿದೆ. ಈಗ ವಿಶೇಷ ರೀತಿಯ ಉಕ್ಕು, ಬೀಡು ಕಬ್ಬಿಣವನ್ನು ಉತ್ಪಾದಿಸಲಾಗುತ್ತಿದೆ. ಕರ್ನಾಟಕದ ಮತ್ತೊಂದು ಪ್ರಮುಖ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಖಾಸಗಿ ವಲಯದ ಜಿಂದಾಲ್ ವಿಜಯನಗರ ಉಕ್ಕು ಲಿಮಿಟೆಡ್. ಇದು ಬಳ್ಳಾರಿ ಜಿಲ್ಲೆಯ ತೋರಣಗಲ್ ಎಂಬಲ್ಲಿ 2001 ರಲ್ಲಿ ಅತ್ಯಾಧುನಿಕ ಕೊರೆಕ್ಸ್ (Corex) ತಂತ್ರಜ್ಞಾನವನ್ನು ಉಪಯೋಗಿಸಿ ಸ್ಥಾಪಿಸಲಾಗಿದೆ. ಇದು ಕಬ್ಬಿಣ ಮತ್ತು ಉಕ್ಕನ್ನು ಉತ್ಪಾದಿಸುತ್ತಿದೆ.

**ಹತ್ತಿ ಬಟ್ಟೆ ಕೈಗಾರಿಕೆ**

ಹತ್ತಿ ಬಟ್ಟೆ ಕೈಗಾರಿಕೆಯು ಮೊದಲಿಗೆ ಆರಂಭಗೊಂಡ ಆಧುನಿಕ ಕೈಗಾರಿಕೆಗಳಲ್ಲಿ ಒಂದಾಗಿದೆ. ಇದು ಕೃಷಿಯಾಧಾರಿತ ಕೈಗಾರಿಕೆ. ಪುರಾತನ ಕಾಲದಿಂದಲೂ ಕೈಮಗ್ಗಗಳಿಂದ ಬಟ್ಟೆ ನೇಯ್ಗೆ ಕರ್ನಾಟಕದಲ್ಲಿ ರೂಢಿಯಲ್ಲಿತ್ತು. ಈಗಲೂ ಕೈಮಗ್ಗದಿಂದ ಬಟ್ಟೆ ನೇಯುವುದು ರೂಢಿಯಲ್ಲಿದೆ. ಕೃತಕ ನಾರಿನ ಬಟ್ಟೆ, ವಿದೇಶಿ ಹತ್ತಿ ಬಟ್ಟೆಯ ಪೈಪೋಟಿಯ ನಡುವೆಯೂ ಹತ್ತಿ ಬಟ್ಟೆಗೆ ಈಗಲೂ ರಾಜ್ಯದಲ್ಲಿ ಅಪಾರ ಬೇಡಿಕೆಯಿದೆ.

ಆಧುನಿಕ ಹತ್ತಿ ಗಿರಣಿಗಳು 19 ನೇ ಶತಮಾನದ ಕೊನೆಯ ಭಾಗದಲ್ಲಿ ಆರಂಭವಾಗತೊಡಗಿದ್ದವು. ಹತ್ತಿಯಿಂದ ಬೀಜ ಬೇರ್ಪಡಿಸುವ (ಜಿನ್ನಿಂಗ್ ಗಿರಣಿ), ಹತ್ತಿ ದಾರ ತೆಗೆಯುವ (ಸ್ಪಿನ್ನಿಂಗ್ ಗಿರಣಿ) ಉತ್ತರದ ಜಿಲ್ಲೆಗಳಲ್ಲಿ ಆರಂಭಗೊಂಡವು. ಮೊಟ್ಟ ಮೊದಲು 1884 ರಲ್ಲಿ ಎಂ.ಎಸ್.ಕೆ. ಗಿರಣಿ ಕಲಬುರಗಿ(ಗುಲ್ಬರ್ಗ)ಯಲ್ಲಿ ಸ್ಥಾಪನೆಗೊಂಡಿತು. ಅನಂತರ ಹುಬ್ಬಳ್ಳಿಯಲ್ಲಿ ಹತ್ತಿ ಬಟ್ಟೆ ಕೈಗಾರಿಕೆಗಳು ಪ್ರಾರಂಭಗೊಂಡವು. 1900 ರ ನಂತರ ದೊಡ್ಡ ಹತ್ತಿ ಬಟ್ಟೆ ಗಿರಣಿಗಳು ಸ್ಥಾಪನೆಗೊಂಡವು. ಅವುಗಳಲ್ಲಿ ಬೆಂಗಳೂರಿನ ಬಿನ್ನಿ ಮಿಲ್, ಮಿನರ್ವ ಮಿಲ್, ಮೈಸೂರಿನ ಕೆ.ಆರ್.ಮಿಲ್, ದಾವಣಗೆರೆಯ ಕಾಟನ್ ಮಿಲ್ ಮುಂತಾದುವು ಸ್ವಾತಂತ್ರ್ಯ ಪೂರ್ವದಲ್ಲೇ ಸ್ಥಾಪನೆಗೊಂಡಿದ್ದವು.

ಅನಂತರ ಹತ್ತಿ ಬೆಳೆಯುವ ಉತ್ತರದ ಬಯಲು ಪ್ರದೇಶದಲ್ಲಿ ಅಭಿವೃದ್ಧಿಗೊಂಡವು. ದಾವಣಗೆರೆಯು ರಾಜ್ಯದ ಅತಿ ಮುಖ್ಯ ಹತ್ತಿಬಟ್ಟೆ ಕೈಗಾರಿಕಾ ಕೇಂದ್ರವಾಯಿತು. ಇದನ್ನು 'ಕರ್ನಾಟಕದ ಮ್ಯಾಂಚೆಸ್ಟರ್' ಎಂದು ಕರೆಯುತ್ತಾರೆ. ಹುಬ್ಬಳ್ಳಿ, ಇಳಕಲ್, ಗುಳೇದಗುಡ್ಡ, ರಬಕವಿ, ಬಾಗಲಕೋಟೆ, ಮೊಣಕಾಲ್ಮೂರು, ಗದಗ–ಬೆಟಗೇರಿ, ಬಾದಾಮಿ, ಬೆಳಗಾವಿ, ನರಗುಂದ, ಗೋಕಾಕ್, ಬಳ್ಳಾರಿ, ಹುಣಸೂರು, ನಂಜನಗೂಡು, ಪಿರಿಯಾಪಟ್ಟಣ, ಚಾಮರಾಜನಗರಗಳಲ್ಲೂ ಹತ್ತಿ ಬಟ್ಟೆ ನೂಲುವ, ನೇಯುವ ಗಿರಣಿಗಳಿವೆ. ಪ್ರಸ್ತುತ ರಾಜ್ಯದಲ್ಲಿ 44 ಹತ್ತಿ ಬಟ್ಟೆ ಗಿರಣಿಗಳಿವೆ. ವಾರ್ಷಿಕ ಸರಾಸರಿ 5.1 ದಶಲಕ್ಷ ಮೀಟರ್ ಹತ್ತಿ ಬಟ್ಟೆಯನ್ನು ಉತ್ಪಾದಿಸಲಾಗುತ್ತಿದೆ.


©KTBS NOT TO BE REPUBLISHED

ಇತ್ತೀಚೆಗೆ ಕೆಲವು ಹತ್ತಿ ಗಿರಣಿಗಳು ಮುಚ್ಚಲ್ಪಟ್ಟಿವೆ. ಇದಕ್ಕೆ ಕಚ್ಚಾ ಹತ್ತಿಯ ಕೊರತೆ, ಹಳೆಯ ಯಂತ್ರಗಳು, ವಿದ್ಯುಚ್ಛಕ್ತಿಯ ಕೊರತೆ, ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ, ಕೃತಕ ನಾರಿನ ಬಟ್ಟೆಯ ಪೈಪೋಟಿ ಇತ್ಯಾದಿ ಕಾರಣಗಳಾಗಿರುತ್ತವೆ.

ಕರ್ನಾಟಕದಲ್ಲಿ ಜವಳಿ ಉದ್ಯಮದ ಪರಿಸ್ಥಿತಿಯನ್ನು ಸುಧಾರಿಸಲು 'ಸುವರ್ಣ ಜವಳಿ ನೀತಿ 2008–13' ಎಂಬ ಯೋಜನೆಯನ್ನು ಸರ್ಕಾರ ಪ್ರಾರಂಭಿಸಿ, 11 ಜಿಲ್ಲೆಗಳಲ್ಲಿ ಬಟ್ಟೆಯ ಸಿದ್ಧ ಉಡುಪಿನ ಪಾರ್ಕ್‌ಗಳನ್ನು ಸ್ಥಾಪಿಸಿದೆ. ಇವುಗಳ ಉತ್ಪಾದನೆಯನ್ನು ವಿದೇಶಗಳಿಗೆ ರಫ್ತು ಮಾಡುವುದು ಇದರ ಉದ್ದೇಶವಾಗಿದೆ. ಈಗಾಗಲೇ ಬಟ್ಟೆ ರಫ್ತಿನಲ್ಲಿ ಕರ್ನಾಟಕವು ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ದೊಡ್ಡಬಳ್ಳಾಪುರ, ಆನೇಕಲ್, ಬೆಳಗಾವಿ, ಮೈಸೂರು, ರಾಮನಗರಗಳಲ್ಲಿ ಇಂತಹ ಪಾರ್ಕ್‌ಗಳಿವೆ.

### ಸಕ್ಕರೆ ಕೈಗಾರಿಕೆ

ಸಕ್ಕರೆ ಕೈಗಾರಿಕೆಯು ಕರ್ನಾಟಕದ ಪ್ರಮುಖ ಬೃಹತ್ ಪ್ರಮಾಣದ ಉದ್ಯಮಗಳಲ್ಲಿ ಒಂದಾಗಿದೆ. ಇದೂ ಸಹ ಕೃಷಿ ಆಧಾರಿತವಾದುದು. ಇದರ ಪ್ರಗತಿಗೆ ಅಗತ್ಯವಾದ ಎಲ್ಲಾ ಸ್ಥಾನೀಕರಣ ಅಂಶಗಳು ರಾಜ್ಯದಲ್ಲಿ ಪೂರಕವಾಗಿವೆ. ಉದಾ: ಕಬ್ಬು ಉತ್ಪಾದನೆ, ಉತ್ತಮ ಹವಾಮಾನ, ವಿದ್ಯುತ್ ಸರಬರಾಜು, ಸ್ಥಳೀಯ ಮಾರುಕಟ್ಟೆ, ಸಾರಿಗೆ ವ್ಯವಸ್ಥೆ ಇತ್ಯಾದಿ. ಇದು ಕರ್ನಾಟಕದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲೇ ಶ್ರೀರಂಗಪಟ್ಟಣದ ಪಾಲಳ್ಳಿ (ಅಷ್ಟಗ್ರಾಮ) ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಸಕ್ಕರೆ ತಯಾರಿಸುತ್ತಿದ್ದನ್ನು ಸರ್ ಫ್ರಾನ್ಸಿಸ್ ಬುಕಾನನ್ ಉಲ್ಲೇಖಿಸಿರುವನು. ಅವು 1847 ರಲ್ಲಿಯೇ ಸಕ್ಕರೆಯನ್ನು ಉತ್ಪಾದಿಸುತ್ತಿದ್ದು, ಲಂಡನ್ನಿನ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ್ದುದು ದಾಖಲೆಗಳಿಂದ ತಿಳಿದುಬಂದಿದೆ. ಮೊಟ್ಟಮೊದಲ ಆಧುನಿಕ ಸಕ್ಕರೆ ಕೈಗಾರಿಕೆ 1933 ರಲ್ಲಿ 'ಮೈಸೂರು ಸಕ್ಕರೆ ಕಂಪೆನಿ' (Mysugar) ಮಂಡ್ಯದಲ್ಲಿ ಪ್ರಾರಂಭವಾಯಿತು. 1951 ರವರೆಗೂ ಒಂದೇ ಕಾರ್ಖಾನೆಯಿತ್ತು. ಇಂದು ರಾಜ್ಯದಲ್ಲಿ ಒಟ್ಟು 47 ಸಕ್ಕರೆ ಕಾರ್ಖಾನೆಗಳಿವೆ. ವಾರ್ಷಿಕ ಉತ್ಪಾದನೆ 339 ಲಕ್ಷ ಟನ್ನುಗಳಷ್ಟಿದ್ದು ಭಾರತದಲ್ಲೇ ಮೂರನೇ ಸ್ಥಾನದಲ್ಲಿದೆ.




**ಹಂಚಿಕೆ :** ಕರ್ನಾಟಕದ ಸಕ್ಕರೆ ಕೈಗಾರಿಕೆಯು ವಿಶೇಷವಾಗಿ ಕಬ್ಬು ಬೆಳೆಯುವ ಪ್ರದೇಶಗಳಲ್ಲೇ ಹಂಚಿಕೆಯಾಗಿದೆ. ಕಾವೇರಿ, ಕೃಷ್ಣ ಮತ್ತು ತುಂಗಭದ್ರ ನದಿಗಳ ಜಲಾನಯನ ಪ್ರದೇಶದ ಜಿಲ್ಲೆಗಳಲ್ಲಿ ಕೇಂದ್ರೀಕೃತಗೊಂಡಿವೆ. ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹೆಚ್ಚು

©KTBS NOT TO BE REPUBLISHED

ಸಕ್ಕರೆ ಕಾರ್ಖಾನೆಗಳಿವೆ. ತರುವಾಯ ಮಂಡ್ಯ, ಮೈಸೂರು, ಬೀದರ್, ವಿಜಯಾಪುರ, ಕಲಬುರಗಿ, ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳು ಪ್ರಮುಖವಾದವು.

ಕಬ್ಬಿನ ಸಿಪ್ಪೆ ಮತ್ತು ಕಾಕಂಬಿಗಳು ಈ ಉದ್ಯಮದಿಂದ ದೊರೆಯುವ ಉಪ ಪದಾರ್ಥಗಳು. ಕಬ್ಬಿನ ಸಿಪ್ಪೆಯಿಂದ ಕಾಗದದ ತಯಾರಿಕೆ ಹಾಗೂ ಇಂಧನವನ್ನಾಗಿ ಬಳಸುವರು. ಕಾಕಂಬಿಯಿಂದ ಮದ್ಯಸಾರವನ್ನು ಉತ್ಪಾದಿಸುವರು.

**ನಿಮಗೆ ತಿಳಿದಿರಲಿ :**

ಕರ್ನಾಟಕದ ಸಕ್ಕರೆ ನಗರ – ಮಂಡ್ಯ

ಸಕ್ಕರೆಯ ಜಿಲ್ಲೆ – ಬೆಳಗಾವಿ

**ಕಾಗದ ಕೈಗಾರಿಕೆ**

ಕಾಗದವು ಆಧುನಿಕ ಜಗತ್ತಿನಲ್ಲಿ ಮಹತ್ವದ ವಸ್ತುವಾಗಿದೆ. ಶಿಕ್ಷಣ, ಮುದ್ರಣ, ವೃತ್ತಪತ್ರಿಕೆ ಹಾಗೂ ಸಂಸ್ಕೃತಿಯ ವಿಕಾಸಕ್ಕೆ ಅಗತ್ಯವಾದ ವಸ್ತುವಾಗಿದೆ. ಕಾಗದ ಕೈಗಾರಿಕೆಯು ಅರಣ್ಯಾಧಾರಿತವಾದುದು. ಈ ಕೈಗಾರಿಕೆಗೆ ಬಿದಿರು, ಮರದ ತಿರುಳು, ಹುಲ್ಲು, ಕಬ್ಬಿನ ಸಿಪ್ಪೆ, ಚಿಂದಿ ಬಟ್ಟೆ, ರದ್ದಿ ಕಾಗದಗಳನ್ನು ಕಚ್ಚಾ ಪದಾರ್ಥಗಳಾಗಿ ಬಳಸಲಾಗುವುದು. ಮೊಟ್ಟಮೊದಲು ಕರ್ನಾಟಕದಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ದಟ್ಟವಾದ ಅರಣ್ಯವನ್ನು ಗಮನದಲ್ಲಿಟ್ಟುಕೊಂಡು ಭದ್ರಾವತಿಯಲ್ಲಿ 'ಮೈಸೂರು ಪೇಪರ್ ಮಿಲ್ ಲಿಮಿಟೆಡ್' ಕಾರ್ಖಾನೆಯು 1936 ರಲ್ಲಿ ಪ್ರಾರಂಭಗೊಂಡಿತು. ಅನಂತರ 'ವೆಸ್ಟ್ ಕೋಸ್ಟ್ ಪೇಪರ್ ಮಿಲ್' ಖಾಸಗಿ ಕಂಪೆನಿಯಿಂದ ದಾಂಡೇಲಿಯಲ್ಲಿ ಸ್ಥಾಪನೆಗೊಂಡಿತು. ಸಮೀಪದ ಅರಣ್ಯಗಳ ಬಿದಿರು, ನೀಲಗಿರಿ ಮರದ ತಿರುಳು, ಕಾಳಿ ನದಿ ನೀರು, ಜೋಗ್‌ನಿಂದ ವಿದ್ಯುತ್ ಪೂರೈಕೆಯಾಗುತ್ತವೆ. ನಂಜನಗೂಡು, ಕೃಷ್ಣರಾಜನಗರ, ಸತ್ಯಗಾಲ, ಮುಂಡಗೋಡ, ಮುನಿರಾಬಾದ್, ಯಡಿಯೂರು ಮತ್ತು ಬೆಂಗಳೂರಿನಲ್ಲಿ ರಾಜ್ಯದ ಇತರ ಕಾಗದ ತಯಾರಿಕಾ ಘಟಕಗಳಿವೆ. ದೇಶದ ಕಾಗದ ಉತ್ಪಾದಿಸುವ ರಾಜ್ಯಗಳಲ್ಲಿ ಕರ್ನಾಟಕವು ನಾಲ್ಕನೆಯ ಸ್ಥಾನದಲ್ಲಿದೆ. ಕರ್ನಾಟಕವು ವರ್ಷಕ್ಕೆ 3.6 ಲಕ್ಷ ಟನ್ನು ಕಾಗದ ವಸ್ತುಗಳನ್ನು ಉತ್ಪಾದಿಸುತ್ತದೆ.

**ಚಟುವಟಿಕೆ**

ನಿಮಗೆ ಹತ್ತಿರವಿರುವ ಕೈಗಾರಿಕಾ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿ ಬಳಸುವ ಕಚ್ಚಾ ಸಾಮಗ್ರಿಯನ್ನು ಹೇಗೆ ಸಂಗ್ರಹಿಸುತ್ತಾರೆ ಎಂಬುದನ್ನು ತಿಳಿಯಿರಿ.

**ಸಿಮೆಂಟ್ ಕೈಗಾರಿಕೆ**

ಕರ್ನಾಟಕದಲ್ಲಿ ನಗರೀಕರಣ ಮತ್ತು ಕೈಗಾರಿಕೀಕರಣ ವಿಸ್ತರಣೆ ಹೆಚ್ಚಾಗಿದ್ದರಿಂದ ನಿರ್ಮಾಣ ಕಾರ್ಯಗಳಿಗೆ ಸಿಮೆಂಟ್‌ಗೆ ಬೇಡಿಕೆಯೂ ಹೆಚ್ಚಾಗಿದೆ. ಮನೆ ಕಟ್ಟಲು, ದೊಡ್ಡ ಸಾರ್ವಜನಿಕ ಕಟ್ಟಡಗಳ ನಿರ್ಮಾಣ, ರಸ್ತೆ, ಸೇತುವೆ, ಅಣೆಕಟ್ಟೆ ಮೊದಲಾದವುಗಳ ನಿರ್ಮಾಣಕ್ಕೆ ಸಿಮೆಂಟ್ ಬೇಕು.

ಸಿಮೆಂಟ್ ಕೈಗಾರಿಕೆಯ ಸ್ಥಾಪನೆಗೆ ಅಗತ್ಯವಾದ ಅಪಾರವಾದ ಸುಣ್ಣಕಲ್ಲು ರಾಜ್ಯದಲ್ಲಿ ದೊರೆಯುತ್ತದೆ. ಜೊತೆಗೆ ಜಿಪ್ಸಂ ಮತ್ತು ಬಾಕ್ಸೈಟ್‌ಗಳೂ ದೊರೆಯುತ್ತವೆ. ಕಲ್ಲಿದ್ದಲು ಮಾತ್ರ ನೆರೆಯ ರಾಜ್ಯಗಳಿಂದ ಆಮದು ಮಾಡಿಕೊಳ್ಳಬೇಕಾಗಿದೆ. ನೀರು, ಮರಳು, ಸಾರಿಗೆ, ವಿದ್ಯುಚ್ಛಕ್ತಿ, ಜೇಡಿಮಣ್ಣು, ವಿಶಾಲವಾದ ಮಾರುಕಟ್ಟೆ ಸೌಲಭ್ಯಗಳೂ ಸಹ ಸಿಮೆಂಟ್ ಕೈಗಾರಿಕಾಭಿವೃದ್ಧಿಗೆ ಸಹಾಯಕವಾಗಿವೆ.

ರಾಜ್ಯದ ಮೊದಲ ಸಿಮೆಂಟ್ ಕಾರ್ಖಾನೆಯು 1939 ರಲ್ಲಿ ಭದ್ರಾವತಿಯಲ್ಲಿ ಸ್ಥಾಪಿತವಾಯಿತು. ಅನಂತರ ಬಾಗಲಕೋಟೆ, ತುಮಕೂರು ಜಿಲ್ಲೆಯ ಅಮ್ಮಸಂದ್ರ, ಕಲಬುರಗಿ ಜಿಲ್ಲೆಯ ಶಹಾಬಾದ್‌ಗಳಲ್ಲಿ ಸ್ಥಾಪಿಸಲ್ಪಟ್ಟವು. ಇತರೆ ಸಿಮೆಂಟ್ ಕೈಗಾರಿಕೆ ಕೇಂದ್ರಗಳೆಂದರೆ ; ವಾಡಿ, ಲೋಕಾಪುರ, ಇಟ್ಟಿಗೆಹಳ್ಳಿ, ಮಡಕೆರೆ, ಕಂಚಿಪುರ, ಕಲದಗಿ, ಕುರಕುಂಟ, ಸೇಡಂ ಮತ್ತು ಚಿತ್ತಾಪುರ. ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ. 8 ಭಾಗದಷ್ಟು ಕರ್ನಾಟಕ ಉತ್ಪಾದಿಸುತ್ತದೆ. ರಾಜ್ಯಕ್ಕೆ ಈಗ ಸುಮಾರು 121 ಲಕ್ಷ ಟನ್ನುಗಳಷ್ಟು ವಾರ್ಷಿಕ ಸಿಮೆಂಟ್ ಉತ್ಪಾದಿಸುವ ಸಾಮರ್ಥ್ಯವಿದೆ.

© KTBS NOT TO BE REPUBLISHED

**ಮಾಹಿತಿ ತಂತ್ರಜ್ಞಾನ ಉದ್ಯಮಗಳು**

ಕರ್ನಾಟಕವು ಭಾರತದ ಪ್ರಮುಖ ಜ್ಞಾನ ಮತ್ತು ತಾಂತ್ರಿಕತೆಯ ರಾಜ್ಯವಾಗಿದ್ದು, ಇಲ್ಲಿ ಮಾಹಿತಿ ತಂತ್ರಜ್ಞಾನ ಉದ್ಯಮಗಳು ಹೆಚ್ಚು ಅಭಿವೃದ್ಧಿಗೊಂಡಿವೆ. ಅನೇಕ ಎಂಜಿನೀಯರಿಂಗ್ ಕಾಲೇಜುಗಳು, ಸಂಶೋಧನಾ ಕೇಂದ್ರಗಳು, ಕಂಪ್ಯೂಟರ್ ಆಧಾರಿತ ತಂತ್ರಜ್ಞಾನದ ಕೋರ್ಸ್‌ಗಳಿಗೆ ಹೆಚ್ಚು ಒತ್ತು ನೀಡಿರುವುದರಿಂದ ಪರಿಣತಿ ಹೊಂದಿರುವ ಅಪಾರ ಮಾನವ ಶಕ್ತಿಯನ್ನು ಹೊಂದಿದೆ. ಇದರಿಂದ ಅನೇಕ ಸಾಫ್ಟ್‌ವೇರ್ ಉದ್ಯಮಗಳು ಸ್ಥಾಪನೆಗೊಂಡು ಇಂದು ಕರ್ನಾಟಕವು ಭಾರತದಲ್ಲೇ ಅತ್ಯುನ್ನತ ಸ್ಥಾನದಲ್ಲಿದೆ.

**ಚಟುವಟಿಕೆ**

ನಿಮ್ಮ ಜಿಲ್ಲೆಯಲ್ಲಿರುವ ವಿವಿಧ ಕೈಗಾರಿಕಾ ಘಟಕಗಳ ಪಟ್ಟಿ ತಯಾರಿಸಿ. ಸಮೀಪದ ಕೈಗಾರಿಕಾ ಘಟಕವನ್ನು ಭೇಟಿ ನೀಡಿ ಉತ್ಪಾದನೆಯ ವಸ್ತುವನ್ನು ತಿಳಿಯಿರಿ.

**ಬೆಂಗಳೂರು ; ಭಾರತದ ಪ್ರಮುಖ ಮಾಹಿತಿ ತಂತ್ರಜ್ಞಾನ ಕೇಂದ್ರ**

ಬೃಹತ್ ಬೆಂಗಳೂರು ನಗರವು ಭಾರತದ 'ಸಿಲಿಕಾನ್ ಕಣಿವೆ' ಎಂದೇ ಪ್ರಸಿದ್ಧವಾಗಿದೆ. ಸಾಫ್ಟ್‌ವೇರ್ (ತಂತ್ರಾಂಶ) ಅಥವಾ ಕಂಪ್ಯೂಟರ್ ಪ್ರೋಗ್ರಾಂಗಳಿಗೆ ಉಪಯೋಗಿಸುವ ಸಾಮಾಗ್ರಿಗಳ ಉತ್ಪಾದನೆ ಹಾಗೂ ರಫ್ತು ಮಾಡುವುದರಲ್ಲಿ ಮೊದಲ ಸ್ಥಾನದಲ್ಲಿದೆ. ಇದು ಪ್ರಪಂಚದ ಹತ್ತು ಪ್ರಮುಖ ಉನ್ನತ ತಂತ್ರಜ್ಞಾನದ (ಹೈಟೆಕ್) ನಗರಗಳಲ್ಲಿ ಒಂದಾಗಿದೆ. ಇದರಿಂದ ಸಮೀಪದ ಇತರ ನಗರಗಳಲ್ಲೂ ಸಾಫ್ಟ್‌ವೇರ್ ಉದ್ಯಮ ವ್ಯಾಪಿಸಿದೆ. ಈ ನಗರವೊಂದರಲ್ಲೇ 1200 ಐ.ಟಿ. ಬಿ.ಟಿ. ಕೈಗಾರಿಕೆಗಳು ಇದ್ದು, ಸುಮಾರು 4 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ಕಲ್ಪಿಸಿವೆ. ಇಲ್ಲಿ ಪ್ರಪಂಚದ ಹಲವು ಪ್ರಸಿದ್ಧ ಕಂಪೆನಿಗಳು ತಮ್ಮ ಶಾಖೆಗಳನ್ನು ಸ್ಥಾಪಿಸಿವೆ. ಇದಕ್ಕೆ ಕಾರಣ ಉತ್ತಮ ಹವಾಮಾನ, ವಿದ್ಯುತ್ ಪೂರೈಕೆ, ತಾಂತ್ರಿಕ ಪರಿಣಿತರು, ಆರ್ಥಿಕ ನೆರವು, ವಿಶಾಲವಾದ ಮಾರುಕಟ್ಟೆ ಹಾಗೂ ಮೂಲ ಸೌಕರ್ಯಗಳಿರುವುದರಿಂದ ಬೃಹತ್ ಬೆಂಗಳೂರು ಭಾರತದ ಪ್ರತಿಷ್ಠಿತ ಮಾಹಿತಿ ತಂತ್ರಜ್ಞಾನ ಕೇಂದ್ರವಾಗಿ ಹೊರಹೊಮ್ಮಿದೆ.

ಬೆಂಗಳೂರಿನಲ್ಲಿ ಇನ್ಫೋಸಿಸ್, ವಿಪ್ರೋ ಮೊದಲಾದ ಪ್ರತಿಷ್ಠಿತ ಕಂಪೆನಿಗಳಿವೆ. ಅವುಗಳ ಶಾಖೆ ರಾಜ್ಯದ ಇತರ ಕೆಲವು ನಗರ ಕೇಂದ್ರಗಳಲ್ಲೂ ಕಂಡುಬರುತ್ತವೆ. ಉದಾ : ಮೈಸೂರು, ಹುಬ್ಬಳ್ಳಿ, ಕಲಬುರಗಿ, ಶಿವಮೊಗ್ಗ, ತುಮಕೂರು, ಮಂಗಳೂರು ಮುಂತಾದುವು. ಮಾನವ ಸಂಪನ್ಮೂಲದ ಮಾಹಿತಿ, ನೇಮಕಾತಿ, ತರಬೇತಿ, ಪಠ್ಯಕ್ರಮ ಮುಂತಾದುವುಗಳನ್ನು ತಿಳಿಸುವುದಕ್ಕೆ ಈ ಉದ್ಯಮ ಹೆಚ್ಚು ಸೂಕ್ತ.

**ಕರ್ನಾಟಕದ ಕೈಗಾರಿಕಾ ವಲಯಗಳು :** ರಾಜ್ಯದಲ್ಲಿ ಕೈಗಾರಿಕೆಗಳು ವ್ಯಾಪಿಸಿರುವ ಆಧಾರದಲ್ಲಿ ಕರ್ನಾಟಕವನ್ನು ಐದು ಕೈಗಾರಿಕಾ ವಲಯಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ :

1) ಬೆಂಗಳೂರು – ಕೋಲಾರ – ತುಮಕೂರು ಕೈಗಾರಿಕಾ ವಲಯ – ಇದು ಅತಿ ಹೆಚ್ಚು ಕೈಗಾರಿಕೆಗಳನ್ನು ಹೊಂದಿರುವ ಪ್ರದೇಶವಾಗಿದೆ.
2) ಬೆಳಗಾವಿ – ಧಾರವಾಡ ವಲಯ.
3) ದಕ್ಷಿಣ ಕನ್ನಡ – ಉಡುಪಿ ಜಿಲ್ಲೆ.
4) ಬಳ್ಳಾರಿ – ರಾಯಚೂರು – ಕೊಪ್ಪಳ ಜಿಲ್ಲಾ ಕೈಗಾರಿಕಾ ವಲಯ.
5) ಮೈಸೂರು – ಮಂಡ್ಯ ಕೈಗಾರಿಕಾ ವಲಯ.

NOT TO BE REPUBLISHED ©KTBS

# ಅಭ್ಯಾಸಗಳು

**I. ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿರಿ.**

1) ಕರ್ನಾಟಕದ ಮೊಟ್ಟಮೊದಲ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಸ್ಥಾಪನೆಗೊಂಡ ಸ್ಥಳ ............... .

2) ಕರ್ನಾಟಕದ ಮ್ಯಾಂಚೆಸ್ಟರ್ ................ .

3) ಕಬ್ಬಿನಿಂದ ................ ನ್ನು ಉತ್ಪಾದಿಸುತ್ತಾರೆ.

4) ಅಮ್ಮಸಂದ್ರದಲ್ಲಿ ................ ಕೈಗಾರಿಕೆಯಿದೆ.

5) 'ಸಿಲಿಕಾನ್ ಕಣಿವೆ' ಎಂದು ................ ನಗರವನ್ನು ಕರೆಯುತ್ತಾರೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1) ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆಯನ್ನು ಕುರಿತು ಬರೆಯಿರಿ.

2) ಕರ್ನಾಟಕದಲ್ಲಿನ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಕುರಿತು ವಿವರಿಸಿ.

3) ಹತ್ತಿ ಬಟ್ಟೆ ಕೈಗಾರಿಕೆಗಳ ಹಂಚಿಕೆಯನ್ನು ತಿಳಿಸಿ.

4) ಸಕ್ಕರೆ ಕೈಗಾರಿಕೆಗಳು ಸ್ಥಾಪಿಸಲು ಬೇಕಾಗುವ ಅಂಶಗಳನ್ನು ತಿಳಿಸಿ.

5) ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು ಕೇಂದ್ರೀಕೃತವಾಗಲು ಕಾರಣ ತಿಳಿಸಿ.

**III. ಹೊಂದಿಸಿ ಬರೆಯಿರಿ.**

| | ಅ | ಆ |
|---|---|---|
| 1) | ದಾಂಡೇಲಿ | ಎ) ಸಿಮೆಂಟ್ |
| 2) | ತೋರಣಗಲ್ | ಬಿ) ಹತ್ತಿಬಟ್ಟೆ |
| 3) | ಮೊಳಕಾಲ್ಮೂರು | ಸಿ) ಕಾಗದ |
| 4) | ಶಹಾಬಾದ್ | ಡಿ) ಕಂಪ್ಯೂಟರ್ |
| 5) | ಇನ್ಫೋಸಿಸ್ | ಇ) ಕಬ್ಬಿಣ ಮತ್ತು ಉಕ್ಕು |

@KTBS NOT TO BE REPUBLISHED

*****

## ಅಧ್ಯಾಯ – 29

# ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳು

V8U8H8

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಕರ್ನಾಟಕದ ನೈಸರ್ಗಿಕ ಹಾಗು ಸಾಂಸ್ಕೃತಿಕ ತಾಣಗಳ ಪರಿಚಯ ಹಾಗೂ ಮಹತ್ವ.
- ಪ್ರಮುಖ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ವಿವರಣೆ ಹಾಗೂ ಅವುಗಳ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಹತ್ವ.
- ಪ್ರಮುಖ ಬೆಟ್ಟಗಳು, ಜಲಪಾತಗಳು, ಐತಿಹಾಸಿಕ ಸ್ಥಳಗಳು.

'ದೇಶ ನೋಡು ಕೋಶ ಓದು' ಎಂಬ ನಾಣ್ಣುಡಿ ಇದೆ. ಜನರು ತಮ್ಮ ವ್ಯಾಪಾರವಹಿವಾಟಿಗಾಗಿ, ಕುತೂಹಲಕ್ಕಾಗಿ, ಧಾರ್ಮಿಕ ಆಚರಣೆ, ಮನಃಶಾಂತಿ, ವಿಹಾರ, ಸುಂದರ ತಾಣಗಳನ್ನು ನೋಡುವ ಹಂಬಲ, ಸಂತೋಷಕ್ಕಾಗಿ, ಆರೋಗ್ಯ ವೃದ್ಧಿಗಾಗಿ ತಮ್ಮ ಸ್ಥಳಗಳಿಂದ ಸೂಕ್ತವಾದ ಸ್ಥಳಗಳಿಗೆ ಹೋಗಿ ಕೆಲವು ದಿನ ಸಂಚಾರ ಮಾಡಿ ಬರುವುದನ್ನು ಪ್ರವಾಸ ಎನ್ನುವರು. ಪ್ರವಾಸಿ ಸ್ಥಳಗಳಲ್ಲಿ ತಂಗುವ ವ್ಯವಸ್ಥೆ, ಉಪಹಾರ ವ್ಯವಸ್ಥೆ ಇರುತ್ತದೆ. ಆದ್ದರಿಂದ ಅಲ್ಲಿ ಕೆಲವು ದಿನಗಳು ನೆಲೆಸಿದ್ದು ಬೇರೆ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ಆಧುನಿಕ ಪ್ರಪಂಚದಲ್ಲಿ ಪ್ರವಾಸವು ಮಾನವನ ಜೀವನದ ಅನಿವಾರ್ಯ ಸಂಗತಿಯಾಗಿದೆ. ಪ್ರವಾಸದಿಂದ ನಾಡು–ಸಂಸ್ಕೃತಿ–ನಾಗರಿಕತೆ, ಜನಜೀವನದ ಕ್ರಮ ಮುಂತಾದವುಗಳನ್ನು ತಿಳಿಯುವುದು ಸಾಧ್ಯವಾಗುತ್ತದೆ.

ಕರ್ನಾಟಕವು ಭಾರತದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿರುವ ಅತ್ಯಂತ ಹೆಸರಾದ ರಾಜ್ಯಗಳಲ್ಲಿ ಒಂದಾಗಿದೆ. ಕರ್ನಾಟಕವು ಪ್ರಕೃತಿದತ್ತವಾದ ಅನೇಕ ಸುಂದರ ತಾಣಗಳನ್ನು ಹೊಂದಿದೆ. ಹಸಿರಿನಿಂದ ಕಂಗೊಳಿಸುವ ಸಹ್ಯಾದ್ರಿ ಘಟ್ಟಗಳು, ಅಲ್ಲಿನ ನದಿಗಳು, ಜಲಪಾತಗಳು, ಸುಂದರ ನಯನ ಮನೋಹರವಾದ ಕಣಿವೆಗಳು, ವನ್ಯಜೀವಿಗಳು, ಶ್ರೀಗಂಧದ ಕಾಡುಗಳು ಮುಂತಾದುವುಗಳನ್ನು ಹೊಂದಿದೆ. ಸುಂದರ ಕಡಲತೀರಗಳು, ಐತಿಹಾಸಿಕ ತಾಣಗಳು, ಶಿಲ್ಪಕಲಾ ವೈಭವದಿಂದ ಕೂಡಿದ ದೇವಸ್ಥಾನಗಳು, ವಿವಿಧ ಧರ್ಮಗಳ ಧಾರ್ಮಿಕ ಕೇಂದ್ರಗಳು, ಯಾತ್ರಾ ಸ್ಥಳಗಳು ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತವೆ. ಇದರ ಮಹತ್ವವನ್ನು ಮನಗಂಡು ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಲು ಸರ್ಕಾರ 1974 ರಲ್ಲಿ ವ್ಯವಸ್ಥಿತ ಪ್ರವಾಸ ಹಾಗೂ ನಿರ್ವಹಣೆಗಾಗಿ 'ಕರ್ನಾಟಕ ಪ್ರವಾಸೋದ್ಯಮ ನಿಗಮ' ವನ್ನು (KSTDC) ಸ್ಥಾಪಿಸಿದ್ದು, ಪ್ರವಾಸಿಗರಿಗೆ ಮೂಲಸೌಲಭ್ಯಗಳನ್ನು ಒದಗಿಸಲು, ಯಾತ್ರಿ ನಿವಾಸ, ಪ್ರವಾಸಿ ಗೃಹ, ಉಪಹಾರ ಗೃಹ ಮುಂತಾದುವುಗಳ ವ್ಯವಸ್ಥೆಯನ್ನು ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲಿ ಒದಗಿಸಿದೆ.

ಕರ್ನಾಟಕವು ಪ್ರವಾಸಿಗರ ಸ್ವರ್ಗವಾಗಿದ್ದು ಅನೇಕ ವೈವಿಧ್ಯಮಯವಾದ ಸುಂದರ ತಾಣಗಳನ್ನು ಹೊಂದಿದ್ದು, ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಯುನೆಸ್ಕೊದವರು ಹಂಪಿ, ಪಟ್ಟದಕಲ್ಲು ಮತ್ತು ಇತ್ತೀಚೆಗೆ ಪಶ್ಚಿಮ ಘಟ್ಟಗಳನ್ನು 'ವಿಶ್ವ ಪರಂಪರೆಯ ತಾಣ' ಗಳೆಂದು ಗುರುತಿಸಿದೆ. ಇದರಿಂದ ವಿಶ್ವದಾದ್ಯಂತ ಕರ್ನಾಟಕವು ಪ್ರಸಿದ್ಧಿಯಾಗಿದೆ.

ಕರ್ನಾಟಕ ಸರ್ಕಾರವು ಹೊಸ ಪ್ರವಾಸೋದ್ಯಮ ನೀತಿಯನ್ನು ಜಾರಿಗೊಳಿಸಿ ಖಾಸಗಿಯವರಿಗೆ ಅವಕಾಶ ಮತ್ತು ಉತ್ತೇಜನ ನೀಡಿದೆ. 'ಉತ್ತಮ ಪ್ರವಾಸೋದ್ಯಮ ನಿರ್ವಹಣಾ' ರಾಜ್ಯವೆಂದು 1996–97 ರಲ್ಲಿ ಪ್ರಶಸ್ತಿ ದೊರಕಿದೆ. ಈ ಕೆಳಗಿನ ಪ್ರೇಕ್ಷಣೀಯ ಸ್ಥಳಗಳು ಹೆಸರುವಾಸಿಯಾಗಿವೆ.

NOT TO BE REPUBLISHED ©KTBS

**ಕರ್ನಾಟಕದ ಗಿರಿಧಾಮಗಳು :** ಕರ್ನಾಟಕವು ವೈವಿಧ್ಯಮಯವಾದ ಭೂಸ್ವರೂಪಗಳನ್ನು ಹೊಂದಿದ್ದು, ಅನೇಕ ಎತ್ತರವಾದ ಗಿರಿಶ್ರೇಣಿಗಳನ್ನು ಹೊಂದಿದೆ. ಇದರಿಂದ ಅನೇಕ ಗಿರಿಧಾಮಗಳು ಕಂಡುಬರುತ್ತವೆ. ಚಿಕ್ಕಮಗಳೂರು ಜಿಲ್ಲೆಯ 'ಕುದುರೆಮುಖ' ಗಿರಿಧಾಮ ಪ್ರಮುಖವಾಗಿದ್ದು ಇದರ ಸುತ್ತಲೂ ಹಸಿರಿನಿಂದ ಕೂಡಿದ ದಟ್ಟ ಅರಣ್ಯಗಳು, ಬೆಟ್ಟಗಳು, ಕಾಫಿ ತೋಟಗಳು, ಜಲಪಾತಗಳು ಇರುವುದರಿಂದ ಆಕರ್ಷಣೀಯ ಸ್ಥಳವಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮವು ಸಮುದ್ರ ಮಟ್ಟದಿಂದ ಸುಮಾರು 1492 ಮೀ. ಎತ್ತರವಿದ್ದು, ತಂಪಾದ ಹವಾಮಾನವನ್ನು ಹೊಂದಿರುತ್ತದೆ. ಇದು ಬೆಂಗಳೂರಿಗೆ ಸಮೀಪದಲ್ಲಿರುವುದರಿಂದ ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸುತ್ತದೆ. ವಸತಿ ಮತ್ತು, ಉಪಹಾರ ವ್ಯವಸ್ಥೆಯಿದ್ದು ತಂಗಲು ಅವಕಾಶವಿದೆ. ಮಹಾತ್ಮ ಗಾಂಧಿಯವರು ಆರೋಗ್ಯ ಸುಧಾರಣೆಗಾಗಿ ಇಲ್ಲಿ ತಂಗಿದ್ದರಿಂದ 'ಗಾಂಧಿ ಭವನ' ನಿರ್ಮಿಸಲಾಗಿದೆ.

**ಚಟುವಟಿಕೆ**

ನಿಮ್ಮ ಶಾಲಾ ಹಂತದಲ್ಲಿ ಜಿಲ್ಲಾ ದರ್ಶನ ಏರ್ಪಡಿಸಿ ಜಿಲ್ಲೆಯ ಪ್ರಮುಖ ಪ್ರವಾಸಿ ಕೇಂದ್ರಗಳ ಬಗ್ಗೆ ಟಿಪ್ಪಣಿ ಬರೆಯಿರಿ.

ಅದೇ ರೀತಿ ಬಿಳಿಗಿರಿ ರಂಗನಬೆಟ್ಟ, ಆಗುಂಬೆಯ ಸೂರ್ಯಾಸ್ತ ತಾಣ, ಕೆಮ್ಮಣ್ಣುಗುಂಡಿ, ದೇವರಾಯನದುರ್ಗ, ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ, ಕೊಡಚಾದ್ರಿ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ರಾಮನಗರ ಬಂಡೆಗಳು, ಮಧುಗಿರಿಯ ಏಕಶಿಲಾ ಬೆಟ್ಟ, ವಿಸ್ಮಯಕಾರಿಯಾದ ಯಾಣದ ಬಂಡೆಗಳು, ಮಡಿಕೇರಿ ಮುಂತಾದುವುಗಳು ಬೇಸಿಗೆಯ ತಂಗುದಾಣಗಳಾಗಿದ್ದು ಪ್ರವಾಸಿಗರನ್ನು ಆಕರ್ಷಿಸುತ್ತವೆ.

**ಕರ್ನಾಟಕದ ಜಲಪಾತಗಳು :** ನಮ್ಮ ರಾಜ್ಯವು ಜಲಪಾತಗಳ ತವರೂರಾಗಿದೆ. ಮಲೆನಾಡು ಅನೇಕ ಜಲಪಾತಗಳನ್ನು ಹೊಂದಿವೆ. ಮಳೆಗಾಲದಲ್ಲಿ ನೀರು ರಭಸವಾಗಿ ಧುಮ್ಮಿಕ್ಕುತ್ತವೆ. ಉತ್ತರ ಕನ್ನಡ ಜಿಲ್ಲೆಯು ಅತಿ ಹೆಚ್ಚು ಜಲಪಾತಗಳನ್ನು ಹೊಂದಿದೆ.

ಭಾರತದಲ್ಲೇ ಅತಿ ಎತ್ತರವಾದ ಜೋಗ್ ಜಲಪಾತವು ಶಿವಮೊಗ್ಗ ಜಿಲ್ಲೆಯಲ್ಲಿದೆ. ಸುಮಾರು 253 ಮೀ. ಎತ್ತರದಿಂದ ಶರಾವತಿ ನದಿಯು ನಾಲ್ಕು ಸೀಳುಗಳಾಗಿ ಬೀಳುತ್ತದೆ. ಇವುಗಳನ್ನು ರಾಜ, ರಾಣಿ, ರೋರರ್ ಮತ್ತು ರಾಕೆಟ್ ಎಂದು ಕರೆಯುತ್ತಾರೆ. ಇದು ಮಳೆಗಾಲದಲ್ಲಿ ಮೈದುಂಬಿ ಧುಮುಕುವಾಗ ಮರೆಯಲಾಗದ ಚೆಲುವನ್ನು ಮೂಡಿಸುತ್ತದೆ.

ಕಾವೇರಿ ನದಿಯು ಮಂಡ್ಯ ಜಿಲ್ಲೆಯ ಶಿವನಸಮುದ್ರದ ಸಮೀಪದಲ್ಲಿ ಗಗನಚುಕ್ಕಿ ಮತ್ತು ಭರಚುಕ್ಕಿ ಅವಳಿ ಜಲಪಾತಗಳನ್ನು ನಿರ್ಮಿಸಿದೆ. ಮಡಿಕೇರಿ ಸಮೀಪ ಸುಂದರವಾದ 'ಅಬ್ಬಿ ಜಲಪಾತ'ವಿದೆ. ಕೆಮ್ಮಣ್ಣು ಗುಂಡಿ ಗಿರಿಧಾಮದ ಬಳಿ ಹೆಬ್ಬೆ ಜಲಪಾತವಿದೆ. ಅಲ್ಲದೆ ಕಲ್ಹತ್ತಗಿರಿ ಜಲಪಾತ, ಉತ್ತರ ಕನ್ನಡ ಜಿಲ್ಲೆಯ ಉಂಚಳ್ಳಿ ಜಲಪಾತ, ಮಾಗೋಡು ಜಲಪಾತ, ಬೆಳಗಾವಿ ಜಿಲ್ಲೆಯ 'ಗೋಕಾಕ ಜಲಪಾತ'ಗಳಿವೆ. ಘಟಪ್ರಭಾ ನದಿಯಿಂದ ನಿರ್ಮಾಣಗೊಂಡ ಗೋಕಾಕ ಜಲಪಾತವನ್ನು 'ಕರ್ನಾಟಕದ ನಯಾಗರ' ಎಂದು ಕರೆಯುವರು.

**ಕರ್ನಾಟಕದ ವನ್ಯಜೀವಿಧಾಮಗಳು :** ಕರ್ನಾಟಕವು ದಟ್ಟವಾದ ಅರಣ್ಯಗಳನ್ನು ಹೊಂದಿರುವ ಪ್ರದೇಶಗಳಿಂದ ಕೂಡಿದೆ. ಅರಣ್ಯಗಳು ಮತ್ತು ಕಾಡುಪ್ರಾಣಿಗಳ ಸಂರಕ್ಷಣೆಗಾಗಿ ಸರ್ಕಾರ ಅನೇಕ ವನ್ಯಜೀವಿಧಾಮಗಳು, ಪಕ್ಷಿಧಾಮಗಳು, ರಾಷ್ಟ್ರೀಯ ಉದ್ಯಾನವನಗಳು, ಹುಲಿಧಾಮಗಳು, ಜೀವಿವೈವಿಧ್ಯತಾ ವಲಯಗಳನ್ನು ನಿರ್ವಹಿಸುತ್ತಿದೆ.

© KTBS NOT TO BE REPUBLISHED

**ಚಟುವಟಿಕೆ**

**ನಮ್ಮೂರಿನ ಬಗ್ಗೆ ತಿಳಿಯೋಣ**

ನಮ್ಮ ರಾಜ್ಯದ ಪ್ರತಿ ಸ್ಥಳವು ತನ್ನದೇ ಆದ ಮಹತ್ವ ಹೊಂದಿದೆ. ಹಾಗಾದಲ್ಲಿ ನಮ್ಮ ಊರಿನ ಹೆಸರಿನ ಇತಿಹಾಸ ಮತ್ತು ಮಹತ್ವ ಕುರಿತು ಹಿರಿಯರಿಂದ ಮಾಹಿತಿ ಸಂಗ್ರಹಿಸಿ ತಿಳಿಯಿರಿ.

ಕರ್ನಾಟಕದಲ್ಲಿ ಐದು ರಾಷ್ಟ್ರೀಯ ಉದ್ಯಾನವನಗಳಿವೆ. ಅವುಗಳೆಂದರೆ ನಾಗರಹೊಳೆಯ 'ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ', ಬಂಡಿಪುರ, ಬನ್ನೇರುಘಟ್ಟ, ಕುದುರೆಮುಖ ಹಾಗೂ ಅನ್ಷಿ ರಾಷ್ಟ್ರೀಯ ಉದ್ಯಾನವನಗಳು.

ಪ್ರಾಣಿಗಳನ್ನು ಅವುಗಳ ನೆಲೆಯಲ್ಲಿಯೇ ಸಂರಕ್ಷಿಸಲು ರಾಜ್ಯದಲ್ಲಿ 18 ವನ್ಯಜೀವಿಧಾಮಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಮುತ್ತೋಡಿ, ಬಂಡೀಪುರ, ನಾಗರಹೊಳೆ, ದಾಂಡೇಲಿ, ಭದ್ರಾ ವನ್ಯಜೀವಿಧಾಮ, ರಂಗನತಿಟ್ಟು, ಕೊಕ್ಕರೆ ಬೆಳ್ಳೂರು, ಮಂಡಗದ್ದೆ, ಗುಡವಿ ಪಕ್ಷಿಧಾಮ ಇತ್ಯಾದಿ.

ಕರ್ನಾಟಕವು ಸುಂದರವಾದ ಕಡಲತೀರಗಳನ್ನು ಹೊಂದಿದೆ. ಅವುಗಳೆಂದರೆ ಗೋಕರ್ಣದ 'ಓಂ ಬೀಚ್', ಉಳ್ಳಾಲ ಬೀಚ್, ಮುರ್ಡೇಶ್ವರ, ಮರವಂತೆ, ಮಲ್ಪೆ ಇತ್ಯಾದಿ ಬೀಚ್‌ಗಳು ಅಸಂಖ್ಯಾತ ಪ್ರವಾಸಿಗರನ್ನು ಆಕರ್ಷಿಸುತ್ತವೆ.

ಉಡುಪಿಯ ಸಮೀಪದ ಸೇಂಟ್ ಮೇರೀಸ್ ದ್ವೀಪವು ವಿಶಿಷ್ಟವಾದ ಸ್ತಂಭ ಮಾದರಿಯ ನಿಸರ್ಗದತ್ತವಾದ ಶಿಲಾರಚನೆಯನ್ನು ಹೊಂದಿದ್ದು ಮನೋಹರವಾಗಿವೆ. ಮುರ್ಡೇಶ್ವರದ ನೇತ್ರಾಣಿ ದ್ವೀಪ, ಕಾರವಾರದ ಬಳಿ ದೇವಗಡ, ಕೂರ್ಮಗಡ ಎಂಬ ಎರಡು ದ್ವೀಪಗಳಿವೆ.

**ಐತಿಹಾಸಿಕ ಸ್ಥಳಗಳು (ಚಾರಿತ್ರಿಕ ಸ್ಥಳಗಳು) :** ನಮ್ಮ ನಾಡನ್ನಾಳಿದ ಕದಂಬರು, ಹೊಯ್ಸಳರು, ಚಾಲುಕ್ಯರು, ವಿಜಯನಗರದ ಅರಸರುಗಳು ತಾವು ನಿರ್ಮಿಸಿದ ಶಿಲ್ಪಕಲಾ ವೈಭವದಿಂದ ಕೂಡಿರುವ, ಜನಾಕರ್ಷಣೀಯವಾದ ಅನೇಕ ಸ್ಥಳಗಳನ್ನು ಬಿಟ್ಟು ಹೋಗಿದ್ದಾರೆ. ಅವುಗಳೆಂದರೆ ಹಂಪಿ, ಬೇಲೂರು, ಹಳೇಬೀಡು, ಸೋಮನಾಥಪುರ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ವಿಜಯಾಪುರ(ಬಿಜಾಪುರ) ದ ಗೋಳಗುಮ್ಮಟ, ಲಕ್ಕುಂಡಿ, ಬನವಾಸಿ, ಬಸರಾಳು, ಬಳ್ಳಿಗಾವೆ, ಮೈಸೂರು, ಶ್ರೀರಂಗಪಟ್ಟಣ, ವಿಜಯಾಪುರ(ಬಿಜಾಪುರ) ಮುಂತಾದ ಚಾರಿತ್ರಿಕ ಐತಿಹ್ಯದ ತಾಣಗಳಿವೆ. ಇವು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿವೆ.

**ಚಟುವಟಿಕೆ**

ನಮ್ಮ ಊರಿನ ಹಾಗೂ ಅಕ್ಕ-ಪಕ್ಕದ ಗ್ರಾಮಗಳಲ್ಲಿರುವ ಐತಿಹಾಸಿಕ ಸ್ಮಾರಕಗಳು, ದೇವಾಲಯಗಳ ಬಗ್ಗೆ ಮಾಹಿತಿ ಸಂಗ್ರಹಿಸೋಣ.

**ಯಾತ್ರಾಸ್ಥಳಗಳು :** ಕರ್ನಾಟಕದಲ್ಲಿ ಅನೇಕ ಯಾತ್ರಾಸ್ಥಳಗಳಿವೆ. ಧರ್ಮಸ್ಥಳ, ಉಡುಪಿ, ಶೃಂಗೇರಿ, ಹೊರನಾಡು, ಕೊಲ್ಲೂರು, ಗೋಕರ್ಣ, ಉಳವಿ, ಸಿರ್ಸಿ, ಶ್ರವಣಬೆಳಗೊಳ, ಕೂಡಲಸಂಗಮ, ಮೇಲುಕೋಟೆ, ಆದಿಚುಂಚನಗಿರಿ, ಕಾರ್ಕಳ, ದೇವರಗುಡ್ಡ, ಮೈಲಾರಕ್ಷೇತ್ರ, ಗುಲ್ಬರ್ಗಾದ ಬಂದೇ ನವಾಜ್ ದರ್ಗಾ, ವಿಜಾಪುರದ ಇಬ್ರಾಹಿಂ ರೋಜಾ, ಶಿರಾದ ಮಲ್ಲಿಕ್ ರಹಾನ್ ದರ್ಗಾ, ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್, ಮಂಗಳೂರಿನ ರೊಜಾರಿಯೋ ಕೆಥೆಡ್ರಲ್ ಚರ್ಚ್ ಇತ್ಯಾದಿ.

**ಕರ್ನಾಟಕದ ಕೋಟೆಗಳು :** ಅನೇಕ ಚರಿತ್ರಾರ್ಹ ಸುಭದ್ರವಾದ ಕೋಟೆಗಳು ಕರ್ನಾಟಕದಲ್ಲಿ ಈಗಲೂ ಪ್ರವಾಸಿಗರ ಪ್ರಮುಖ ತಾಣಗಳಾಗಿವೆ. ಬೀದರ್ ಕೋಟೆ, ವಿಜಯಾಪುರ, ಕಲಬುರಗಿ, ವಿಜಯನಗರ (ಹಂಪಿ) ಕೋಟೆ, ಕೆಳದಿ, ಚಿತ್ರದುರ್ಗ ಕೋಟೆ, ಮಧುಗಿರಿ, ನಂದಿಬೆಟ್ಟ, ಪಾವಗಡ, ಮಂಜರಾಬಾದ್, ಉಚ್ಚಂಗಿದುರ್ಗ, ಕವಲೇದುರ್ಗ, ಪರಸಗಡ, ಶ್ರೀರಂಗಪಟ್ಟಣ, ಕರಾವಳಿ ಕೋಟೆಗಳಾದ ಬಹದ್ದೂರ್‌ಗಡ, ಬಸರಾಜದುರ್ಗ, ದೇವಗಡ, ಕೂರ್ಮಗಡ ಇತ್ಯಾದಿಗಳಿವೆ.

ಈ ಮೇಲ್ಕಂಡ ಎಲ್ಲಾ ಪ್ರೇಕ್ಷಣೀಯ ಸ್ಥಳಗಳು ಕರ್ನಾಟಕದ ಹಿರಿಮೆಯನ್ನು ಹೆಚ್ಚಿಸಿವೆ. ನಮ್ಮ ರಾಜಧಾನಿಯಾದ ಬೆಂಗಳೂರು ನಗರ ಇತ್ತೀಚಿನ ದಿನಗಳಲ್ಲಿ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇಲ್ಲಿನ ಉತ್ತಮ ಹವಾಮಾನ, ವಿಧಾನಸೌಧದಂತಹ ಸುಂದರ ಕಟ್ಟಡ. ಕಬ್ಬನ್‌ಪಾರ್ಕ್, ಲಾಲ್‌ಬಾಗ್

© KTBS NOT TO BE REPUBLISHED

ನಂತಹ ಅನೇಕ ಆಕರ್ಷಣೀಯ ಉದ್ಯಾನಗಳನ್ನು ಹೊಂದಿದ್ದು 'ಉದ್ಯಾನ ನಗರಿ' ಎಂದು ಕರೆಯುತ್ತಾರೆ. ಇದು ಕರ್ನಾಟಕದ ಅತಿ ದೊಡ್ಡ ನಗರವಾಗಿದೆ. ರಾಷ್ಟ್ರಮಟ್ಟದ ಬೃಹನ್ನಗರಗಳಲ್ಲಿ ಒಂದಾಗಿದೆ.

ಅದೇ ರೀತಿ ಮೈಸೂರು 'ಅರಮನೆಗಳ ನಗರ'ವಾಗಿದ್ದು, ಅನೇಕ ಸುಂದರವಾದ ಅರಮನೆಗಳನ್ನು ಹೊಂದಿದೆ. ಇಲ್ಲಿನ ದಸರಾ ಉತ್ಸವಕ್ಕೆ ದೇಶ ವಿದೇಶದ ಲಕ್ಷಾಂತರ ಜನರು ಬಂದು ಹೋಗುತ್ತಾರೆ. ಚಾಮುಂಡಿ ಬೆಟ್ಟ, ಕೃಷ್ಣರಾಜಸಾಗರ, ಬೃಂದಾವನ ಇತ್ಯಾದಿ ಪ್ರಮುಖ ಪ್ರೇಕ್ಷಣೀಯ ಸ್ಥಳಗಳು.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಭರ್ತಿ ಮಾಡಿರಿ.**

1) ನಂದಿ ಗಿರಿಧಾಮ ................ ಜಿಲ್ಲೆಯಲ್ಲಿದೆ.
2) ಅಬ್ಬಿ ಜಲಪಾತ ................ ನಗರದ ಸಮೀಪ ಇದೆ.
3) ಕರ್ನಾಟಕದ ನಯಾಗರ ಎಂದು ................ ಜಲಪಾತವನ್ನು ಕರೆಯುತ್ತಾರೆ.
4) ಗೋಕರ್ಣದ ಸಮೀಪ ................ ಬೀಚ್ ಇದೆ.
5) ಅರಮನೆಗಳ ನಗರ ಎಂದು ................ ನ್ನು ಕರೆಯುತ್ತಾರೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1) ಪ್ರವಾಸ ಮಾಡುವುದರಿಂದಾಗುವ ಪ್ರಯೋಜನಗಳೇನು ?
2) ಪ್ರವಾಸ ಸ್ಥಳಗಳಲ್ಲಿರಬೇಕಾದ ಮೂಲ ಸೌಲಭ್ಯಗಳನ್ನು ತಿಳಿಸಿ.
3) ಕುದುರೆಮುಖ ಗಿರಿಧಾಮವನ್ನು ಕುರಿತು ಬರೆಯಿರಿ.
4) ಕರ್ನಾಟಕದ ವನ್ಯಜೀವಿಧಾಮಗಳನ್ನು ಹೆಸರಿಸಿ.
5) ಕರ್ನಾಟಕದ ಐತಿಹಾಸಿಕ ಮಹತ್ವದ ಸ್ಥಳಗಳನ್ನು ತಿಳಿಸಿ.

**III. ಹೊಂದಿಸಿ ಬರೆಯಿರಿ.**

| | ಅ | ಆ |
|---|---|---|
| 1) | ಬಿಳಿಗಿರಿ ರಂಗನ ಬೆಟ್ಟ | ಎ) ಉತ್ತರಕನ್ನಡ ಜಿಲ್ಲೆ |
| 2) | ಜೋಗಿಮಟ್ಟಿ | ಬಿ) ಚಾಮರಾಜನಗರ |
| 3) | ಯಾಣ | ಸಿ) ಪಕ್ಷಿಧಾಮ |
| 4) | ಅನ್ಷಿ | ಡಿ) ಚಿತ್ರದುರ್ಗ |
| 5) | ರಂಗನತಿಟ್ಟು | ಇ) ರಾಷ್ಟ್ರೀಯ ಉದ್ಯಾನವನ |
| | | ಈ) ನವಿಲುಧಾಮ |

**IV. ಚಟುವಟಿಕೆಗಳು.**

1) ಕರ್ನಾಟಕದ ಗಿರಿಧಾಮ/ವನ್ಯಧಾಮಗಳ ಪಟ್ಟಿ ಮಾಡಿರಿ.
2) ಕರ್ನಾಟಕದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿನೀಡಿದ ಅನುಭವಗಳನ್ನು ಕುರಿತು ಬರೆಯಿರಿ.

**V. ಯೋಜನೆ.**

1) ಪ್ರವಾಸಿ ಸ್ಥಳಗಳ ಛಾಯಾ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ಸಿದ್ಧಪಡಿಸಿ.

*****

© KTBS NOT TO BE REPUBLISHED

### ಅಧ್ಯಾಯ – 30

# ಹಣ ಮತ್ತು ಸಾಲ

W3M2I8

**ಈ ಅಧ್ಯಾಯದಲ್ಲಿ ಈ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಹಣದ ವಿಕಾಸ ಮತ್ತು ಕಾರ್ಯಗಳ ಮಹತ್ವ.
- ದೇಶೀಯ ಬ್ಯಾಂಕುಗಳು ಮತ್ತು ಸಾಲದ ವಿಧಗಳು.
- ಬ್ಯಾಂಕುಗಳ ವಿಕಾಸ ಮತ್ತು ಅವುಗಳ ವಿಧಗಳು.
- ಬ್ಯಾಂಕುಗಳ ವಿವಿಧ ಠೇವಣಿಗಳ ಪರಿಚಯ.
- ಭಾರತದ ಕೇಂದ್ರ ಬ್ಯಾಂಕ್‌ನ ಸ್ಥಾಪನೆ ಮತ್ತು ಅದರ ಕಾರ್ಯಗಳು.

ಹಣವು ಮಾನವನ ಒಂದು ಅದ್ಭುತ ಸಂಶೋಧನೆಯಾಗಿದೆ. ಅದು ದಿನ ನಿತ್ಯದ ವ್ಯವಹಾರಗಳಲ್ಲಿ ವಿನಿಮಯ ಮಾಧ್ಯಮವಾಗಿ ಬಳಕೆಯಾಗುತ್ತಿದೆ. ಸರಕು–ಸೇವೆಗಳ ಮೌಲ್ಯ ನಿರ್ಣಯ, ಸಂಪತ್ತಿನ ಸಂಗ್ರಹ ಹಾಗೂ ಭವಿಷ್ಯದ ವ್ಯಾಪಾರವನ್ನು ಸರಳಗೊಳಿಸಿದೆ. ಹಣದಿಂದಾಗಿ ಮಾನವನ ವಾಣಿಜ್ಯ ವ್ಯವಹಾರಗಳು ಬೆಳವಣಿಗೆ ಹೊಂದಿವೆ.

ಹಣವು ಸರಕುಗಳು ಮತ್ತು ಸೇವೆಗಳನ್ನು ಕೊಳ್ಳುತ್ತದೆ. ಇದನ್ನು ಸಂದಾಯ, ಮಾಪನ ಮತ್ತು ಮೌಲ್ಯಸಂಗ್ರಹದ ಮಾಧ್ಯಮವಾಗಿ ಸರ್ವೇಸಾಮಾನ್ಯವಾಗಿ ಸ್ವೀಕರಿಸಲಾಗಿದೆ. ರಾಬರ್ಟ್‌ಸನ್ ಪ್ರಕಾರ "ಸರಕುಗಳಿಗಾಗಿ ಸಂದಾಯ ಮಾಡುವಲ್ಲಿ ಅಥವಾ ಇತರೆ ವ್ಯವಹಾರಿ ಸಾಲಗಳನ್ನು ತೀರಿಸುವಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣವಾಗಿದೆ".

ಹಣಕ್ಕೆ ಸಮಾನಾರ್ಥಕವಾಗಿ ಬಳಸಲಾಗುತ್ತಿರುವ ಇಂಗ್ಲೀಷಿನ 'Money'ಎಂಬ ಪದವು ರೋಮನ್ ಭಾಷೆಯ 'ಮೊನೆಟ ಜುನೊ' (Moneta Juno) ಎಂಬ ಪದದಿಂದ ಬಂದಿದೆ. ಭಾರತೀಯ ರೂಪಾಯಿಯು ಸಂಸ್ಕೃತದ 'ರುಪ್ಯಾ'(Rupya) ಪದದಿಂದ ಬಂದಿದೆ. 'ಬೆಳ್ಳಿ ನಾಣ್ಯ' ಎಂಬುದು ಇದರ ಅರ್ಥ.

**ಹಣದ ವಿಕಾಸ :** ಇಂದು ನಾವು ಕಾಗದದ ನೋಟುಗಳು ಮತ್ತು ನಾಣ್ಯಗಳನ್ನು ಹಣವನ್ನಾಗಿ ಬಳಸುತ್ತಿದ್ದೇವೆ. ಆದರೆ ಈ ಮಟ್ಟದ ವಿಕಾಸವು ಒಂದೇ ರಾತ್ರಿಯಲ್ಲಿ ಸಂಭವಿಸಿದ್ದಲ್ಲ. ಇದು ಈ ಹಂತವನ್ನು ತಲುಪಲು ಸಾವಿರಾರು ವರ್ಷಗಳನ್ನು ತೆಗೆದುಕೊಂಡಿದೆ. ಹಣದ ವಿಕಾಸದಲ್ಲಿ ಹಲವಾರು ಹಂತಗಳಿವೆ. 'ವಸ್ತು ವಿನಿಮಯ ಪದ್ಧತಿ'ಯು ಪ್ರಾರಂಭದ ಹಾಗೂ ಪುರಾತನ ಹಂತವಾಗಿದೆ. ಹಣದ ವಿಕಾಸದ ವಿವಿಧ ಹಂತಗಳನ್ನು ಈಗ ಚರ್ಚಿಸೋಣ.

**ವಸ್ತು ವಿನಿಮಯ ಪದ್ಧತಿ :** ಪುರಾತನ ಕಾಲದಲ್ಲಿ ಜನರು ಹಣವನ್ನು ಬಳಸದೆ ಸರಕುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದರು. ವಸ್ತು ವಿನಿಮಯವು ಅತಿಕಷ್ಟದ ವ್ಯಾಪಾರ ವಿಧಾನವಾಗಿತ್ತು. ಇದರಲ್ಲಿ ಸಮಯ ಮತ್ತು ಕಾಲ ವ್ಯಯವಾಗುತ್ತಿತ್ತು. ಉದಾ : A ವ್ಯಕ್ತಿಯು ಹಸುವನ್ನು ಹೊಂದಿದ್ದು, ವಿನಿಮಯದಲ್ಲಿ ಕುರಿಯನ್ನು ಬಯಸಿದರೆ, ಆಗ Aಯು ಕುರಿ ಹೊಂದಿರುವವನನ್ನು ಹುಡುಕಬೇಕಾಗುತ್ತಿತ್ತು. ಅಷ್ಟಲ್ಲದೆ ವಿನಿಮಯದಲ್ಲಿ ಹಸುವಿನ ಅಗತ್ಯವಿರುವವನನ್ನು ಹುಡುಕಬೇಕಾಗುತ್ತಿತ್ತು. A ಯು

©KTBS NOT TO BE REPUBLISHED

ಅಂತಹ ವ್ಯಕ್ತಿಯನ್ನು ಹುಡುಕಿದರೆ, ಆಗ ಒಂದು ಹಸುವಿಗೆ ಎಷ್ಟು ಕುರಿಗಳು ಸಮ? ಎಂಬ ಪ್ರಶ್ನೆ ಎದುರಾಗುತ್ತಿತ್ತು. ಆದುದರಿಂದ ವಸ್ತು ವಿನಿಮಯ ಪದ್ಧತಿಯು ಪರಸ್ಪರ ಬಯಕೆಗಳ ಹೊಂದಾಣಿಕೆ ಸಾರ್ವತ್ರಿಕ ಮೌಲ್ಯಮಾಪನ, ಸರಕುಗಳ ಅವಿಭಾಜ್ಯತೆ, ಸಂಪತ್ತಿನ ಸಂಗ್ರಹದ ಸಮಸ್ಯೆಗಳಂತಹ ಹಲವಾರು ಅನಾನುಕೂಲಗಳನ್ನು ಹೊಂದಿತ್ತು. ವಿಕಾಸದ ಮುಂದಿನ ಹಂತ ವಸ್ತು ರೂಪದ ಹಣವಾಗಿತ್ತು.

**ವಸ್ತುರೂಪದ ಹಣ :** ಒಂದು ನಿರ್ದಿಷ್ಟ ಗಾತ್ರ ಮತ್ತು ತೂಕದ ವಸ್ತುವೊಂದನ್ನು ಹಣವೆಂದು ಅಂಗೀಕರಿಸಲಾಗಿತ್ತು ಮತ್ತು ಆ ಪ್ರಮಾಣಿತ ವಸ್ತುವಿನ ಮೂಲಕ ಪ್ರತಿಯೊಂದನ್ನು ಅಳೆಯಲಾಗುತ್ತಿತ್ತು. ವಿವಿಧ ಅರ್ಥವ್ಯವಸ್ಥೆಗಳಲ್ಲಿ ವಿವಿಧ ವಸ್ತುಗಳನ್ನು ಹಣವನ್ನಾಗಿ ಬಳಸಲಾಗುತ್ತಿತ್ತು. ಉದಾ : ಗ್ರೀಸ್‌ನಲ್ಲಿ ಹಸು, ರೋಂನಲ್ಲಿ ಕುರಿ, ಚೀನಾದಲ್ಲಿ ಹಲ್ಲುಗಳು ಇತ್ಯಾದಿ. ಲೆಕ್ಕಾಚಾರದ ಘಟಕವಾಗಿ ಹಣದ ಪರಿಚಯವಾದ ಮೇಲೆ ವಸ್ತು ವಿನಿಮಯ ಪದ್ಧತಿಯ ಎಲ್ಲ ಸಮಸ್ಯೆಗಳು ಪರಿಹಾರವಾಗಲಿಲ್ಲ. ಹಣದ ಅಭಿವೃದ್ಧಿಯ ಮುಂದಿನ ಹಂತ ಲೋಹದ ಹಣ.

**ಲೋಹದ ಹಣ :** ಲೋಹದ ಹಣಕ್ಕಾಗಿ ವಿಶೇಷವಾಗಿ ಬೆಲೆಬಾಳುವ ಲೋಹಗಳಾದ ಚಿನ್ನ, ಬೆಳ್ಳಿ, ತಾಮ್ರ, ಕಂಚನ್ನು ಬಳಸಲಾಗುತ್ತಿತ್ತು. ಪ್ರಮಾಣಿತ ತೂಕವಿರುವ ಮತ್ತು ವಿಶೇಷವಾಗಿ ಚಿನ್ನ ಅಥವಾ ಬೆಳ್ಳಿಯಿಂದ ಮಾಡಿದ, ಅದರ ಮೇಲೆ ಮುದ್ರೆಯಿರುವ ನಾಜೂಕಾದ ಬಿಲ್ಲೆಗಳನ್ನು ವಿನಿಮಯ ಮಾಧ್ಯಮವಾಗಿ ಬಳಕೆಗೆ ತರಲಾಯಿತು. ಅವು ವಿವಿಧ ಘಟಕಗಳಾಗಿ ಸುಲಭವಾಗಿ ವಿಭಜಿಸಲು, ಸಾಗಿಸಲು ಮತ್ತು ಸಂದಾಯಮಾಡಲು ಅನುಕೂಲವಾಗಿದ್ದವು. ಹಣದ ಅಭಿವೃದ್ಧಿಯ ಮುಂದಿನ ಹಂತ ಕಾಗದ ಹಣ.

**ನೆನಪಿರಲಿ :** ಇತಿಹಾಸದಲ್ಲಿ ವಿವಿಧ ರಾಜರುಗಳು ಜಾರಿಗೆ ತಂದ ಮತ್ತು ಬಳಸುತ್ತಿದ್ದ ನಾಣ್ಯಗಳ ಬಗ್ಗೆ ಮಾಹಿತಿ ತಿಳಿದಿದ್ದೇವೆ.



**ಲೋಹದ ಹಣ**

**ಕಾಗದ ಹಣ :** ಲೋಹದ ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದು ಸುರಕ್ಷಿತವಾಗಿರಲಿಲ್ಲ. ಆದುದರಿಂದ ವ್ಯಾಪಾರಗಾರರು ಪರಿಚಿತ ಲೇವಾದೇವಿದಾರರು ನೀಡುತ್ತಿದ್ದ ಲಿಖಿತ ದಾಖಲೆಗಳನ್ನು ಅವರ ಆಜ್ಞಾಪಿತ ಹಣದ ಪ್ರಮಾಣಕ್ಕೆ ಸಾಕ್ಷಿಯಾಗಿ ತಮ್ಮ ಜೊತೆ ಕೊಂಡೊಯ್ಯಲು ಪ್ರಾರಂಭಿಸಿದರು. ಈ ಲಿಖಿತ ದಾಖಲೆಗಳು ನೈಜ ಹಣವಾಗಿರಲಿಲ್ಲ, ಆದರೆ ಬೇಡಿಕೆಯ ಮೇಲೆ ಹಣಕ್ಕೆ ವಿನಿಮಯ ಮಾಡಿಕೊಡಲು ಸಿದ್ಧರಿದ್ದುದರಿಂದ ಅವರು ಸ್ವೀಕರಿಸುತ್ತಿದ್ದರು. ಜನರು ಕ್ರಮೇಣ ಬ್ಯಾಂಕ್ ನೋಟುಗಳಿಗೆ ಹೊಂದಿಕೊಂಡರು ಮತ್ತು ಅವರು ಅವುಗಳನ್ನು ಹಣದ ಪರ್ಯಾಯಗಳಾಗಿ ಬಳಸದೆ, ನೈಜ ಹಣವನ್ನಾಗಿ ಸ್ವೀಕರಿಸಿದರು. ಸರ್ಕಾರಗಳು ತಮ್ಮ ತಮ್ಮ ಕೇಂದ್ರ ಬ್ಯಾಂಕುಗಳಿಗೆ ನೋಟುಗಳನ್ನು ಚಲಾವಣೆಗೆ ತರುವ ಏಕಸ್ವಾಮ್ಯವನ್ನು ನೀಡಿದ್ದರಿಂದ ಇದು ಸಂಭವಿಸಿತು. ನೋಟು ಶಾಸನಬದ್ಧ ಹಣವಾಯಿತು. ಯಾವುದೇ ವ್ಯಕ್ತಿ ಸಂಬಂಧಿತ ದೇಶದಲ್ಲಿನ ವ್ಯವಹಾರದಲ್ಲಿ ಅಲ್ಲಿನ





**ಕಾಗದದ ಹಣ**

ಶಾಸನಬದ್ಧ ಹಣವನ್ನು ತಿರಸ್ಕರಿಸುವಂತಿಲ್ಲ. ಭಾರತದಲ್ಲಿ ರೂಪಾಯಿ ಶಾಸನಬದ್ದ ಹಣವಾಗಿದೆ. ಅದರಂತೆ ಯು.ಎಸ್.ಎ.–ಡಾಲರ್, ಯು.ಕೆ – ಪೌಂಡ್, ಜರ್ಮನಿ–ಮಾರ್ಕ್, ಜಪಾನ್–ಯನ್, ಚೀನಾ– ಯಾನ್ ಇತ್ಯಾದಿ.



**ಬ್ಯಾಂಕ್ ಹಣ :** ವ್ಯಾಪಾರ ಮತ್ತು ವಾಣಿಜ್ಯ ಅಭಿವೃದ್ಧಿ ಹೊಂದಿದಂತೆ ಬ್ಯಾಂಕ್ ಹಣ ಅಸ್ತಿತ್ವಕ್ಕೆ ಬಂದಿತು. ಚೆಕ್ಕುಗಳು, ಡ್ರಾಫ್ಟುಗಳು, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳು ಇತ್ಯಾದಿ ಕೆಲವು ಬ್ಯಾಂಕ್ ಹಣಕ್ಕೆ ಉದಾಹರಣೆಗಳಾಗಿವೆ. ಚೆಕ್ಕುಗಳ ಸಹಾಯದಿಂದ ಹಣವನ್ನು ಠೇವಣಿಯಿಂದ ಠೇವಣಿಗೆ ಅಥವಾ ಠೇವಣಿಯಿಂದ ನಗದಿಗೆ ವರ್ಗಾಯಿಸಬಹುದು. ಚೆಕ್ಕುಗಳನ್ನು ಸರಕುಗಳು ಮತ್ತು ಸೇವೆಗಳ ವ್ಯವಹಾರದಲ್ಲಿ ಬಳಸಬಹುದು. ಇವುಗಳನ್ನು ಸಮೀಪ ಹಣದ ಸ್ವತ್ತುಗಳು ಎನ್ನುತ್ತಾರೆ.




ಚೆಕ್‌ಲೀಫ್

@KTBS NOT TO BE REPUBLISHED

**ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್:** ಕ್ರೆಡಿಟ್ ಕಾರ್ಡ್ ಹೊಂದಿರುವವರು ನಿರ್ದಿಷ್ಟ ಪೂರೈಕೆದಾರರಲ್ಲಿ ಸಾಲದ ಮೇಲೆ ಸರಕುಗಳು ಮತ್ತು ಸೇವೆಗಳನ್ನು ಕೊಳ್ಳಬಹುದಾಗಿದೆ. ನಂತರ ಕ್ರೆಡಿಟ್ ಕಾರ್ಡನ್ನು ಎಲೆಕ್ಟ್ರಾನಿಕ್ ಯಂತ್ರದ ಮೇಲೆ ಒತ್ತಿ ಎಳೆಯಲಾಗುತ್ತದೆ. ಆಗ ಕೊಳ್ಳುವವನ ಸಾಲದ ಖಾತೆಯಿಂದ ಮಾರುವವನ ಖಾತೆಗೆ ಹಣ ಸಂದಾಯವಾಗುತ್ತದೆ. ಡೆಬಿಟ್ ಕಾರ್ಡ್ ಸಹ ಇದೇ ರೀತಿಯಲ್ಲಿ ಕೆಲಸಮಾಡುತ್ತದೆ. ಆದರೆ ಡೆಬಿಟ್ ಕಾರ್ಡಿನಲ್ಲಿ ಹಣವು ಕೊಳ್ಳುವವನ ಉಳಿತಾಯ ಖಾತೆಯಿಂದ ಸಂದಾಯವಾಗುತ್ತದೆ.




ಡೆಬಿಟ್ ಕಾರ್ಡು

**ಹಣದ ಕಾರ್ಯಗಳು :** ಹಣದ ಕಾರ್ಯಗಳನ್ನು ಮುಖ್ಯವಾಗಿ ಮೂರು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ,

1. ಪ್ರಾಥಮಿಕ ಅಥವಾ ಮುಖ್ಯ ಕಾರ್ಯಗಳು
2. ಪೂರಕ ಕಾರ್ಯಗಳು
3. ಇತರೆ ಕಾರ್ಯಗಳು

1. **ಪ್ರಾಥಮಿಕ ಅಥವಾ ಮುಖ್ಯ ಕಾರ್ಯಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ :**

ಅ) **ವಿನಿಮಯ ಮಾಧ್ಯಮ ಅಥವಾ ಸಂದಾಯದ ಸಾಧನ :** ಸರಕುಗಳು ಮತ್ತು ಸೇವೆಗಳನ್ನು ಕೊಳ್ಳಲು ಮತ್ತು ಮಾರಲು ಹಣವನ್ನು ಮಧ್ಯವರ್ತಿ ಸಾಧನವನ್ನಾಗಿ ಉಪಯೋಗಿಸಲಾಗುತ್ತದೆ. ಹಣದ ಬಳಕೆಯು ವ್ಯವಹಾರವನ್ನು ಎರಡು ಭಾಗವನ್ನಾಗಿ ವಿಂಗಡಿಸಿದೆ. ಮೊದಲನೆಯದಾಗಿ ಮಾರುಕಟ್ಟೆಯಲ್ಲಿ ಸರಕುಗಳು ಮತ್ತು ಸೇವೆಗಳನ್ನು ಮಾರಾಟ ಮಾಡುವುದರಿಂದ ಹಣ ಲಭ್ಯವಾಗುತ್ತದೆ. ಎರಡನೆಯದಾಗಿ ಹಣವನ್ನು ಬಳಸಿಕೊಂಡು ಮಾರುಕಟ್ಟೆಯಿಂದ ಸರಕುಗಳು ಮತ್ತು ಸೇವೆಗಳನ್ನು ಕೊಳ್ಳಲಾಗುತ್ತದೆ.

ಬ) **ಮೌಲ್ಯಮಾಪನ :** ಹಣವು ವಸ್ತುವಿನಿಮಯ ಪದ್ಧತಿಯ ಅತಿ ದೊಡ್ಡ ಅನಾನುಕೂಲತೆಯನ್ನು ಹೋಗಲಾಡಿಸಿದೆ. ಅದು ಎಲ್ಲ ಸರಕುಗಳು ಮತ್ತು ಸೇವೆಗಳ ಮೌಲ್ಯವನ್ನು ಬೆಲೆಯ ರೂಪದಲ್ಲಿ ವ್ಯಕ್ತಪಡಿಸುತ್ತದೆ. ಇದರಿಂದ ವಿವಿಧ ರೀತಿಯ ಸರಕುಗಳು ಮತ್ತು ಸೇವೆಗಳ ವಿನಿಮಯ ದರವನ್ನು ನಿರ್ಧರಿಸುವುದು ಸರಳವಾಗಿದೆ.

2. **ಪೂರಕ ಕಾರ್ಯಗಳು :** ಹಣದ ಪೂರಕ ಕಾರ್ಯಗಳು ಮೂರು. ಅವುಗಳೆಂದರೆ,

ಅ) **ವಿಳಂಬಿತ ಸಂದಾಯದ ಪ್ರಮಾಣ :** ಹಣವು ಭವಿಷ್ಯದ ಸಂದಾಯಗಳಿಗೂ ಸಹಾಯಕವಾಗಿದೆ. ಸಾಲಗಾರನೊಬ್ಬನು ನಿರ್ದಿಷ್ಟ ಪ್ರಮಾಣದ ಹಣವನ್ನು ಭವಿಷ್ಯದ ನಿರ್ದಿಷ್ಟ ದಿನಾಂಕದಂದು ಸಂದಾಯಮಾಡುವ ಕರಾರಿನ ಮೇಲೆ ಸಾಲವಾಗಿ ಪಡೆಯಬಹುದು. ಅದೇ ರೀತಿಯಲ್ಲಿ ವ್ಯಕ್ತಿಯೊಬ್ಬನು ಸದ್ಯದಲ್ಲಿ ಸರಕುಗಳನ್ನು ಕೊಂಡು, ಅವುಗಳ ಹಣವನ್ನು ಮುಂದಿನ ನಿರ್ದಿಷ್ಟ ದಿನಾಂಕದಂದು ಸಂದಾಯ ಮಾಡಬಹುದು.

ಬ) **ಮೌಲ್ಯ ಸಂಗ್ರಹ ಅಥವಾ ಕೊಳ್ಳುವ ಶಕ್ತಿಯ ಸಂಗ್ರಹ :** ವಸ್ತುವಿನಿಮಯ ಪದ್ಧತಿಯಿದ್ದಾಗ ಉಳಿತಾಯ ಮಾಡಲು ಸಾಧ್ಯವಿರಲಿಲ್ಲ. ಏಕೆಂದರೆ ಕೆಲವು ಸರಕುಗಳು ನಾಶ ಹೊಂದುತ್ತಿದ್ದವು. ಹಣ ಬಳಕೆಗೆ ಬಂದ ಮೇಲೆ, ಅದು ನಾಶ ಹೊಂದದಿರುವುದರಿಂದ ಅದು ಭವಿಷ್ಯಕ್ಕಾಗಿ ಉಳಿತಾಯ ಮಾಡಲು ಸಹಾಯಕವಾಗಿದೆ. ಆದರೆ ಹಣದುಬ್ಬರದ ಪ್ರವೃತ್ತಿಗೆ ಅನುಗುಣವಾಗಿ ಹಣದ ಮೌಲ್ಯವು ಹೆಚ್ಚಬಹುದು ಅಥವಾ ಕಡಿಮೆಯಾಗಬಹುದು. ಉಳಿತಾಯದ ಹಣವನ್ನು ಬಂಡವಾಳ ಸಂಗ್ರಹಕ್ಕೆ ಬಳಕೆಮಾಡಲು ಸಾಧ್ಯವಿದೆ.

ಕ) **ಮೌಲ್ಯ ವರ್ಗಾವಣೆ ಅಥವಾ ಕೊಳ್ಳುವ ಶಕ್ತಿಯ ವರ್ಗಾವಣೆ :** ಹಣದ ಮೂಲಕ ಸಂಪತ್ತನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾಗೆಯೇ ವಿದೇಶಗಳಿಗೆ ಸಾಗಿಸಲು ಸಾಧ್ಯವಾಗಿದೆ. ಇದರಿಂದ ಕೊಳ್ಳುವ ಶಕ್ತಿಯನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವ ಅವಶ್ಯಕತೆ ಉಂಟಾಗಿದೆ. ಹಣದ ರೂಪದಲ್ಲಿ ಸಾಲ ಕೊಡುವ ಮತ್ತು ಸಾಲ ತೆಗೆದುಕೊಳ್ಳುವ ವ್ಯವಹಾರ ನಡೆಯುತ್ತದೆ. ಹಣದ ಈ ಕಾರ್ಯದಿಂದಾಗಿ ವ್ಯಕ್ತಿ ತನ್ನಲ್ಲಿರುವ ಹೆಚ್ಚುವರಿ ಹಣವನ್ನು ಉತ್ಪಾದನಾ ಉದ್ದೇಶಗಳಿಗಾಗಿ ಇತರರಿಗೆ ಸಾಲ ನೀಡಿ, ಬಡ್ಡಿ ಗಳಿಸಬಹುದಾಗಿದೆ.

3. **ಇತರೆ ಕಾರ್ಯಗಳು :** ಪ್ರಾಥಮಿಕ ಮತ್ತು ಮಾಧ್ಯಮಿಕ ಕಾರ್ಯಗಳಲ್ಲದೆ, ಹಣವು ಹೆಚ್ಚುವರಿಯಾಗಿ ಕೆಲವು ಸಂಭಾವ್ಯ ಕಾರ್ಯಗಳನ್ನೂ ಸಹ ನಿರ್ವಹಿಸುತ್ತಿದೆ. ಅವುಗಳೆಂದರೆ,

ಅ) **ಸಾಲದ ತಳಹದಿ :** ಹಣವು ಸಾಲದ ತಳಹದಿಯನ್ನು ರೂಪಿಸುತ್ತದೆ. ಚೆಕ್ ವ್ಯವಸ್ಥೆಯು ಬ್ಯಾಂಕುಗಳ ಸಾಲ ನಿರ್ಮಾಣಕ್ಕೆ ಅವಕಾಶಮಾಡಿಕೊಟ್ಟಿದೆ.

@KTBS NOT TO BE REPUBLISHED

ಬ) **ಬಂಡವಾಳದ ಉತ್ಪಾದಕತೆ ಹೆಚ್ಚಳ :** ಬಂಡವಾಳ ರೂಪದಲ್ಲಿರುವ ಹಣವನ್ನು ಹಲವಾರು ಉಪಯೋಗಗಳಲ್ಲಿ ತೊಡಗಿಸಲಾಗುತ್ತದೆ. ಹಣದ ದ್ರವ್ಯತೆಯ ಲಕ್ಷಣವು ಬಂಡವಾಳವನ್ನು ಕಡಿಮೆ ಉತ್ಪಾದಕತೆಯಿಂದ ಹೆಚ್ಚು ಉತ್ಪಾದಕತೆಯ ಬಳಕೆಗೆ ವರ್ಗಾಯಿಸಲು ಸಹಾಯಕವಾಗಿದೆ.

**ಸಾಲದ ವಿಧಗಳು**

ಸಾಲವು, ಸಾಲ ಕೊಡುವವನು ಸಾಲ ಪಡೆಯುವವನಿಗೆ ಹಣ, ಸರಕುಗಳು ಅಥವಾ ಸೇವೆಗಳನ್ನು ಭವಿಷ್ಯದ ಸಂದಾಯದ ಮೂಲಕ ಹಿಂಪಡೆಯುವ ಭರವಸೆಯಂತೆ ಪೂರೈಸುವ ಒಂದು ಒಪ್ಪಂದವಾಗಿದೆ. ಭಾರತದಲ್ಲಿ ಎರಡು ಬಗೆಯ ಸಾಲಗಳಿವೆ. ಅವುಗಳೆಂದರೆ ಔಪಚಾರಿಕ ಸಾಲ ಮತ್ತು ಅನೌಪಚಾರಿಕ ಸಾಲ.

1. **ಅನೌಪಚಾರಿಕ ಸಾಲ :** ಭಾರತದಲ್ಲಿ ಪುರಾತನ ಕಾಲದಿಂದಲೂ ದೇಶೀಯ ಬ್ಯಾಂಕುಗಳ ಮೂಲಕ ಅನೌಪಚಾರಿಕ ಸಾಲ ನೀಡುವ ವ್ಯವಸ್ಥೆಯಿದೆ. ಅನೌಪಚಾರಿಕ ಸಾಲ ವಲಯವು ಲೇವಾದೇವಿಗಾರರಾದ ಶ್ರಾಫರು, ಮಹಾಜನರು, ಶೇಟರು, ಸಾಹುಕಾರರು, ಚೆಟ್ಟಿಯಾರರು ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿದೆ.

19 ನೇ ಶತಮಾನದ ಮಧ್ಯಭಾಗದವರೆಗೆ ಭಾರತದಲ್ಲಿ ದೇಶೀಯ ಬ್ಯಾಂಕುಗಳು ಹಣಕಾಸು ವ್ಯವಸ್ಥೆಯ ಕೇಂದ್ರ ಭಾಗವಾಗಿದ್ದವು. ಯೂರೋಪಿನ ಬ್ಯಾಂಕರರ ಆಗಮನದಿಂದ ದೇಶೀಯ ಬ್ಯಾಂಕರರ ಏಕಸ್ವಾಮ್ಯವು ತೊಂದರೆಗೀಡಾಯಿತು. ಏಕೆಂದರೆ ಯೂರೋಪಿನ ಬ್ಯಾಂಕರರು ಭಾರತದಲ್ಲಿ ಸರ್ಕಾರದ ರಕ್ಷಣೆ ಪಡೆದಿದ್ದರು. ಆದಾಗ್ಯೂ ಹಣದ ಲೇವಾದೇವಿದಾರರು ಸಾಲ ನೀಡಿಕೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದರು. ಸ್ವಾತಂತ್ರ್ಯಾನಂತರ ಭಾರತ ಸರ್ಕಾರವು ಹಣದ ಲೇವಾದೇವಿದಾರರ ಹಿಡಿತದಿಂದ ಮುಕ್ತಗೊಳಿಸಲು ಹಲವಾರು ಪ್ರಯತ್ನಗಳನ್ನು ಮಾಡಿದೆ. 1969 ರಲ್ಲಿ 14 ಮತ್ತು 1980 ರಲ್ಲಿ 6 ವಾಣಿಜ್ಯ ಬ್ಯಾಂಕುಗಳನ್ನು ಸರ್ಕಾರವು ರಾಷ್ಟ್ರೀಕರಣ ಮಾಡಿತು. ಗ್ರಾಮೀಣ ಭಾಗದ ಜನರ ಸಾಲದ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಪ್ರತ್ಯೇಕವಾಗಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕು(RRB's)ಗಳನ್ನು ಸ್ಥಾಪಿಸಿತು. ಆದರೆ ಗ್ರಾಮೀಣ ಲೇವಾದೇವಿದಾರರು ಈಗಲೂ ಗ್ರಾಮೀಣ ಸಾಲ ನೀಡಿಕೆಯಲ್ಲಿ ಗಣನೀಯ ಪಾಲನ್ನು ಪೂರೈಸುತ್ತಿದ್ದಾರೆ.

NOT TO BE REPUBLISHED ©KTBS

2. **ಔಪಚಾರಿಕ ಸಾಲ :** ಔಪಚಾರಿಕ ಸಾಲ ವಲಯವು ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳನ್ನು ಒಳಗೊಂಡಿದೆ. ಅವು ಅತಿಯಾದ ಬಡ್ಡಿ ದರಗಳನ್ನು ವಿಧಿಸುವುದಿಲ್ಲ. ಅವುಗಳ ಉದ್ದೇಶ ಕೇವಲ ಲಾಭ ಗಳಿಸುವುದಲ್ಲದೇ, ಸಾಮಾಜಿಕ ಜವಾಬ್ದಾರಿ ಹೊಂದಿವೆ. ಅವುಗಳು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿವೆ.

**ಬ್ಯಾಂಕುಗಳು ಮತ್ತು ಠೇವಣಿಗಳು :** ಬ್ಯಾಂಕುಗಳು ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಅತಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿವೆ. **ಬ್ಯಾಂಕ್** ಪದದ ಮೂಲದ ಬಗ್ಗೆ ಏಕಾಭಿಪ್ರಾಯವಿಲ್ಲ. ಇಂಗ್ಲೀಷಿನ **ಬ್ಯಾಂಕ್** ಎಂಬ ಪದವು ಇಟಲಿ ಭಾಷೆಯ **ಬ್ಯಾಂಕೊ(Banco)** ಪದದಿಂದ ಬಂದಿದೆ ಎಂದು ಕೆಲವರು ನಂಬುತ್ತಾರೆ. ಬ್ಯಾಂಕೊ ಎಂದರೆ ಬೆಂಚು ಎಂದರ್ಥ. ಮತ್ತೆ ಕೆಲವರು ಇದು ಜರ್ಮನ್ ಭಾಷೆಯ **ಬ್ಯಾಂಕ್(Banck)** ಪದದಿಂದ ಬಂದಿದೆ ಎನ್ನುತ್ತಾರೆ. **'ಕೂಡು ಬಂಡವಾಳ ನಿಧಿ** ಅಥವಾ ಒಂದು **'ಸಾಮಾನ್ಯ ನಿಧಿ'** ಎಂದು ಇದರ ಅರ್ಥ.

1949 ರ ಭಾರತೀಯ ಬ್ಯಾಂಕುಗಳ ನಿಯಂತ್ರಣ ಕಾಯಿದೆಯ ವ್ಯಾಖ್ಯೆಯಂತೆ "ಭಾರತದಲ್ಲಿ ಬ್ಯಾಂಕಿಂಗ್ ವ್ಯವಹಾರ ನಡೆಸುವ ಯಾವುದೇ ಕಂಪನಿ ಬ್ಯಾಂಕಿಂಗ್ ಕಂಪನಿ ಎನಿಸುತ್ತದೆ". 'ಬ್ಯಾಂಕಿಂಗ್' ಎಂದರೆ "ಸಾಲ ನೀಡುವ ಅಥವಾ ಬಂಡವಾಳ ಹೂಡುವ ಉದ್ದೇಶಕ್ಕಾಗಿ ಸಾರ್ವಜನಿಕರಿಂದ ಹಣವನ್ನು ಠೇವಣಿಯಾಗಿ ಸ್ವೀಕರಿಸುವುದು, ಬೇಡಿಕೆ ಅಥವಾ ಇತರೆ ಆಧಾರದ ಮೇಲೆ ಹಣ ಮರುಪಾವತಿಸುವುದು ಮತ್ತು ಚೆಕ್ಕುಗಳು, ಡ್ರಾಫ್ಟುಗಳು, ಆದೇಶಗಳು ಮುಂತಾದುವುಗಳ ಮೂಲಕ ಹಣ ಹಿಂಪಡೆಯುವುದು" ಎಂದರ್ಥ.

**ಬ್ಯಾಂಕುಗಳ ಮಹತ್ವ :** ಬ್ಯಾಂಕುಗಳು ಆರ್ಥಿಕ ಅಭಿವೃದ್ಧಿಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತಿವೆ. ಬ್ಯಾಂಕುಗಳು ಆಕರ್ಷಕ ಬಡ್ಡಿ ದರವನ್ನು ನೀಡುವ ಮೂಲಕ ಸಾರ್ವಜನಿಕರ ಉಳಿತಾಯವನ್ನು ಸಂಗ್ರಹಿಸುತ್ತವೆ ಮತ್ತು ಬಂಡವಾಳ ಸಂಗ್ರಹದ ಪ್ರಕ್ರಿಯೆಗೆ ಸಹಾಯಕವಾಗಿವೆ. ಬ್ಯಾಂಕುಗಳು ಚೆಕ್ ವ್ಯವಸ್ಥೆಯ ಮೂಲಕ ಅನುಕೂಲಕರವಾದ ಹಣಸಂದಾಯದ ಮಾರ್ಗವನ್ನು ಒದಗಿಸಿವೆ. ಇವು ಸದ್ಯದಲ್ಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ಬಡ್ಡಿದರದಲ್ಲಿ ಸಾಲಗಳನ್ನು ನೀಡುತ್ತವೆ. ಆ ಮೂಲಕ ಅವು ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಅಭಿವೃದ್ಧಿಗೆ ಸಹಾಯಕವಾಗಿವೆ. ಅಲ್ಲದೆ ಬ್ಯಾಂಕುಗಳು ಹುಂಡಿ(Bill of Exchange)ಗಳನ್ನು ವರ್ಗಾಯಿಸುತ್ತವೆ. ಅವು ಬೇಡಿಕೆ ಹುಂಡಿ(Demand Draft) ಗಳು, ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್‌ಗಳನ್ನೂ ಸಹ ನೀಡುತ್ತವೆ. ಬ್ಯಾಂಕುಗಳು ಷೇರುಗಳ ಮೇಲೆ ಹಣವನ್ನು ಹೂಡುತ್ತವೆ. ಇವು ಸಾಲ ಸೃಷ್ಟಿಯಲ್ಲಿ(Credit creation) ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ.

**ಬ್ಯಾಂಕುಗಳ ವಿಧಗಳು :** ಬ್ಯಾಂಕುಗಳಲ್ಲಿ ಹಲವಾರು ವಿಧಗಳಿವೆ. ಪ್ರತಿಯೊಂದು ವಿಧದ ಬ್ಯಾಂಕು ಸಾಮಾನ್ಯವಾಗಿ ಒಂದು ನಿರ್ಧಿಷ್ಟ ವಿಧದ ವ್ಯವಹಾರದಲ್ಲಿ ಪರಿಣತಿ ಪಡೆದಿರುತ್ತದೆ.

1. **ಕೈಗಾರಿಕಾ ಬ್ಯಾಂಕುಗಳು :** ಕೈಗಾರಿಕಾ ಬ್ಯಾಂಕುಗಳು ಕೈಗಾರಿಕೆಗಳಿಗೆ ಅಲ್ಪಾವಧಿ ಮತ್ತು ದೀರ್ಘಾವಧಿ ಹೀಗೆ ಎರಡೂ ರೀತಿಯ ಸಾಲಗಳನ್ನು ನೀಡುತ್ತವೆ. ಇವು ಕೈಗಾರಿಕೆಗಳಿಗೆ ಬೇಕಾದ ಸ್ಥಿರ ಬಂಡವಾಳವನ್ನು ಒದಗಿಸಲು ದೀರ್ಘಾವಧಿ ಸಾಲವನ್ನು ನೀಡುತ್ತವೆ. ಉದಾ: ಕೈಗಾರಿಕಾ ಹಣಕಾಸು ನಿಗಮ, ಕೈಗಾರಿಕಾ ಸಾಲ ಮತ್ತು ಹೂಡಿಕೆ ನಿಗಮ, ಭಾರತೀಯ ಕೈಗಾರಿಕಾಭಿವೃದ್ಧಿ ಬ್ಯಾಂಕ್ ಮತ್ತು ವಿವಿಧ ರಾಜ್ಯ ಹಣಕಾಸು ನಿಗಮಗಳು.

2. **ವಿನಿಮಯ ಬ್ಯಾಂಕುಗಳು :** ವಿನಿಮಯ ಬ್ಯಾಂಕುಗಳು ದೇಶದ ವಿದೇಶಿ ವ್ಯಾಪಾರಕ್ಕೆ ಹಣಕಾಸು ಒದಗಿಸುತ್ತವೆ ಮತ್ತು ವಿದೇಶಿ ಹಣವನ್ನು ವ್ಯವಹರಿಸುತ್ತವೆ. ಇಲ್ಲಿ ಹುಂಡಿಗಳು ಮುಖ್ಯ ಸಾಲದ ಸಾಧನಗಳಾಗಿವೆ. ಇವು ಸಾಮಾನ್ಯ ಬ್ಯಾಂಕುಗಳ ವ್ಯವಹಾರವನ್ನೂ ಸಹ ನಿರ್ವಹಿಸುತ್ತವೆ ಆದರೆ ಅದರ ಪಾಲು ಕಡಿಮೆ.

3. **ಉಳಿತಾಯ ಬ್ಯಾಂಕುಗಳು:** ಈ ಬ್ಯಾಂಕುಗಳು ಕಡಿಮೆ ಆದಾಯ ಹೊಂದಿರುವವರಲ್ಲಿಯೂ ಉಳಿತಾಯದ ಹವ್ಯಾಸವನ್ನು ಪ್ರೋತ್ಸಾಹಿಸುತ್ತವೆ. ಇವು ವ್ಯಕ್ತಿಗಳ ಸಣ್ಣ ಉಳಿತಾಯದ ಸಂಗ್ರಹಕ್ಕೆ ಸಂಬಂಧಪಟ್ಟಿವೆ. ಭಾರತದಲ್ಲಿ ಉಳಿತಾಯ ಬ್ಯಾಂಕುಗಳ ವ್ಯವಹಾರವನ್ನು ಅಂಚೆ ಕಚೇರಿಗಳು ಮತ್ತು ವಾಣಿಜ್ಯ ಬ್ಯಾಂಕುಗಳು ನಿರ್ವಹಿಸುತ್ತಿವೆ.

4. **ಸಹಕಾರಿ ಬ್ಯಾಂಕುಗಳು :** ಸಹಕಾರಿ ಬ್ಯಾಂಕುಗಳು ಸಹಕಾರಿ ತತ್ವಗಳ ಮೇಲೆ ನಡೆಯುತ್ತಿವೆ. ಅವು ಸಹಕಾರಿ ಸಂಘಗಳ ಕಾಯಿದೆ ಅಡಿಯಲ್ಲಿ ನೊಂದಾಯಿಸಲ್ಪಟ್ಟಿರುತ್ತವೆ. ಅವು ತಮ್ಮ ಚಟುವಟಿಕೆಗಳನ್ನು ಸದಸ್ಯರುಗಳಿಗೆ ಮಾತ್ರ ಮಿತಿಗೊಳಿಸಿರುತ್ತವೆ. ಈ ಬ್ಯಾಂಕುಗಳು ಸದಸ್ಯರಿಂದ ಠೇವಣಿಗಳನ್ನು ಸ್ವೀಕರಿಸುತ್ತವೆ ಮತ್ತು ಅವರಿಗೆ ನ್ಯಾಯೋಚಿತ ದರದಲ್ಲಿ ಸಾಲಗಳನ್ನು ಮುಂಗಡವಾಗಿ ನೀಡುತ್ತವೆ.

©KTBS NOT TO BE REPUBLISHED

5. **ಭೂ ಅಡಮಾನ ಬ್ಯಾಂಕುಗಳು :** ಇವುಗಳೂ ಕೂಡ ಸಹಕಾರಿ ಬ್ಯಾಂಕುಗಳಾಗಿವೆ. ಇವು ಕೃಷಿಕರಿಗೆ ಜಮೀನಿನ ಆಧಾರದ ಮೇಲೆ ಕಾಲುವೆಗಳ ನಿರ್ಮಾಣ, ನೀರಾವರಿ, ತೋಟ ನಿರ್ಮಾಣ ಹಾಗೂ ಇನ್ನಿತರೆ ಶಾಶ್ವತ ಸುಧಾರಣೆಗಳಿಗಾಗಿ ದೀರ್ಘಾವಧಿ ಸಾಲವನ್ನು ನೀಡುತ್ತವೆ. ಇವುಗಳನ್ನು ಭೂ ಅಭಿವೃದ್ಧಿ ಬ್ಯಾಂಕುಗಳೆಂತಲೂ ಕರೆಯುತ್ತಾರೆ.

**ವಾಣಿಜ್ಯ ಬ್ಯಾಂಕುಗಳು :** ಸಾರ್ವಜನಿಕರಿಂದ ಠೇವಣಿಗಳನ್ನು ಸಂಗ್ರಹಿಸುವುದು ವಾಣಿಜ್ಯ ಬ್ಯಾಂಕುಗಳ ಪ್ರಮುಖ ಹಾಗೂ ಮೂಲ ಕೆಲಸವಾಗಿದೆ. ವಾಣಿಜ್ಯ ಬ್ಯಾಂಕುಗಳು ಸಂಗ್ರಹಿಸುವ ಠೇವಣಿಗಳ ಮುಖ್ಯ ವಿಧಗಳೆಂದರೆ, ಚಾಲ್ತಿ ಖಾತೆ, ಉಳಿತಾಯ ಖಾತೆ, ಮುದ್ಧತಿ ಅಥವಾ ವಾಯಿದೆ ಠೇವಣಿಗಳು.


**ಚಾಲ್ತಿ ಖಾತೆ ಠೇವಣಿಗಳು :** ಚಾಲ್ತಿಖಾತೆ ಠೇವಣಿಗಳನ್ನು ಸಾಮಾನ್ಯವಾಗಿ ವ್ಯವಹಾರಿ ಸಂಸ್ಥೆಗಳು, ವ್ಯಾಪಾರಗಾರರು ಮತ್ತು ಸಾರ್ವಜನಿಕ ಅಧಿಕಾರಸ್ಥರು ತೆರೆದಿರುತ್ತಾರೆ. ಅವರು ಬಡ್ಡಿ ಗಳಿಸುವುದಕ್ಕಿಂತ ಹೆಚ್ಚಾಗಿ ಚೆಕ್ಕುಗಳ ಮೂಲಕ ಹಣ ಸಂದಾಯಮಾಡುವ ಅನುಕೂಲತೆಗಾಗಿ ತೆರೆದಿರುತ್ತಾರೆ. ಚಾಲ್ತಿಖಾತೆಯು ಪದೇ ಪದೇ ಬ್ಯಾಂಕಿನ ವ್ಯವಹಾರವನ್ನು ನಡೆಸಲು ಸಹಾಯಕವಾಗಿದೆ.

**ಉಳಿತಾಯ ಖಾತೆ ಠೇವಣಿಗಳು :** ಉಳಿತಾಯ ಠೇವಣಿಗಳನ್ನು ಗ್ರಾಹಕರು ತಮ್ಮ ಚಾಲ್ತಿ ಆದಾಯದ ಒಂದು ಭಾಗವನ್ನು ಉಳಿತಾಯ ಮಾಡುವುದಕ್ಕಾಗಿ ತೆರೆಯುತ್ತಾರೆ. ಗ್ರಾಹಕರು ತಮಗೆ ಅಗತ್ಯವಿರುವಾಗ ತಮ್ಮ ಖಾತೆಯಿಂದ ತಮ್ಮ ಹಣವನ್ನು ಹಿಂಪಡೆಯಬಹುದು. ಬ್ಯಾಂಕು ಉಳಿತಾಯ ಠೇವಣಿಯಲ್ಲಿರುವ ಹಣಕ್ಕೆ ಸ್ವಲ್ಪ ಪ್ರಮಾಣದ ಬಡ್ಡಿಯನ್ನು ನೀಡುತ್ತದೆ.

**ಕಾಲಾವಧಿ ಠೇವಣಿಗಳು :** ಮುದ್ಧತಿ ಠೇವಣಿಗಳು ಹೂಡಿಕೆದಾರರಿಗೆ ಅವರ ಅಸಲಿಗೆ ಸುರಕ್ಷತೆ ಮತ್ತು ಹೆಚ್ಚಿನ ಪ್ರತಿಫಲವನ್ನು ತಂದುಕೊಡುವ ಸಾಧನಗಳಾಗಿವೆ. ಮುದ್ಧತಿ ಠೇವಣಿಗಳು ನಿರ್ಧಿಷ್ಟ ಅವಧಿಗಾಗಿ ತೆರೆದ ಠೇವಣಿಗಳಾಗಿರುವುದರಿಂದ ಇವುಗಳನ್ನು ವಾಯಿದೆ ಠೇವಣಿಗಳೆಂತಲೂ ಕರೆಯುತ್ತಾರೆ.

**ಭಾರತೀಯ ರಿಸರ್ವ್ ಬ್ಯಾಂಕು (RBI)**

ಭಾರತೀಯ ರಿಸರ್ವ್ ಬ್ಯಾಂಕು ಭಾರತದ ಕೇಂದ್ರ ಬ್ಯಾಂಕಾಗಿದೆ. ಇದು ಒಂದನೇ ಏಪ್ರಿಲ್, 1935 ರಂದು ಸ್ಥಾಪನೆಯಾಯಿತು. ಇದು ಮೂಲತಃ ಷೇರುದಾರರ ಬ್ಯಾಂಕಾಗಿ ಪ್ರಾರಂಭವಾಯಿತು. ಒಂದನೇ ಜನವರಿ, 1949 ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕನ್ನು ರಾಷ್ಟ್ರೀಕರಿಸಲಾಯಿತು. ಈಗ ಇದು ಭಾರತ ಸರ್ಕಾರದ ಮಾಲೀಕತ್ವ ಮತ್ತು ನಿಯಂತ್ರಣದಲ್ಲಿದೆ.



ಭಾರತೀಯ ರಿಸರ್ವ್ ಬ್ಯಾಂಕು

**ನಿಮಗಿದು ತಿಳಿದಿರಲಿ :**

ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಸ್ತಾವನೆಯಲ್ಲಿ ರಿಸರ್ವ್ ಬ್ಯಾಂಕಿನ ಕಾರ್ಯಗಳನ್ನು ಈ ರೀತಿಯಲ್ಲಿ ವರ್ಣಿಸಲಾಗಿದೆ :– "ಬ್ಯಾಂಕ್ ನೋಟುಗಳ ನೀಡಿಕೆಯನ್ನು ನಿಯಂತ್ರಿಸುವುದು ಮತ್ತು ಭಾರತದ ಹಣಕಾಸು ಸ್ಥಿರತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಭದ್ರತೆಗಳನ್ನು ಇಡುವುದು ಹಾಗೂ ಸಾಮಾನ್ಯವಾಗಿ ದೇಶದ ಹಣ ಮತ್ತು ಸಾಲದ ವ್ಯವಸ್ಥೆಯನ್ನು ನಿರ್ವಹಿಸುವುದು".

©KTBS NOT TO BE REPUBLISHED

**ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳು (ಕೇಂದ್ರ ಬ್ಯಾಂಕ್) :**

**1) ನೋಟು ಚಲಾವಣೆಯ ಏಕಸ್ವಾಮ್ಯ :** ಭಾರತೀಯ ರಿಸರ್ವ್ ಬ್ಯಾಂಕ್ ರೂ.2 ಮತ್ತು ಅದರ ಮೇಲ್ಪಟ್ಟು ಮೌಲ್ಯದ ನೋಟುಗಳನ್ನು ಮುದ್ರಿಸಿ, ಚಲಾವಣೆಗೆ ತರುವ ಏಕಸ್ವಾಮ್ಯವನ್ನು ಪಡೆದಿದೆ. ಅದು ರೂ. 2, 5, 10, 20, 50, 100, 500 ಮತ್ತು 1000 ಮುಖಬೆಲೆಯ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುತ್ತದೆ. ಒಂದು ರೂಪಾಯಿಯ ನೋಟನ್ನು ಸರ್ಕಾರದ ಪರವಾಗಿ RBI ಮುದ್ರಿಸಿ ಚಲಾಯಿಸುತ್ತದೆ. ಆದಾಗ್ಯೂ ಒಂದು ಹಾಗೂ ಎರಡು ರೂಪಾಯಿ ನಾಣ್ಯ ಚಲಾವಣೆಗೆ ತರುವ ಹಕ್ಕು ಕೇಂದ್ರ ಸರ್ಕಾರಕ್ಕಿದೆ.



**ನೋಟುಗಳ ಮುಖ ಬೆಲೆ**

**2) ಸರ್ಕಾರದ ಬ್ಯಾಂಕಾಗಿ ಕಾರ್ಯನಿರ್ವಹಣೆ :** RBI ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಠೇವಣಿಗಳನ್ನು ಸ್ವೀಕರಿಸುತ್ತದೆ. ಇದು ಸರ್ಕಾರದ ಪರವಾಗಿ ತೆರಿಗೆಗಳು ಮತ್ತು ಇತರೆ ದರಗಳ ಹಣವನ್ನು ಸಂಗ್ರಹಿಸುತ್ತದೆ. ಇದು ನಿರ್ಧಿಷ್ಟ ಸೂಚನೆಗಳ ಮೇರೆಗೆ ಸರ್ಕಾರದ ಪರವಾಗಿ ಸಾರ್ವಜನಿಕರಿಗೆ ಹಣ ಸಂದಾಯ ಮಾಡುತ್ತದೆ. RBI ಸರ್ಕಾರಿ ಸಾಲ ಪತ್ರಗಳು ಮತ್ತು ಖಜಾನೆ ಹುಂಡಿಗಳನ್ನು ಮಾರಾಟ ಮಾಡುತ್ತದೆ ಮತ್ತು ಸರ್ಕಾರಕ್ಕೆ ಹಣಕಾಸು ಸಲಹೆಗಾರನಾಗಿ ಕಾರ್ಯನಿರ್ವಹಿಸುತ್ತದೆ.

ಆರ್‌ಬಿಐ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮಾರ್ಗಗಳು ಮತ್ತು ವಿಧಾನಗಳನ್ನು ವಿಸ್ತರಿಸುತ್ತದೆ. "ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್" (WMA) ಆದಾಯ ಸಂಗ್ರಹಣೆಗಳು ಮತ್ತು ಸರ್ಕಾರದ ಆದಾಯ ವೆಚ್ಚಗಳ ನಡುವಿನ ತಾತ್ಕಾಲಿಕ ಹೊಂದಾಣಿಕೆಗಳನ್ನು ಪೂರೈಸಲು ಈ ಸೌಲಭ್ಯವನ್ನು ಒದಗಿಸಲಾಗಿದೆ. ಅಂತಹ ಮುಂಗಡಗಳ ಗರಿಷ್ಠ ಪ್ರಮಾಣ ಮತ್ತು ಅವಧಿಯನ್ನು RBI ಮತ್ತು ಸಂಬಂಧಿತ ಸರ್ಕಾರದ ನಡುವಿನ ಒಪ್ಪಂದಗಳಿಂದ ನಿಯಂತ್ರಿಸಲಾಗುತ್ತದೆ.

**3) ಬ್ಯಾಂಕುಗಳ ಬ್ಯಾಂಕು :** ಬ್ಯಾಂಕುಗಳ ಬ್ಯಾಂಕಾಗಿ ಕಾರ್ಯನಿರ್ವಹಿಸುತ್ತದೆ. ದೇಶದಲ್ಲಿರುವ ಎಲ್ಲಾ ಬ್ಯಾಂಕುಗಳನ್ನು ನಿಯಂತ್ರಿಸುತ್ತದೆ. ದೇಶದಲ್ಲಿನ ಎಲ್ಲಾ ಬ್ಯಾಂಕುಗಳು ತಮ್ಮ ಠೇವಣಿ ಹಣದಲ್ಲಿ ಒಂದು ಭಾಗವನ್ನು RBI ನಲ್ಲಿ ಮೀಸಲು ಇಡಬೇಕು. ಬ್ಯಾಂಕುಗಳಿಗೆ ಹೆಚ್ಚುವರಿ ಹಣದ ಅವಶ್ಯಕತೆ ಇದ್ದಾಗ ಅವುಗಳಿಗೆ RBI ಸಾಲ ಒದಗಿಸುತ್ತದೆ. ಅದು ಬ್ಯಾಂಕುಗಳ ಹಣಕಾಸು ನಿರ್ವಹಣೆಯ ಬಗ್ಗೆಯ ಮಾರ್ಗದರ್ಶನ ನೀಡುತ್ತದೆ.

**4) ರಾಷ್ಟ್ರೀಯ ಸಂದಾಯ ಕಛೇರಿಯಾಗಿ ಕಾರ್ಯನಿರ್ವಹಣೆ :** ಬ್ಯಾಂಕುಗಳ ವ್ಯವಹಾರಗಳನ್ನು ಮಿತವ್ಯಯವಾಗಿ ಬಗೆಹರಿಸುವ ಸಲುವಾಗಿ ಸಂದಾಯ ಕಛೇರಿ ಸೌಲಭ್ಯವನ್ನು ಒದಗಿಸಿದೆ. ಈ ಕಾರ್ಯವು ಬ್ಯಾಂಕುಗಳು ತಮ್ಮ ನಡುವಿನ ಪರಸ್ಪರ ಹಕ್ಕು ಬಾಧ್ಯತೆಗಳನ್ನು ಸುಲಭವಾಗಿ ಬಗೆಹರಿಸಿಕೊಳ್ಳಲು ಸಹಾಯಕವಾಗಿದೆ.

**5) ಸಾಲದ ನಿಯಂತ್ರಕನಾಗಿ ಕಾರ್ಯ ನಿರ್ವಹಣೆ :** ದೇಶದಲ್ಲಿ ಅಪೇಕ್ಷಿತ ಹಣಕಾಸು ಪರಿಸ್ಥಿತಿಗೆ ಅನುಗುಣವಾಗಿ ವಾಣಿಜ್ಯ ಬ್ಯಾಂಕುಗಳ ಸಾಲ ಸೃಷ್ಟಿಯನ್ನು ನಿಯಂತ್ರಿಸುತ್ತದೆ ಅಥವಾ ವಿಸ್ತರಿಸುತ್ತದೆ. ಇದು ಸಾಲದ ನಿಯಂತ್ರಣ ಮತ್ತು ವಿಸ್ತರಣೆಗೆ ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನಗಳೆರಡನ್ನೂ ಬಳಸುತ್ತದೆ.

**ನಿಮಗಿದು ತಿಳಿದಿರಲಿ :**

- ಅತಿ ಪುರಾತನ ಕೇಂದ್ರಬ್ಯಾಂಕು ಸ್ವೀಡನ್ನಿನ **'ರಿಕ್ಸ್ ಬ್ಯಾಂಕ್'**, ಇದು 1668 ರಲ್ಲಿ ಸ್ಥಾಪಿತವಾಯಿತು.
- ಬ್ರಿಟನ್ನಿನ ಕೇಂದ್ರ ಬ್ಯಾಂಕು **'ಬ್ಯಾಂಕ್ ಆಫ್ ಇಂಗ್ಲೆಂಡ್'** ಅನ್ನು 1694 ರಲ್ಲಿ ಸ್ಥಾಪಿಸಲಾಯಿತು.
- *USA* ಯ ಕೇಂದ್ರ ಬ್ಯಾಂಕು **'ಫೆಡರಲ್ ರಿಜರ್ವ್ ಸಿಸ್ಟಮ್'** ಅನ್ನು 1913 ರಲ್ಲಿ ಸ್ಥಾಪಿಸಲಾಯಿತು.

© KTBS NOT TO BE REPUBLISHED

**6) ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ :** ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕನಾಗಿ ಕಾರ್ಯ ನಿರ್ವಹಿಸುತ್ತದೆ. ಸಾಕಷ್ಟು ವಿನಿಮಯ ಸಂಗ್ರಹವು ವಿದೇಶಿ ವಿನಿಮಯ ದರಗಳನ್ನು ಕಾಪಾಡಲು ಸಹಕರಿಸಲಿದೆ. ವಿದೇಶಿ ವಿನಿಮಯ ದರಗಳಲ್ಲಿನ ನ್ಯಾಯವಲ್ಲದ ಏರಿಳಿತಗಳನ್ನು ಕಡಿಮೆಗೊಳಿಸುವ ಸಲುವಾಗಿ, ಪರಿಸ್ಥಿತಿಗಳನ್ನು ಅವಲಂಬಿಸಿ, RBI ವಿದೇಶಿ ಹಣಗಳನ್ನು ಕೊಳ್ಳಲು ಮತ್ತು ಮಾರಲು ಮುಂದಾಗಬಹುದು.

**7) ಆರ್ಥಿಕ ಅಂಕಿಅಂಶಗಳು ಮತ್ತು ಇತರೆ ಮಾಹಿತಿಗಳನ್ನು ಪ್ರಕಟಿಸುವುದು :** ಆರ್ಥಿಕ ಮತ್ತು ಹಣಕಾಸು ವಿಷಯಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸುತ್ತದೆ ಮತ್ತು ಕಾಲ ಕಾಲಕ್ಕೆ ಪ್ರಕಟಿಸುತ್ತದೆ. ಇದು ಹಣ ಮತ್ತು ಹಣಕಾಸು, ಹಣಕಾಸಿನ ಸ್ಥಿತಿಗತಿಗಳು, ರಾಜ್ಯ ಹಣಕಾಸುಗಳು, ಅಂಕಿಅಂಶಗಳ ಕಿರು ಹೊತ್ತಿಗೆ ಮುಂತಾದುವುಗಳನ್ನೂ ಸಹ ಪ್ರಕಟಿಸುತ್ತದೆ.

**8) ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ :** ಜನರಲ್ಲಿ ಬ್ಯಾಂಕಿನ ವ್ಯವಹಾರದ ಹವ್ಯಾಸವನ್ನು ಅಭಿವೃದ್ಧಿಗೊಳಿಸುವ ಮೂಲಕ ಉಳಿತಾಯವನ್ನು ಸಾಂಸ್ಥೀಕರಣಗೊಳಿಸಿದೆ. ಬ್ಯಾಂಕು ರಹಿತ ಪ್ರದೇಶಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ವಿಸ್ತರಿಸಿದೆ.

**9) ಕೃಷಿಗಾಗಿ ಸೌಲಭ್ಯಗಳು :** ಕೃಷಿಗೆ ಪರೋಕ್ಷವಾಗಿ ಹಣಕಾಸು ಸೌಲಭ್ಯಗಳನ್ನು ಕ್ರಮಬದ್ಧವಾಗಿ ಒದಗಿಸುವುದನ್ನು ಮುಂದುವರಿಸಿದೆ. ಇದು NABARD ಮೂಲಕ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಅಲ್ಪಾವಧಿ ಮತ್ತು ದೀರ್ಘಾವಧಿ ಹಣಕಾಸು ಸೌಲಭ್ಯಗಳನ್ನು ಒದಗಿಸುತ್ತದೆ.

RBI ಭಾರತೀಯ ಅರ್ಥವ್ಯವಸ್ಥೆಯ ಅಭಿವೃದ್ಧಿ ತಂತ್ರದಲ್ಲಿ ಬಹು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕು ಅಂಕಿಅಂಶ ಸಂಗ್ರಹ, ಶಕ್ತಿಶಾಲಿ ಆರ್ಥಿಕ ಸಂಶೋಧನೆ ಕೈಗೊಳ್ಳುವುದು ಮತ್ತು ಜ್ಞಾನ ಹಂಚಿಕೆಯಲ್ಲಿ ಒಂದು ಶ್ರೀಮಂತ ಪರಂಪರೆಯನ್ನೇ ಹೊಂದಿದೆ. ದೇಶವು ಹಲವಾರು ಹಣಕಾಸಿನ ಬಿಕ್ಕಟ್ಟುಗಳಿಂದ ಹೊರಬರಲು ರಿಸರ್ವ್ ಬ್ಯಾಂಕಿನ ಕ್ರಮಗಳು ಸಹಾಯಕವಾಗಿವೆ.

@KTBS NOT TO BE REPUBLISHED

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ :**

1) ಭಾರತದ ರೂಪಾಯಿ ................ ಪದದಿಂದ ಬಂದಿದೆ.

2) ಚೆಕ್‌ಗಳು ................ ಹಣದ ಸಾಧನವಾಗಿವೆ.

3) ವಿದೇಶಿ ಹಣದೊಂದಿಗೆ ವ್ಯವಹರಿಸುವ ಬ್ಯಾಂಕ್‌ಗಳನ್ನು ................ ಎಂದು ಕರೆಯುತ್ತಾರೆ.

4) ಭಾರತೀಯ ರಿಸರ್ವ್ ಬ್ಯಾಂಕನ್ನು ................ ವರ್ಷದಲ್ಲಿ ಸ್ಥಾಪಿಸಲಾಯಿತು.

5) ಜಪಾನ್ ದೇಶದ ಹಣ ................

6) ಭಾರತ ಸರ್ಕಾರ 14 ವಾಣಿಜ್ಯ ಬ್ಯಾಂಕುಗಳನ್ನು ................ ರಲ್ಲಿ ರಾಷ್ಟ್ರೀಕರಿಸಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1) ವಸ್ತು ವಿನಿಮಯ ಪದ್ಧತಿ ಎಂದರೇನು ?

2) ಹಣದ ಅರ್ಥವನ್ನು ತಿಳಿಸಿ.

3) ಭಾರತದ ಕೇಂದ್ರ ಬ್ಯಾಂಕು ಯಾವುದು ?

4) ಹಣದ ಕಾರ್ಯಗಳನ್ನು ಪಟ್ಟಿ ಮಾಡಿ, ವಿವರಿಸಿ.

5) ವಿವಿಧ ಬ್ಯಾಂಕುಗಳನ್ನು ಹೆಸರಿಸಿ.

6) ಭಾರತೀಯ ರಿಸರ್ವ್ ಬ್ಯಾಂಕ್‌ನ ಕಾರ್ಯಗಳನ್ನು ವಿವರಿಸಿ.

**III. ಚಟುವಟಿಕೆಗಳು.**

1) ವಾಣಿಜ್ಯ ಬ್ಯಾಂಕ್‌ಗಳ ಕಾರ್ಯ ಚಟುವಟಿಕೆಗಳ ಕುರಿತು ಒಂದು ಪ್ರಾತ್ಯಕ್ಷಿಕ ವರದಿ ಸಿದ್ಧಪಡಿಸಿ.

2) ನಿಮ್ಮ ಹತ್ತಿರದ ಬ್ಯಾಂಕ್ ಶಾಖೆಯೊಂದಕ್ಕೆ ಭೇಟಿ ನೀಡಿರಿ. ಬ್ಯಾಂಕು ಯಾವ ಯಾವ ಕೆಲಸಗಳನ್ನು ನಿರ್ವಹಿಸುತ್ತದೆಂಬುದನ್ನು ವೀಕ್ಷಿಸಿ ಗುರುತಿಸಿ.

**IV. ಯೋಜನೆ.**

1) ಹಣದ ವಿಕಾಸದ ಕುರಿತು ಪೂರ್ಣ ಮಾಹಿತಿಯನ್ನು ಚಿತ್ರಗಳ ಮೂಲಕ ವಿವರಿಸಿ.

@KTBS NOT TO BE REPUBLISHED

*****

ಅಧ್ಯಾಯ – 31

# ಶ್ರಮ ಮತ್ತು ಉದ್ಯೋಗ

Z2S9P7

**ಈ ಅಧ್ಯಯನದಲ್ಲಿ ಈ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಶ್ರಮದ ಪ್ರಾಮುಖ್ಯತೆ ಮತ್ತು ಅದರ ವಿಧಗಳು.
- ಶ್ರಮ ವಿಭಜನೆಯ ಅನುಕೂಲ, ಅನಾನುಕೂಲಗಳು.
- ಉತ್ಪಾದಕ ಮತ್ತು ಅನುತ್ಪಾದಕ ಶ್ರಮ
- ಭಾರತದಲ್ಲಿ ಮಹಿಳೆಯ ಪಾತ್ರ ಮತ್ತು ಸ್ತ್ರೀ–ಪುರುಷರ ಅಸಮಾನತೆ
- ನಿರುದ್ಯೋಗ ಮತ್ತು ಅದರ ಪ್ರಕಾರಗಳು
- ಜೀತಕಾರ್ಮಿಕ ಮತ್ತು ಬಾಲಕಾರ್ಮಿಕ ಪದ್ಧತಿಗಳ ವಿಮೋಚನ ನೀತಿ.

ಶ್ರಮವು ಬಹುಮುಖ್ಯ ಹಾಗೂ ಅತ್ಯವಶ್ಯಕ ಉತ್ಪಾದನಾಂಗವಾಗಿದೆ. ವಿಭಿನ್ನ ರೀತಿಯ ಉದ್ಯೋಗಗಳಿಗೆ ವಿಭಿನ್ನ ರೀತಿಯ ಶ್ರಮಿಕರ ಅಗತ್ಯವಿರುತ್ತದೆ. ಭೂಮಿ ಮತ್ತು ಬಂಡವಾಳದ ಜೊತೆಗೆ ಶ್ರಮವು ಒಂದು ಪ್ರಮುಖ ಉತ್ಪಾದನಾಂಗವಾಗಿದೆ. ಶ್ರಮದ ಸಹಾಯವಿಲ್ಲದೆ ಯಾವುದೇ ಉತ್ಪಾದನೆ ಮಾಡಲು ಸಾಧ್ಯವಾಗುವುದಿಲ್ಲ. ಜನರು ಶ್ರಮಪಡದ ಹೊರತು ಸಂಪತ್ತನ್ನು ಸೃಷ್ಟಿಸಲಾಗದು.

**ತಿಳಿದಿರಲಿ : ಶ್ರಮದ ಅರ್ಥ :** ಶ್ರಮವೆಂದರೆ, ಸರಕು ಮತ್ತು ಸೇವೆಯನ್ನು ಉತ್ಪಾದಿಸುವ ಉದ್ದೇಶಕ್ಕಾಗಿ ದೈಹಿಕವಾಗಿ ಅಥವಾ ಮಾನಸಿಕವಾಗಿ ಕೆಲಸಮಾಡುವ ಸಾಮರ್ಥ್ಯ. ಈ ಸಂದರ್ಭದಲ್ಲಿ ಕೇವಲ 'ಮಾನವ ಶ್ರಮ'ವನ್ನು ಮಾತ್ರ ಪರಿಗಣಿಸಲಾಗಿದೆ. ಪ್ರಾಣಿಗಳ ಶ್ರಮವನ್ನು ಶ್ರಮವೆಂದು ಪರಿಗಣಿಸಲಾಗಿಲ್ಲ

ಶ್ರಮವು ಜೀವನದ ಗಳಿಕೆಗಾಗಿ ಮಾಡಲಾಗುವ ಎಲ್ಲ ದೈಹಿಕ ಮತ್ತು ಮಾನಸಿಕ ಪ್ರಯತ್ನಗಳನ್ನು ಒಳಗೊಂಡಿದೆ. ಇದರ ಪರಿಣಾಮವಾಗಿ ಸರಕುಗಳು ಅಥವಾ ಸೇವೆಗಳು ಅಥವಾ ಎರಡೂ ಉತ್ಪಾದಿಸಲ್ಪಡುತ್ತವೆ. ಇದು ಒಬ್ಬನು ತನ್ನ ಸಂತೋಷಕ್ಕಾಗಿ ಅಥವಾ ಅನುಕಂಪಕ್ಕಾಗಿ ಮಾಡುವ ಯಾವುದೇ ಕೆಲಸವನ್ನು ಒಳಗೊಂಡಿರುವುದಿಲ್ಲ. ಒಬ್ಬ ವೈದ್ಯ, ಶಿಕ್ಷಕ, ನ್ಯಾಯವಾದಿ, ಬ್ಯಾಂಕ್ ಉದ್ಯೋಗಿ ಸಂಬಳ ಸ್ವೀಕರಿಸಿ ಸಲ್ಲಿಸುವ ಸೇವೆಗಳನ್ನು ಶ್ರಮ ಎಂದು ಕರೆಯಲಾಗುತ್ತದೆ. ಆದರೆ ಒಬ್ಬ ತಾಯಿಯು ತನ್ನ ರೋಗಿಷ್ಟ ಮಗುವಿನ ಆರೈಕೆಗಾಗಿ ಮಾಡುವ ಸೇವೆಯನ್ನು ಶ್ರಮ ಎಂದು ಪರಿಗಣಿಸುವುದಿಲ್ಲ.

**ತಿಳಿದಿರಲಿ :** ಸಂತೋಷಕ್ಕೆ ಕೈಗೊಳ್ಳುವ ಕೆಲಸಕ್ಕೆ ಹೊರತಾಗಿ ಸರಕುಗಳ ದೃಷ್ಟಿಯಿಂದ ದೇಹ ಮತ್ತು ಮನಸ್ಸು ಕೈಗೊಳ್ಳುವ ಯಾವುದೇ ಭಾಗಶಃ ಅಥವಾ ಪೂರ್ಣ ಪ್ರಯತ್ನವನ್ನು ಶ್ರಮ ಎಂದು ಕರೆಯುತ್ತಾರೆ. – ಆಲ್ಫ್ರೆಡ್ ಮಾರ್ಷಲ್

**ಶ್ರಮದ ಲಕ್ಷಣಗಳು :** ಶ್ರಮದ ಪ್ರಮುಖ ಲಕ್ಷಣಗಳಾವುವೆಂದರೆ,

1. ಶ್ರಮವನ್ನು ಶ್ರಮಿಕರಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ.
2. ಶ್ರಮವನ್ನು ಸಂಗ್ರಹಿಸಲಾಗದು.

NOT TO BE REPUBLISHED © KTBS

3. ಶ್ರಮದ ಪೂರೈಕೆಯು ಕಾಲಕ್ಕೆ ತಕ್ಕಂತೆ ಬದಲಾಗುತ್ತದೆ.
4. ಶ್ರಮದ ಸಾಮರ್ಥ್ಯದಲ್ಲಿ ಭಿನ್ನತೆಯಿದೆ.
5. ಶ್ರಮವು ಒಂದು ಚಟುವಟಿಕೆಯ ಅಂಶವಾಗಿದೆ.

**ಶ್ರಮದ ಮಹತ್ವ :** ಶ್ರಮವು ಒಂದು ಉತ್ಪನ್ನಕಾರಕ ಉತ್ಪಾದನಾಂಗವಾಗಿದೆ. ಇದು ಕೇವಲ ಉತ್ಪನ್ನಕಾರಕ ಎಂಬ ಕಾರಣಕ್ಕಾಗಿ ಇದರ ಮಹತ್ವವನ್ನು ಪರಿಗಣಿಸಲಾಗಿಲ್ಲ, ಆದರೆ ಇದು ಇತರೆ ಉತ್ಪಾದನಾಂಗಗಳನ್ನು ಚುರುಕುಗೊಳಿಸುತ್ತದೆ ಮತ್ತು ಅವುಗಳನ್ನು ಉತ್ಪಾದನಾ ಉದ್ದೇಶಗಳಿಗಾಗಿ ಉಪಯೋಗಕಾರಿಗಳನ್ನಾಗಿ ಮಾಡುತ್ತದೆ. ಆದುದರಿಂದ ಒಂದು ದೇಶದಲ್ಲಿನ ಶ್ರಮಶಕ್ತಿಯ ಗಾತ್ರವು ಅಲ್ಲಿನ 15 ರಿಂದ 60 ವರ್ಷಗಳ ನಡುವಿನ ವಯೋಗುಂಪಿನಲ್ಲಿರುವ ಜನರ ಸಂಖ್ಯೆಯಿಂದ ನಿರ್ಧರಿಸಲ್ಪಡುತ್ತದೆ. ಸಾಮಾನ್ಯವಾಗಿ 15 ವರ್ಷದ ಒಳಗಿನ ಮಕ್ಕಳು ಮತ್ತು 60 ವರ್ಷಗಳ ಮೇಲ್ಪಟ್ಟ ಹಿರಿಯ ನಾಗರಿಕರು ಉತ್ಪಾದಕ ಚಟುವಟಿಕೆಯಲ್ಲಿ ಭಾಗವಹಿಸುವುದಿಲ್ಲ. 2011 ರಲ್ಲಿ ಭಾರತದಲ್ಲಿ ಸುಮಾರು ಶೇ.40 ರಷ್ಟು ಶ್ರಮಶಕ್ತಿ ಇತ್ತು.

**ಶ್ರಮದ ವಿಧಗಳು** : ಶ್ರಮವನ್ನು ಹಲವು ವಿಧಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ,

1. **ಕೆಲಸದ ಸ್ವರೂಪ :** ದೈಹಿಕ ಮತ್ತು ಮಾನಸಿಕ ಶ್ರಮ.
2. **ಕೌಶಲ್ಯ :** ಕೌಶಲ್ಯ ಸಹಿತ ಅರೆ ಕೌಶಲ್ಯದ ಮತ್ತು ಕೌಶಲ್ಯರಹಿತ ಶ್ರಮ.
3. **ತರಬೇತಿ :** ವೃತ್ತಿಪರ ಮತ್ತು ಆಡಳಿತಾತ್ಮಕ ಶ್ರಮ.
4. **ಆದಾಯ ಗಳಿಕೆ :** ಉತ್ಪಾದಕ ಮತ್ತು ಅನುತ್ಪಾದಕ ಶ್ರಮ.

### ಶ್ರಮ ವಿಭಜನೆ (Division of Labour)

ಶ್ರಮ ವಿಭಜನೆಯು ಮಾನವ ಜನಾಂಗದಷ್ಟೇ ಪುರಾತನವಾದುದಾಗಿದೆ. ಪುರಾತನ ಕಾಲದ ಮಾನವನ ಜೀವನದಲ್ಲಿಯೂ ಸಹ ಪುರುಷ ಮತ್ತು ಸ್ತ್ರೀಯರ ನಡುವೆ ಪ್ರಾಥಮಿಕ ಶ್ರಮವಿಭಜನೆ ಇತ್ತು. ಪುರುಷರು ಬೇಟೆಯಾಡುವುದು ಮತ್ತು ಮೀನು ಹಿಡಿಯುವ ಕೆಲಸವನ್ನು ಮಾಡುತ್ತಿದ್ದರೆ, ಮಹಿಳೆಯರು ಅಡುಗೆ ಮಾಡುವುದು, ಬಟ್ಟೆ ತಯಾರಿಸುವುದು ಮತ್ತು ಮಕ್ಕಳ ಪಾಲನೆ ಮಾಡುತ್ತಿದ್ದರು.

ಉತ್ಪಾದನಾ ಪ್ರಕ್ರಿಯೆಯ ವಿವಿಧ ಭಾಗಗಳನ್ನು ವಿವಿಧ ಕೆಲಸಗಾರರು ಅಥವಾ ವಿವಿಧ ಕೆಲಸಗಾರರ ಗುಂಪುಗಳಿಗೆ ಹಂಚುವುದನ್ನು ಶ್ರಮವಿಭಜನೆ ಎನ್ನುತ್ತಾರೆ. ಯಾವುದೇ ಆಧುನಿಕ ಅರ್ಥವ್ಯವಸ್ಥೆಯು ಶ್ರಮವಿಭಜನೆಯ ಚಮತ್ಕಾರದ ಗುಣಲಕ್ಷಣದಿಂದ ಕೂಡಿರುತ್ತದೆ. ವಾಸ್ತವವಾಗಿ ಬಹುತೇಕ ಪ್ರಕರಣಗಳಲ್ಲಿ ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ಕೇವಲ ಒಂದೇ ರೀತಿಯ ಉತ್ಪಾದನಾ ಮಾರ್ಗದಲ್ಲಿ ನಿರತರಾಗಿರುತ್ತಾರೆ.

**ತಿಳಿದಿರಲಿ :**

**ಆಡಂಸ್ಮಿತ್ ರವರ ಉದಾಹರಣೆ :** ಅರ್ಥಶಾಸ್ತ್ರದ ಜನಕರೆನಿಸಿದ ಆಡಂಸ್ಮಿತ್ ತಮ್ಮ "ರಾಷ್ಟ್ರಗಳ ಸಂಪತ್ತು"(1776) ಎಂಬ ಪುಸ್ತಕದಲ್ಲಿ ಶ್ರಮವಿಭಜನೆಯ ಅನುಕೂಲತೆಗಳ ಬಗ್ಗೆ ಉದಾಹರಣೆಯೊಂದನ್ನು ಕೊಟ್ಟಿದ್ದಾರೆ. " ಒಂದು ಗುಂಡು ಪಿನ್ನನ್ನು ತಯಾರಿಸುವ ಪ್ರಮುಖ ಕಾರ್ಯದಲ್ಲಿ, ಒಬ್ಬನು ತಂತಿಯನ್ನು ಎಳೆಯುತ್ತಾನೆ, ಮತ್ತೊಬ್ಬನು ತಂತಿಯನ್ನು ನೇರಮಾಡುತ್ತಾನೆ, ಮೂರನೆಯವನು ಅದನ್ನು ಕತ್ತರಿಸುತ್ತಾನೆ, ನಾಲ್ಕನೆಯವನು ತುದಿಯನ್ನು ಚೂಪುಗೊಳಿಸುತ್ತಾನೆ ಮತ್ತು ಐದನೆಯವನು ಅದರ ತಲೆಯು ತೂರುವಂತೆ ಕೊರೆಯುತ್ತಾನೆ. ಹೀಗೆ ಆಡಂಸ್ಮಿತ್‌ರವರು ಒಂದು ಗುಂಡುಪಿನ್ನು ತಯಾರಿಕೆಯಲ್ಲಿ 18 ವಿಧದ ಕೆಲಸಗಳನ್ನು ಪಟ್ಟಿಮಾಡುತ್ತಾರೆ. ಅವರ ಪ್ರಕಾರ 10 ಜನರು ಶ್ರಮವಿಭಜನೆಯನ್ನು ಬಳಸಿಕೊಂಡು ಒಂದು ದಿನದಲ್ಲಿ 48,000 ಗುಂಡುಪಿನ್ನುಗಳನ್ನು ಉತ್ಪಾದಿಸಬಹುದು. ಅವರು ಶ್ರಮವಿಭಜನೆ ಮತ್ತು ವೈಶಿಷ್ಟ್ಯತೆಯಿಲ್ಲದೆ ಪ್ರತಿಯೊಬ್ಬ ವ್ಯಕ್ತಿ ಒಂದು ದಿನದಲ್ಲಿ ಕೇವಲ 10 ಗುಂಡುಪಿನ್ನುಗಳನ್ನು ಮಾತ್ರ ಉತ್ಪಾದಿಸಬಲ್ಲರು".

©KTBS NOT TO BE REPUBLISHED

**ಶ್ರಮವಿಭಜನೆಯ ಅನುಕೂಲಗಳು :**

1. **ಶ್ರಮದ ದಕ್ಷತೆ :** ಅದು ಶ್ರಮಿಕರ ದಕ್ಷತೆಯನ್ನು ಹೆಚ್ಚಿಸುತ್ತದೆ.
2. **ಉತ್ಪಾದನೆಯ ಗುಣಮಟ್ಟ :** ಶ್ರಮದ ದಕ್ಷತೆಯಲ್ಲಿನ ಹೆಚ್ಚಳವು ಉತ್ಪನ್ನದ ಪ್ರಮಾಣವನ್ನು ಹೆಚ್ಚಿಸುವುದಲ್ಲದೆ, ಉತ್ಪಾದಿತ ಸರಕುಗಳು ಮತ್ತು ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುತ್ತದೆ.
3. **ಲಾಭ :** ಉತ್ಪನ್ನದ ಪ್ರಮಾಣ ಮತ್ತು ಗುಣಮಟ್ಟದಲ್ಲಿನ ಹೆಚ್ಚಳವು ಹೆಚ್ಚಿನ ಲಾಭವನ್ನು ತಂದುಕೊಡುತ್ತದೆ.
4. **ಸರಾಸರಿ ವೆಚ್ಚ :** ಶ್ರಮವಿಭಜನೆಯಿಂದ ಒಟ್ಟು ಉತ್ಪನ್ನವು ಹೆಚ್ಚಳವಾಗುತ್ತಿರುವವರೆಗೆ ಉತ್ಪಾದಿತ ಸರಕುಗಳ ಸರಾಸರಿ ವೆಚ್ಚ ಕಡಿಮೆಯಾಗುತ್ತಿರುತ್ತದೆ. ಆಗ ಅನುಭೋಗಿಗಳು ಕಡಿಮೆ ಬೆಲೆಯಲ್ಲಿ ಸರಕುಗಳನ್ನು ಪಡೆಯುತ್ತಾರೆ.
5. **ಸಂಶೋಧನೆ ಮತ್ತು ಅಭಿವೃದ್ಧಿ :** ಶ್ರಮವಿಭಜನೆಯು ದೀರ್ಘಾವಧಿಯಲ್ಲಿ ಸಂಶೋಧನೆ ಮತ್ತು ಆವಿಷ್ಕಾರಕ್ಕೆ ಸಹಾಯಕವಾಗಿದೆ. ಇದು ವಿವಿಧ ರೀತಿಯ ನವೀನ ಉತ್ಪನ್ನಗಳ ಉತ್ಪಾದನೆಗೆ ದಾರಿಮಾಡಿಕೊಡುತ್ತದೆ.

**ಶ್ರಮ ವಿಭಜನೆಯ ಅನಾನುಕೂಲಗಳು :**

1. **ಕೆಲಸದ ಏಕತಾನತೆ :** ಶ್ರಮವಿಭಜನೆಯ ಅಡಿಯಲ್ಲಿ ಒಬ್ಬ ಕೆಲಸಗಾರನು ವರ್ಷಗಳವರೆಗೆ ಒಂದೇ ರೀತಿಯ ಕೆಲಸವನ್ನು ಮಾಡುತ್ತಾನೆ. ಇದರಿಂದ ಕೆಲಸಗಾರರು ಕೆಲಸದಲ್ಲಿ ಏಕತಾನತೆಯನ್ನು ಅನುಭವಿಸಿ ಬೇಸರಗೊಳ್ಳುವರು.
2. **ಜವಾಬ್ದಾರಿಯ ಕೊರತೆ :** ಉತ್ಪನ್ನದ ಗುಣಮಟ್ಟದ ಜವಾಬ್ದಾರಿಯನ್ನು ಯಾರೂ ಹೊರಲಾರರು.
3. **ಹೆಚ್ಚಿದ ಅವಲಂಬನೆ :** ಉತ್ಪಾದನೆಯನ್ನು ಹಲವಾರು ಪ್ರಕ್ರಿಯೆಗಳು ಬೇರೆ ಬೇರೆ ಕೆಲಸಗಾರರಿಂದ ನಿರ್ವಹಿಸಲ್ಪಟ್ಟಾಗ, ಇದು ಕೆಲಸಗಾರರ ನಡುವೆ ಅವಲಂಬನೆಗೆ ದಾರಿಮಾಡಿಕೊಡುತ್ತದೆ.
4. **ನಿರುದ್ಯೋಗ :** ಶ್ರಮವಿಭಜನೆಯು ವೃತ್ತಿ ವೈಶಿಷ್ಟ್ಯತೆಗೆ ದಾರಿಮಾಡಿಕೊಡುತ್ತದೆ. ಒಬ್ಬ ಕೆಲಸಗಾರನು ಒಂದು ಸಣ್ಣ ಭಾಗದ ತಯಾರಿಕೆಯಲ್ಲಿ ವೈಶಿಷ್ಟ್ಯತೆ ಗಳಿಸಿರುತ್ತಾನೆ. ಅವನನ್ನು ಕೆಲಸದಿಂದ ತೆಗೆದುಹಾಕಿದರೆ, ಅವನು ಅದೇರೀತಿಯ ಕೆಲಸವನ್ನು ಹುಡುಕಬೇಕಾಗುತ್ತದೆ ಮತ್ತು ಅಲ್ಲಿಯವರೆಗೆ ಅವನು ನಿರುದ್ಯೋಗಿಯಾಗುತ್ತಾನೆ.
5. **ವರ್ಗ ಕಲಹ :** ಶ್ರಮವಿಭಜನೆಯು ದೊಡ್ಡ ಪ್ರಮಾಣದ ಉತ್ಪಾದನೆಗೆ ಅನುಕೂಲ ಮಾಡಿಕೊಡುವುದಲ್ಲದೆ, ಉತ್ಪಾದಕರು ಅತಿ ಹೆಚ್ಚಿನ ಲಾಭ ಗಳಿಸಲು ಸಹಾಯಕವಾಗಿದೆ. ಉತ್ಪಾದಕರು ಕಾರ್ಮಿಕರಿಗೆ ಕಡಿಮೆ ಕೂಲಿಯನ್ನು ಕೊಡುವುದರಿಂದ ತಾವು ಶ್ರೀಮಂತರಾಗುತ್ತಾರೆ. ಇದು ಸಮಾಜವನ್ನು ಉಳ್ಳವರು ಮತ್ತು ಇಲ್ಲದವರನ್ನಾಗಿ (ಶ್ರೀಮಂತ ಮತ್ತು ಬಡವ) ವರ್ಗೀಕರಿಸುತ್ತದೆ.

**ಶ್ರಮದ ಲಿಂಗ ಪರಿಮಾಣ (Gender dimension of labour)**

ದೇಶದ ಶ್ರಮಶಕ್ತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸುಮಾರು ಶೇ.31 ರಷ್ಟು ಮತ್ತು ನಗರ ಪ್ರದೇಶದಲ್ಲಿ ಶೇ.20 ರಷ್ಟು ಮಹಿಳೆಯರಿದ್ದಾರೆ. ಪುರುಷರಿಗೆ ಹೋಲಿಸಿದಾಗ ಮಹಿಳಾ ಶ್ರಮಶಕ್ತಿಯ ಶೇಕಡಾವಾರು ಪ್ರಮಾಣ ಕಡಿಮೆಯಿದೆ. ಆದರೆ ಇತ್ತೀಚೆಗೆ ದೇಶದಲ್ಲಿ ಮಹಿಳಾ ಶ್ರಮಶಕ್ತಿಯ ಪ್ರಮಾಣ

© KTBS NOT TO BE REPUBLISHED

ಹೆಚ್ಚುತ್ತಿದೆ. ಒಂದು ದೇಶದ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಪುರುಷರಂತೆ ಮಹಿಳೆಯರೂ ಸಮಾನ ಪ್ರಾಮುಖ್ಯತೆಯನ್ನು ಪಡೆದಿದ್ದಾರೆ. ಆರ್ಥಿಕ ಪ್ರಗತಿಯ ಜೊತೆಗೆ, ಮಹಿಳೆಯರು ಶಕ್ತಿಶಾಲಿ ಭಾರತದ ಒಂದು ಶಕ್ತಿಯಾಗಿ ಹೊರಹೊಮ್ಮುತ್ತಿದ್ದಾರೆ. ಆದರೆ ದುರಾದೃಷ್ಟದ ಸಂಗತಿಯೆಂದರೆ, ಭಾರತದಲ್ಲಿ ಮಹಿಳಾ ಕಾರ್ಮಿಕರ ಸಾಮಾಜಿಕ–ಆರ್ಥಿಕ ಸ್ಥಿತಿಗತಿ ಉತ್ತಮವಾಗುತ್ತಿಲ್ಲ. ಸಮಾಜದಲ್ಲಿ ಮಹಿಳೆಯರನ್ನು ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆ ಮಾಡಲಾಗುತ್ತಿದೆ.



**ವಿವಿಧ ಕ್ಷೇತ್ರದಲ್ಲಿ ಮಹಿಳೆಯರು**

ಭಾರತದಲ್ಲಿ 2011 ರ ಜನಗಣತಿ ಪ್ರಕಾರ 587 ಮಿಲಿಯನ್ ಮಹಿಳೆಯರಿದ್ದಾರೆ. ದೇಶದಲ್ಲಿ ಲಿಂಗ ತಾರತಮ್ಯ ಮತ್ತು ಹೆಚ್ಚು ಲಿಂಗ ಅಸಮಾನತೆ ಅಸ್ತಿತ್ವದಲ್ಲಿದ್ದಂತೆ, ಲಿಂಗಸಂಬಂಧಿ ಕಾಳಜಿಗಳು ಮಹತ್ವವನ್ನು ಪಡೆಯುತ್ತವೆ. ಸರ್ಕಾರವು ಆಯವ್ಯಯದಲ್ಲಿ ಲಿಂಗ ಸಂಬಂಧಿ ಆಯವ್ಯಯವನ್ನು ಮಂಡಿಸಲು ನಿರ್ಧರಿಸಿದೆ.

**ಲಿಂಗ ತಾರತಮ್ಯ :** ಲಿಂಗ ತಾರತಮ್ಯ ಎಂಬ ಪದವನ್ನು ಮಹಿಳೆಯರು ಆರ್ಥಿಕವಾಗಿ ಹಿಂದುಳಿದಿರುವುದನ್ನು ಮತ್ತು ಅವಕಾಶವಂಚಿತರಾಗಿರುವುದನ್ನು ಸೂಚಿಸಲು ಬಳಸಲಾಗುತ್ತದೆ. ಮಹಿಳೆಯರಿಗೆ ಪುರುಷರಷ್ಟೇ ಸಮಾನ ಸ್ಥಾನಮಾನ ಮತ್ತು ಅವಕಾಶಗಳು ಸಿಗದಿದ್ದಾಗ ಅದನ್ನು 'ಲಿಂಗ ಅಸಮಾನತೆ' ಎನ್ನುತ್ತೇವೆ.

ಭಾರತದಲ್ಲಿ ಮಹಿಳೆಯರು ಮತ್ತು ಪುರುಷರ ನಡುವೆ ಬಹು ವ್ಯಾಪಕವಾದ ಅಸಮಾನತೆಯಿದೆ. ಜೀವನದ ನಾನಾ ಸ್ತರದಲ್ಲಿ ಮಹಿಳೆಯರನ್ನು ಅಸಮಾನತೆಯಿಂದ ನಡೆಸಿಕೊಳ್ಳಲಾಗುತ್ತಿದೆ. ಅವುಗಳೆಂದರೆ, ಅಸಮಾನ ಲಿಂಗಾನುಪಾತ, ಕೆಳಮಟ್ಟದ ಮಹಿಳಾ ಸಾಕ್ಷರತಾ ದರ, ಕಡಿಮೆ ಮಹಿಳಾ ಕೆಲಸದ ಭಾಗವಹಿಸುವಿಕೆ ದರ, ಕಡಿಮೆ ಮಹಿಳಾ ಆರ್ಥಿಕ ಚಟುವಟಿಕೆ ದರ, ಪುರುಷ ಉದ್ಯೋಗಿಗಳಿಗೆ ಹೋಲಿಸಿದಲ್ಲಿ ಸರ್ಕಾರದ ಉನ್ನತ ಅಧಿಕಾರ ಸ್ಥಾನ(IAS, IPS & IFS)ಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡಿಮೆಯಿರುವುದು. ವಿಧಾನ ಸಭೆಗಳು ಮತ್ತು ಲೋಕಸಭೆಯಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಬಹಳ ಕಡಿಮೆಯಿದೆ.

ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಕೆಲಸದ ಹೊರೆಯನ್ನು ಹೊರುತ್ತಿದ್ದಾರೆ. ಇವರು ಮನೆಯ ಕೆಲಸಗಳಲ್ಲಿ ಹೆಚ್ಚಿನ ಪಾಲು ಜವಾಬ್ದಾರರಾಗಿದ್ದು, ಅವರು ಶ್ರಮದ ಮಾರುಕಟ್ಟೆಯನ್ನು ಪ್ರವೇಶಿಸುತ್ತಿರುವುದು ಹೆಚ್ಚಿನ ಹೊರೆಯಾಗಿದೆ. ಈ ದ್ವಿಮುಖ ಕೆಲಸವನ್ನು ಅಂಕಿಅಂಶಗಳಲ್ಲಿಯೂ ಗುರುತಿಸುತ್ತಿಲ್ಲ, ಸಾಮಾಜಿಕ ನೀತಿ ನಿರೂಪಣೆಯಲ್ಲಿಯೂ ಪರಿಗಣಿಸುತ್ತಿಲ್ಲ.

**ಉತ್ಪಾದಕ ಶ್ರಮ :** ಯಾವ ಶ್ರಮವು ತುಷ್ಟಿಗುಣವನ್ನು ಸೃಷ್ಠಿಸುತ್ತದೆಯೋ ಅಥವಾ ಯಾವುದು ಆದಾಯವನ್ನು ಗಳಿಸುವಲ್ಲಿ ನಿರತವಾಗಿದೆಯೋ ಅದೇ 'ಉತ್ಪಾದಕ ಶ್ರಮ'. ಸಮಾಜಘಾತುಕ ಚಟುವಟಿಕೆಗಳನ್ನು ಉತ್ಪಾದಕ ಶ್ರಮವೆಂದು ಪರಿಗಣಿಸಲಾಗುವುದಿಲ್ಲ. ಏಕೆಂದರೆ ಅವರು ಇತರರ ಸಂಪತ್ತನ್ನು ದೋಚಲು ಪ್ರಯತ್ನಿಸುತ್ತಾರೆ. ಆಡಂಸ್ಮಿತ್ ರವರ ಪ್ರಕಾರ "ಯಾವ ಶ್ರಮವು ಭೌತಿಕ ಸರಕುಗಳನ್ನು ಅಥವಾ ಆಸ್ತಿಗಳನ್ನು ನಿರ್ಮಿಸುವುದಕ್ಕೆ ಮುಂದಾಗುತ್ತದೆಯೋ ಅದು ಮಾತ್ರ ಉತ್ಪಾದಕ ಶ್ರಮವಾಗಿದೆ".

© KTBS NOT TO BE REPUBLISHED

**ಪುನರುತ್ಪಾದನ ಶ್ರಮ :** ಪುನರುತ್ಪಾದನಾ ಶ್ರಮವು ಮನೆಯಲ್ಲಿ ನಿರ್ವಹಿಸುವ ಶ್ರಮವಾಗಿದೆ. ಇದನ್ನು ಸಾಂಸಾರಿಕ ಶ್ರಮ ಎಂತಲೂ ಕರೆಯುತ್ತಾರೆ. ಇದು ಮಹಿಳೆಯರು ಮನೆಯಲ್ಲಿ ನಿರ್ವಹಿಸುವ ಕೂಲಿರಹಿತ ಕೆಲಸವಾಗಿದೆ. ಮಕ್ಕಳಿಗೆ ಜನ್ಮನೀಡುವುದು ಮತ್ತು ಪಾಲನೆಮಾಡುವುದು, ಸ್ವಚ್ಛತೆಯನ್ನು ಕಾಪಾಡುವುದು, ಅಡುಗೆಮಾಡುವುದು ಮುಂತಾದವು ಪುನರುತ್ಪಾದನಾ ಶ್ರಮದ ಉದಾಹರಣೆಗಳಾಗಿವೆ. ಪುನರುತ್ಪಾದನೆ ಶ್ರಮವನ್ನು ಸ್ತ್ರೀಯರು ನಿರ್ವಹಿಸಬೇಕಾದ ಶ್ರಮವೆಂದು ಹಣೆಪಟ್ಟಿ ಕಟ್ಟಲಾಗಿದೆ ಮತ್ತು ಅದು ಸ್ತ್ರೀ ಮತ್ತು ಪುರುಷರ ನಡುವಿನ ಅಸಮಾನತೆಯ ಜೊತೆಜೊತೆಗೆ ಪುರುಷರಿಂದ ಮಹಿಳೆಯರ ಶೋಷಣೆಗೆ ಆಧಾರವಾಗಿ ಗುರುತಿಸಲ್ಪಡುತ್ತಿದೆ. ಇದು ಪುರುಷ ಪ್ರಾಧಾನ್ಯತೆ, ಅನಕ್ಷರತೆ, ಅಜ್ಞಾನ ಮತ್ತು ಮೂಢನಂಬಿಕೆಗಳಿಂದ ಬೆಂಬಲಿಸಲ್ಪಟ್ಟಿದೆ.

**ಜೀತ ಕಾರ್ಮಿಕರ ರದ್ಧತಿ :** ಜಮೀನುದಾರರ ಮನೆಯಲ್ಲಿ ನಿಗದಿತ ಮೊತ್ತಕ್ಕೆ, ನಿಗದಿತ ಅವಧಿಯವರೆಗೆ ಅಥವಾ ಮಾಡಿದ ಸಾಲವನ್ನು ಹಿಂತಿರುಗಿಸುವವರೆಗೆ ಕೆಲಸಮಾಡಲು ಬದ್ಧನಾದವನನ್ನು ಜೀತಕಾರ್ಮಿಕ ಎನ್ನುತ್ತಾರೆ. ಅವನು ಸಾಲದ ಹಣಕ್ಕಾಗಿ ತನ್ನನ್ನು ತಾನು ಜಮೀನುದಾರನಿಗೆ ಒತ್ತೆಯಿಟ್ಟುಕೊಂಡಿರುತ್ತಾನೆ. ಜಮೀನುದಾರರು ಕಡಿಮೆ ಕೂಲಿಯನ್ನು ಕೊಟ್ಟು ಹೆಚ್ಚಿನ ಕೆಲಸವನ್ನು ಮಾಡಿಸಿಕೊಳ್ಳುವ ಮೂಲಕ ಕೆಲಸಗಾರರನ್ನು ಶೋಷಣೆ ಮಾಡುವರು. ಇದು ಗುಲಾಮಗಿರಿಯ ಮತ್ತೊಂದು ರೂಪವಾಗಿದೆ. ಭಾರತ ಸರ್ಕಾರವು 1976 ರಲ್ಲಿ ಜೀತ ಕಾರ್ಮಿಕ ಪದ್ದತಿಯನ್ನು ರದ್ದುಪಡಿಸಿದೆ. ಈ ಸಾಮಾಜಿಕ ಅನಿಷ್ಠ ಪದ್ಧತಿಯು ಕಡಿಮೆಯಾಗಿದ್ದರೂ, ದೇಶದ ಕೆಲವು ಭಾಗಗಳಲ್ಲಿ ಇನ್ನೂ ಜೀವಂತವಾಗಿದೆ.

**ಬಾಲ ಕಾರ್ಮಿಕರ ರದ್ಧತಿ :** 14 ವರ್ಷಗಳ ಒಳಗಿನ ಮಗು ಕೂಲಿಗಾಗಿ ದುಡಿಯುತ್ತಿದ್ದರೆ ಅದನ್ನು ಬಾಲಕಾರ್ಮಿಕ ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಇದು ಒಂದು ಗಂಭೀರ ಸಮಸ್ಯೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಸುಮಾರು ಶೇ.90 ರಷ್ಟು ಮಕ್ಕಳು ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ದುಡಿಯುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಅವರು ಸಣ್ಣ ಕೈಗಾರಿಕೆ, ಬೆಂಕಿ ಪೆಟ್ಟಿಗೆ ಕೈಗಾರಿಕೆ, ಗ್ಯಾರೇಜು, ಹೋಟೆಲ್, ವ್ಯವಹಾರಿ ಸಂಸ್ಥೆಗಳು ಮುಂತಾದ ಕಡೆಗಳಲ್ಲಿ ದುಡಿಯುತ್ತಿದ್ದಾರೆ. ಇದು ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡುತ್ತದೆ. ಅವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ ಮತ್ತು ಮಕ್ಕಳ ಭವಿಷ್ಯವನ್ನು ಹಾಳುಮಾಡುತ್ತದೆ. ಭಾರತ ಸರ್ಕಾರದ 1986 ರ ಬಾಲ ಕಾರ್ಮಿಕ ನಿಷೇಧದ ಅನ್ವಯ 14 ವರ್ಷಗಳ ಒಳಗಿನ ಮಕ್ಕಳನ್ನು ಅಪಾಯಕರ ಉದ್ಯೋಗಗಳಲ್ಲಿ ದುಡಿಯಲು ನೇಮಿಸಿಕೊಳ್ಳುವುದನ್ನು ನಿಷೇಧಿಸಿದೆ.

**ಉದ್ಯೋಗ :** ಜನರು ತಮ್ಮ ಜೀವನ ನಿರ್ವಹಣೆಗಾಗಿ ಕ್ರಮಬದ್ಧ ಆದಾಯ ಗಳಿಸುವುದಕ್ಕಾಗಿ ವಿವಿಧ ಉತ್ಪಾದಕ ಚಟುವಟಿಕೆಗಳಲ್ಲಿ ನಿರತರಾಗಿರುವ ಸನ್ನಿವೇಶವನ್ನು 'ಉದ್ಯೋಗ' ಎನ್ನುತ್ತೇವೆ.

**ನಿರುದ್ಯೋಗ :** ಯಾವುದೇ ಒಬ್ಬ ಶ್ರಮಿಕನು ಪ್ರಸ್ತುತ ಮಾರುಕಟ್ಟೆ ದರದಲ್ಲಿ ಕೆಲಸಮಾಡಲು ಇಚ್ಛಿಸಿದ್ದು, ಆದರೆ ಕೆಲಸ ಪಡೆಯಲಾಗದಿದ್ದರೆ, ಅವನನ್ನು ನಿರುದ್ಯೋಗಿ ಎಂದು ಕರೆಯಲಾಗುತ್ತದೆ.

ಭಾರತದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಅವರಲ್ಲಿ ವಿದ್ಯಾವಂತರು, ಕೌಶಲ್ಯ ಹೊಂದಿದವರು, ಗ್ರಾಮೀಣ ಮತ್ತು ನಗರದ ಜನರು ಸೇರಿದ್ದಾರೆ. 1951ರಲ್ಲಿ ಒಟ್ಟು ನಿರುದ್ಯೋಗಿಗಳ ಸಂಖ್ಯೆಯು ಸುಮಾರು 5 ಮಿಲಿಯನ್‌ಗಳಷ್ಟಿತ್ತು. 2009–10 ರಲ್ಲಿ ದೇಶದಲ್ಲಿ ಒಟ್ಟು 468.8 ಮಿಲಿಯನ್‌ಗಳಷ್ಟು ಶ್ರಮಶಕ್ತಿ ಇದ್ದು ಅದರಲ್ಲಿ 9.8 ಮಿಲಿಯನ್‌ಗಳಷ್ಟು (ಶೇ. 2) ನಿರುದ್ಯೋಗಿಗಳಿದ್ದಾರೆ.

NOT TO BE REPUBLISHED © KTBS

**NSSO (National Sample Survey Organisation) ವರ್ಗೀಕರಣ :** ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಘಟನೆ (NSSO)ಯು ನಿರುದ್ಯೋಗವನ್ನು ಅಳೆಯುವುದಕ್ಕಾಗಿ ಮೂರು ಪರಿಕಲ್ಪನೆಗಳನ್ನು ಅಭಿವೃದ್ಧಿಪಡಿಸಿದೆ. ಅವುಗಳೆಂದರೆ, ನಿರುದ್ಯೋಗದ ಸಾಮಾನ್ಯ ಸ್ಥಿತಿ, ವಾರದ ಸ್ಥಿತಿ ಮತ್ತು ದೈನಂದಿನ ಸ್ಥಿತಿಯ ಪರಿಕಲ್ಪನೆ.

1. **ಸಾಮಾನ್ಯ ಸ್ಥಿತಿ :** ಒಬ್ಬ ಶ್ರಮಿಕನು ಒಂದು ವರ್ಷದಲ್ಲಿ ಕನಿಷ್ಠ 183 ದಿನಗಳಷ್ಟು ಉದ್ಯೋಗವನ್ನು ಪಡೆಯಲಾಗದಿದ್ದರೆ ಅವನನ್ನು ಸಾಮಾನ್ಯ ಸ್ಥಿತಿಯ ನಿರುದ್ಯೋಗಿ ಎಂದು ಪರಿಗಣಿಸಲಾಗುತ್ತದೆ. ಶ್ರಮಿಕರು ವರ್ಷದ ಹೆಚ್ಚಿನ ಭಾಗ ನಿರುದ್ಯೋಗಿಗಳಾಗಿ ಉಳಿಯುತ್ತಾರೆ. ಇದು ಖಾಯಂ ಉದ್ಯೋಗವನ್ನು ಹುಡುಕುತ್ತಿರುವ ವಿದ್ಯಾವಂತ ಜನರಿಗೆ ಅನ್ವಯಿಸುತ್ತದೆ ಮತ್ತು ಅವರು ದಿನಗೂಲಿ ಕೆಲಸವನ್ನು ಒಪ್ಪಿಕೊಳ್ಳುವುದಿಲ್ಲ. ಈ ಪರಿಕಲ್ಪನೆಯನ್ನು ಮುಕ್ತ ನಿರುದ್ಯೋಗ ಮತ್ತು ದೀರ್ಘಕಾಲದ ನಿರುದ್ಯೋಗವನ್ನು ಅಳೆಯಲು ಬಳಸುತ್ತಾರೆ.

2. **ವಾರದ ಸ್ಥಿತಿ :** ಶ್ರಮಿಕನೊಬ್ಬನು ಸಮೀಕ್ಷಾ ವಾರದ ಅವಧಿಯಲ್ಲಿ ಕನಿಷ್ಠ ಒಂದು ಗಂಟೆಯಷ್ಟಾದರು ಉದ್ಯೋಗ ಪಡೆಯಲಾಗದಿದ್ದರೆ ಅವನನ್ನು ವಾರದ ಸ್ಥಿತಿಯ ನಿರುದ್ಯೋಗಿ ಎಂದು ಪರಿಗಣಿಸಲಾಗುತ್ತದೆ. ಇದು ಋತುಮಾನ ನಿರುದ್ಯೋಗದ ಮಾಪಕವಾಗಿದೆ.


> **ನಿಮಗಿದು ಗೊತ್ತೇ ?**
> ಒಟ್ಟು ಶ್ರಮ ಶಕ್ತಿ – ಕಾರ್ಯನಿರತ ಶ್ರಮ (ಕೆಲಸದ ಶಕ್ತಿ) = ನಿರುದ್ಯೋಗ
> *Labour force – workforce = Unemployment.*

3. **ದೈನಂದಿನ ಸ್ಥಿತಿ :** ವ್ಯಕ್ತಿಯೊಬ್ಬನು ಒಂದು ದಿನದಲ್ಲಿ ಕನಿಷ್ಠ ಒಂದು ಗಂಟೆಯಷ್ಟು ಉದ್ಯೋಗವನ್ನು ಪಡೆಯಲಾಗದಿದ್ದರೆ ಅವನನ್ನು ದೈನಂದಿನ ಸ್ಥಿತಿಯ ನಿರುದ್ಯೋಗಿ ಎಂದು ಪರಿಗಣಿಸಲಾಗುತ್ತದೆ. ಅವನು ಒಂದು ಗಂಟೆ ಮೇಲ್ಪಟ್ಟು ಮತ್ತು 4 ಗಂಟೆಗಳವರೆಗೆ ಕೆಲಸಮಾಡಿದರೆ ಅವನನ್ನು ಅರೆಉದ್ಯೋಗಿ ಅಥವಾ ಅರ್ಧದಿನದ ಉದ್ಯೋಗಿ ಎಂದು ಕರೆಯುತ್ತಾರೆ. ಅವನು ದಿನದಲ್ಲಿ 4 ಗಂಟೆಗಳಿಗಿಂತ ಹೆಚ್ಚು ಅವಧಿ ಕೆಲಸ ಮಾಡಿದರೆ, ಅವನನ್ನು ಒಂದು ದಿನದ ಉದ್ಯೋಗಿ ಎಂದು ಪರಿಗಣಿಸಲಾಗುತ್ತದೆ. ಅದನ್ನು 'ಮಾನವ ದಿನದ ಉದ್ಯೋಗ'ವೆಂತಲೂ ಕರೆಯುತ್ತಾರೆ. ಇದು ದಿನಗೂಲಿ ನಿರುದ್ಯೋಗವನ್ನು ಅಳೆಯಲು ಸಹಾಯಕವಾಗಿದೆ.

**ಯುವ ನಿರುದ್ಯೋಗ :** 15–30 ವರ್ಷಗಳ ವಯೋಗುಂಪಿನ ಜನರಲ್ಲಿರುವ ನಿರುದ್ಯೋಗವನ್ನು ಯುವ ನಿರುದ್ಯೋಗ ಎಂದು ಕರೆಯುತ್ತಾರೆ. ಇದು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕಂಡುಬರುತ್ತದೆ ಮತ್ತು ಹೆಚ್ಚಾಗಿ ಬಿಳಿ ಶ್ವೇತ ವಸ್ತ್ರ ಉದ್ಯೋಗ (ದೈಹಿಕ ಶ್ರಮವಿಲ್ಲದ ಉದ್ಯೋಗ) (White-collar job) ಕ್ಕಾಗಿ ಕಾಯುತ್ತಿರುವ ವಿದ್ಯಾವಂತರಲ್ಲಿ ಕಂಡುಬರುತ್ತಿದೆ.

© KTBS NOT TO BE REPUBLISHED

**ನಿರುದ್ಯೋಗದ ವಿಧಗಳು :**




**ನಿರುದ್ಯೋಗದ ಇತರೆ ವಿಧಗಳು** :

1. ಘರ್ಷಣಾತ್ಮಕ ನಿರುದ್ಯೋಗ
2. ದಿನಗೂಲಿ ನಿರುದ್ಯೋಗ
3. ರಚನಾತ್ಮಕ ನಿರುದ್ಯೋಗ
4. ತಾಂತ್ರಿಕ ನಿರುದ್ಯೋಗ
5. ಆವರ್ತ ನಿರುದ್ಯೋಗ
6. ದೀರ್ಘಕಾಲದ ನಿರುದ್ಯೋಗ

©KTBS NOT TO BE REPUBLISHED

**ಮರೆಮಾಚಿದ ನಿರುದ್ಯೋಗ :** ಇದು ನೈಜ ಅಗತ್ಯಕ್ಕಿಂತ ಹೆಚ್ಚುವರಿ ಮಾನವ ಶಕ್ತಿಯನ್ನು ಹೊಂದಿರುವ ಮತ್ತು ಕೆಲವು ಕೆಲಸಗಾರರ ಸೀಮಾಂತ ಉತ್ಪಾದಕತೆಯು ಶೂನ್ಯವಾಗಿರುವ ನಿರುದ್ಯೋಗದ ಸನ್ನಿವೇಶವಾಗಿದೆ. ಆದುದರಿಂದ ಹೆಚ್ಚುವರಿ ಕೆಲಸಗಾರರನ್ನು ಅಲ್ಲಿಂದ ತೆಗೆದುಹಾಕಿದರೂ ಒಟ್ಟು ಉತ್ಪಾದನಾ ಪ್ರಮಾಣವು ಕಡಿಮೆಯಾಗುವುದಿಲ್ಲ. ಇದನ್ನು ಶ್ರಮದ ಅರೆಉದ್ಯೋಗ ಎಂದೂ ಕರೆಯಲಾಗುತ್ತದೆ. ಉದಾ: ಯೋಗ್ಯವಾಗಿ ಸಂಘಟಿತವಾಗಿರುವ ಒಂದು ಕುಟುಂಬದ ಕೃಷಿಭೂಮಿಯಲ್ಲಿ ನಾಲ್ಕು ಜನರು ದುಡಿಯುತ್ತಿದ್ದಾರೆಂದು ಭಾವಿಸೋಣ. ಅದೇ ಭೂಮಿಯಲ್ಲಿ ಮತ್ತಿಬ್ಬರು ಕೆಲಸಗಾರರನ್ನು ಕೆಲಸಕ್ಕೆ ನೇಮಿಸಿಕೊಂಡರೆ, ಒಟ್ಟು ಉತ್ಪನ್ನದಲ್ಲಿ ಯಾವುದೇ ಬದಲಾವಣೆಯಾಗದಿದ್ದರೆ, ಆ ಇಬ್ಬರು ಕೆಲಸಗಾರರು ಮರೆಮಾಚಿದ ನಿರುದ್ಯೋಗಿಗಳೆನಿಸುತ್ತಾರೆ. ಈ ರೀತಿಯ ನಿರುದ್ಯೋಗವು ಭಾರತದಂತಹ ಮುಂದುವರಿಯುತ್ತಿರುವ ದೇಶಗಳ ಗ್ರಾಮೀಣ ವಲಯದ ಸಾಮಾನ್ಯ ಲಕ್ಷಣವಾಗಿದೆ. ಸಂಕ್ಷಿಪ್ತವಾಗಿ ಉದ್ಯೋಗದಲ್ಲಿನ ಜನರ ಅತಿಯಾದ ಒತ್ತಡವು ಮರೆಮಾಚಿದ ನಿರುದ್ಯೋಗಕ್ಕೆ ದಾರಿಮಾಡಿಕೊಡುತ್ತದೆ.

**ಋತುಮಾನದ ನಿರುದ್ಯೋಗ :** ಕೃಷಿ ಮತ್ತು ಕೆಲವು ಕೈಗಾರಿಕೆಗಳಲ್ಲಿನ ವೃತ್ತಿಗಳು ಋತುಸಂಬಂಧಿಯಾಗಿವೆ. ಅವು ವರ್ಷದಲ್ಲಿ ಒಂದು ನಿರ್ದಿಷ್ಟ ಋತುವಿನಲ್ಲಿ ಮಾತ್ರ ಉದ್ಯೋಗ ನೀಡುತ್ತವೆ. ಈ ರೀತಿಯ ಕೆಲಸ ಅಥವಾ ಚಟುವಟಿಕೆಗಳಲ್ಲಿ ನಿರತರಾಗಿರುವ ಜನರು ಇತರೆ ಋತುವಿನಲ್ಲಿ ನಿರುದ್ಯೋಗಿಗಳಾಗಿ ಉಳಿಯಬೇಕಾಗುತ್ತದೆ. ಇದನ್ನು ಋತುಮಾನದ ನಿರುದ್ಯೋಗ ಎನ್ನುತ್ತಾರೆ.

**ಐಚ್ಛಿಕ ನಿರುದ್ಯೋಗ :** ಇದು ವ್ಯಕ್ತಿಯ ಸ್ವತಃ ಆಯ್ಕೆಯ ನಿರುದ್ಯೋಗವಾಗಿದೆ. ಯಾರು ಹೆಚ್ಚಿನ ಆಸ್ತಿಗಳನ್ನು ಹೊಂದಿದ್ದಾರೋ ಮತ್ತು ಯಾರು ಯಾವುದೇ ಶ್ರಮವಿಲ್ಲದೆ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೋ, ಅವರು ಚಾಲ್ತಿಯಲ್ಲಿರುವ ಕೂಲಿ ದರದಲ್ಲಿ ಕೆಲಸಮಾಡಲು ಇಚ್ಛಿಸುವುದಿಲ್ಲ ಇವರು ಐಚ್ಛಿಕ ನಿರುದ್ಯೋಗಿಗಳಾಗಿದ್ದಾರೆ.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1) ಆಡಂಸ್ಮಿತ್‌ರ ಪ್ರಮುಖ ಗ್ರಂಥ ................
2) ಜೀತಕಾರ್ಮಿಕ ನಿರ್ಮೂಲನ ಕಾಯಿದೆ ................ ವರ್ಷ ಜಾರಿಮಾಡಲಾಯಿತು.
3) ಕಾರ್ಮಿಕನ ಸೀಮಾಂತ ಉತ್ಪಾದನೆ ಶೂನ್ಯವಾಗಿದ್ದಾಗ ಅದನ್ನು ................ ಎನ್ನುತ್ತಾರೆ.
4) ಶ್ರಮ ವಿಭಜನೆ ................ ಹೆಚ್ಚಿಸುತ್ತದೆ.
5) ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನ ಕಾಯಿದೆ ಜಾರಿಗೊಳಿಸಿದ ವರ್ಷ ................

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1) ಶ್ರಮ ವಿಭಜನೆ ಎಂದರೇನು ?
2) ಬಾಲ ಕಾರ್ಮಿಕ ಎಂದರೇನು ?
3) ನಿರುದ್ಯೋಗವನ್ನು ವ್ಯಾಖ್ಯಾನಿಸಿ.
4) ಶ್ರಮ ವಿಭಜನೆಯ ಅನುಕೂಲಗಳನ್ನು ವಿವರಿಸಿ.
5) ಶ್ರಮ ವಿಭಜನೆಯ ಅನಾನುಕೂಲಗಳನ್ನು ಪಟ್ಟಿ ಮಾಡಿ.
6) ಉತ್ಪಾದಕ ಮತ್ತು ಅನುತ್ಪಾದಕ ಶ್ರಮದ ಅರ್ಥ ಪಟ್ಟಿ ಮಾಡಿ.
7) ನಿರುದ್ಯೋಗದ ವಿಧಗಳನ್ನು ಪಟ್ಟಿ ಮಾಡಿ.
8) ಮರೆಮಾಚಿದ ನಿರುದ್ಯೋಗ ಮತ್ತು ಋತುಮಾನ ನಿರುದ್ಯೋಗದ ವ್ಯತ್ಯಾಸಗಳನ್ನು ಗುರುತಿಸಿ.

**III. ಚಟುವಟಿಕೆ :**

1) ಒಂದು ಉದ್ಯಮಕ್ಕೆ ಭೇಟಿ ನೀಡಿ, ಅಲ್ಲಿನ ಶ್ರಮವಿಭಜನೆಯ ನೈಜ ಅನುಭವವನ್ನು ಉಲ್ಲೇಖಿಸಿ ಒಂದು ವರದಿಯನ್ನು ತಯಾರಿಸಿ.

**IV. ಯೋಜನೆಗಳು.**

1) ವಿವಿಧ ನಿರುದ್ಯೋಗಗಳ ಬಗ್ಗೆ ಒಂದು ಯೋಜನೆಯನ್ನು ತಯಾರಿಸಿ ಪ್ರಸ್ತುತ ಭಾರತದಲ್ಲಿನ ಅದರ ಸ್ಥಾನವನ್ನು ತಿಳಿಸಿ.
2) ಭಾರತದ ಲಿಂಗ ಪರಿಮಾಣದ ಬಗ್ಗೆ ಒಂದು ವರದಿ ಬರೆಯಿರಿ.

*****

© KTBS NOT TO BE REPUBLISHED

## ವ್ಯವಹಾರ ಅಧ್ಯಯನ

## ಅಧ್ಯಾಯ – 32

# ಮಾರುಕಟ್ಟೆ ನಿರ್ವಹಣೆ

Y8S3T5

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಮಾರುಕಟ್ಟೆ – ಅರ್ಥ ಮತ್ತು ವಿಧಗಳು
- ಮಾರುಕಟ್ಟೆ ವ್ಯವಸ್ಥೆ – ಅರ್ಥ ಮತ್ತು ಪ್ರಾಮುಖ್ಯತೆ.
- ಮಾರುಕಟ್ಟೆ ವ್ಯವಸ್ಥೆಯ ಮಿಶ್ರಣ – ಉತ್ಪನ್ನ, ಬೆಲೆ, ಸ್ಥಳ, ಪ್ರವರ್ತನೆ
- ಉತ್ಪಾದಕರು – ಮಧ್ಯವರ್ತಿಗಳು – ಗ್ರಾಹಕರು
- ಗ್ರಾಹಕರ ಹಕ್ಕುಗಳು ಮತ್ತು ಗ್ರಾಹಕ ವೇದಿಕೆಗಳು

NOT TO BE REPUBLISHED @KTBS

**ಮಾರುಕಟ್ಟೆ –ಅರ್ಥ :–** ಮಾರುಕಟ್ಟೆ ಎಂಬ ಪದವು ಲ್ಯಾಟಿನ್ ಭಾಷೆಯ **"ಮರ್ಕಟಸ್"** (Mercatus) ಎಂಬ ಪದದಿಂದ ಬಂದಿದೆ. ಇದರ ಅರ್ಥ ವ್ಯಾಪಾರ ಅಥವಾ ವ್ಯಾಪಾರ ಸ್ಥಳವಾಗಿದೆ. ಸಾಮಾನ್ಯ ಅರ್ಥದಲ್ಲಿ ಮಾರುಕಟ್ಟೆಯೆಂದರೆ ಮಾರುವವರು ಮತ್ತು ಕೊಳ್ಳುವವರು ಪರಸ್ಪರ ಭೇಟಿಯಾಗಿ ಅವರು ಮಾರುವ ಮತ್ತು ಕೊಳ್ಳುವ ಪ್ರಕ್ರಿಯೆಗಳನ್ನು ಉಂಟುಮಾಡಿಕೊಳ್ಳುವ ಅಂದರೆ ಸರಕುಗಳ ವಿನಿಮಯ ಮತ್ತು ಕೊಳ್ಳುವ ಸ್ಥಳ.

**ಮಾರುಕಟ್ಟೆಯ ವಿಧಗಳು :–** ಮಾರುಕಟ್ಟೆಗಳನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ. ಅವುಗಳೆಂದರೆ :

1) **ಭೌಗೋಳಿಕ ಪ್ರದೇಶದ ಆಧಾರದ ಮೇಲೆ :**

**ಸ್ಥಳೀಯ ಮಾರುಕಟ್ಟೆಗಳು :** ಸಾಮಾನ್ಯವಾಗಿ ಒಂದು ಸ್ಥಳೀಯ ಪ್ರದೇಶದಲ್ಲಿ ಮಾತ್ರ ಸರಕುಗಳನ್ನು ಮಾರುವ ಮತ್ತು ಕೊಳ್ಳುವ ಪ್ರಕ್ರಿಯೆ ನಡೆಸುತ್ತವೆ.

**ಪ್ರಾದೇಶಿಕ ಮಾರುಕಟ್ಟೆಗಳು :** ಈ ಮಾರುಕಟ್ಟೆಗಳು ಒಂದು ಪ್ರದೇಶಕ್ಕೆ ಸೀಮಿತವಾಗಿರುತ್ತವೆ.

**ರಾಷ್ಟ್ರೀಯ ಮಾರುಕಟ್ಟೆಗಳು :** ಈ ರೀತಿಯ ಮಾರುಕಟ್ಟೆಗಳು ಮಾರುವ ಮತ್ತು ಕೊಳ್ಳುವ ವಹಿವಾಟನ್ನು ಒಂದು ದೇಶದ ಒಳಗೆ ನಡೆಸುತ್ತವೆ.

**ಅಂತರ ರಾಷ್ಟ್ರೀಯ ಮಾರುಕಟ್ಟೆಗಳು :** ಈ ಮಾರುಕಟ್ಟೆಗಳ ಮಾರುವ ಮತ್ತು ಕೊಳ್ಳುವ ವಹಿವಾಟುಗಳು ಹಲವು ದೇಶಗಳ ಮಧ್ಯೆ ನಡೆಯುತ್ತವೆ.

2) **ಸರಕುಗಳ ಆಧಾರದ ಮೇಲೆ :**

**ಸರಕಿನ ಮಾರುಕಟ್ಟೆ :** ಈ ಮಾರುಕಟ್ಟೆಗಳು ಹಲವಾರು ವಿಧವಾದ ಸರಕುಗಳನ್ನು ಮಾರುವ ಮತ್ತು ಕೊಳ್ಳುವ ವಹಿವಾಟುಗಳನ್ನು ನಡೆಸುತ್ತವೆ.

**ಹಣಕಾಸು ಮಾರುಕಟ್ಟೆ :** ಈ ಮಾರುಕಟ್ಟೆಗಳು ವ್ಯವಹಾರ ಸಂಸ್ಥೆಗಳಿಗೆ ಬೇಕಾಗುವ ಹಣಕಾಸನ್ನು ಕೊಳ್ಳುವ ಮತ್ತು ಮಾರುವ ವಹಿವಾಟುಗಳಿಗಾಗಿ ವಿಶೇಷವಾಗಿ ಸ್ಥಾಪಿಸಲ್ಪಟ್ಟಿರುತ್ತವೆ. ಉದಾ: ಷೇರುಮಾರುಕಟ್ಟೆ, ಲೇವಾದೇವಿ ಮಾರುಕಟ್ಟೆ.

**ಬಂಡವಾಳ ಮಾರುಕಟ್ಟೆ :** ಇದು ಒಂದು ವಿಶಿಷ್ಟವಾದ ಮಾರುಕಟ್ಟೆಯಾಗಿದ್ದು ವ್ಯವಹಾರ ಸಂಸ್ಥೆಗಳಿಗೆ ದೀರ್ಘಾವಧಿ ಸಾಲಗಳನ್ನು ಒದಗಿಸುತ್ತವೆ. ಇವು ಸಾಮಾನ್ಯವಾಗಿ ಹಣಕಾಸು ಸಂಸ್ಥೆಗಳಾಗಿರುತ್ತವೆ. ಉದಾ : ಷೇರು ಮಾರುಕಟ್ಟೆ.

3) **ಸಂಪರ್ಕ ಸ್ಥಾನದ ಆಧಾರ (On the basis of Link)**

**ಪ್ರಾಥಮಿಕ ಮಾರುಕಟ್ಟೆ :** ಈ ರೀತಿಯ ಮಾರುಕಟ್ಟೆಗಳಲ್ಲಿ ಉತ್ಪಾದಕರು ತಮ್ಮ ವಸ್ತುಗಳನ್ನು ಸಗಟು ವ್ಯಾಪಾರಿಗಳಿಗೆ ಮಾರುತ್ತಾರೆ (ಮುಖ್ಯವಾಗಿ ವ್ಯವಸಾಯ ಉತ್ಪನ್ನಗಳು)

**ದ್ವಿತೀಯ ಮಾರುಕಟ್ಟೆ :** ಈ ರೀತಿಯ ಮಾರುಕಟ್ಟೆಗಳಲ್ಲಿ ಸಗಟು ವ್ಯಾಪಾರಿಗಳು ತಮ್ಮ ಸರಕುಗಳನ್ನು ಚಿಲ್ಲರೆ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾರೆ.

**ಅಂತಿಮ ಮಾರುಕಟ್ಟೆ :** ಈ ರೀತಿಯ ಮಾರುಕಟ್ಟೆಗಳಲ್ಲಿ ಚಿಲ್ಲರೆ ವ್ಯಾಪಾರಿಗಳು ಅಂತಿಮ ಗ್ರಾಹಕರಿಗೆ ಮಾರಾಟ ಮಾಡುತ್ತಾರೆ.

4) **ಪ್ರಮಾಣದ ಆಧಾರ :**

**ಸಗಟು ಮಾರುಕಟ್ಟೆ :** ಈ ಮಾರುಕಟ್ಟೆಗಳಲ್ಲಿ ಉತ್ಪಾದಕರು ದೊಡ್ಡ ಪ್ರಮಾಣದಲ್ಲಿ ಸರಕುಗಳನ್ನು ಸಗಟು ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾರೆ.

**ಚಿಲ್ಲರೆ ಮಾರುಕಟ್ಟೆ :** ಈ ರೀತಿಯ ಮಾರುಕಟ್ಟೆಗಳಲ್ಲಿ ಸರಕುಗಳನ್ನು ಸಣ್ಣ ಪ್ರಮಾಣದಲ್ಲಿ ಬಳಕೆದಾರರಿಗೆ ಮಾರಾಟ ಮಾಡುತ್ತಾರೆ.

5) **ವಹಿವಾಟಿನ ಲಕ್ಷಣದ ಆಧಾರದ ಮೇಲೆ :**

**ಸ್ಥಾನಿಕ (Spot) ಮಾರುಕಟ್ಟೆ :** ಇಲ್ಲಿ ಮಾರಾಟಗಾರರು ವಸ್ತುಗಳನ್ನು ಕೊಳ್ಳುವವರಿಗೆ ಇರುವ ಸ್ಥಿತಿಯಲ್ಲಿಯೇ, ಇರುವ ಜಾಗದಲ್ಲಿಯೇ ಮಾರಾಟ ಮಾಡುತ್ತಾರೆ.

**ಭವಿಷ್ಯದ ಮಾರುಕಟ್ಟೆ :** ಇಲ್ಲಿ ತತ್‌ಕ್ಷಣ ವಸ್ತುಗಳ ವಿತರಣೆ ಆಗುವುದಿಲ್ಲ. ಮುಂದಿನ ಅವಧಿಗಾಗಿ ಮಾರಾಟ ಮತ್ತು ಕೊಳ್ಳುವ ಒಪ್ಪಂದಗಳು ನಡೆಯುತ್ತವೆ.

6) **ವಸ್ತುಗಳ ಸಹಜ ಸ್ಥಿತಿಗಳ ಆಧಾರ :**

**ಗ್ರಾಹಕ ಮಾರುಕಟ್ಟೆ :** ಇಲ್ಲಿ ವಸ್ತುಗಳನ್ನು ಗ್ರಾಹಕರು ತಮ್ಮ ಸ್ವಂತ ಉಪಯೋಗಕ್ಕಾಗಿ ಕೊಳ್ಳುತ್ತಾರೆ.

**ಉತ್ಪಾದಕರ ಮಾರುಕಟ್ಟೆ :** ಇಲ್ಲಿ ವಸ್ತುಗಳನ್ನು ಉತ್ಪಾದನಾ ಪ್ರಕ್ರಿಯೆಗಳಿಗಾಗಿ ಮಾರಾಟ ಮಾಡುತ್ತಾರೆ.

7) **ನಿಯಂತ್ರಣದ ಆಧಾರ :**

**ನಿಯಂತ್ರಿತ ಮಾರುಕಟ್ಟೆಗಳು :** ಇಲ್ಲಿ ಮಾರುವುದು ಮತ್ತು ಕೊಳ್ಳುವುದು ಶಾಸನ ಬದ್ಧ ನಿಯಮಗಳಿಂದ ನಿಯಂತ್ರಿತವಾಗಿರುತ್ತದೆ.

**ಅನಿಯಂತ್ರಿತ ಅಥವಾ ಮುಕ್ತ ಮಾರುಕಟ್ಟೆ :** ಇಲ್ಲಿ ವಹಿವಾಟುಗಳಿಗೆ ಯಾವುದೇ ರೀತಿಯ ನಿಯಮಗಳ ನಿಯಂತ್ರಣ ಇರುವುದಿಲ್ಲ. ವಹಿವಾಟು ಮುಕ್ತವಾಗಿ ನಡೆಯುತ್ತದೆ.

© KTBS NOT TO BE REPUBLISHED

8) **ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಮಾರುಕಟ್ಟೆಗಳು :**

**ಸಾಂಪ್ರದಾಯಿಕ ಮಾರುಕಟ್ಟೆಗಳು :** ಇವು ಹಳೆಯಕಾಲದಿಂದಲೂ ರೂಢಿಯಲ್ಲಿರುವ ಮಾರುಕಟ್ಟೆಗಳು ಕೆಲವು ಪೂರ್ವಾಧಾರಿತ ನಿರ್ಧಾರಗಳೊಂದಿಗೆ ವಸ್ತುಗಳ ಅಥವಾ ಸೇವೆಗಳ ವಿನಿಮಯ ನಡೆಯುತ್ತದೆ. ಒಂದು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿರುತ್ತವೆ. ಒಂದು ಸ್ಥಳ, ಕೊಳ್ಳುವವರು, ಮಾರುವವರು, ವಸ್ತುಗಳ ಸ್ಥಿತಿ, ಗಾತ್ರ ಮುಂತಾದುವೆಲ್ಲವು ನಿರ್ದಿಷ್ಟ ರೀತಿಯಲ್ಲಿ ವ್ಯವಹರಿಸಲ್ಪಡುತ್ತವೆ.

**ಅಸಾಂಪ್ರದಾಯಿಕ ಮಾರುಕಟ್ಟೆಗಳು :** ಈ ಮಾರುಕಟ್ಟೆಗಳಿಗೆ ಒಂದು ನಿರ್ದಿಷ್ಟ ಸ್ಥಳವಿರುವುದಿಲ್ಲ. ಎಲ್ಲಿಂದ ಬೇಕಾದರೂ ಮಾರಾಟ ಮತ್ತು ಕೊಳ್ಳುವಿಕೆ ನಡೆಯುತ್ತದೆ. ಇವುಗಳಿಗೆ ಮುಖ್ಯ ಉದಾಹರಣೆಗಳೆಂದರೆ:

- ಅಂಚೆ ಮೂಲಕ ಮಾರಾಟ ಮಾಡುವ ಸಂಸ್ಥೆಗಳು (Mail order Houses)
- ದೂರವಾಣಿ ಮೂಲಕ ಕೊಳ್ಳುವುದು (Tele shopping)
- ಪ್ರಾಸ್ತಾವಿಕ ಅಂಗಡಿಗಳು (Virtual shops)
- ವಿಷಯ ಮತ್ತು ಬೆಲೆ ಪಟ್ಟಿ ಆಧರಿಸಿ ಮಾರಾಟ (Catalogue market)
- ಅಂತರ್ಜಾಲ ಮಾರುಕಟ್ಟೆ (Online market)

**ಮಾರುಕಟ್ಟೆ ವ್ಯವಸ್ಥೆ – Marketing**

**ಅರ್ಥ ಮತ್ತು ವ್ಯಾಖ್ಯೆ :** ಮಾರಾಟ ವ್ಯವಸ್ಥೆಯೆಂದರೆ ವಸ್ತುಗಳು ಮತ್ತು ಸೇವೆಗಳು ಉತ್ಪಾದಕರಿಂದ ಗ್ರಾಹಕರವರೆಗೆ ನಡೆಯುವ ಎಲ್ಲ ಚಟುವಟಿಕೆಗಳನ್ನು ಹೊಂದಿರುತ್ತದೆ.

ಅಮೆರಿಕನ್ ಮಾರ್ಕೆಟಿಂಗ್ ಅಸೋಸಿಯೇಷನ್, ಮಾರಾಟ ವ್ಯವಸ್ಥೆಯನ್ನು ಹೀಗೆ ವ್ಯಾಖ್ಯಾನಿಸುತ್ತದೆ. "ಮಾರಾಟ ವ್ಯವಸ್ಥೆ ಉತ್ಪಾದಕರಿಂದ ಬಳಕೆಗಾರರಿಗೆ ಅಥವಾ ಗ್ರಾಹಕರಿಗೆ ಸರಕು ಮತ್ತು ಸೇವೆಗಳು ನೇರವಾಗಿ ಹರಿಯುವ ವ್ಯವಹಾರದ ಚಟುವಟಿಕೆಯ ಕಾರ್ಯ".

ಮಾರಾಟ ವ್ಯವಸ್ಥೆಯು ಭೌತಿಕ ಸ್ಥಿತಿಯಲ್ಲಿ ವಸ್ತುಗಳನ್ನು ಮತ್ತು ಸೇವೆಗಳನ್ನು ಗ್ರಾಹಕರಿಗೆ ಹಂಚುವ ಚಟುವಟಿಕೆಯಲ್ಲದೇ ಗ್ರಾಹಕರಿಗೆ ನಿರ್ದೇಶಿಸುವ ಒಂದು ಮಾರಾಟ ವ್ಯವಸ್ಥೆಯಾಗಿದೆ.

**ಮಾರುಕಟ್ಟೆ ವ್ಯವಸ್ಥೆಯ ಕಾರ್ಯಗಳು :**

1. ಖರೀದಿ ಮತ್ತು ಜೋಡಣೆ (Buying & Assembling)
2. ಮಾರಾಟ ಮಾಡುವುದು ಅಥವಾ ವಿಕ್ರಯಿಸುವುದು (Selling)
3. ಸಾಗಾಣಿಕೆ (Transportation)
4. ಶೇಖರಣೆ ಮತ್ತು ಉಗ್ರಾಣ ವ್ಯವಸ್ಥೆ (Storage & Ware housing)
5. ಮಾರುಕಟ್ಟೆ ಸಂಶೋಧನೆ (Marketing Research)
6. ಶಿಷ್ಟೀಕರಣ (Standardisation)
7. ವರ್ಗೀಕರಣ (Grading)
8. ಮುದ್ರೆಹಾಕುವುದು (Branding)
9. ನಷ್ಟಭಯ ಭರಿಸುವಿಕೆ (Insurance)

©KTBS NOT TO BE REPUBLISHED

1) **ಖರೀದಿ ಮತ್ತು ಜೋಡಣೆ :** ಖರೀದಿ ಎಂದರೆ ಉತ್ಪಾದಕರು ಸರಕುಗಳನ್ನು ಉತ್ಪಾದನೆಗಾಗಿ ಕೊಳ್ಳುವುದು ಖರೀದಿ ಮಾಡಿದ ವಸ್ತುಗಳ ಒಟ್ಟುಗೂಡಿಸುವಿಕೆಯು ವಸ್ತುಗಳ ಖರೀದಿಯ ನಂತರ ಪ್ರಾರಂಭವಾಗುತ್ತದೆ.

2) **ಮಾರುಕಟ್ಟೆ :** ವಸ್ತುಗಳನ್ನು ಮಾರಾಟದ ಮೂಲಕ ಮಾರುವವರು, ಕೊಳ್ಳುವವರಿಗೆ ಲಾಭವನ್ನಿಟ್ಟುಕೊಂಡು ವರ್ಗಾಯಿಸುವುದೇ ಆಗಿದೆ.

3) **ಸಾಗಾಣಿಕೆ :** ಸಾಗಾಣಿಕೆಯು ಸ್ಥಳದ ಹಾಗೂ ಸಮಯದ ಉಪಯುಕ್ತತೆಯನ್ನು ಉಂಟುಮಾಡುತ್ತದೆ ಹಾಗೂ ಸರಕುಗಳ ಮೌಲ್ಯವನ್ನು ಹೆಚ್ಚಿಸುತ್ತದೆ.

4) **ದಾಸ್ತಾನು ಮತ್ತು ಉಗ್ರಾಣ ವ್ಯವಸ್ಥೆ :** ದಾಸ್ತಾನು ಎಂದರೆ ಉತ್ಪಾದಕರು ಸರಕುಗಳನ್ನು ಸಂಗ್ರಹ ಮಾಡುವುದೇ ಆಗಿದೆ. ಈ ಕಾರ್ಯವನ್ನು ಉಗ್ರಾಣಗಳು ನಿರ್ವಹಿಸುತ್ತದೆ.

5) **ಮಾರುಕಟ್ಟೆಯ ಸಂಶೋಧನೆ (Market Research) :** ಈ ವ್ಯವಸ್ಥೆಯು ಮಾರುಕಟ್ಟೆ ಪರಿಸ್ಥಿತಿಯ ಬಗ್ಗೆ ಮಾಹಿತಿ ಸಂಗ್ರಹಣೆ ಮಾಡುವುದೇ ಆಗಿದೆ. ಅಂದರೆ ಗ್ರಾಹಕರ ಸಂಖ್ಯೆ, ಅವರ ನೆಲೆ, ಅವರ ಅವಶ್ಯಕತೆಗಳು, ಖರೀದಿ ಸಾಮರ್ಥ್ಯ, ಆದ್ಯತೆಗಳು ಮತ್ತು ಖರೀದಿ ಪ್ರೇರಣೆಗಳ ಬಗ್ಗೆ ಸಂಶೋಧನೆ ಮಾಡುವುದು ಹಾಗೂ ಮಾಹಿತಿ ಸಂಗ್ರಹಿಸುವ ವ್ಯವಸ್ಥೆಯಾಗಿದೆ.

6) **ಪ್ರಮಾಣೀಕರಣ (Standardisation) :** ಪ್ರಮಾಣೀಕರಣ ಎಂದರೆ ಉತ್ಪಾದಿತ ವಸ್ತುಗಳನ್ನು ಅವುಗಳ ಭೌತಿಕ ಲಕ್ಷಣಗಳಾದ ಏಕರೂಪತೆ, ಆರ್ದ್ರತೆಯ ಪ್ರಮಾಣ, ಗುಣಮಟ್ಟದ ಶ್ರೇಷ್ಠತೆಗಳನ್ನು ಅನುಸರಿಸಿ ವಿಂಗಡಿಸುವುದೇ ಆಗಿದೆ. ಇದು ವಸ್ತುಗಳ ಮಾರಾಟ ಮತ್ತು ಕೊಳ್ಳುವಿಕೆಯನ್ನು ಸುಲಭಪಡಿಸುತ್ತದೆ.

7) **ವರ್ಗೀಕರಣ (Grading) :** ವರ್ಗೀಕರಣವೆಂದರೆ ಪೂರ್ವ ನಿರ್ಧಾರಿತ ಪರಿಮಾಣಗಳ ಆಧಾರದಲ್ಲಿ ಸರಕುಗಳನ್ನು ವಿವಿಧ ವರ್ಗ ಅಥವಾ ಶ್ರೇಣಿಗಳಲ್ಲಿ ವಿಂಗಡಿಸುವ ಪ್ರಕ್ರಿಯೆಯಾಗಿದೆ.

8) **ಮುದ್ರೆ ಹಾಕುವುದು, (Branding) :** ಮುದ್ರೆ ಹಾಕುವುದು ಮಾರಾಟದ ಸರಕುಗಳನ್ನು ಗುರ್ತಿಸುವ ಸಾಧನವಾಗಿರುತ್ತದೆ. ವಸ್ತುಗಳ ಮುದ್ರೆಯು ವಸ್ತುಗಳ ಕೀರ್ತಿಮೌಲ್ಯ (Goodwill) ವನ್ನು ಹೆಚ್ಚಿಸುತ್ತದೆ ಮತ್ತು ಮಾರಾಟಗಾರರಿಗೆ ಮಾನ್ಯತೆಯನ್ನು ಗಳಿಸಿ ಕೊಡುತ್ತದೆ. ಉದಾ : Reebok shoes, Colgate paste, Rin Soap, Parkerpen etc, ವ್ಯಾಪಾರ ಮುದ್ರೆಯನ್ನು ಕಾನೂನುಬದ್ಧವಾಗಿ ಕಾಯಿದೆಯ ಅನುಸಾರ ಸೂಕ್ತವಾಗಿ ನೊಂದಾಯಿಸಿರಬೇಕು. ಅದರ ದುರುಪಯೋಗದ ವಿರುದ್ಧ ಕಾನೂನು ರಕ್ಷಣೆ ಕೊಡುತ್ತದೆ. ವ್ಯಾಪಾರ ಮುದ್ರೆಯನ್ನು ನೋಂದಾಯಿಸಿದ್ದಲ್ಲಿ ಪ್ರತಿ ಪೊಟ್ಟಣದ ಅಥವಾ ಉತ್ಪನ್ನಗಳ ಮೇಲೆ ® ಅಕ್ಷರ ನಮೂದಿಸಿರುತ್ತಾರೆ.

9) **ವಿಮೆ :** ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯುವಾಗ ಅಥವಾ ಉಗ್ರಾಣಗಳಲ್ಲಿ ಶೇಖರಿಸಿಟ್ಟಿದ್ದಾಗ ನಾಶವಾಗುವ ಅಪಾಯಗಳಿರುತ್ತವೆ. ಇವುಗಳನ್ನು ತಪ್ಪಿಸಲು ಸಾಮಾನ್ಯವಿಮಾ ಕಂಪನಿಗಳು ವಸ್ತುಗಳಿಗೆ ವಿಮೆಯನ್ನು ಮಾಡುತ್ತವೆ. ವಿಮೆ ಮಾಡಿಸಿದ ವಸ್ತುಗಳು ನಾಶವಾದಲ್ಲಿ ವಿಮಾ ಕಂಪನಿಗಳು ನಷ್ಟವನ್ನು ತುಂಬಿ ಕೊಡುತ್ತವೆ.

©KTBS NOT TO BE REPUBLISHED

**ಮಾರುಕಟ್ಟೆಯ ಪ್ರಾಮುಖ್ಯತೆ : (Importance of Markating)**

ಒಂದು ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಮಾರಾಟಶಾಸ್ತ್ರವು ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ.

- **ಜೀವನ ಮಟ್ಟ :** ಅನೇಕ ರೀತಿಯ ಸರಕುಗಳ ಮತ್ತು ಸೇವೆಗಳು ದೊರಕುವುದರಿಂದ ಜನರ ಜೀವನ ಮಟ್ಟ ಹೆಚ್ಚಾಗುತ್ತದೆ.
- **ಗ್ರಾಹಕರ ಬಯಕೆಗಳ ನೆರವೇರಿಕೆ :** ಗ್ರಾಹಕರಿಗೆ ಹೊಸ ಹೊಸ ರೀತಿಯ ವಸ್ತುಗಳನ್ನು ಮತ್ತು ಸೇವೆಗಳನ್ನು ಉಪಯೋಗಿಸುವ ಅವಕಾಶಗಳು ಲಭಿಸುತ್ತವೆ. ಇದರಿಂದಾಗಿ ಗ್ರಾಹಕರಿಗೆ ತಮ್ಮ ಇಷ್ಟಗಳನ್ನು ನೇರವಾಗಿ ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ.
- **ಉದ್ಯೋಗಗಳ ಸದಾವಕಾಶಗಳು:** ಮಾರುಕಟ್ಟೆಯ ಪ್ರಕ್ರಿಯೆಗಳಲ್ಲಿ ಅನೇಕ ಸಂಸ್ಥೆಗಳು ತೊಡಗಿರುತ್ತವೆ.

  ಉದಾ : ಉತ್ಪಾದಕರು, ಸಗಟುವ್ಯಾಪಾರಿಗಳು, ಚಿಲ್ಲರೆ ವ್ಯಾಪಾರಿಗಳು, ಸಂಪರ್ಕಗಳ ವ್ಯವಸ್ಥೆಗಳು, ಬ್ಯಾಂಕುಗಳು, ವಿಮಾ ಕಂಪನಿಗಳು, ವಸ್ತುಗಳ ಪೂರೈಕೆ ಮಾಡುವ ಸರಪಳಿ ಜಾಲಗಳು ಮುಂತಾದುವು. ಈ ಎಲ್ಲ ಸಂಸ್ಥೆಗಳಲ್ಲೂ ಅನೇಕ ಉದ್ಯೋಗಾವಕಾಶಗಳು ಲಭಿಸುತ್ತವೆ.
- **ಸಂಪನ್ಮೂಲಗಳ ಉಪಯುಕ್ತತೆ :** ಮಾರಾಟಶಾಸ್ತ್ರದ ವಿವಿಧ ಚಟುವಟಿಕೆಗಳು ದೇಶದ ಸಂಪನ್ಮೂಲಗಳನ್ನು ವಸ್ತುಗಳ ಮತ್ತು ಸೇವೆಗಳ ಉತ್ಪಾದನೆಗಾಗಿ ಉಪಯೋಗಿಲ್ಪಡುತ್ತವೆ. ಇವುಗಳಿಂದ ಗ್ರಾಹಕರ ತೃಪ್ತಿ ಹೆಚ್ಚುತ್ತದೆ.
- **ಅಂತಾರಾಷ್ಟ್ರೀಯ ಮಾರುಕಟ್ಟೆ :** ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದಾಗಿ ವಿದೇಶಿ ವಿನಿಮಯ ದೊರೆಯುವುದಲ್ಲದೆ ರಾಷ್ಟ್ರಗಳ ನಡುವೆ ಉತ್ತಮ ಸಂಬಂಧ ಏರ್ಪಡುತ್ತದೆ.
- **ಆರ್ಥಿಕ ಪ್ರಗತಿ :** ಸಂಪನ್ಮೂಲಗಳನ್ನು ಒಂದು ಯೋಜನಾ ರೂಪದಲ್ಲಿ ತೊಡಗಿಸಿರುವುದು ಅನೇಕ ಉದ್ಯೋಗಗಳ ಸದಾವಕಾಶಗಳಿಗೂ ದಾರಿಮಾಡಿಕೊಡುತ್ತದೆ. ಇದರಿಂದಾಗಿ ಜನರ ಜೀವನ ಮಟ್ಟ, ಆದಾಯ ಪ್ರಮಾಣ ಹೆಚ್ಚಾಗಿ ದೇಶವು ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ.

## ಮಾರುಕಟ್ಟೆಯ ಮಿಶ್ರಣ (Marketing Mix)

**ಅರ್ಥ :** ಮಾರಾಟ ಶಾಸ್ತ್ರದ ಚಟುವಟಿಕೆಗಳನ್ನು ವ್ಯಕ್ತಗೊಳಿಸುವುದು, ಕಾರ್ಯಗತ ಮಾಡುವುದು ಮತ್ತು ಒಟ್ಟು ಗೂಡಿಸುವುದನ್ನು ಮಾರುಕಟ್ಟೆಯ ಮಿಶ್ರಣ ಎನ್ನುತ್ತೇವೆ.

ಮಾರುಕಟ್ಟೆ ಮಿಶ್ರಣದ ಪರಿಚಯವನ್ನು ಮೊಟ್ಟಮೊದಲಿಗೆ ಪರಿಚಯ ಮಾಡಿಕೊಟ್ಟವರು ಅಮೆರಿಕದ ಹಾರ್ವರ್ಡ್ ಬಿಸಿನೆಸ್ ಸ್ಕೂಲಿನ ಪ್ರೊ. ಎನ್. ಹೆಚ್. ಬೋರ್ಡನ್‌ರವರು. ಅವರ ಪ್ರಕಾರ ಮಾರುಕಟ್ಟೆ ಮಿಶ್ರಣವು ಎರಡು ಪಟ್ಟಿಗಳಿಂದ ಕೂಡಿದೆ.

- ಮಾರಾಟ ಶಾಸ್ತ್ರದ ಅಂಶಗಳನ್ನು ವಿಭಜಿಸುವುದು.
- ಮಾರಾಟ ಶಾಸ್ತ್ರದ ಎಲ್ಲ ಕಾರ್ಯಕ್ರಮಗಳಲ್ಲೂ ಪ್ರಭಾವ ಬೀರುವ ಚಟುವಟಿಕೆಗಳ ಪಟ್ಟಿಮಾಡುವುದು.

© KTBS NOT TO BE REPUBLISHED

**ಮಾರುಕಟ್ಟೆ ಮಿಶ್ರಣದ ಮೂಲಾಂಶಗಳು**

1) ಉತ್ಪನ್ನ ಮಿಶ್ರಣ 2) ಬೆಲೆ ಮಿಶ್ರಣ 3) ಪ್ರವರ್ತನ ಮಿಶ್ರಣ 4) ಸ್ಥಳ ಮಿಶ್ರಣ

1) **ಉತ್ಪನ್ನ ಮಿಶ್ರಣ :** ಉತ್ಪನ್ನ ಮಿಶ್ರಣವೆಂದರೆ ಮಾರಾಟವಾಗುವ ಸರಕುಗಳ–ಸೇವೆಗಳ ಬಗ್ಗೆ ವಿಶಿಷ್ಟ ಲಕ್ಷಣಗಳನ್ನು ಹೊಂದಿರುವ ವಿವಿಧ ಪರ್ಯಾಯಗಳ ಸಂಯೋಜನೆಯಾಗಿದೆ. ಉತ್ಪಾದಕರು ಉತ್ತಮ ಗುಣಮಟ್ಟದ ಸರಕುಗಳನ್ನು–ಸೇವೆಗಳನ್ನು ಉತ್ಪಾದಿಸುವುದು ಅವುಗಳ ವರ್ಗೀಕರಣ, ಉತ್ಪನ್ನಗಳಿಗೆ ಗುರುತು ಹಾಕುವುದು (branding) ಮತ್ತು ಆಕರ್ಷಕ ರೀತಿಯಲ್ಲಿ ಪೊಟ್ಟಣಗಳಲ್ಲಿ ತುಂಬುವ ಸೇವೆಗಳ ಮಿಶ್ರಣವು ಇದರಲ್ಲಿ ಸೇರಿರುತ್ತದೆ.

2) **ಬೆಲೆ ಮಿಶ್ರಣ :** ಬೆಲೆಯು ಗ್ರಾಹಕನು ತನಗೆ ಬೇಕಾದ ವಸ್ತುಗಳನ್ನು ಅಥವಾ ಸೇವೆಗಳನ್ನು ಪಡೆಯಲು ಅಥವಾ ವರ್ಗಾಯಿಸಿಕೊಳ್ಳಲು ಕೊಡುವ ಮೌಲ್ಯ. ಉತ್ಪಾದಕರು ಕ್ರಯ ನಿಷ್ಕರ್ಷೆ ಮಾಡುವ ಮೊದಲು ವಸ್ತು ಅಥವಾ ಸೇವೆಯ ಬೆಲೆ, ಸೋಡಿ (Discount) ಏನಾದರೂ ತೋರಿಸಬೇಕೇ, ಇತರೆ ಯಾವುದಾದರೂ ವೆಚ್ಚಗಳನ್ನು ಬೆಲೆಗೆ ಸೇರಿಸಬೇಕೆ ಮತ್ತು ಮಾರಾಟದ ಬೆಲೆ ಸಂದಾಯ ಮಾಡಲು ತೋರಿಸಬೇಕಾದ ಅವಧಿ ಮತ್ತು ಹೇಗೆ ಬೆಲೆ ಸಂದಾಯ ಮಾಡಬೇಕಾಗುತ್ತದೆ ಎಂಬ ವಿಷಯಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ.

3) **ಸ್ಥಳ ಮಿಶ್ರಣ :** ಈ ಮಿಶ್ರಣವು ಒಂದು ಸಂಸ್ಥೆಯು ಸರಕುಗಳನ್ನು ಮಾರುಕಟ್ಟೆಯಲ್ಲಿ ದೊರಕುವವರೆಗೂ ಕೈಗೊಳ್ಳ ಬೇಕಾದ ವಿವಿಧ ಕ್ರಿಯೆಗಳನ್ನು ಹೊಂದಿರುತ್ತದೆ. ಇದು ಭೌತಿಕ ವಿತರಣೆಯ ಎಲ್ಲ ಮಾರ್ಗಗಳನ್ನು ಒಳಗೊಂಡಿರುತ್ತದೆ ಸ್ಥಳಕ್ಕೆ ಅವರ ಇಷ್ಟಗಳಿಗನುಸಾರವಾಗಿ ಸಾಗಾಣಿಕೆ ಮಾಡುವ ಪ್ರಕ್ರಿಯೆಯನ್ನು ಹೊಂದಿರುತ್ತದೆ.

4) **ಪ್ರವರ್ತನೆ (Promotion) ಮಿಶ್ರಣ :** ಈ ಮಿಶ್ರಣವನ್ನು ಸಂಪರ್ಕ ಸಂದೇಶದ ಮಿಶ್ರಣವೆಂದೂ ಕರೆಯುತ್ತಾರೆ. ಈ ಮಿಶ್ರಣವು ಮಾರಾಟಗಾರರು ವಸ್ತುಗಳ ನಿರೀಕ್ಷಿತ ಗ್ರಾಹಕರು ವಸ್ತುಗಳನ್ನು ಕೊಳ್ಳುವವರೆಗೆ ಕೈಗೊಳ್ಳುವ ಎಲ್ಲಾ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಈ ಮಿಶ್ರಣವು ವಸ್ತುಗಳ ಬಗ್ಗೆ ಜಾಹಿರಾತು, ಮಾರಾಟ ಪ್ರವರ್ತನೆ, ಪ್ರಚಾರ ಮುಂತಾದುವುಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯ ಪದಗಳಲ್ಲಿ ಹೇಳುವುದಾದರೆ ಪ್ರವರ್ತನೆ ಮಿಶ್ರಣದಲ್ಲಿ ಗ್ರಾಹಕರನ್ನು ವಸ್ತುಗಳನ್ನು ಕೊಳ್ಳುವ ಪ್ರಚೋದನೆಗಳೂ ಅಡಕವಾಗಿರುತ್ತದೆ.

**ವಸ್ತುಗಳ ವಿತರಣೆಯಲ್ಲಿ ಉತ್ಪಾದಕರು, ಮಧ್ಯವರ್ತಿಗಳು ಮತ್ತು ಗ್ರಾಹಕರ ಪಾತ್ರ (Role of Producers-Middle Men and Consumers in the Exchange of Goods)**

ಮಾರಾಟ ವ್ಯವಸ್ಥೆಯ ಪ್ರಕ್ರಿಯೆಯಲ್ಲಿ ಸರಕುಗಳು ಉತ್ಪಾದಕನಿಂದ ಬಳಕೆದಾರನಿಗೆ ತಲುಪುವವರೆಗೆ ಮುಖ್ಯವಾದ ಪಾತ್ರವಹಿಸುತ್ತದೆ.

ವಸ್ತುಗಳ ವಿತರಣೆಯ ಮಾರ್ಗದಲ್ಲಿ ಎರಡು ರೀತಿಗಳಿವೆ.

ಎ) ನೇರ ಅಥವಾ ಪ್ರತ್ಯಕ್ಷ ಮಾರಾಟ.

ಬಿ) ಪರೋಕ್ಷ ಮಾರಾಟ.

ಎ) **ನೇರ ಅಥವಾ ಪ್ರತ್ಯಕ್ಷ :** ಈ ಮಾರಾಟದ ರೀತಿಯಲ್ಲಿ ಸರಕುಗಳು ನೇರವಾಗಿ ಉತ್ಪಾದಕರಿಂದ ಗ್ರಾಹಕರಿಗೆ ಮಾರಾಟವಾಗುತ್ತವೆ.

ಉದಾ: ಬಾಟಾ ಬೂಟುಗಳು, ರೇಮಾಂಡ್ ಬಟ್ಟೆ ಅಂಗಡಿಗಳು ಇತ್ಯಾದಿ

NOT TO BE REPUBLISHED ©KTBS

ಬಿ) **ಪರೋಕ್ಷ ಮಾರಾಟದಲ್ಲಿ** ಸರಕುಗಳ ವಿತರಣೆಯು ಈ ಕೆಳಗಿನ ಹರಿವಿನಲ್ಲಿ ವಿತರಣೆಯಾಗುತ್ತವೆ.

1) ಉತ್ಪಾದಕ → ಚಿಲ್ಲರೆ ವ್ಯಾಪಾರ → ಗ್ರಾಹಕ

2) ಉತ್ಪಾದಕ → ಸಗಟು ವ್ಯಾಪಾರಿ → ಚಿಲ್ಲರೆ ವ್ಯಾಪಾರಿ → ಗ್ರಾಹಕ

3) ಉತ್ಪಾದಕ → ಏಜೆಂಟ್ → ಸಗಟು ವ್ಯಾಪಾರಿ → ಚಿಲ್ಲರೆ ವ್ಯಾಪಾರಿ → ಗ್ರಾಹಕ

4) ಉತ್ಪಾದಕ → ಸಗಟು ವ್ಯಾಪಾರಿ → ಗ್ರಾಹಕ ( ಗ್ರಾಹಕರನ್ನು ಬಳಕೆದಾರರು ಎನ್ನುತ್ತಾರೆ)

1) **ಉತ್ಪಾದಕ → ಚಿಲ್ಲರೆ ವ್ಯಾಪಾರಿ→ ಗ್ರಾಹಕ :** ಈ ರೀತಿಯ ಮಾರಾಟ ಪ್ರಕ್ರಿಯೆಯಲ್ಲಿ ಉತ್ಪಾದಕರು ಸರಕುಗಳನ್ನು ಚಿಲ್ಲರೆ ವ್ಯಾಪಾರಿಗಳಿಗೆ ಮಾರುತ್ತಾರೆ ಹಾಗೂ ಚಿಲ್ಲರೆ ವ್ಯಾಪಾರಿಗಳು ಸರಕುಗಳನ್ನು ನೇರವಾಗಿ ಗ್ರಾಹಕರಿಗೆ ಮಾರುತ್ತಾರೆ. ಸಾಮಾನ್ಯವಾಗಿ ಈ ರೀತಿಯ ವಿತರಣಾ ಸಾಧನದಲ್ಲಿ ಹೆಚ್ಚು ಮೌಲ್ಯದ ಹಾಗೂ ಹೆಚ್ಚು ಬಾಳಿಕೆ ಬರುವ ಸರಕುಗಳು ಸೇರಿರುತ್ತವೆ. ಉದಾ: ಸಿದ್ಧಪಡಿಸಿದ ಉಡುಪುಗಳು, ಮೋಟಾರುಗಾಡಿಗಳ ಬಿಡಿಭಾಗಗಳು ಮುಂತಾದುವು. ಇಲ್ಲಿ ಚಿಲ್ಲರೆ ವ್ಯಾಪಾರಿಗಳು ಮಾತ್ರ ಮಧ್ಯವರ್ತಿಗಳಾಗಿರುತ್ತಾರೆ.

2) **ಉತ್ಪಾದಕ → ಸಗಟು ವ್ಯಾಪಾರಿ → ಚಿಲ್ಲರೆ ವ್ಯಾಪಾರಿ → ಗ್ರಾಹಕ :** ಈ ರೀತಿಯ ಮಾರಾಟ ಪ್ರಕ್ರಿಯೆಯಲ್ಲಿ ಉತ್ಪಾದಕರು ಹೆಚ್ಚು ಪ್ರಮಾಣದಲ್ಲಿ ಸರಕುಗಳನ್ನು ಸಗಟು ವ್ಯಾಪಾರಿಗಳಿಗೆ ಮಾರುತ್ತಾರೆ. ಸಗಟು ವ್ಯಾಪಾರಿಗಳು ಚಿಲ್ಲರೆ ವ್ಯಾಪಾರಿಗಳಿಗೆ ಕಡಿಮೆ ಪ್ರಮಾಣದಲ್ಲಿ ಮಾರುತ್ತಾರೆ. ಅಂತಿಮವಾಗಿ ಚಿಲ್ಲರೆ ವ್ಯಾಪಾರಿಗಳು ಗ್ರಾಹಕರಿಗೆ ಅವರಿಗೆ ಬೇಕಾದ ಪ್ರಮಾಣದಲ್ಲಿ ಮಾರಾಟ ಮಾಡುತ್ತಾರೆ.

ಉದಾ: ದಿನಬಳಕೆ ವಸ್ತುಗಳು, ಔಷಧಿಗಳು, ಕಬ್ಬಿಣದ ಸಾಮಾನುಗಳು, ಲೇಖನ ಸಾಮಗ್ರಿಗಳು ಮುಂತಾದುವು. ಇಲ್ಲಿ ಸಗಟು ವ್ಯಾಪಾರಿಗಳು ಮಾರಾಟ ಪ್ರಕ್ರಿಯೆಯಲ್ಲಿ ಹೆಚ್ಚು ದೃಢವಾದ ಉತ್ತೇಜನ ಕೊಡುತ್ತಾರೆ.

3) **ಉತ್ಪಾದಕ → ಏಜೆಂಟ್ → ಚಿಲ್ಲರೆ ವ್ಯಾಪಾರಿಗಳು → ಗ್ರಾಹಕರು :** ಈ ಮಾರಾಟದ ಪ್ರಕ್ರಿಯೆಯಲ್ಲಿ ಉತ್ಪಾದಕರು ಏಜೆಂಟರನ್ನು (ಪ್ರತಿನಿಧಿಗಳನ್ನು) ನೇಮಿಸಿರುತ್ತಾರೆ. ಈ ಏಜೆಂಟರು ಚಿಲ್ಲರೆ ವ್ಯಾಪಾರಿಗಳ ಬಳಿ ಹೋಗಿ ಅವರಿಗೆ ಸರಕುಗಳನ್ನು ನೇರವಾಗಿ ಮಾರಾಟ ಮಾಡುತ್ತಾರೆ. ನಂತರದ ಅವಧಿಯಲ್ಲಿ ಚಿಲ್ಲರೆ ವ್ಯಾಪಾರಿಗಳು ಗ್ರಾಹಕರಿಗೆ ವಸ್ತುಗಳನ್ನು ಮಾರುತ್ತಾರೆ. ಈ ರೀತಿಯ ವಹನಸಾಧನವು (Channel) ಕೈಗಾರಿಕಾ ಉಪಕರಣಗಳು ಮತ್ತು ಬೇಸಾಯೋಪಕರಣಗಳ ಮಾರಾಟಕ್ಕೆ ಉತ್ತಮವಾಗಿರುತ್ತದೆ.

4) **ಉತ್ಪಾದಕ → ಏಜೆಂಟ್ → ಸಗಟುವ್ಯಾಪಾರಿ → ಚಿಲ್ಲರೆವ್ಯಾಪಾರಿ → ಗ್ರಾಹಕ :** ಈ ಮಾರಾಟದ ಪ್ರಕ್ರಿಯೆಯು ವಸ್ತುಗಳ ವಿತರಣೆಯಲ್ಲಿ ಅತ್ಯಂತ ಉದ್ದವಾದ ಮತ್ತು ಪೂರ್ಣವಾದ ವಹನಸಾಧನ (channel) ವಾಗಿದೆ. ಇಲ್ಲಿ ಉತ್ಪಾದಕರು ಮೊದಲಿಗೆ ಸರಕುಗಳನ್ನು ಏಜಂಟರಿಗೆ ಮಾರುತ್ತಾರೆ. ಈ ಏಜೆಂಟರು ತಮ್ಮ ಕಮೀಷನ್ ಅಥವಾ ಲಾಭವನ್ನು ಸೇರಿಸಿ ಸರಕುಗಳನ್ನು ಸಗಟು ವ್ಯಾಪಾರಿಗಳಿಗೆ ಮಾರುತ್ತಾರೆ. ಸಗಟು ವ್ಯಾಪಾರಿಗಳು ತಮ್ಮ ಲಾಭವನ್ನು ಸೇರಿಸಿ ಚಿಲ್ಲರೆ ವ್ಯಾಪಾರಿಗಳಿಗೆ ಮಾರುತ್ತಾರೆ. ಅಂತಿಮವಾಗಿ ಚಿಲ್ಲರೆ ವ್ಯಾಪಾರಿಗಳು ತಮ್ಮ ಲಾಭ ಸೇರಿಸಿ ಗ್ರಾಹಕರಿಗೆ ಸರಕುಗಳನ್ನು ಮಾರುತ್ತಾರೆ.

©KTBS NOT TO BE REPUBLISHED

## ಸರಕುಗಳ ಸೇವೆಗಳ ವಿತರಣೆಯಲ್ಲಿ ಮಧ್ಯವರ್ತಿಗಳ ಪಾತ್ರ

ಒಂದು ವಸ್ತುವಿನ ವಿತರಣೆಯಲ್ಲಿ ಉತ್ಪಾದಕರು ಮೊದಲ ಕೊಂಡಿಯಾಗಿದ್ದು ಗ್ರಾಹಕರು ಅಂತಿಮ ಕೊಂಡಿಯಾಗಿರುತ್ತಾರೆ. ಇವರಿಬ್ಬರ ಮಧ್ಯೆ ಅನೇಕ ಮಧ್ಯವರ್ತಿಗಳಿರುತ್ತಾರೆ. ಇವರು ವಸ್ತುಗಳನ್ನು ಉತ್ಪಾದಕರಿಂದ ಕೊಂಡು ಗ್ರಾಹಕರಿಗೆ ಮಾರುತ್ತಾರೆ. ಇದನ್ನು ಕರಾರಿನ ಮೂಲಕ ತೀರ್ಮಾನಿಸುತ್ತಾರೆ. ಸಗಟು ವ್ಯಾಪಾರಿಗಳು ಮತ್ತು ಚಿಲ್ಲರೆ ವ್ಯಾಪಾರಿಗಳು ಸರಕುಗಳ ಸ್ವಾಮ್ಯವನ್ನು ಪಡೆಯುತ್ತಾರೆ. ಆದರೆ ಏಜೆಂಟ್ (ಮಧ್ಯವರ್ತಿಗಳು) ಮಾರಾಟ ಮತ್ತು ಕೊಳ್ಳುವ ಪ್ರಕ್ರಿಯೆಯಲ್ಲಿ ಕರಾರುಗಳನ್ನು ಏರ್ಪಡಿಸುವುದರಿಂದ ಅವರೂ ಕೂಡ ವ್ಯಾಪಾರ ವಿತರಣೆಯಲ್ಲಿ ಸೇರಿರುತ್ತಾರೆ. ವಿತರಣೆಯ ಸಾಧನವನ್ನು ಆರಿಸಿಕೊಳ್ಳುವಾಗ ಮಧ್ಯವರ್ತಿಗಳ ಲಭ್ಯ ಅವರ ಮನೋವೃತ್ತಿ, ವೆಚ್ಚ ಮತ್ತು ಅವರ ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಳ್ಳ ಬೇಕಾಗುತ್ತದೆ. ಹೀಗಿದ್ದರೂ ಗ್ರಾಹಕರು ಮೋಸ ಹೋಗಿರುವ ಸಂದರ್ಭಗಳು ಹೆಚ್ಚು. ಇದಕ್ಕಾಗಿಯೇ ಗ್ರಾಹಕ ಕಾಯಿದೆಯನ್ನು ಜಾರಿಗೊಳಿಸಲಾಗಿದೆ. ಇದರ ಬಗ್ಗೆ ಮುಂದಿನ ತರಗತಿಯಲ್ಲಿ ಅಭ್ಯಸಿಸುವಿರಿ.

**ಗ್ರಾಹಕ ಪದದ ಅರ್ಥ :** ವೈಯಕ್ತಿಕ ಬಳಕೆಗಾಗಿ ಸರಕು ಮತ್ತು ಸೇವೆಗಳನ್ನು ಖರೀದಿಸುವ ವ್ಯಕ್ತಿಯನ್ನು ಗ್ರಾಹಕ ಎಂದು ಕರೆಯುತ್ತಾರೆ.

**ಗ್ರಾಹಕ ರಕ್ಷಣೆ :** ಗ್ರಾಹಕರನ್ನು ಉತ್ಪಾದಕರ ಮತ್ತು ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯಗಳನ್ನು ಗ್ರಾಹಕ ರಕ್ಷಣೆ ಎನ್ನುತ್ತಾರೆ. ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸುವ ಹಕ್ಕುಗಳು ಮತ್ತು ಭರವಸೆಗಳನ್ನು ಕೊಡಲಾಗಿದೆ. ಈ ಭರವಸೆಗಳನ್ನು ಗ್ರಾಹಕರ ಹಕ್ಕುಗಳು ಎನ್ನುತ್ತೇವೆ.

**ಗ್ರಾಹಕ ಹಕ್ಕುಗಳು :** ಗ್ರಾಹಕರು ತಮ್ಮ ಕುಂದು ಕೊರತೆಗಳಿಗೆ ಪರಿಹಾರ ಪಡೆಯಲು ನಮ್ಮ ದೇಶದಲ್ಲಿ ಅನೇಕ ನಿಯಂತ್ರಿತ ಕಾಯಿದೆಗಳನ್ನು ಜಾರಿಗೆ ತರಲಾಗಿದೆ.

1) 1872 ರ ಭಾರತೀಯ ಒಪ್ಪಂದ ಕಾಯಿದೆ 2) 1930 ರ ಸರಕು ಮಾರಾಟ ಕಾಯಿದೆ

3) 1952 ರ ಭಾರತೀಯ ಗುಣಮಟ್ಟ ಸಂಸ್ಥೆ 4) 1955 ರ ಅಗತ್ಯ ವಸ್ತುಗಳ ಕಾಯಿದೆ.

5) 1986 ರ ಗ್ರಾಹಕರ ಸಂರಕ್ಷಣೆ ಕಾಯಿದೆ.

ವಿಶ್ವ ಸಂಸ್ಥೆಯು ಜಾರಿಗೊಳಿಸಿದ ಮಾರ್ಗದರ್ಶಿ ಅಂಶಗಳನ್ನು ಪಾಲಿಸುವುದಕ್ಕಾಗಿ ನಮ್ಮ ಕೇಂದ್ರ ಸರ್ಕಾರವು 1986 ರಲ್ಲಿ ಗ್ರಾಹಕ ಸಂರಕ್ಷಣಾ ಕಾಯಿದೆಯನ್ನು ಅಂಗೀಕರಿಸಿ 1987 ರಲ್ಲಿ ಜಾರಿಗೊಳಿಸಿತು.

ಗ್ರಾಹಕ ಸಂರಕ್ಷಣಾ ಕಾಯಿದೆಯು ಭಾರತದ ಎಲ್ಲ ರಾಜ್ಯಗಳಿಗೂ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೂ ಅನ್ವಯಿಸಲಾಗಿದೆ. ಇದು ಎಲ್ಲ ಸರಕುಗಳು ಮತ್ತು ಸೇವೆಗಳಿಗೆ ಅನ್ವಯವಾಗುತ್ತದೆ.

**ಕಾಯಿದೆಯ ಮುಖ್ಯಾಂಶಗಳು:**

- ರಕ್ಷಣೆ ಹಕ್ಕು : ಗ್ರಾಹಕರ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯಾದ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.
- ಮಾಹಿತಿ ಪಡೆಯುವ ಹಕ್ಕು : ಸರಕುಗಳ ಮತ್ತು ಸೇವೆಗಳ ಗುಣಮಟ್ಟ, ಪ್ರಮಾಣ, ಶಕ್ತಿ ಸಾಮರ್ಥ್ಯ, ಪರಿಶುದ್ಧತೆ ಮತ್ತು ಬೆಲೆಗಳ ವಿರುದ್ಧ ಮಾಹಿತಿ ಪಡೆಯುವ ಹಕ್ಕು.
- ವಸ್ತುಗಳ ಆಯ್ಕೆಯ ಹಕ್ಕು : ಸ್ಪರ್ಧಾತ್ಮಕ ಬೆಲೆಗಳಲ್ಲಿ ವೈವಿಧ್ಯಮಯವಾದ ಸರಕುಗಳನ್ನು ಆರಿಸಿಕೊಳ್ಳುವ ಅಥವಾ ಆಯ್ಕೆ ಮಾಡುವ ಹಕ್ಕು.

© KTBS NOT TO BE REPUBLISHED

- ವಸ್ತುಗಳ ಬಗ್ಗೆ ಆಲಿಸುವ ಹಕ್ಕು : ಗ್ರಾಹಕರ ಇಷ್ಟಗಳನ್ನು ಕೇಳಿ ತಿಳಿದುಕೊಂಡು ಅವನ್ನು ಸೂಕ್ತ ರೀತಿಯಲ್ಲಿ ಪರಿಗಣಿಸುವ ಹಕ್ಕು.
- ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು : ಗ್ರಾಹಕರಿಗೆ ವಂಚನೆ ಅಥವಾ ಮೋಸಮಾಡುವ ಆಚರಣೆಗಳ ವಿರುದ್ಧ ಹಕ್ಕು ಪಡೆಯುವುದು.
- ಗ್ರಾಹಕ ಶಿಕ್ಷಣದ ಹಕ್ಕು : ಗ್ರಾಹಕರಿಗೆ ಅವರ ಹಕ್ಕುಗಳ ಬಗ್ಗೆ ಸರಿಯಾದ ತಿಳುವಳಿಕೆ ಪಡೆಯುವ ಹಕ್ಕು
- ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು
- ಗ್ರಾಹಕರಿಗೆ ಉತ್ತಮ ಆರೋಗ್ಯಕರ ಮತ್ತು ಭೌತಿಕ ಪರಿಸರಗಳನ್ನು ಉಂಟುಮಾಡಿ ಅವರ ಜೀವನ ರೀತಿಗಳನ್ನು ಉತ್ತಮ ಪಡಿಸಿಕೊಳ್ಳುವ ಹಕ್ಕು

ಗ್ರಾಹಕ ಸಂರಕ್ಷಣಾ ಕಾಯಿದೆಯು ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಸಂರಕ್ಷಣಾ ವೇದಿಕೆ, ರಾಜ್ಯಮಟ್ಟದಲ್ಲಿ ರಾಜ್ಯ ಗ್ರಾಹಕ ಸಂರಕ್ಷಣಾ ವೇದಿಕೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಗ್ರಾಹಕರ ಸಂರಕ್ಷಣಾ ಮಂಡಳಿಗಳನ್ನು ಸ್ಥಾಪಿಸಿದೆ. ಈ ಮಂಡಳಿಗಳು ತಮ್ಮ ಎಲ್ಲೆಗಳೊಳಗೆ ಕಾರ್ಯನಿರ್ವಹಿಸುತ್ತದೆ. ಜಿಲ್ಲಾಧಿಕಾರಿಗಳು ಜಿಲ್ಲಾಮಟ್ಟದ ಗ್ರಾಹಕ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ.

**ಗ್ರಾಹಕ ವಿವಾದ ಪರಿಹಾರ ಸಂಸ್ಥೆಗಳು ಅಥವಾ ಕಾರ್ಯಬಾರಿಗಳು (Consumer Grievances Redressal Agencies)**

1) **ಜಿಲ್ಲಾ ವೇದಿಕೆ :** ಜಿಲ್ಲಾವೇದಿಕೆಗೆ ಜಿಲ್ಲಾ ನ್ಯಾಯಾಧೀಶರ ಅರ್ಹತೆಯುಳ್ಳ ವ್ಯಕ್ತಿಯು ಅಧ್ಯಕ್ಷರಾಗಿರುತ್ತಾರೆ. ಈ ವೇದಿಕೆಯು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರದ ಗ್ರಾಹಕ ದೂರುಗಳನ್ನು ತೆಗೆದುಕೊಳ್ಳುತ್ತಿದೆ. ಇದರಲ್ಲಿ ಇಬ್ಬರು ಸದಸ್ಯರಿದ್ದು ಅವರಲ್ಲಿ ಒಬ್ಬರು ಮಹಿಳಾ ಸದಸ್ಯರಾಗಿರುತ್ತಾರೆ.

2) **ರಾಜ್ಯ ಆಯೋಗ (State commission) :** ರಾಜ್ಯದ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾಗಲೀ ಅಥವಾ ಹಾಲಿ ನ್ಯಾಯಾಧೀಶರಾಗಲಿ ಈ ಆಯೋಗದ ಅಧ್ಯಕ್ಷರಾಗಿರುತ್ತಾರೆ. ಇದರಲ್ಲಿ ಸಾರ್ವಜನಿಕ ವ್ಯವಹಾರ ಕ್ಷೇತ್ರಗಳಲ್ಲಿ ಸಾಮರ್ಥ್ಯವನ್ನು ಹೊಂದಿರುವ ಇಬ್ಬರು ಸದಸ್ಯರಿರುತ್ತಾರೆ. ಅವರಲ್ಲಿ ಒಬ್ಬರು ಮಹಿಳಾ ಸದಸ್ಯರಾಗಿರುತ್ತಾರೆ. ಈ ಆಯೋಗವು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದ್ದು ಒಂದು ಕೋಟಿ ರೂಪಾಯಿಯವರೆಗಿನ ಮೌಲ್ಯದ ಗ್ರಾಹಕ ದೂರುಗಳನ್ನು ತೆಗೆದುಕೊಳ್ಳುತ್ತದೆ.

3) **ರಾಷ್ಟ್ರೀಯ ಆಯೋಗ (National Commission) :** ಈ ಆಯೋಗವು ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ ಸರ್ವೋಚ್ಚನ್ಯಾಯಾಲಯದ ಒಬ್ಬ ನ್ಯಾಯಾಧೀಶರ ಅಧ್ಯಕ್ಷತೆಯಿಂದ ಕೂಡಿರುತ್ತದೆ. ಇಲ್ಲಿ ಇತರೆ ನಾಲ್ಕು ಸದಸ್ಯರಿರುತ್ತಾರೆ. ಇವರು ಸಾರ್ವಜನಿಕ ವ್ಯವಹಾರ ಅಥವಾ ಆಡಳಿತದಲ್ಲಿ ನುರಿತವರಾಗಿರಬೇಕು. ಇವರಲ್ಲಿ ಒಬ್ಬರು ಮಹಿಳಾ ಸದಸ್ಯರಿರುತ್ತಾರೆ. ಈ ಆಯೋಗವು ಯಾವುದೇ ದೂರಾಗಲಿ ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಮೌಲ್ಯದಿಂದ ಕೂಡಿದ್ದರೆ ಅಂತಹ ದೂರುಗಳನ್ನು ತೆಗೆದುಕೊಂಡು ಇತ್ಯರ್ಥ ಮಾಡುತ್ತದೆ.

© KTBS NOT TO BE REPUBLISHED

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1) ವಸ್ತುಗಳನ್ನು ಮಾರುವವರು ಮತ್ತು ಕೊಳ್ಳುವವರು ಸೇರುವ ಜಾಗವನ್ನು ಸಾಮಾನ್ಯವಾಗಿ ________ ಎನ್ನುತ್ತಾರೆ.
2) ಒಂದು ಭೌಗೋಳಿಕ ಪ್ರದೇಶಕ್ಕೆ ಸೀಮಿತವಾಗಿರುವ ಮಾರುಕಟ್ಟೆಯನ್ನು ________ ಮಾರುಕಟ್ಟೆ ಎನ್ನುತ್ತಾರೆ.
3) ಕಾಯಿದೆಗಳ ನಿಯಂತ್ರಣಕ್ಕೊಳಗಾಗಿ ಮಾರುವ ಮತ್ತು ಕೊಳ್ಳುವ ಮಾರುಕಟ್ಟೆಗಳನ್ನು ________ ಎಂದು ಕರೆಯುತ್ತಾರೆ.
4) ವಸ್ತುಗಳ ಉತ್ಪಾದನೆಯ ಅವಧಿಯಿಂದ ಮಾರಾಟವಾಗುವ ಅವಧಿಯವರೆಗೂ ವಸ್ತುಗಳನ್ನು ಸಂಗ್ರಹಿಸಿಟ್ಟಿರುವ ಜಾಗಗಳನ್ನು ________ ಎಂದು ಕರೆಯುತ್ತಾರೆ.
5) ಗ್ರಾಹಕರು ವಸ್ತುಗಳನ್ನು ಕೊಳ್ಳಲು ಪ್ರೇರೇಪಿಸುವ ಚಟುವಟಿಕೆ ________ ಮಿಶ್ರಣದ ಅಂಶದೊಳಕ್ಕೆ ಸೇರುತ್ತದೆ.
6) ಉತ್ಪಾದಕರು ನೇರವಾಗಿ ತಮ್ಮ ಉತ್ಪನ್ನಗಳನ್ನು ಗ್ರಾಹಕರಿಗೆ ಮಾರುವ ವಸ್ತುಗಳ ಉದಾಹರಣೆ ________ ಆಗಿದೆ.
7) ಉತ್ಪನ್ನಗಳ ವ್ಯಾಪಾರ ಮುದ್ರೆಯನ್ನು ನೋಂದಾಯಿಸಿದ್ದಲ್ಲಿ ________ ಎಂಬ ಅಕ್ಷರ ಸಂಕೇತ ಪೊಟ್ಟಣಗಳ ಮೇಲೆ ಮುದ್ರಿಸಿರುತ್ತಾರೆ.
8) ವಸ್ತುಗಳ ಪ್ರಮಾಣೀಕರಣವು (standardisation) ಗ್ರಾಹಕರಿಗೆ ________ ವಸ್ತುಗಳ ಶ್ರೇಷ್ಠತೆಯನ್ನು ತೋರಿಸುತ್ತದೆ.

**II. ಈ ಕೆಳಗಿನ ಪ್ರತಿ ಪ್ರಶ್ನೆಗೂ ಗುಂಪಿನಲ್ಲಿ ಚರ್ಚಿಸಿ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1) ಒಂದು ಪ್ರದೇಶಕ್ಕನುಗುಣವಾಗಿ ವಿಂಗಡಣೆಯಾಗಿರುವ ನಾಲ್ಕು ವಿಧದ ಮಾರುಕಟ್ಟೆಗಳನ್ನು ತಿಳಿಸಿ.
2) ಹಣಕಾಸಿನ ಮಾರುಕಟ್ಟೆಗಳೆಂದರೇನು? ಇವು ಬಂಡವಾಳ ಮಾರುಕಟ್ಟೆಗಳಿಗಿಂತ ಹೇಗೆ ಬೇರೆಯಾಗಿವೆ?
3) ಗ್ರಾಹಕರ ಮಾರುಕಟ್ಟೆ ಮತ್ತು ಉತ್ಪಾದಕರ ಮಾರುಕಟ್ಟೆಗಳೆಂದರೇನು?
4) ಸ್ಥಳೀಯ ಮಾರುಕಟ್ಟೆ ಎಂದರೇನು? ಇದು ಭವಿಷ್ಯದ ಮಾರುಕಟ್ಟೆಗಿಂತ ಹೇಗೆ ಬೇರೆಯಾಗಿದೆ?

NOT TO BE REPUBLISHED ©KTBS

5) ಅಸಂಪ್ರದಾಯಿಕ ಮಾರುಕಟ್ಟೆಗಳ ಯಾವುದಾದರೂ ನಾಲ್ಕು ಬಗೆಗಳನ್ನು ತಿಳಿಸಿ

6) ಮಾರುಕಟ್ಟೆ ಮಿಶ್ರಣ ಎಂದರೇನು?

7) ಗ್ರಾಹಕರ ರಕ್ಷಣೆ ಏಕೆ ಅವಶ್ಯಕವಾಗಿದೆ?

8) ವಸ್ತುಗಳಿಗೆ ಮುದ್ರೆ ಹಾಕುವುದು ಎಂದರೇನು?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಗುಂಪಿನಲ್ಲಿ ಚರ್ಚಿಸಿ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1) ಮಾರುಕಟ್ಟೆ ಶಾಸ್ತ್ರದ ಕಾರ್ಯಗಳೇನು? ಯಾವುದಾದರು ಒಂದನ್ನು ವಿವರಿಸಿ.

2) ಮಾರುಕಟ್ಟೆ ಮಿಶ್ರಣದ ಮೂಲಾಂಶಗಳಾವುವು? ಯಾವುದಾದರು ಒಂದನ್ನು ವಿವರಿಸಿ.

3) ಮಾರುಕಟ್ಟೆ ಶಾಸ್ತ್ರದ ಪ್ರಾಮುಖ್ಯತೆ ಏನು? ಇದು ಜನರ ಜೀವನ ಮಟ್ಟವನ್ನು ಹೇಗೆ ಹೆಚ್ಚಿಸುತ್ತದೆ?

**IV. ಚಟುವಟಿಕೆಗಳು :**

1) ಯಾವುದಾದರು ಹತ್ತು ಸರಕುಗಳ ಪೊಟ್ಟಣಗಳನ್ನು ಶೇಖರಿಸಿ ಈ ಪೊಟ್ಟಣಗಳ ಮೇಲಿನ ವಿವರಗಳನ್ನು ಈ ಕೆಳಕಂಡ ಪಟ್ಟಿಯಲ್ಲಿ ತಯಾರಿಸಿ.

| ಕ್ರ. ಸಂ. | ವಸ್ತು ಅಥವಾ ಸರಕಿನ ಹೆಸರು | ವಿವರಗಳು | ತಯಾರಿಸಿದ ದಿನಾಂಕ ವಸ್ತುವನ್ನು ಉಪಯೋಗಿಸಬಹುದಾದ ಅಂತಿಮ ದಿನಾಂಕ (Date of expiry) ವಸ್ತುವಿನ ಗರಿಷ್ಠ ಬೆಲೆ (MRP) |
|---|---|---|---|
| | | | |

2) ವೃತ್ತ ಪತ್ರಿಕೆಗಳಲ್ಲಿ ಬರುವ ಯಾವುದಾದರೂ ಎರಡು ಗ್ರಾಹಕ ಶೋಷಣೆಗಳನ್ನು ಸಂಗ್ರಹಿಸಿ. ಗ್ರಾಹಕ ವೇದಿಕೆಗಳು ಇವುಗಳಿಗೆ ಹೇಗೆ ಪರಿಹಾರ ಕೊಟ್ಟವು ಎಂಬುದನ್ನು ಬರೆಯಿರಿ.

******

@KTBS NOT TO BE REPUBLISHED